ಹುಬ್ಬಳ್ಳಿ
ಶನಿವಾರ, 13 ಜೂನ್ 2026
ಸಂಪುಟ 16, ಸಂಚಿಕೆ 80, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಟ್ರಂಪ್ ಹೇಳಿಕೆ ನಂತರ ತೈಲ ಅಗ್ಗ, ಸೆನ್ಸೆಕ್ಸ್ ಜಿಗಿತ | ೦೭ | ಮೋದಿ ಫ್ರಾನ್ಸ್ ಪ್ರವಾಸ ಇಂದು | ೦೭ | ಕ್ರಿಕೆಟ್‌ಗೆ ವಿಲಿಯಮ್ಸನ್ ವಿದಾಯ | ೧೦

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಸಮಸ್ಯೆಗಳಿಂದ ನುಣುಚಿಕೊಳ್ಳದೆ ಧೈರ್ಯದಿಂದ ಎದುರಿಸಿದಾಗ ಅವು ಚಿಕ್ಕದಾಗಿ ತೋರುತ್ತವೆ.

▲ ರಾಮಕೃಷ್ಣ ಪರಮಹಂಸ

ವಿಷ ಮಂಥನ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ನಾವಿಕರ ಸಾವು: ಅಮೆರಿಕಕ್ಕೆ ಭಾರತ ಖಡಕ್ ಸಂದೇಶ

• **ಹೊಸದಿಲ್ಲಿ:** ಒಮಾನ್ ಕರಾವಳಿಯ ಬಳಿ ಭಾರತೀಯ ನಾವಿಕರನ್ನು ಹೊಂದಿದ್ದ ಮತ್ತೊಂದು ವಾಣಿಜ್ಯ ಹಡಗಿನ ಮೇಲೆ ದಾಳಿ ನಡೆದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಅಮೆರಿಕದ ಕಾರ್ಯನಿರ್ವಾಹಕ ರಾಯಭಾರಿ ಜೇಸನ್ ಮಿಕ್ಸ್ ಅವರನ್ನು ಈ ವಾರದಲ್ಲೇ ಎರಡನೇ ಬಾರಿ ವಿದೇಶಾಂಗ ಸಚಿವಾಲಯಕ್ಕೆ ಕರೆಸಿಕೊಂಡು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ.

• ಪುಟ ೭

ಭಾರತ ವಿರುದ್ಧ ಯುರೋಪ್ ಶಸ್ತ್ರಾಸ್ತ್ರ ಬಳಕೆ!

• ಪುಟ ೭

ಕೇರಳಕ್ಕೆ ಡಾ.ಮೋಹನ್ ಭಾಗವತ್ ಆಗಮನ

• ಪುಟ ೭

ಅಮರನಾಥ ಯಾತ್ರೆ: ಬಹು ಹಂತದ ಭದ್ರತೆ

• ಪುಟ ೭

ಟಿವಿ, ರೇಡಿಯೋ ಏಕ ನಿಯಂತ್ರಣ ಚೌಕಟ್ಟಿಗೆ

• ಪುಟ ೭

ಭಾಗ್ವತ್ ಇದ್ದ ರೈಲಿಗೆ ಕಲ್ಲೆಸೆತ: ಇಬ್ಬರ ಸೆರೆ

• ಪುಟ ೭

ಮಗು ಕೊಲೆ ಕೇಸ್: 3 ಪೊಲೀಸರ ಅಮಾನತು

• ಪುಟ ೩



ತಾವರೆಯ ಬಲವರ್ಧನೆ
ಸತ್ಯವಾಯ್ತು ಅಟಲ್ ಭವಿಷ್ಯವಾಣಿ

• ಪುಟ ೭

ಸುದ್ದಿ ಸಮಗ್ರ

ಯೋಜನೆಗಳಿಗೆ ಅನುಮತಿ, ಅನುದಾನ: ಸಿಎಂ ಡಿಕೆಶಿ ಮನವಿ

ಕೇಂದ್ರಕ್ಕೆ ಜಲ ಪ್ರಸ್ತಾವನೆ

• **ಹೊಸದಿಲ್ಲಿ/ಬೆಂಗಳೂರು:** ಕರ್ನಾಟಕ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಮೇಕೆದಾಟು, ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹದಾಯಿ ಯೋಜನೆಗಳಿಗೆ ಅನುಮತಿ ಜತೆ ಅನುದಾನ ನೀಡಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರ, ಜಲಶಕ್ತಿ ಸಚಿವರಿಗೆ ಮನವಿ ಮಾಡಿದ್ದಾರೆ.

ಗುರುವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮುಖ್ಯಮಂತ್ರಿ ಡಿಕೆಶಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಶುಕ್ರವಾರ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ನೀರಾವರಿ ಯೋಜನೆಗಳ ಜಾರಿಗೆ ಸಹಾಯ ಹಾಗೂ ಸಹಕಾರ ಕೋರಿದರು.



ಹೊಸದಿಲ್ಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ರಾಜ್ಯದ ಪೊಲೀಸ್ ಇಲಾಖೆಗೆ ಮೂಲಸೌಕರ್ಯ ಒದಗಿಸಲು ಸಹಾಯ, ಸಹಕಾರ ನೀಡುವಂತೆ ಮನವಿ ಮಾಡಿದರು.

> ನ್ಯಾಯ ನೀಡುವ ಸ್ಥಾನದಲ್ಲಿ ಕೂತಿರುವ ಜಲಶಕ್ತಿ ಸಚಿವರು ರಾಜ್ಯಕ್ಕೆ ಅನ್ಯಾಯ ಮಾಡುವುದಿಲ್ಲ ಎಂಬ ವಿಶ್ವಾಸ ನಮಗಿದೆ.
> ■ ಡಿ.ಕೆ.ಶಿವಕುಮಾರ್, ಸಿಎಂ

ಖಾಸಗಿ ರೆಸಾರ್ಟ್‌ಗೆ ಕಾಂಗ್ರೆಸ್ ಶಾಸಕರು

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಎಲ್ಲ ಶಾಸಕರನ್ನು ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ಗೆ ಬರುವಂತೆ ಪಕ್ಷವು ಸೂಚನೆ ನೀಡಿದೆ. ಜೂ.16ರಂದು ಮಂಗಳವಾರ ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಅಂದು ಜೂ.18ರಂದು ವಿಧಾನಪರಿಷತ್ ಚುನಾವಣೆಯಲ್ಲಿ ಯಾವ ಶಾಸಕರು ಯಾರಿಗೆ ಮತ ಹಾಕಬೇಕು, ಅಡ್ಡ ಮತದಾನದ ಭೀತಿ ಇರುವ ಕುರಿತು ಹಾಗೂ ಕಾಂಗ್ರೆಸ್ ಪಕ್ಷದ ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಸಂಬಂಧ ರಣತಂತ್ರ ನಡೆಯಲಿದೆ. ಈ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಭಾಗವಹಿಸಲಿದ್ದಾರೆ.

ಭದ್ರಾ ಯೋಜನೆಗೆ 5,300 ಕೋಟಿ ಕೊಡಿ: ಡಿಕೆಶಿ

• ಪುಟ ೪

ಮುಖ್ಯಮಂತ್ರಿಗಳ ಪ್ರಸ್ತಾವನೆಯ ಪ್ರಮುಖ ಅಂಶಗಳು

1. ಮೇಕೆದಾಟು ಯೋಜನೆಗೆ ಅನುಮತಿ ಕೊಡಿ

ಸುಪ್ರೀಂ ಕೋರ್ಟ್ 13.11.2025 ರಂದು ತಮಿಳುನಾಡು ರಾಜ್ಯದ ವಿವಿಧ ಅರ್ಜಿಗಳನ್ನು ವಜಾಗೊಳಿಸಿದೆ ಮತ್ತು ಮೇಕೆದಾಟು ಯೋಜನೆಯ ಅನುಮತಿಯ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಜಲ ಆಯೋಗ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದೆ. ಸಿಡಬ್ಲ್ಯುಎಂಎ ಈಗಾಗಲೇ ಯೋಜನೆಯನ್ನು ಮೌಲ್ಯಮಾಪನ ಮಾಡಲು ಸಿಡಬ್ಲ್ಯುಸಿಗೆ ಸೂಚಿಸಿರುವುದರಿಂದ, ಈ ಯೋಜನೆಗೆ ಶೀಘ್ರ ಅನುಮತಿ ಸಿಗುವಂತೆ ನೋಡಿಕೊಳ್ಳಬೇಕು.

2. ಕೃಷ್ಣಾ ನ್ಯಾಯಾಧಿಕರಣ ಗೆಜೆಟ್ ಅಧಿಸೂಚನೆ

ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ, ಕೃಷ್ಣಾ ನೀರು ವಿವಾದ ನ್ಯಾಯಾಧಿಕರಣ- II ತೀರ್ಪು ನೀಡಿ ಒಂದು ದಶಕಕ್ಕೂ ಹೆಚ್ಚು ಕಾಲ ಕಳೆದಿದ್ದರೂ, ಕೇಂದ್ರ ಸರ್ಕಾರವು ಇನ್ನೂ ಸಹ ಈ ತೀರ್ಪನ್ನು ಗೆಜೆಟ್‌ನಲ್ಲಿ ಅಧಿಸೂಚಿಸಿಲ್ಲ, ನಮ್ಮ ಯೋಜನೆಯನ್ನು ಮುಂದುವರಿಸಲು ಹಾಗೂ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಕೇಂದ್ರದ ಬೆಂಬಲದ ಅಗತ್ಯವಿದೆ.

3. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ ನೆರವು

ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು 2023–24ರ ಕೇಂದ್ರ ಬಜೆಟ್‌ನಲ್ಲಿ 5,300 ಕೋಟಿ ರೂ.ಗಳ ನೆರವನ್ನು ಘೋಷಿಸಿತ್ತು. ಆದರೆ, 3 ವರ್ಷ ಕಳೆದರೂ ರಾಜ್ಯಕ್ಕೆ ಹಣಕಾಸಿನ ನೆರವು ಬಿಡುಗಡೆಯಾಗಿಲ್ಲ. ಈ ಯೋಜನೆಯ 21,167.93 ಕೋಟಿ ರೂ.ಗಳ ಪರಿಷ್ಕೃತ ವೆಚ್ಚದ ಅಂದಾಜಿನ ಪ್ರಸ್ತುತ ಪ್ರಸ್ತಾವನೆಯನ್ನು ಮೌಲ್ಯಮಾಪನ ಮಾಡಿದೆ. PMKSY&AIBP ಯೋಜನೆಯಲ್ಲಿ ಈ ಯೋಜನೆಗೆ ಕೇಂದ್ರದ ನೆರವನ್ನು ಶೀಘ್ರ ಬಿಡುಗಡೆ ಮಾಡಬೇಕು.

➡ ಪುಟ ೪

ಬೆಳ್ಳಿ ಖಡ್ಗ ಅರ್ಪಿಸಿದ ತ.ನಾಡು ಮುಖ್ಯಮಂತ್ರಿ

ಮೂಕಾಂಬಿಕೆ ದರ್ಶನ ಪಡೆದ ಸಿಎಂ ವಿಜಯ್



ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

• **ಬೈಂದೂರು:** ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ಸಾಂಪ್ರದಾಯಿಕ ಉಡುಗೆಯಲ್ಲಿ ದೇವಳದ ಮುಂಭಾಗದ ಧ್ವಜಸ್ತಂಭಕ್ಕೆ ನಮಿಸಿ ದೇವರ ದರ್ಶನ ಪಡೆದು ಸಂಕಲ್ಪ ನೆರವೇರಿಸಿ ಪೂಜೆ ಸಲ್ಲಿಸಿದರು.

ದೇವಳದ ತಂತ್ರಿ, ಪ್ರಧಾನ ಅರ್ಚಕ ಡಾ. ರಾಮಚಂದ್ರ ಅಡಿಗ ಅರ್ಗಳಾ ಸ್ತೋತ್ರ ಪಠಿಸುತ್ತಾ ಸಿಎಂ ವಿಜಯ್‌ಗೆ ರಕ್ಷಾದಾರ ಕಟ್ಟಿದರು. ಬಳಿಕ ಸಿಎಂ ಅವರು 1,600 ಗ್ರಾಂ ತೂಕದ ಬೆಳ್ಳಿಯ ಖಡ್ಗವನ್ನು ಶ್ರೀ ಮೂಕಾಂಬಿಕಾ ಅಮ್ಮನವರಿಗೆ ಅರ್ಪಿಸಿದರು. ಆರಂಭದಲ್ಲಿ ಸಿಎಂ ವಿಜಯ್ ಅವರಿಗೆ ದೇವಳದ ವತಿಯಿಂದ ಪೂರ್ಣಕುಂಭ ಸ್ವಾಗತ ನೀಡಲಾಯಿತು. ದೇವಳದ ಸಿಇಒ ಪ್ರಶಾಂತ್‌ಕುಮಾರ್ ಶೆಟ್ಟಿ ಹಾಗೂ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ವಿಜಯ್ ಅವರನ್ನು ಗೌರವಿಸಿ, ಈ ಮೊದಲು ಸೇಲಂ, ಕೊಯಂಬತ್ತೂರು ಹಾಗೂ ಚೆನ್ನೈನಿಂದ ಕೊಲ್ಲೂರಿಗೆ ತಮಿಳುನಾಡು ಸರ್ಕಾರಿ ಬಸ್ಸುಗಳ ವ್ಯವಸ್ಥೆಯಿತ್ತು. ತಮಿಳುನಾಡು ಭಕ್ತರ ಅನುಕೂಲಕ್ಕಾಗಿ ಈ ಬಸ್‌ಗಳ ಸೇವೆಯನ್ನು ಪುನರಾರಂಭಿಸುವಂತೆ ಅಧ್ಯಕ್ಷ ಕೆ. ಬಾಬು ಶೆಟ್ಟಿ ಮನವಿ ಮಾಡಿದರು. ಸ್ಪಂದಿಸಿದ ಸಿಎಂ ವಿಜಯ್, ಈ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸಿ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುವುದಾಗಿ ತಿಳಿಸಿದರು. ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರಘುರಾಮ ದೇವಾಡಿಗ ಆಲೂರು, ಸುರೇಂದ್ರ ಶೆಟ್ಟಿ ಸಸನಾ, ಯು. ರಾಜೇಶ್ ಕಾರಂತ್, ಅಭಿಲಾಷ್ ಪಿ. ವಿ., ಧನಾಕ್ಷಿ ವಿಶ್ವನಾಥ, ಸುಧಾ ಕೆ., ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಮೊದಲಾದವರು ಇದ್ದರು.


ಕಾರು ಚಲಾಯಿಸಿದ ಸಿಎಂ!

ಅಪ್ಪಟ ನಿಮಿಷ ದೇವರ ದರ್ಶನ ಪಡೆದು ಹೊರಬಂದ ಸಿಎಂ ವಿಜಯ್ ಸ್ವತಃ ತಾವೇ ಕಾರು ಚಲಾಯಿಸಿಕೊಂಡು ಮಂಗಳೂರು ಏರ್‌ಪೋರ್ಟ್‌ನತ್ತ ತೆರಳಿದರು. ಕೊಲ್ಲೂರು ಪೇಟೆಯ ಇಕ್ಕೆಲಗಳಲ್ಲಿ ನೂರಾರು ಸಂಖ್ಯೆಯಲ್ಲಿ ವಿಜಯ್ ಅಭಿಮಾನಿಗಳು ಸೇರಿದ್ದರು.

ಧರ್ಮಸ್ಥಳ: ಎಸ್‌ಐಟಿ ವರದಿ ಬಹಿರಂಗಕ್ಕೆ ಬಿವೈವಿ ಒತ್ತಾಯ

ಸಮರ್ಪಕ ತನಿಖೆಗೆ ಬಿಜೆಪಿ ಆಗ್ರಹ

• **ಬೆಂಗಳೂರು:** ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಸತ್ಯ ಸಂಗತಿ ಜನರಿಗೆ ಗೊತ್ತಾಗಬೇಕು. ಈ ಹಿನ್ನೆಲೆಯಲ್ಲಿ ಪ್ರಕರಣದ ಸಮರ್ಪಕ ತನಿಖೆಯಾಗಬೇಕು, ಎಸ್‌ಐಟಿ ವರದಿ ಬಹಿರಂಗವಾಗಬೇಕು ಎಂದು ಬಿಜೆಪಿ ಒತ್ತಾಯಿಸಿದೆ.



ಈ ಕುರಿತು ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಕಳಂಕ ತರುವ ಬಹಳ ದೊಡ್ಡ ಷಡ್ಯಂತ್ರ ನಡೆದಿತ್ತು. ಹಿಂದುಗಳ ಧಾರ್ಮಿಕ ಶ್ರದ್ಧೆಗೆ ಕೊಡಲಿ ಪೆಟ್ಟು ಕೊಡುವ ಸಂಚು ನಡೆದಿತ್ತು. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದನ್ನೂ ಪರಾಮರ್ಶೆ ಮಾಡದೆ ಯಾರೋ ಬೀದಿಯಲ್ಲಿ ಹೋಗುವವರು ಹೇಳಿದರೆಂದು ಎಸ್‌ಐಟಿ ತನಿಖೆಗೆ ಆದೇಶಿಸಿದ್ದು ಸಮರ್ಪಕ ನಿರ್ಧಾರ ಆಗಿರಲಿಲ್ಲ ಎಂದು ಆಕ್ಷೇಪಿಸಿದರು.

➡ ಪುಟ ೪

ಎಸ್‌ಐಆರ್‌ಗೆ ಅಸಹಕಾರ

ಪಕ್ಷದಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಚರ್ಚೆಗಳಾಗಿವೆ. ಕೇಂದ್ರ ಚುನಾವಣಾ ಆಯೋಗ ತೀರ್ಮಾನಿಸಿದ ಬಳಿಕ ಎಸ್‌ಐಆರ್ ನಡೆಯುತ್ತಿದ್ದು, ರಾಜ್ಯ ಸರ್ಕಾರ ಇದಕ್ಕೆ ಕಲ್ಲು ಹಾಕುವ ಕೆಲಸ ಮಾಡುತ್ತಿದೆ ಎಂಬ ಅಭಿಪ್ರಾಯ ಎಲ್ಲ ಮುಖಂಡರಿಂದ ವ್ಯಕ್ತವಾಗಿದೆ. ರಾಜ್ಯ ಸರ್ಕಾರವು ಬಿಎಲ್‌ಒಗಳಿಗೆ ಸಮರ್ಪಕ ಆದೇಶ, ಮಾರ್ಗದರ್ಶನ ಮಾಡುತ್ತಿಲ್ಲ. ಡೂಪ್ಲಿಕೇಟ್ ಹೆಸರು, ಸತ್ತವರ ಹೆಸರು ಕೈಬಿಡುವ ಕೆಲಸ ನಡೆಯಬೇಕಿದೆ. ಮುಂದಿನ ದಿನಗಳಲ್ಲಿ ನಮ್ಮ ನಡೆ ಯಾವ ರೀತಿ ಇರಬೇಕೆಂಬ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದು ವಿಜಯೇಂದ್ರ ವಿವರಿಸಿದರು.

ಮಧ್ಯಪ್ರಾಚ್ಯ ಸಂಘರ್ಷ | ಪ್ರತಿ ವಾಹನಕ್ಕೆ ನಿತ್ಯ 200ಲೀ. ಮಾತ್ರ

ಡೀಸೆಲ್ ಮಾರಾಟಕ್ಕೆ ಕೇಂದ್ರ ಮಿತಿ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧದಿಂದಾಗಿ ಜಾಗತಿಕ ಪೂರೈಕೆ ಸರಪಳಿ ಅಸ್ತವ್ಯಸ್ತಗೊಂಡಿದ್ದು, ಈ ಸಮಸ್ಯೆಯಿಂದ ಹೊರಬರಲು ದೇಶದಲ್ಲಿ ಹಲವು ಕ್ರಮ ಕೈಗೊಳ್ಳಲಾಗಿದೆ. ಇದೀಗ



ಸ್ಥಳೀಯ ಕೊರತೆ ತಡೆಗಟ್ಟುವ ಪ್ರಯತ್ನದಲ್ಲಿ ಕೇಂದ್ರ ಸರ್ಕಾರ ಒಂದು ದಿನದಲ್ಲಿ ವಾಹನಕ್ಕೆ 200 ಲೀಟರ್‌ಗಳಷ್ಟು ಡೀಸೆಲ್ ಮಾರಾಟ ಮಿತಿಗೊಳಿಸಿದೆ. ಅದೇ ರೀತಿ ಕೈಗಾರಿಕೆ, ವಾಣಿಜ್ಯ ಮತ್ತು ಸಾಂಸ್ಥಿಕ ಬಳಕೆದಾರರು ಪೆಟ್ರೋಲ್ ಪಂಪ್‌ಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಸಗಟು ಖರೀದಿಗೆ ನಿರ್ಬಂಧಿಸಲಾಗಿದೆ. ಚಿಲ್ಲರೆ ಮಾರಾಟ ಮಳಿಗೆಗಳು ವಾಹನದ ಟ್ಯಾಂಕ್ ಅಥವಾ ಪಿಇಎಸ್‌ಒ-ಅನುಮೋದಿತ ಧಾರಕಕ್ಕೆ ಮಾತ್ರ ಡೀಸೆಲ್ ತುಂಬಿಸಬಹುದು ಮತ್ತು ಪ್ರತಿ ಗ್ರಾಹಕ ಅಥವಾ ವಾಹನಕ್ಕೆ ದಿನಕ್ಕೆ 200 ಲೀಟರ್‌ಗಿಂತ ಹೆಚ್ಚಿರಬಾರದು.

➡ ಪುಟ ೪

90 ದಿನಗಳವರೆಗೆ ಚಾಲ್ತಿಯಲ್ಲಿ

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಮೋಟಾರು ಸ್ಪಿರಿಟ್ ಮತ್ತು ಹೈಸ್ಪೀಡ್ ಡೀಸೆಲ್ (ಚಿಲ್ಲರೆ ಮಳಿಗೆಗಳ ಮೂಲಕ ಪೂರೈಕೆಯ ತಾತ್ಕಾಲಿಕ ನಿಯಂತ್ರಣ) ಆದೇಶ ಹೊರಡಿಸಿದ್ದು, ಇಂಧನ ಚಿಲ್ಲರೆ ವ್ಯಾಪಾರಿಗಳು ಮತ್ತು ತೈಲ ಮಾರುಕಟ್ಟೆ ಕಂಪನಿಗಳಿಗೆ 90 ದಿನಗಳವರೆಗೆ ಚಿಲ್ಲರೆ ಮಳಿಗೆಗಳಿಂದ ಬೃಹತ್ ಖರೀದಿಗಳನ್ನು ನಿಗ್ರಹಿಸಲು ನಿರ್ದೇಶಿಸಿದೆ. ಅಂತಾರಾಷ್ಟ್ರೀಯ ಪೆಟ್ರೋಲಿಯಂ ಪೂರೈಕೆ ಸರಪಳಿಗಳು, ಶಿಪ್ಪಿಂಗ್ ಲಾಜಿಸ್ಟಿಕ್ಸ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ವಿಶ್ವದ ಕೆಲವು ಪ್ರದೇಶಗಳ ಮೇಲೆ ಪರಿಣಾಮ ಬೀರುವ ಪ್ರಸ್ತುತ ಭೌಗೋಳಿಕ ರಾಜಕೀಯ ಪರಿಸ್ಥಿತಿಯಿಂದ ಈ ಕ್ರಮವು ಅಗತ್ಯವಾಗಿದೆ ಎಂದು ಸರ್ಕಾರ ಹೇಳಿದೆ.

➡ ಪುಟ ೪

ಎಚ್‌ಎಂಟಿಗೆ ಶೀಘ್ರ ಕಾಯಕಲ್ಪ




ಸದ್ಯದಲ್ಲೇ ವಿತ್ತ ಸಚಿವರ ಜತೆ ಚರ್ಚೆ: ಎಚ್‌ಡಿಕೆ

• **ಬೆಂಗಳೂರು:** ಉತ್ಪಾದನೆ ಆಧರಿತ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಪ್ರಧಾನಿಗಳ ದೂರದೃಷ್ಟಿ ಹಿನ್ನೆಲೆಯಲ್ಲಿ ಭಾರತದ ಪ್ರತಿಷ್ಠಿತ ಉದ್ಯಮಿಗಳಲ್ಲಿ ಒಂದಾದ ಹಿಂದುಸ್ತಾನ್ ಮಷಿನ್ ಟೂಲ್ಸ್ (ಎಚ್‌ಎಂಟಿ) ಕಂಪನಿಗೆ ಮರುಜೀವ ನೀಡುವ ಯೋಜನೆ ಅಂತಿಮ ಹಂತದಲ್ಲಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ಕೇಂದ್ರೀಯ ಕೈಗಾರಿಕಾ ಉತ್ಪಾದನಾ ಸಂಸ್ಥೆ (ಸಿಎಂಟಿಐ)ಯ 65ನೇ ಸಂಸ್ಥಾಪನಾ ದಿನ ಕಾರ್ಯಕ್ರಮ ಉದ್ಘಾಟಿಸಿದ ಅವರು, ಉತ್ಪಾದನೆ ಮತ್ತು ಸಂಶೋಧನೆಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಬೆಂಗಳೂರು ಸೇರಿದಂತೆ ಭಾರತದ ವಿವಿಧ ಭಾಗಗಳಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಎಚ್‌ಎಂಟಿಯ ಎಲ್ಲಾ ವಿಭಾಗಗಳನ್ನು ಪುನರುಜ್ಜೀವನಗೊಳಿಸುವ ಉದ್ದೇಶ ಕೇಂದ್ರ ಸರ್ಕಾರ ಹೊಂದಿದ್ದು, ಡಿಪಿಆರ್ ಕೂಡ ಅಂತಿಮ ಹಂತದಲ್ಲಿದೆ.

➡ ಪುಟ ೪

ಐತಿಹಾಸಿಕ, ಪರಿವರ್ತನಾತ್ಮಕ ನಾಯಕತ್ವ

• **ಸಿ.ಪಿ. ರಾಧಾಕೃಷ್ಣನ್, ಉಪ ರಾಷ್ಟ್ರಪತಿ**



10 ಜೂನ್ 2026ರಂದು ಭಾರತವು ತನ್ನ ಪ್ರಜಾಸತ್ತಾತ್ಮಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಬರೆದಿದೆ. ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾಗಿ 4,399 ದಿನಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸುವ ಮೂಲಕ, ಭಾರತದ ಇತಿಹಾಸದಲ್ಲೇ ಅತ್ಯಂತ ದೀರ್ಘಕಾಲ ಸತತವಾಗಿ ಅಧಿಕಾರ ವಹಿಸಿಕೊಂಡ ಚುನಾಯಿತ ಪ್ರಧಾನಮಂತ್ರಿಯಾಗಿದ್ದಾರೆ. ಈ ಐತಿಹಾಸಿಕ ಮೈಲಿಗಲ್ಲು ರಾಷ್ಟ್ರ ನಿರ್ಮಾಣದ ಕಡೆಗಿನ ಅವರ ಅಚಲ ಬದ್ಧತೆಯಲ್ಲದೆ, ಭಾರತದ ಜನರು ಅವರ ದೂರದೃಷ್ಟಿಯ ನಾಯಕತ್ವದ ಮೇಲೆ ಇಟ್ಟಿರುವ ಸುದೀರ್ಘ ವಿಶ್ವಾಸ ಮತ್ತು ನಂಬಿಕೆ ಪ್ರತಿಬಿಂಬಿಸುತ್ತದೆ. ಇದು ಅವರ ದೂರದೃಷ್ಟಿಯ ನಾಯಕತ್ವ, ರಾಷ್ಟ್ರೀಯ ಅಭಿವೃದ್ಧಿಗೆ ಅವರ ದಣಿವರಿಯದ ಸಮರ್ಪಣೆ ಮತ್ತು ಭಾರತದ ಜನರ ಕಲ್ಯಾಣ ಹಾಗೂ ಆಕಾಂಕ್ಷೆಗಳಿಗೆ ಅವರ ದೃಢವಾದ ಭಕ್ತಿಯ ಪ್ರತಿಬಿಂಬವಾಗಿ ನಿಂತಿದೆ.

ಪರಿವರ್ತನಾತ್ಮಕ ನಾಯಕತ್ವ; ದೀರ್ಘಾವಧಿ ಮುಂದುವರಿಕೆ

ರಾಷ್ಟ್ರದ ಪ್ರಧಾನ ಸೇವಕರಾಗಿ, ನರೇಂದ್ರ ಮೋದಿ ಅವರು ಉತ್ತಮ ಆಡಳಿತ ಮತ್ತು ರಾಷ್ಟ್ರ ಪ್ರಥಮ(ರಾಷ್ಟ್ರಕ್ಕೆ ಮೊದಲ ಆದ್ಯತೆ) ತತ್ವಗಳಿಂದ ಮಾರ್ಗದರ್ಶಿಸಲ್ಪಟ್ಟು, ಭಾರತದಲ್ಲಿ ಅಭೂತಪೂರ್ವ ಪರಿವರ್ತನೆಯ ಯುಗವನ್ನು ತಂದಿದ್ದಾರೆ. ಮಾನವ ಗುಲಾಮಗಿರಿಯ ಪಿಡುಗನ್ನು ಕೊನೆಗೊಳಿಸಲು ಮತ್ತು ಲಕ್ಷಾಂತರ ಜನರಿಗೆ ಘನತೆಯನ್ನು ಮರಳಿ ತರಲು, ತಮ್ಮ ದೃಢ ನಾಯಕತ್ವಕ್ಕಾಗಿ ಇತಿಹಾಸವು ಅಬ್ರಹಾಂ ಲಿಂಕನ್ ಅವರನ್ನು ಹೇಗೆ ಗೌರವಿಸುತ್ತದೆಯೋ, ಹಾಗೆಯೇ ಮುಂದಿನ ಪೀಳಿಗೆಗಳು 25 ಕೋಟಿಗೂ ಹೆಚ್ಚು ಬಡ ಜನರನ್ನು ಸಂಪೂರ್ಣ ಬಡತನದಿಂದ ಮುಕ್ತಗೊಳಿಸಿದ್ದಕ್ಕಾಗಿ ಪ್ರಧಾನಿ ಮೋದಿಯವರನ್ನು ನೆನಪಿಸಿಕೊಳ್ಳುತ್ತವೆ. ಅವರ ದೂರದೃಷ್ಟಿ, ದಣಿವರಿಯದ ಶ್ರಮ ಮತ್ತು ಪರಿವರ್ತನಾತ್ಮಕ ಆಡಳಿತದ ಮೂಲಕ, ಅಸಂಖ್ಯಾತ ಕುಟುಂಬಗಳಿಗೆ ಅವಕಾಶ, ಘನತೆ ಮತ್ತು ಭರವಸೆಯ



ಸಬಲೀಕರಣ ನೀಡಲಾಗಿದೆ. ಇದು ಆರ್ಥಿಕ ಸ್ವಾತಂತ್ರ್ಯ ಮತ್ತು ಉತ್ತಮ ಭವಿಷ್ಯದ ಭರವಸೆ ಸ್ವೀಕರಿಸಲು ಅವರಿಗೆ ಅನುವು ಮಾಡಿಕೊಟ್ಟಿದೆ. ಮಾನವಕುಲದ ಸೇವೆಯಲ್ಲಿ ಅವರ ಈ ಕೊಡುಗೆಯು ಇತಿಹಾಸದ ಪುಟಗಳಲ್ಲಿ ಒಂದು ಮೈಲುಗಲ್ಲು ಸಾಧನೆಯಾಗಿ ಎಂದೆಂದಿಗೂ ನೆನಪಿನಲ್ಲಿ ಉಳಿಯುತ್ತದೆ.

ಅವರ ಪರಿವರ್ತನಾತ್ಮಕ ಉಪಕ್ರಮಗಳು ಶಿಕ್ಷಣ, ವಸತಿ, ನೈರ್ಮಲ್ಯ, ಆರೋಗ್ಯ ಮತ್ತು ಆಹಾರ ಭದ್ರತೆಯ ಮೂಲಕ ಲಕ್ಷಾಂತರ ಜನರಿಗೆ ಘನತೆ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಿವೆ. ವಿಶ್ವದ ಅತಿ ದೊಡ್ಡ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲಿ ಒಂದಾದ ಆಯುಷ್ಮಾನ್ ಭಾರತ ಯೋಜನೆಯ ಮೂಲಕ 44 ಕೋಟಿಗೂ ಹೆಚ್ಚು ನಾಗರಿಕರಿಗೆ ಗುಣಮಟ್ಟದ ಆರೋಗ್ಯ ರಕ್ಷಣೆಯ ಭರವಸೆಯನ್ನು ನೀಡಲಾಗಿದೆ. 'ಜಲ ಜೀವನ್ ಮಿಷನ್' ಮೂಲಕ 12 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳು ಸುರಕ್ಷಿತ ಮತ್ತು ವಿಶ್ವಾಸಾರ್ಹ ಕುಡಿಯುವ ನೀರಿನ ಸಂಪರ್ಕ ಪಡೆದುಕೊಂಡಿವೆ. ಇದು ಅಸಂಖ್ಯಾತ ಕುಟುಂಬಗಳಿಗೆ ಘನತೆ ಮತ್ತು ಸುಧಾರಿತ ಜೀವನದ ಗುಣಮಟ್ಟವನ್ನು ತಂದಿದೆ.

➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,60,000**(2,50,000) ಅಪರಂಜಿ ಚಿನ್ನ: **1,48,680**(1,45,640) ಆಭರಣ ಚಿನ್ನ: **1,36,200**(1,33,500) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **75,527** (1695↑) ಎನ್‌ಎಸ್‌ಇ **23,622** (461↑)

$1 = ₹95.17

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

• **ಧಾರವಾಡ:** ಜಿಲ್ಲೆಯ 110 ಕೆವ್ಹಿ ಯು.ಎ.ಎಸ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜೂ.13ರಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ 1ನೇ ತ್ರೈಮಾಸಿಕ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಹಿನ್ನೆಲೆ ಈ ಕೇಂದ್ರದಿಂದ ಸರಬರಾಜು ಆಗುವ ಎಲ್ಲ 11 ಕೆವ್ಹಿ ಮಾರ್ಗಗಳಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಎತ್ತಿನಗುಡ್ಡ, ಅಗ್ರಿ, ಯುನಿವರ್ಸಿಟಿ ಕ್ಯಾಂಪಸ್, ಕುಮಾರೇಶ್ವರ ನಗರ, ಸೈದಾಪೂರ, ಬೆಳಗಾವಿ ಮೇನ್ ರೋಡ್, ನಾರಾಯಣಪುರ, ಸಿ.ಬಿ.ಟಿ.ಬಿ, ಕೆ.ಹೆಚ್.ಬಿ ಕಾಲೋನಿ, ಸಂಪಿಗೆ ನಗರ, ಶಾಂತಿನಿಕೇತನ ಹಾಸ್ಟೆಲ್, ಸಪ್ತಗಿರಿ ನಗರ, ಜೆ.ಟಿ.ಸಿ ಕ್ಯಾಂಪಸ್, ಮೆಹಬೂಬ ನಗರ, ಹಳ್ಳಿ ನಗರ, ಮಾಳಾಪುರ, ಪಿರಚೆಟ್, ಜಯಲಕ್ಷ್ಮಿ ಇಂಡಸ್ಟ್ರೀ, ಬಾಪು ಕಾಲೋನಿ, ಪವರ್ ಗ್ರಿಡ್, ಪೆಪ್ಸಿ, ಕಿಲ್ಲಾ, ಸಾಧುನವರ ಎಸ್ಟೇಟ್, ನರೇಂದ್ರ, ಮಮ್ಮಿಗಟ್ಟಿ, ಚಿಕ್ಕಮಲ್ಲಿಗವಾಡ, ಹಿರೇಮಲ್ಲಿಗವಾಡ, ಶಿರಡಿನಗರ, ತಾಜನಗರ, ಬಿ.ಎಸ್.ಕೆ ಲೇಔಟ್, ಮಾಳಮಡ್ಡಿ ಬಸ್ ಬ್ಯಾಂಕ್, ರಾಜನಗರ, ತಮದಂಡಿ ಪ್ಲಾಟ್, ಹರಿಜನಕೇರಿ, ಎಮ್‌ಎಮ್‌ಸಿ, ಪೈರ್ ಸ್ಟೇಷನ್, ರಾಮನಗೌಡ ಹಾಸ್ಟೆಲ್, ದುರ್ಗಾದೇವಿ ದೇವಸ್ಥಾನ, ಮರಾಠ ಕಾಲೋನಿ, ಹೊಸ್ಪರಕೇರಿ, ಗುಲಗಂಜಿಕೊಪ್ಪ, ಎಂ.ಬಿ ನಗರ, ಸಿವಿಲ್ ಹಾಸ್ಪಿಟಲ್, ನಿತಿನ್ ನಗರ, ಓಲ್ಡ್ ಎಸ್.ಪಿ ಸರ್ಕಲ್, ಲಕ್ಷ್ಮಿ ಗುಡಿಯ ಸುತ್ತಮುತ್ತಲಿನ ಪ್ರದೇಶ, ಪೋಲೀಸ್ ಹೆಡ್ ಕ್ವಾರ್ಟರ್ ಪ್ರದೇಶ, ಬೇಂದ್ರೆ ನಗರ, ಹಿರೇಮಠ ಲೇಔಟ್, ಐಶ್ವರ್ಯ ನ್ಯಾನೋಸಿಟಿ, ನಂದಿ ಹೈವೇ ಬೈಪಾಸ್, ಮಲ್ಲಿಗೆ ನಗರ, ಗುರುನಗರ, ಶ್ರೀಗುರು ನಗರ, ಕೆ.ಹೆಚ್.ಬಿ ಲೇಔಟ್, ಮಲ್ಲಿಗವಾಡ, ಮಾಳಾಪುರ ನಗರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

ಆನ್‌ಲೈನ್ ಅರ್ಜಿ ಆಹ್ವಾನ

• **ಹುಬ್ಬಳ್ಳಿ:** ಮೈಸೂರು ವಿಶ್ವವಿದ್ಯಾನಿಲಯದ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ವಿ.ಎ. ದೃಶ್ಯ ಕಲೆಯಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ದ್ವಿತೀಯ ಪಿಯುಸಿ ಅಥವಾ ಸಮಾನಾಂತರ ಕೋರ್ಸುಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್, ಅನ್ವಯ ಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ, ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ.

ಅರ್ಹ ಅಭ್ಯರ್ಥಿಗಳು https://uucms.karnataka.gov.in ವೆಬ್‌ಸೈಟ್‌ನಲ್ಲಿ ಜೂನ್ 12 ರೊಳಗೆ ಅರ್ಜಿ ಸಲ್ಲಿಸಬಹುದು.

ಬಸ್ ಪಾಸ್‌ಗೆ ಅರ್ಜಿ ಆಹ್ವಾನ

• **ಹುಬ್ಬಳ್ಳಿ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ 2026-27 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಬಸ್ ಪಾಸ್‌ಗಳನ್ನು ಸರ್ಕಾರ ಇಡಿಸಿಎಸ್ ಇಲಾಖೆಯ ಸೇವಾ ಸಿಂಧು ಪೋರ್ಟಲ್ ಮೂಲಕ ವಿತರಿಸಲಾಗುತ್ತಿದೆ. ಸರ್ಕಾರ ರಾಜ್ಯದ ಶಾಲಾ ಕಾಲೇಜುಗಳಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಲು ಶಾಶ್ವತ ಅನುಮೋದನೆ ನೀಡಿ ಆದೇಶಿಸಿದೆ. ಜೂ. 12 ರಿಂದ ವಿದ್ಯಾರ್ಥಿಗಳು ಬಸ್ ಪಾಸ್ ಪಡೆಯಬಹುದು.

ಈ ಹಿಂದೆ ಅನುಸರಿಸುತ್ತಿದ್ದ ನಿಯಮಗಳ ಮುಂದುವರೆಯಲಿವೆ. ವಿದ್ಯಾರ್ಥಿಗಳು ಉಚಿತ ಬಸ್ ಪಾಸ್ ಪಡೆಯಲು, ಈ ಹಿಂದಿನಂತೆ ಕರ್ನಾಟಕ ಸರ್ಕಾರದ ಸೇವಾಸಿಂಧು ಪೋರ್ಟಲ್‌ನಲ್ಲಿ, ಶಾಲೆಗಳು ಸೇರಿದಂತೆ ಎಲ್ಲಿಂದಲಾದರೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸೇವಾಸಿಂಧು ಪೋರ್ಟಲ್ ಐಡಿ (https://sevasindhuservices.karnataka.gov.in/buspassservices/) ಪಡೆಯಬಹುದು.

ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ವ್ಯಾಪ್ತಿಯ 82 ಪಾಸ್ ವಿತರಣಾ ಕೇಂದ್ರಗಳಲ್ಲಿ ವಿವರಗಳನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಒದಗಿಸಲಾಗಿದೆ.

ರಾಜ್ಯದಲ್ಲಿ ವಾಸವಿದ್ದು, ನೆರೆರಾಜ್ಯಗಳಲ್ಲಿನ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ನೆರೆರಾಜ್ಯಗಳಲ್ಲಿ (ರಾಜ್ಯದ ಗಡಿಭಾಗದಲ್ಲಿ) ವಾಸವಿದ್ದು, ರಾಜ್ಯದೊಳಗಿನ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಉಚಿತ ಬಸ್ ಪಾಸ್ ಪಡೆಯಬಹುದಾಗಿದೆ. ಈಗಾಗಲೇ ಪ್ರಸಕ್ತ ಶೈಕ್ಷಣಿಕ ವರ್ಷ 2026-27ನೇ ಸಾಲಿನಲ್ಲಿ ಶುಲ್ಕ ಪಡೆದು ವಿತರಿಸಲಾದ ಪಾಸುಗಳ ಸಂಪೂರ್ಣ ಶುಲ್ಕವನ್ನು 15 ದಿನಗಳೊಳಗಾಗಿ ವಿದ್ಯಾರ್ಥಿಗಳಿಗೆ ಮರುಪಾವತಿಸಲಾಗುವುದು. ಈ ಪ್ರಕ್ರಿಯೆ ಬಗ್ಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

ವೃದ್ಧೆಗೆ ಗಾಯ

• **ಹುಬ್ಬಳ್ಳಿ:** ನಗರದ ಹೊಸೂರ ವೃತ್ತದ ಕೆನರಾ ಹೋಟೆಲ್ ಹತ್ತಿರ ವೃದ್ಧೆಯೊಬ್ಬರು ನಡೆದು ಹೋಗುವಾಗ ಅವರ ಮೇಲೆ ಮೇಲ್ಸೇತುವೆ ರಾಡ್‌ವೊಂದು ಬಿದ್ದು, ಗಾಯಗೊಂಡಿರುವ ಘಟನೆ ಶುಕ್ರವಾರ ನಡೆದಿದೆ. ಹಾವೇರಿಯ ಯಶೋಧಾ ಜಾದವ(74) ಗಾಯಗೊಂಡಿದ್ದಾರೆ. ಹಾವೇರಿಯಿಂದ ನವನಗರದಲ್ಲಿರುವ ಮಗಳ ಮನೆಗೆ ಹೋಗಲು ನಗರಕ್ಕೆ ಬಂದಿದ್ದರು. ಹೊಸೂರು ವೃತ್ತದ ಬಸ್‌ನಿಲ್ದಾಣದಿಂದ ನವನಗರ ಬಸ್ ಹತ್ತಲು ಹೋಗುವಾಗ ಮೇಲ್ಸೇತುವೆ ಮೇಲಿಂದ ರಾಡ್ ಬಿದ್ದು, ಮೂಗಿನ ಮೇಲೆ ಗಾಯವಾಗಿದೆ. ನಗರದ ಕೆಎಂಸಿಆರ್ ಐನಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ನಾಲ್ಕು ಹೊಲಿಗೆ ಬಿದ್ದಿವೆ ಎಂದು ವಿದ್ಯಾನಗರ ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಾಗಿಲ್ಲ.



ಹುಬ್ಬಳ್ಳಿ: ಶಾಸಕ ಸಂತೋಷ ಲಾಡ್ ಅವರಿಗೆ ಮತ್ತೆ ಕಾರ್ಮಿಕ ಇಲಾಖೆ ಸಚಿವ ಸ್ಥಾನ, ಜಮೀರ್ ಅಹ್ಮದ ಖಾನ್ ಅವರಿಗೆ ಉಪಮುಖ್ಯಮಂತ್ರಿ, ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಸಮೃದ್ಧ ಕಟ್ಟಡ ಕಾರ್ಮಿಕರ ಸಂಘದ ಸದಸ್ಯರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಫೈನಲ್‌ಗೆ ಲಗ್ಗೆ ಇಟ್ಟ ಬೆಳಗಾವಿ ಸ್ಪೋರ್ಟ್ಸ್ ಕ್ಲಬ್

• **ಹುಬ್ಬಳ್ಳಿ:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆ.ಎಸ್.ಸಿ.ಎ) ಧಾರವಾಡ ವಲಯದ ವತಿಯಿಂದ ಆಯೋಜಿಸಲಾಗಿದ್ದ ಯು-19 ಅಂತರ ಕ್ಲಬ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಬೆಳಗಾವಿ ಸ್ಪೋರ್ಟ್ಸ್ ಕ್ಲಬ್ (ಎ) ತಂಡವು ಆನಂದ್ ಕ್ರಿಕೆಟ್ ಕೋಚಿಂಗ್ ಅಕಾಡೆಮಿ (ಎ) ತಂಡದ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿ ಫೈನಲ್ ಪ್ರವೇಶಿಸಿದೆ.

ಬೆಳಗಾವಿಯ ಕೆ.ಎಸ್.ಸಿ.ಎ ಮೈದಾನದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿಯ ಆನಂದ್ ಕ್ರಿಕೆಟ್ ಕೋಚಿಂಗ್ ಅಕಾಡೆಮಿ ತಂಡವು ನಿಗದಿತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿತು. ತಂಡದ ಪರವಾಗಿ ಲಾಭ್ ಎಸ್. ವರ್ಣೇಕರ್ 81, ಸ್ವಂದ ಡಿ. ಶೆಟ್ಟಿ 48, ಹೈದರಾಲಿ ಸೈಯದ್ 35 ರನ್ ಗಳಿಸಿದರು. ಅರ್ನವ್ ಕುಂದಪ್ 31/2, ಪೃಥ್ವಿ ಕಾಂಬ್ಳೆ 37/2 ವಿಕೆಟ್ ಪಡೆದರು.

203 ರನ್‌ಗಳ ಸುಲಭ ಗುರಿಯನ್ನು ಬೆನ್ನಟ್ಟಿದ ಬೆಳಗಾವಿ ಸ್ಪೋರ್ಟ್ಸ್ ಕ್ಲಬ್ ತಂಡವು ಕೇವಲ 40 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 205 ರನ್ ಗಳಿಸುವ ಮೂಲಕ ಭರ್ಜರಿ ಜಯ ದಾಖಲಿಸಿತು. ತಂಡದ ಪರ ವೃತೀನ್ ಪ್ರಶಾಂತ್ ಪಡ್ತಿ ಅಜೇಯ 104, ಅರ್ನವ್ ಕುಂದಪ್ ಅಜೇಯ 69 ರನ್ ಗಳಿಸಿದರು. ಅಥರ್ವ್ ಕರಡಿ 48/1, ಸ್ವರಾಜ್ ಜುವೇಕರ್ 29/1 ವಿಕೆಟ್ ಪಡೆದರು.



ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಅವರು ದೀರ್ಘಾವಧಿ ಪ್ರಧಾನಿಯಾಗಿ ಇತಿಹಾಸ ಸೃಷ್ಟಿಸಿದ ಹಿನ್ನೆಲೆ ಬಿಜೆಪಿ ಹುಬ್ಬಳ್ಳಿ-ಧಾರವಾಡ ವಿಧಾನಸಭೆ 74 ಕ್ಷೇತ್ರ ಕಾರ್ಯಕರ್ತರು ನಗರದ ಬಿಆರ್‌ಟಿಎಸ್ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯ ಮಾಡಿದರು. ಮೇಯರ್ ಜ್ಯೋತಿ ಪಾಟೀಲ, ಪಾಲಿಕೆ ಸದಸ್ಯ ಸುರೇಶ ಬೇದರೆ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಗರಗ, ಸುನಿತಾ ಮಾಳವದಕರ್, ನಾಯಕ ನಾಯಕ, ಶಿವಣ್ಣ ಬಡವಣ್ಣವರ, ಮೈಲಾರಿ ಉಪ್ಪಿನ ಮತ್ತು ರಮೇಶ ದೊಡ್ಡಮಡ ಇದ್ದರು.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ | ಜಿಲ್ಲಾಧಿಕಾರಿ ಹೇಳಿಕೆ

ಸೇವಾ ಪ್ಯಾಕೇಜ್ ಅವಶ್ಯ



• **ಧಾರವಾಡ:** ನೈಸರ್ಗಿಕ ವಿಪತ್ತು, ಹವಾಮಾನ ಬದಲಾವಣೆ, ಸಶಸ್ತ್ರ ಸಂಘರ್ಷ ಮುಂತಾದ ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ ಲೈಂಗಿಕ ಮತ್ತು ಸಂತಾನೋತ್ಪತ್ತಿಗೆ ಸೇವಾ ಪ್ಯಾಕೇಜ್ ಅತ್ಯವಶ್ಯಕ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸಲಹೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ನೂತನ ಸಭಾಂಗಣದಲ್ಲಿ ನೈಸರ್ಗಿಕ ವಿಪತ್ತಿನ ವೇಳೆ ಲೈಂಗಿಕ ಮತ್ತು ಸಂತಾನೋತ್ಪತ್ತಿಗೆ ಕನಿಷ್ಠ ಆರಂಭಿಕ ಸೇವಾ ಪ್ಯಾಕೇಜ್ ಅಧ್ಯಾಯದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕ್ರಿಯಾ ಯೋಜನೆ ಸಭೆಯಲ್ಲಿ ಮಾತನಾಡಿದರು. ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಬಾಲ್ಯ ವಿವಾಹ, ಅತ್ಯಾಚಾರ, ಲೈಂಗಿಕ ಹಿಂಸೆ, ಅಸುರಕ್ಷಿತ ಗರ್ಭಪಾತ, ಎಚ್ ಐವಿ ಸೇರಿ ಲೈಂಗಿಕ ರೋಗಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಈ ಪರಿಸ್ಥಿತಿಯಲ್ಲಿ ಆರೋಗ್ಯ ಸೇವೆಗಳು ಒದಗಿಸುವುದು ಅಗತ್ಯವಿದೆ ಎಂದರು. ಜಿಪಂ ಸಿಇಒ ಭುವನೇಶ ಪಾಟೀಲ ಮಾತನಾಡಿ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಕುರಿತು ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು. ಈ ಕುರಿತು ಕುಟುಂಬದ ಸದಸ್ಯರು ಹಾಗೂ ನೆರೆಹೊರೆಯವರೊಂದಿಗೆ ಚರ್ಚಿಸಬೇಕು ಎಂದರು. ಎಫ್‌ಪಿಎಐ ಪ್ರಧಾನ ವ್ಯವಸ್ಥಾಪಕಿ ಸುಜಾತಾ ಆನಿಶೆಟ್ಟರ ಮಾತನಾಡಿ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಅಗತ್ಯ ಪರಿಹರಿಸಲು ಎಫ್.ಪಿ.ಎ.ಐ.ಯು ಎಸ್.ಆರ್.ಎಚ್. ಕನಿಷ್ಠ ಆರಂಭಿಕ ಸೇವೆ ಪ್ಯಾಕೇಜ್ ಒದಗಿಸುವುದಾಗಿಯೂ ತಿಳಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಎಫ್.ಪಿ.ಎ.ಐ ಉಪಾಧ್ಯಕ್ಷೆ ಸಂಗೀತಾ ಮಾನೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಅಜೀಜ್ ದೇಸಾಯಿ, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಅನೇಕರು ಇದ್ದರು.

▸▸ ನವಜಾತ ಶಿಶು ಹಾಗೂ ಗರ್ಭಿಣಿಯರಿಗೆ ಸೌಲಭ್ಯ ಒದಗಿಸಿ

▸▸ ಗ್ರಾಪಂ ವ್ಯಾಪ್ತಿಯಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಹೆಚ್ಚಿನ ಕ್ರಮ ವಹಿಸಲು ವಿಪತ್ತು ನಿರ್ವಹಣಾ ಪ್ರಾಧಿಕಾರ ಕ್ರಿಯಾಯೋಜನೆ ಅಳವಡಿಸಲಾಗಿದೆ ಎಂದ ಜಿಲ್ಲಾಧಿಕಾರಿ

ವರ್ಷಕ್ಕೆ ಹತ್ತು ಕೆರೆ ಅಭಿವೃದ್ಧಿ: ಡಿಸಿ ಸ್ನೇಹಲ್

• **ಧಾರವಾಡ:** ಜಿಲ್ಲೆಯಲ್ಲಿ ನದಿಗಳಿಲ್ಲ, ಆದರೆ 1,250 ಕೆರೆಗಳಿವೆ. ಪ್ರತಿ ವರ್ಷವೂ ನೂರಾರು ಕೆರೆಗಳ ಅಭಿವೃದ್ಧಿ ಅಸಾಧ್ಯ. ಆದರೆ ಕನಿಷ್ಠ 10 ಕೆರೆಗಳ ಅಭಿವೃದ್ಧಿಗೆ ಸಂಪನ್ಮೂಲ, ಅನುದಾನ ಒದಗಿಸುವುದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಭರವಸೆ ನೀಡಿದರು.

ನಗರದ ಜರ್ನಲಿಸ್ಟ್ ಗಿಲ್ಡ್‌ನಲ್ಲಿ ಶುಕ್ರವಾರ ಹಮ್ಮಿಕೊಂಡ ಮಾಧ್ಯಮ ಸಂವಾದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಲಿದೆ. ಈ ಹಿಂದೆ ಜಿಪಂ ಸಿಇಒ ಆಗಿಯೂ ಹೆಚ್ಚಿನ ಕಾರ್ಯ ಮಾಡಿದ್ದಾಗಿಯೂ ಸ್ಮರಣೆ ಮಾಡಿದರು. ರೈತರ ಅನುಕೂಲಕ್ಕೆ ನಮ್ಮ ಹೊಲ, ನಮ್ಮ ರಸ್ತೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ದೊಡ್ಡ ಹಳ್ಳಿಗಳಲ್ಲಿಯೂ ಒಳಚರಂಡಿ, ಕೊಳಚೆ ನಿರ್ವಹನೆ ಅನಿವಾರ್ಯವೂ ಇದೆ. ಕಸದ ನಿರ್ವಹಣೆ ಸಮಸ್ಯೆಗಳಿದ್ದು, ಸರಿಪಡಿಸುವುದಾಗಿ ಪ್ರಶ್ನೆಯೊಂದಿಗೆ ಉತ್ತರ ನೀಡಿದರು. ಎರಡು ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲಕ್ಕೆ ಹಾಸ್ಟೇಲ್‌ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಹೇಳಿದರು. ಧಾರವಾಡ ನಗರದ ಮೂರ್ನಾಲ್ಕು ಕಡೆಗಳಲ್ಲಿ ಜಾಗ ಗುರುತಿಸಿದ್ದು, ಪರಿಶೀಲನೆ ಮಾಡಿದೆ. ವಿದ್ಯಾನಗರ ಪರಿಕಲ್ಪನೆಗೆ ಸಾವಿರಾರು ವಿದ್ಯಾರ್ಥಿಗಳು ಅನುಕೂಲಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರದ ಗಮನಸೆಳೆಯುವುದಾಗಿ ಸ್ನೇಹಲ್ ತಿಳಿಸಿದರು. ಜರ್ನಲಿಸ್ಟ್ ಗಿಲ್ಡ್ ಅಧ್ಯಕ್ಷ ಡಾ.ಬಸವರಾಜ್ ಹೊಂಗಲ್, ಉಪಾಧ್ಯಕ್ಷ ಬಸವರಾಜ ಅಳಗವಾಡಿ, ಕಾರ್ಯದರ್ಶಿ ನಿಜಗುಣಿ ದಿಂಡಲಕೊಪ್ಪ, ಪತ್ರಕರ್ತ ಶ್ರೀನಿಧಿ ಆರ್. ಸೇರಿದಂತೆ ವಿವಿಧ ಪತ್ರಿಕೆಗಳು ಜಿಲ್ಲಾ ವರದಿಗಾರರು ಇದ್ದರು.

ಪಿಜಿಗಳ ಮೇಲೆ ನಿಗಾ

ಧಾರವಾಡದಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತಿರುವ ಪಿಜಿಗಳ ಚಟುವಟಿಕೆಗಳ ಮೇಲೆ ಭವಿಷ್ಯದಲ್ಲಿ ತೀವ್ರ ನಿಗಾ ಇಡಲಿದೆ. 2,500ಕ್ಕೂ ಹೆಚ್ಚು ಪಿಜಿಗಳಿದ್ದು, ಕೆಲವು ಕಡೆ ಅಕ್ರಮ ಚಟುವಟಿಕೆಗಳು ನಡೆಸಿದ ವರದಿಯೂ ಇದೆ. ಭವಿಷ್ಯದಲ್ಲಿ ಎಚ್ಚರಿಕೆ ವಹಿಸುವುದಾಗಿಯೂ ಮಾಧ್ಯಮದವರ ಪ್ರಶ್ನೆಗೆ ಜಿಲ್ಲಾಧಿಕಾರಿ ಸ್ನೇಹಲ್ ಉತ್ತರಿಸಿದರು.

ಶಾಲೆಗಳ ಅಭಿವೃದ್ಧಿಗೆ ಸಿಎಸ್ ಆರ್ ಧನ ಸಹಾಯ ಬಳಕೆ ಮಾಡಲಿದೆ. ಅಣ್ಣಿಗೇರಿ, ಅಳ್ನಾವರ ತಹಶೀಲ್ದಾರ್ ಕಚೇರಿ ಸರಿಯಾಗಿ ಅಭಿವೃದ್ಧಿಯಾಗಿಲ್ಲ ಎಂಬ ಕೂಗಿದೆ. ಇದೀಗ ಅನುದಾನ ಬಂದಿದ್ದು, ಶೀಘ್ರ ಕಾಮಗಾರಿ ಆರಂಭಿಸುತ್ತೇವೆ. ಜಿಲ್ಲೆಯಲ್ಲಿ ಭೂ ಸಮೀಕ್ಷೆಯ 11,500 ಅರ್ಜಿ ಬಾಕಿ ಇವೆ. ಶೀಘ್ರ ಸಮಸ್ಯೆಗೆ ಪರಿಹಾರ ಸಿಗಲಿದೆ.

■ ಸ್ನೇಹಲ್ ಆರ್., ಡಿಸಿ

ಖಾಲಿ ಕೊಡ ತಂದು ಪಂಚಾಯತಿಗೆ ಮುತ್ತಿಗೆ

• **ಉಪ್ಪಿನಬೆಟಗೇರಿ:** ಗ್ರಾಮಕ್ಕೆ ಸರಿಯಾಗಿ ಪೂರೈಕೆಯಾಗದ ಕುಡಿಯುವ ನೀರು ಹಾಗೂ ದಿನ ನಿತ್ಯ ಬಳಕೆ ಮಾಡುವ ಉಪ್ಪು ನೀರಿಲ್ಲದೆ ತಂಗಾಲದ ಮಹಿಳೆಯರು ಖಾಲಿ ಕೊಡ ತಂದು ಶುಕ್ರವಾರ ಪಂಚಾಯತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಎರಡು ತಿಂಗಳದಿಂದ ದಿನ ನಿತ್ಯ ಬಳಸುವ ನೀರಿಗಾಗಿ ಗ್ರಾಮದ ಜನರು ತಮ್ಮ ಜಾನುವಾರುಗಳಿಗೆ ನೀರಲ್ಲದೆ ಪರದಾಡು ಸ್ಥಿತಿ ನಿರ್ಮಾಣಗೊಂಡಿದೆ. ನಾವು ಹಲವಾರು ಬಾರಿ ಗ್ರಾಪಂ ಅಧಿಕಾರಿಗಳ ಗಮನಕ್ಕೆ ತಂದರೆ ಆದಷ್ಟು ಬೇಗನೆ ಸರಿ ಪಡಿಸಲಾಗುವುದು ಎಂದು ಹೇಳಿ ಜಾರಿಕೊಳ್ಳುತ್ತಿದ್ದಾರೆ. ಅವರಿಗೆ ನಮ್ಮ ಸಂಕಟ ಅರ್ಥವಾಗುವುದಿಲ್ಲ, ಹೀಗೆ ನೀವು ಸುಳ್ಳು ಹೇಳಿ ಜಾರಿಕೊಂಡರೆ ಮುಂದಿನ ದಿನಗಳಲ್ಲಿ ವಾರ್ಡಿನ ಜನತೆ ಜಾನುವಾರ ಸಮೇತ ಪಂಚಾಯತಿಗೆ ತಂದು ಪ್ರತಿಭಟನೆ ಮಾಡಲು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು. ಮೆಷೀನ್ ಕಟ್ಟಿದೆ ಪಂಪ ಹೌಸ್ ಸರಿಯಾಗಿ ನೀರು ಬರುತ್ತಿಲ್ಲಾ ಎಂದು ಹೇಳುತ್ತೀರಿ ಏಕೆ?. ಹಳ್ಳದ ನೀರು ಜಾನವಾರಗಳಿಗೆ ಕುಡಿಸುತ್ತಿದ್ದೇವೆ ಉಳಿದ ಕಲಸ ಬಿಟ್ಟು ಆದಷ್ಟು ಬೇಗನೆ ಬೋರವೆಲ್ ಸರಿಪಡಿಸಬೇಕು ಎಂದು ತಾಪಂ ಮಾಜಿ ಸದಸ್ಯೆ ಅಕ್ಕಮಹಾದೇವಿ ನವಲಗುಂದ ತರಾಟೆಗೆ ತೆಗೆದುಕೊಂಡರು. ಯಲ್ಲಪ್ಪ ದಿವಟಗಿ, ಕಲ್ಲಪ್ಪ ಯಮೋಜಿ, ಸೋಮಲಿಂಗಪ್ಪದಿವಟಗಿ, ಸರೋಜಾ ಸವಣೂರ, ಸುಶೀಲಾ ಕುರುಗುಂದ, ಮಹಾದೇವಿ ದಿವಟಗಿ, ಪರೀದಾ ಧಾರವಾಡ, ನೀಲವ್ವ ಜಾಧವ, ಮಕ್ತುಂಬಿ ಮುಲ್ಲಾ, ಪಾರ್ವತಿ ಕುರುಗುಂದ, ಮಂಜುಳಾ ಪಟ್ಟಣಶೆಟ್ಟಿ, ಸಬನಾ ಗುಲಂದಾಜ, ಅರುಣ ದಿವಟಗಿ ಸೇರಿದಂತೆ ಗ್ರಾಮಸ್ಥರು ಇದ್ದರು.

ಗ್ರಾಮಸ್ಥರು ಕರಬಾಕಿ ಹಣ ಸಂದಾಯವಾಗದ ಕಾರಣ ಕೆಲಸ ವಿಳಂಬವಾಗಿದೆ. ಆದರೂ ಬೊರವೆಲ್ ದುರಸ್ತಿ ಮಾಡಲಾಗಿತ್ತು. ಅದು ಮತ್ತೆ ಕೆಟ್ಟಿದೆ. ತಕ್ಷಣ ಹೊಸ ಮೆಷೀನ್ ತಂದು ಸರಿ ಪಡಿಸಿ ನೀರು ಸರಬರಾಜು ಮಾಡಲಾಗುವುದು.

■ ಮಧುಸೂದನ ದೇಶಪಾಂಡೆ, ಪಿಡಿಒ

ನೀವು ಬೋರವೆಲ್ ರಿಪೇರಿ ಮಾಡುವ ವ್ಯಕ್ತಿಯ ಬಿಲ್ ಬಾಕಿ ಇದ್ದ ಕಾರಣ ಆ ವ್ಯಕ್ತಿ ಬೋರವೆಲ್ ರಿಪೇರಿ ಮಾಡಿಲ್ಲ, ಕೆಲಸ ಮಾಡಿದವರಿಗೆ ಸರಿಯಾಗಿ ಹಣ ನೀಡಿದರೆ ಅವರು ತಕ್ಷಣ ಗ್ರಾಪಂ ಕೆಲಸ ಮಾಡುತ್ತಾರೆ ಅವರದೇ ನೀವು ಲಕ್ಷಾಂತರ ಹಣ ಬಾಕಿ ಇಟ್ಟುಕೊಂಡು ಅವರಿಗೆ ಕೆಲಸ ಮಾಡು ಅಂದರೆ ಹೇಗೆ ಕೆಲಸ ಮಾಡುತ್ತಾರೆ?

■ ನಿಂಗಪ್ಪ ದಿವಟಗಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷ



ಶಿಕ್ಷಣ ಪ್ರತಿ ಮಗುವಿನ ಹಕ್ಕು: ಅಪರ ಜಿಲ್ಲಾಧಿಕಾರಿ

• **ಧಾರವಾಡ:** ಮಕ್ಕಳನ್ನು ಹೋಟೆಲ್, ಗ್ಯಾರೇಜ್ ಹಾಗೂ ಇತರೆ ಕೆಲಸಗಳಿಗೆ ನೇಮಿಸುವುದು ಕಾನೂನು ಬಾಹಿರ. ಪ್ರತಿ ಮಗುವಿಗೂ ಶಿಕ್ಷಣ ಪಡೆಯುವ ಹಕ್ಕಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾನೂನು ಸೇವಾ ಪ್ರಾಧಿಕಾರ ರಾಮನಗರದ ಆದರ್ಶ ಬಾಲಿಕಾ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿ ಬಳಿಕ 14 ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಉದ್ಯೋಗಕ್ಕೆ ನೇಮಿಸುವುದು ಕಾನೂನು ಪ್ರಕಾರ ಅಪಾರ ಮತ್ತು ಶಿಕ್ಷೆಯೂ ಇದೆ ಎಂದು ಎಚ್ಚರಿಕೆ ನೀಡಿದರು.

ಸರ್ಕಾರ ಮಕ್ಕಳ ಶಿಕ್ಷಣ ಉತ್ತೇಜನಕ್ಕೆ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಹಾಲು ಹಾಗೂ ಬಿಸಿಯೂಟ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿದೆ. ಮಕ್ಕಳಿಗೆ ಸೌಲಭ್ಯಗಳ ಪ್ರಯೋಜನ ಪಡೆಯಲು ಹೇಳಿದರು. ಶಿಕ್ಷಣದ ಮೂಲಕ ಉತ್ತಮ ಜ್ಞಾನ, ಕೌಶಲ್ಯಗಳನ್ನು ಗಳಿಸಿ, ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸುವ ಅವಕಾಶಗಳನ್ನು ಪಡೆದುಕೊಳ್ಳಬಹುದು. ಹೀಗಾಗಿ ಪ್ರತಿಯೊಂದು ಮಗು ಶಿಕ್ಷಣ ಪಡೆಯಬೇಕು ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಲ್ಲಪ್ಪ ಬಡಿಗೇರ ಮಾತನಾಡಿ, ಮಕ್ಕಳನ್ನು ದುಡಿಮೆಗೆ ತೊಡಗಿಸಬಾರದು. ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆದು, ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು. ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ನಡೆದ ಪ್ರಬಂಧ, ಭಾಷಣ ಹಾಗೂ ಚಿತ್ರಕಲೆ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಶಿಕ್ಷಣ ಪ್ರಸಾರ ಸಮಿತಿ ಅಧ್ಯಕ್ಷ ವಿಜಯಾನಂದ ಶೆಟ್ಟಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಬಿ.ವೈ. ಪಾಟೀಲ, ಸಹಾಯಕ ಕಾರ್ಮಿಕ ಆಯುಕ್ತ ಸಚಿನ್ ಹಳೇಮನಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಮಾರಿಕಾಂಬಾ ಹುಲಕೋಟಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಅಕ್ಬರ್ ಹಬೀಬಸಾಬ ಮುಲ್ಲಾ ಸ್ವಾಗತಿಸಿದರು. ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಘದ ಯೋಜನಾ ನಿರ್ದೇಶಕ ಬಸವರಾಜ ಪಂಚಾಕ್ಷರಿಮಠ ನಿರೂಪಿಸಿದರು. ಜಿಲ್ಲಾ ಕಾರ್ಮಿಕ ನಿರೀಕ್ಷಕ ಅಕ್ರಮ್ ಅಲ್ಲಾಪುರ ವಂದಿಸಿದರು.



ಗಿಡಗಳ ರಕ್ಷಣೆ ಅಗತ್ಯ: ಪಿಡಿಒ



• **ಅಳ್ನಾವರ:** ಸಮೀಪದ ಕಡಬಗಟ್ಟಿ ಗ್ರಾಮದ ಗ್ರಂಥಾಲಯದ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಪಿಡಿಒ ಆನಂದ ಪಾಟೀಲ ಮಾತನಾಡಿ, ಗಿಡಗಳನ್ನು ಮಕ್ಕಳಿಗಿಂತ ಹೆಚ್ಚಿನ ಕಾಳಜಿಯಿಂದ ರಕ್ಷಿಸಿದರೆ ನೆಲ, ನೀರು, ಪರಿಸರ ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ. ಶುದ್ಧ ಪರಿಸರ ನಮ್ಮೆಲ್ಲರ ಗುರಿಯಾಗಬೇಕು. ಮಕ್ಕಳಿಗೆ ಪರಿಸರ ಪ್ರಜ್ಞೆ ಮೂಡಿಸುವುದರಿಂದ ಸಾಮಾಜಿಕ ಬದಲಾವಣೆ ತರಲು ಸಾಧ್ಯವೆಂದರು.

ಶಿಕ್ಷಕರಾದ ಏಕನಾಥ ಹೋನಗೇಕರ, ದೇವೇಂದ್ರ ಖಾನಾಪೂರ, ಅರಣ್ಯ ಅಧಿಕಾರಿಗಳಾದ ಪ್ರಶಾಂತಕುಮಾರ ಗಿರಿತಮ್ಮಣ್ಣವರ, ಮಾರುತಿ ಏಣ್ಣೆ, ಜ್ಯೋತಿಬಾ, ಶಿವಾಜಿ, ಬಡೇಸಾಬ ಅಲಿಖಿನ್ನವರ, ಗ್ರಂಥಾಲಯ ಮೇಲ್ವಿಚಾರಕ ಗುರುರಾಜ ಮತ್ತು ವಿದ್ಯಾರ್ಥಿಗಳು ಇದ್ದರು.

ಸ್ವರ ಸಂಭ್ರಮ ನಾಳೆ

• **ಹುಬ್ಬಳ್ಳಿ:** ನಗರದ ಸಂಸ್ಕಾರ ಭಾರತಿ, ಸುನಿಧಿ ಕಲಾ ಸೌರಭ ಹಾಗೂ ಸಿಂಫೋನಿ ಇನ್ಸ್‌ಟ್ಯೂಟ್ ಆಫ್ ಮ್ಯೂಸಿಕ್ ಸಂಸ್ಥೆಯ ಸಹಯೋಗದಲ್ಲಿ ಸ್ವರ ಸಂಭ್ರಮ ಎಂಬ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸಮಾರಂಭ ಜೂ.14 ರಂದು ಸಂಜೆ 5.30 ಕ್ಕೆ ಉದಯ ನಗರದ ಲಕ್ಷ್ಮೀ ನಾರಾಯಣ ಸಭಾಂಗಣದಲ್ಲಿ ನಡೆಯಲಿದೆ.

ಹಿರಿಯ ತಜ್ಞ ವೈದ್ಯ ಡಾ. ರಾಮಚಂದ್ರ ಕೌಲಗಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಅಭಿಯಂತರ ವಾಸುದೇವ ಪಾಟೀಲ, ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿ ಮುರುಳಿದರ ಮಳಗಿ ಭಾಗವಹಿಸುವರು. ಸಂಸ್ಕಾರ ಭಾರತಿಯ ಮಹಾನಗರ ಪ್ರಧಾನ ಕಾರ್ಯದರ್ಶಿ ವಿನಯ ನಾಯಕ, ಧಾರವಾಡ ರಂಗಾಯಣದ ಮಾಜಿ ನಿರ್ದೇಶಕ ಭಾಸ ನರೇಂದ್ರ, ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೊಳಲು ಜುಗಲಬಂದಿ ಅಸಾವರಿ ಜೋಶಿ ಮತ್ತು ಪರಿಣಿತಾ ಕಟ್ಟಿ, ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಬಸವರಾಜ ವಂದಾಲ, ಹಾರ್ಮೋನಿಯಂ ಸಾಥ್ ಪ್ರಸಾದ ಮುಡಿವಾಳರ, ತಬಲಾ ಸಾಥ್ ವಿನೋದ ಪಾಟೀಲ ನೀಡುವರು ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಜೀವನದ ಶ್ರೇಷ್ಠತೆ ತಲುಪುವ ಮಾರ್ಗ ಶಿಕ್ಷಣ

• **ಕುಂದಗೋಳ:** ಶಿಕ್ಷಣವು ಕೇವಲ ಜ್ಞಾನವನ್ನು ಸಂಗ್ರಹಿಸುವುದಲ್ಲ, ಅದು ನಮ್ಮ ಜೀವನದ ಶ್ರೇಷ್ಠತೆಯನ್ನು ತಲುಪುವ ಮಾರ್ಗವಾಗಿದೆ. ಶಾಲಾ ಮಕ್ಕಳಿಗೆ ನೀಡಿರುವ ಕಲಿಕಾ ಉಪಕರಣಗಳು ಸೂಕ್ತವಾಗಿವೆ ಎಂದು ಗುರುಸ್ವಾಮಿ ಬಾಳಿಹಳ್ಳಿಮಠ ಹೇಳಿದರು. ಅವರು ಇಲ್ಲಿನ ಪಟ್ಟಣದ ಶ್ರೀ ಎಫ್.ಕೆ. ಬಾಳಿಹಳ್ಳಿಮಠ ಪೂರ್ವ ಪ್ರಾಥಮಿಕ ಶಾಲೆಯ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಹುಬ್ಬಳ್ಳಿಯ ಜುಯ್ಯಾಲುಕ್ಕಸ್ ಫೌಂಡೇಶನ್‌ನ ತಂಡದ ಸದಸ್ಯರು ಕಲಿಕೋಪಕರಣಗಳ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು. ರೆಫಜಿನ್ ಬ್ಯಾಗ್, ಬ್ಯಾಗನಲ್ಲಿ ನೋಟ್ ಬುಕ್ಸ್, ಟಿಫಿನ್ ಬಾಕ್ಸ್, ಕಂಪಾಸ್, ಪೆನ್ಸಿಲ್, ರಬ್ಬರ, ಕ್ರಿಯಾನ್ಸ್, ಪೆನ್ನು, ವಾಟರ್ ಬಾಟಲ್, ಡ್ರಾಯಿಂಗ್ ಬುಕ್ಕ್, ಪೆನ್ ಪೋಚ್, ಬಣ್ಣದ ಅಂಬ್ರೇಲ್ಲಾ ಮುಂತಾದ ವಸ್ತುಗಳ ಕಲಿಕೋಪಕರಣದ ಕಿಟ್ ನೀಡಿದರು. ಹುಬ್ಬಳ್ಳಿಯ ಜುಯ್ಯಾಲುಕ್ಕಸ್ ಫೌಂಡೇಶನ್ ಮ್ಯಾನೇಜರ್ ಮನೀಶ, ಇನಚಾರ್ಜ್ ಅಜೇಶ, ಹೋರ್ ಮ್ಯಾನೇಜರ್ ವಿವೇಕ್, ಆಸ್ಪಾಕ್, ಪ್ರೇಮ್, ಅಜೀಜ್, ತೇಜಸ್ವಿನಿ, ಅರುಣ, ಪ್ರವೀಣ, ಅಶ್ರಫ್ ಮತ್ತಿತರರಿದ್ದರು. ಶಾಲೆಯ ಮುಖ್ಯ ಶಿಕ್ಷಕಿ ಅಂಬಿಕಾ ಕುಲಕರ್ಣಿ ಮಾತನಾಡಿದರು. ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಎಫ್. ಕೆ. ಬಾಳಿಹಳ್ಳಿಮಠ ಸಾನ್ನಿಧ್ಯ ವಹಿಸಿದ್ದರು. ಅಂಬಿಕಾ ಕುಲಕರ್ಣಿ ನಿರೂಪಿಸಿದರು. ಎಂ.ಸಿ. ಪಾಟೀಲ ಸ್ವಾಗತಿಸಿದರು. ಅನುಭಾವಿ ಬಾಳಿಹಳ್ಳಿಮಠ ವಂದಿಸಿದರು.





ಕಲಘಟಗಿ: ತಾಲೂಕಿನ ಮಿಶ್ರಿಕೋಟಿ ಸಹಕಾರಿ ಸಂಘದ ಚುನಾವಣೆಯಲ್ಲಿ 12 ಜನ ಸದಸ್ಯರಲ್ಲಿ 10 ಜನ ಬಿ.ಜೆ.ಪಿ. ಬೆಂಬಲಿತ ಅಭ್ಯರ್ಥಿಗಳು ಜಯ ದಾಖಲಿಸುವ ಮೂಲಕ ಸಹಕಾರಿಯು ಕಮಲದ ತೆಕ್ಕೆಗೆ ಬಂದಿದೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಶಿವರುದ್ರಪ್ಪ ಗೋಕುಲ, ಬಸನಗೌಡ ಪಾಟೀಲ, ಅವರಾಜ ಕರ್ಜಣ್ಣವರ, ಶಿವಲಿಂಗಪ್ಪ ಮಡಿವಾಳರ, ಅರ್ಜುನ ಜಾಧವ, ರೂಪಾ ಲಂಗೋಟಿ, ರೇಣವ್ವ ಭೋವಿ, ಪುಷ್ಪಾ ಜಾಲಿಹಾಳ, ಚನ್ನಪ್ಪ ಉಳ್ಳಿಕಾಶಿ ಜಯಗಳಿಸಿದ್ದಾರೆ.

ಪಂಚಮಸಾಲಿ ಶಾಸಕರಿಗೆ ಮಂತ್ರಿಸ್ಥಾನ ನೀಡಲು ಆಗ್ರಹ



• **ನವಲಗುಂದ:** ವಿದ್ಯಾರ್ಥಿಗಳ ಪರಿಶ್ರಮಕ್ಕೆ ಸಮಾಜದಿಂದ ಸಿಗುವ ಮನ್ನಣೆಯು ಅವರಲ್ಲಿ ಸಾಧನೆಗೆ ಹೊಸ ಹುರುಪು ತುಂಬುತ್ತದೆ ಎಂದು ಕೂಡಲ ಸಂಗಮದ ಪಂಚಮಸಾಲಿ ಸಮಾಜದ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಅವರು ಶ್ರೀ ವೀರಶೈವ ಲಿಂಗಾಯತ ಸಮುದಾಯ ಭವನದಲ್ಲಿ ನೆಡೆದ ಅಖಿಲ ಭಾರತ ಲಿಂಗಾಯಿತ ಪಂಚಮಸಾಲಿ ಸಮಾಜದಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯವಹಿಸಿ ಅವರು ಆರ್ಶಿವದಿಸಿದರು. ಸಮಾಜದ ಸಾಧನೆಗೈದ ಪ್ರತಿಭಾವಂತ ಮಕ್ಕಳಿಗೆ ಆರ್ಥಿಕ ಸಹಾಯ ಮಾಡುವ ಮೂಲಕ ಅವರ ಶೈಕ್ಷಣಿಕ ಬದುಕಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳನ್ನು ಸನ್ಮಾನಿಸುವುದರಿಂದ ಇತರ ವಿದ್ಯಾರ್ಥಿಗಳಿಗೂ ಓದಲು ಮತ್ತು ಸಾಧನೆ ಮಾಡಲು ಸ್ಫೂರ್ತಿ ಎಂದರು.

ನಮ್ಮ ಸಮಾಜಕ್ಕೆ ಮೀಸಲಾತಿ ಹಕ್ಕೊತ್ತಾಯ ಸರ್ಕಾರಕ್ಕೆ ಮೊದಲ ಆಗ್ರಹವಾಗಿದೆ. ಮುಂಬರುವ ಸಂಪುಟ ವಿಸ್ತರಣೆಯಲ್ಲಿ ಪಂಚಮಸಾಲಿ ಶಾಸಕರಿಗೆ ಮಂತ್ರಿಸ್ಥಾನ ನೀಡಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಆಗ್ರಹಿಸಿದರು.

ಪಂಚಮಸಾಲಿ ಸಮಾಜ ತಾಲೂಕು ಘಟಕದ ಅಧ್ಯಕ್ಷ ಶಂಕರಗೌಡ ಬಾಳನಗೌಡ್ರ ಅಧ್ಯಕ್ಷತೆ ವಹಿಸಿದ್ದರು. ಡಾ ಸುರೇಶ ಕಮ್ಮಾರ ಗೌರವ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಡಾ ಆರ್.ಬಿ. ಶಿರಿಯಣ್ಣವರ ಕಾರ್ಯಕ್ರಮ ಉದ್ಘಾಟಿಸಿದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ನೆನಪಿನ ಕಾಣಿಕೆಯನ್ನು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ನೆರವೇರಿಸಿ ಮಾತನಾಡಿದರು. ಮುಖಂಡರಾದ ವಿಜಯ ಕುಲಕರ್ಣಿ, ಮಲ್ಲಪ್ಪ ಕಿರೇಸೂರ, ದ್ಯಾಮನಗೌಡ ಪಾಟೀಲ, ಗಂಗಪ್ಪ ಮನವಿ, ದೇವರಾಜ ದಾಡಿಬಾಯಿ, ಮಲ್ಲಪ್ಪ ಸಂಕದ, ಸದುಗೌಡ ಪಾಟೀಲ, ಈರಪ್ಪ ಬಳಿಗಾರ, ಅಡಿವೆಪ್ಪ ಮನಮಿ, ವಿಜಯಲಕ್ಷ್ಮಿ ಪಾಟೀಲ, ಶಾಂತಾಬಾಯಿ ನಿಡವಣಿ, ವಿನೋದ ನಾಗರಗಳ್ಳಿ, ಸದುಗೌಡ ಪಾಟೀಲ, ಎಲ್.ಬಿ.ಪಾಟೀಲ, ಗುರುಶಾಂತಗೌಡ ಪಾಟೀಲ ಸಂತೋಷ ಹೊಸಮನಿ, ಭೀಮಣ್ಣ ಹೆಬ್ಬಳ್ಳಿ ರಾಮನಗೌಡ ಬೆಳವಟಗಿ, ಬಸವನಗೌಡ ಮುದಿಗೌಡ್ರ, ಬಸವರಾಜ ಮಣ್ಣೂರ, ರುದ್ರಪ್ಪ ಮಣಕವಾಡ, ಮಲ್ಲಿಕಾರ್ಜುನಗೌಡ ಬಾಳನಗೌಡ್ರ, ನಾಗನಗೌಡ ಪಾಟೀಲ, ದ್ಯಾವನಗೌಡ ಪಾಟೀಲ, ಮಹೇಶ ಕುರ್ತಕೋಟಿ, ಗೌರೀಶ ಕಮತರ ಸೇರಿದಂತೆ ಅನೇಕ ಸಮಾಜದ ಮುಖಂಡರು ಇದ್ದರು.

ಪ್ರಸಾದ ಅಬ್ಬಯ್ಯಗೆ ಸಚಿವ ಸ್ಥಾನ ನೀಡಿ

• **ಹುಬ್ಬಳ್ಳಿ:** ಹುಬ್ಬಳ್ಳಿ ಧಾರವಾಡ ಪೂರ್ವ ವಿಧಾನ ಸಭಾ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಹುಬ್ಬಳ್ಳಿ ತಾಲೂಕು ರೈತ ಸಂಘದ ಸದಸ್ಯರು ಹಾಗೂ ರೈತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ನಗರದ ಮಿನಿ ವಿಧಾನಸೌಧದ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು ಅಬ್ಬಯ್ಯ ಅವರಿಗೆ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಘೋಷಣೆ ಕೂಗಿ ಅವರ ಭಾವಚಿತ್ರ ಪ್ರದರ್ಶಿಸಿದರು. ರೈತ ಮುಖಂಡ ಮೋಹನ ಅಸುಂಡಿ ಮಾತನಾಡಿ, ಶಾಸಕ ಪ್ರಸಾದ ಅಬ್ಬಯ್ಯ ಅವರು ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಜನಪರ ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ಸಾಮಾಜಿಕ ಕಾಳಜಿಯಿಂದ ರೈತರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಅವರಲ್ಲಿ ನಾಯಕತ್ವ ಗುಣಗಳು, ಶೈಕ್ಷಣಿಕ ಅರ್ಹತೆ ಸರ್ಕಾರ ಪ್ರತಿಷ್ಠೆ ಹೆಚ್ಚಿಸುವುದರ ಜೊತೆಗೆ ಮತದಾರರ ಮನದಲ್ಲಿ ಅಚ್ಚಳಿಯದ ಸಾಧನೆ ಮಾಡಿ ತೋರಿಸುತ್ತಾರೆ ಎಂದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಮನವಿ ಸಲ್ಲಿಸಿದರು. ಅಧ್ಯಕ್ಷ ಸಿದ್ದಪ್ಪ ಎಂ., ಫಕ್ಕೀರಗೌಡ ಪಾಟೀಲ, ಅಡಿವೆಪ್ಪ ನಂದಿಹಳ್ಳಿ, ಗುರುಸಿದ್ದಪ್ಪ ಕಟಗಿ, ಚನ್ನಬಸಪ್ಪ ಅಸುಂಡಿ, ವೀರಭದ್ರಪ್ಪ ಮೇಟಿ, ಬಸವರಾಜ ಮತಣ್ಣವರ ಇದ್ದರು.



ಜಮೀರ್ ಡಿಸಿಎಂ, ಕೋನರಡ್ಡಿ ಜಿಲ್ಲಾ ಉಸ್ತುವಾರಿ ಸಚಿವರಾಗಲಿ



• **ನವಲಗುಂದ:** ಡಿ.ಕೆ.ಶಿವಕುಮಾರ್ ಅವರ ನೂತನ ಸರ್ಕಾರದಲ್ಲಿ ಜಮೀರ್ ಅಹ್ಮದ್ ಖಾನ್ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು. ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್. ಎಚ್. ಕೋನರಡ್ಡಿ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿಸಬೇಕು ಎಂದು ಒತ್ತಾಯಿಸಿ ಅಂಜುಮನ್ ಎ ಇಸ್ಲಾಂ ನವಲಗುಂದ ಹಾಗೂ ಮುಸ್ಲಿಂ ಸಮುದಾಯದ ಮುಖಂಡರು ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಕೆಪಿಸಿಸಿ ಅಧ್ಯಕ್ಷ ಬಿ. ಕೆ. ಹರಿಪ್ರಸಾದ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿಎಂ ಡಿ.ಕೆ. ಶಿವಕುಮಾರ ಅವರಿಗೆ ತಹಶೀಲ್ದಾರ್ ಸುಧೀರ್ ಸಾವುಕಾರ ಮೂಲಕ ಮನವಿ ಸಲ್ಲಿಸಿದರು.

ಅಂಜುಮನ್ ಎ ಇಸ್ಲಾಂ ಸಂಸ್ಥೆಯ ಸದಸ್ಯ ಸಿರಾಜ್ ಧಾರವಾಡ ಮಾತನಾಡಿ, ಜಮೀರ ಅಹ್ಮದ ಖಾನ ಅವರು ಮುಸ್ಲಿಂ ಸಮಾಜದ ಪ್ರಭಾವಿ ನಾಯಕರು. ಸಾಕಷ್ಟು ಸಮಾಜಮುಖಿ ಕೆಲಸವನ್ನು ಮಾಡಿದ್ದಾರೆ ಹಾಗೂ 2023 ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ರಾಜ್ಯದ ಎಲ್ಲ ಮುಸ್ಲಿಂ ಸಮಾಜವನ್ನು ರಾಜ್ಯಾದ್ಯಂತ ಪ್ರವಾಸಮಾಡಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವನ್ನು ಸೂಚಿಸುವಂತೆ ಒಗ್ಗೂಡಿಸಿ ಒಟ್ಟು ಚುನಾವಣಾ ಫಲಿತಾಂಶ ಬಂದಮೇಲೆ ಶೇ.88 ಮುಸ್ಲಿಂ ಸಮಾಜವು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ 136 ಶಾಸಕರನ್ನು ಗೆಲ್ಲಿಸುವಲ್ಲಿ ಹಾಗೂ ಸರ್ಕಾರ ರಚಿಸುವಲ್ಲಿ ಮುಸ್ಲಿಂ ಸಮಾಜದ ಮತ್ತು ಜಮೀರ ಅಹ್ಮದ ಖಾನರವರ ಬಹುಮುಖ್ಯ ಪಾತ್ರವಿದೆ. ಅವರಿಗೆ ಡಿಸಿಎಂ ಸ್ಥಾನ ನೀಡಬೇಕು. ಇನ್ನುಳಿದ 4 ಮುಸ್ಲಿಂ ಸಮಾಜದ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು. ನವಲಗುಂದ ಶಾಸಕ ಎನ್.ಎಚ್. ಕೋನರೆಡ್ಡಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಅಂಜುಮನ್ ಎ ಇಸ್ಲಾಂ ಅಧ್ಯಕ್ಷ ಅಲ್ಲಾಸಾಬ್ ಕಲ್ಲಕುಟ್ರೆ, ಅನ್ವರಹುಸೇನ್ ಮೂಲಿಮನಿ, ಖಾಸಿಂಸಾಬ್ ಅಲ್ಲಿಭಾಯಿ, ರಿಯಾಜ್ ಅಹ್ಮದ್ ನಾಶಿಪುಡಿ, ಅಮಾನುಲ್ಲ ಖಾಜಿ, ಮುಖಂಡರಾದ ಉಸ್ಮಾನ ಬಬರ್ಚಿ, ರಿಯಾಜ ಅಹ್ಮದ ಫಿರಜಾದೆ, ಅಬ್ಬಾಸ ದೇವರಿಡು, ಇಮಾಮಸಾಬ್ ಬಾಗವಾನ, ಡಿ.ಕೆ.ಹಳ್ಳದ, ಆನಂದ ಹವಳಕೋಡ, ಬಾಬಾಜಾನ್ ಮುಲ್ಲಾನವರ, ಬಾಬಾಜಾನ್ ಖುದಾವಂದ, ಅಬ್ದುಲ್ ಗದಗ, ಮೈನುದ್ದಿನ್ ಧಾರವಾಡ, ಮಕ್ತಮ್ ಧಾರವಾಡ ತಾಲೂಕಿನ ಮುಸ್ಲಿಂ ಸಮಾಜದ ಮುಖಂಡರುಗಳು ಅಂಜುಮನ್ ಸಂಸ್ಥೆಯ ಸದಸ್ಯರು, ಊರಿನವರು ಉಪಸ್ಥಿತರಿದ್ದರು.

ಮಧ್ಯಸ್ಥಿಕೆ ಮೂಲಕ ವಿವಾದ ಇತ್ಯರ್ಥಕ್ಕೆ ಸುಪ್ರೀಂ ಆದೇಶ






• **ಹೊಸದಿಲ್ಲಿ:** ಕರ್ನಾಟಕದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮತ್ತು ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ನಡುವಿನ ದೀರ್ಘಕಾಲದ ಮಾನನಷ್ಟ ಪ್ರಕರಣವನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶಿಸಿದೆ. ಈ ಸಂಬಂಧ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರನ್ನು ಮಧ್ಯವರ್ತಿಯಾಗಿ ನೇಮಿಸಲಾಗಿದೆ.

ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ, ನ್ಯಾಯಮೂರ್ತಿ ಸಂಜೀವ್ ಸಚ್ದೇವ್ ಅವರಿದ್ದ ವಿಭಾಗೀಯ ಪೀಠವು, ಸುದೀರ್ಘ ನ್ಯಾಯಾಂಗ ಹೋರಾಟದ ಬದಲು ಮಧ್ಯಸ್ಥಿಕೆಯ ಮೂಲಕ ವಿವಾದ ಇತ್ಯರ್ಥವಾಗುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿತು.

ವೃತ್ತಿ ಜೀವನ ಹಾಳುಮಾಡಿಕೊಳ್ಳಬೇಡಿ: ಇಬ್ಬರೂ ಪರಸ್ಪರ ವೃತ್ತಿಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ನ್ಯಾಯಮೂರ್ತಿ ಶರ್ಮಾ ವಿಚಾರಣೆ ವೇಳೆ ಹೇಳಿದರು. ಈ ಪ್ರಕರಣವನ್ನು ಮಧ್ಯಸ್ಥಿಕೆಯ ಮೂಲಕ ಬಗೆಹರಿಸಬಹುದು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಹೀಗಾಗಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರನ್ನು ಮಧ್ಯವರ್ತಿಯಾಗಿ ನೇಮಿಸಲಾಗಿದೆ. ಕಕ್ಷಿದಾರರು ಅವರ ಮುಂದೆ ಹಾಜರಾಗಬೇಕು. ಮಧ್ಯಂತರ ಕ್ರಮವಾಗಿ ಎರಡೂ ಪ್ರಕರಣಗಳ ಮುಂದಿನ ವಿಚಾರಣೆಗೆ ತಡೆ ನೀಡಲಾಗಿದೆ ಎಂದು ಪೀಠ ಆದೇಶದಲ್ಲಿ ತಿಳಿಸಿದೆ.

2023ರಲ್ಲಿ ಇಬ್ಬರು ಅಧಿಕಾರಿಗಳು ಪರಸ್ಪರ ವಿರುದ್ಧ ಸಾರ್ವಜನಿಕವಾಗಿ ಆರೋಪ-ಪ್ರತ್ಯಾರೋಪಗಳನ್ನು ಮಾಡಿದ ಬಳಿಕ ಈ ವಿವಾದ ಆರಂಭವಾಗಿತ್ತು. ಬಳಿಕ ಇಬ್ಬರೂ ಪರಸ್ಪರ ಮಾನನಷ್ಟ ಮೊಕದ್ದಮೆಗಳನ್ನು ದಾಖಲಿಸಿದ್ದರು. ರೂಪಾ ಮೌದ್ಗಿಲ್ ಸಲ್ಲಿಸಿದ್ದ ದೂರಿನ ಆಧಾರದಲ್ಲಿ ತನ್ನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಮಾನನಷ್ಟ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು.

ಸಮಾಲೋಚನೆ



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಭವನದಲ್ಲಿ ಶುಕ್ರವಾರ ಸೌಜನ್ಯದ ಭೇಟಿ ಮಾಡಿ, ಸಮಾಲೋಚನೆ ನಡೆಸಿದರು.

ಅನುದಾನ ನೀಡಿದ್ದನ್ನು ಸಮರ್ಥಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ



• **ಬೆಂಗಳೂರು:** ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿವಿಧ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳಿಗೆ ನೀಡಿರುವ ಮನವಿಗಳನ್ನು ಪರಿಶೀಲಿಸಿ ಸುಮಾರು 155 ಹಿಂದುಳಿದ ವರ್ಗಗಳ ಸಂಘ – ಸಂಸ್ಥೆಗಳಿಗೆ 71.85 ಕೋಟಿ ರೂ.ವೆಚ್ಚದಲ್ಲಿ ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಪೂರ್ವಭಾವಿ ಮಂಜೂರಾತಿ ನೀಡಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ಮಾಹಿತಿ ನೀಡಿದ ಅವರು, ಇದೇನು ಫಲಾನುಭವಿಗಳ ಅಂತಿಮ ಪಟ್ಟಿ ಅಲ್ಲ, ಫಲಾನುಭವಿಗಳು ನೀಡಿರುವ ಮನವಿಗಳನ್ನು ಕೂಡಾ ಪರಿಶೀಲಿಸಿ, ಅವುಗಳಿಗೆ ಮುಂದಿನ ದಿನಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಇಲಾಖೆ ಸ್ವೀಕರಿಸಲಾಗಿರುವ ಮನವಿಗಳಲ್ಲಿ ಕುರುಬ ಸಮುದಾಯಕ್ಕೆ ಸೇರಿರುವ ಮನವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದ ಕಾರಣಕ್ಕೆ ಆ ಸಮುದಾಯಕ್ಕೆ ಹೆಚ್ಚಿನ ಅನುದಾನ ಸಂದಾಯವಾಗಿದೆಯೇ ಹೊರತು ಉದ್ದೇಶಪೂರ್ವಕವಾಗಿ ಯಾವುದೇ ಬಗೆಯ ತಾರತಮ್ಯ ಮಾಡಲಾಗಿಲ್ಲ.

ಕುರುಬ ಜನಾಂಗದ ಜೊತೆಗೆ ಮಡಿವಾಳ, ಲಿಂಗಾಯತ, ಒಕ್ಕಲಿಗ, ಬೆಸ್ತ, ಬಲಿಜ, ಗೊಲ್ಲ, ಚೆಟ್ಟಿ, ಕುಂಬಾರ, ಅರಸು, ಹೆಳವ, ಸವಿತಾ ಸಮಾಜ, ಉಪ್ಪಾರ, ಗಾಣಿಗ, ಕುರುಹಿನ ಶೆಟ್ಟಿ, ಹಾಲಕ್ಕಿ, ರೆಡ್ಡಿ ಈ ಜನಾಂಗದವರ ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕೆ ಪೂರ್ವಭಾವಿ ಆದೇಶವನ್ನು ಹೊರಡಿಸಲಾಗಿದೆ. ಈ ಆದೇಶವು ಅನುದಾನದ ಬಿಡುಗಡೆಯ ಆದೇಶ ಅಲ್ಲ, ಅನುದಾನ ಬಿಡುಗಡೆಗೆ ಸಂಘ ಸಂಸ್ಥೆಗಳು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖಾಂತರ ಜಮೀನಿನ /ನಿವೇಶನ ಅವರ ಹೆಸರಿನಲ್ಲಿ ಇರುವ ಬಗ್ಗೆ ಸ್ಥಳೀಯ ಪುರಸಭೆ / ಪಂಚಾಯಿತಿಯಿಂದ ಕಟ್ಟಡ ಲೈಸೆನ್ಸ್, ಸಂಘ ಸಂಸ್ಥೆಯ 3 ವರ್ಷದ ಆಡಿಟ್ ವರದಿ ಇತ್ಯಾದಿ ದಾಖಲಾತಿಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಕಳುಹಿಸಬೇಕಾಗುತ್ತದೆ. ಅನುದಾನ ಬಿಡುಗಡೆ ಮಾಡಲು ಸರ್ಕಾರದಿಂದ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ.


ಕಿರುಸುದ್ದಿ

ಬಿಡದಿ ಟೌನ್‌ಶಿಪ್: 3 ಗ್ರಾಮ ಭೂ ಸ್ವಾಧೀನಕ್ಕೆ ಅಧಿಸೂಚನೆ

• **ರಾಮನಗರ:** ರೈತರ ಪರ-ವಿರೋಧದ ನಡುವೆಯೂ ರಾಜ್ಯ ಸರ್ಕಾರ ಭಾರತದ ಮೊದಲ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಬಿಡದಿ ಟೌನ್ ಶಿಪ್) ಯೋಜನೆಗಾಗಿ 9 ಕಂದಾಯ ಗ್ರಾಮಗಳ ಪೈಕಿ 3 ಗ್ರಾಮಗಳ ಭೂ ಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸುತ್ತಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗಾಗಿ ಮೊದಲ ಹಂತದಲ್ಲಿ ಕೆಂಪಯ್ಯನಪಾಳ್ಯ – 367.15 ಎಕರೆ, ಮಂಡಲಹಳ್ಳಿ – 70.37 ಎಕರೆ ಹಾಗೂ ವಡೇರಹಳ್ಳಿ – 61.2 ಎಕರೆ ಭೂಮಿ ಸ್ವಾಧೀನಕ್ಕೆ ಅಧಿಸೂಚನೆ ಹೊರಬಿದ್ದಿದ್ದು, ಈ ಯೋಜನೆಗೆ ರಾಮನಗರ ತಾಲೂಕು ಬಿಡದಿ ಹೋಬಳಿ ವ್ಯಾಪ್ತಿಯಲ್ಲಿ ಬೈರಮಂಗಲ, ಬನ್ನಿಗಿರಿ, ಹೊಸೂರು, ಕಂಚುಗಾರನಹಳ್ಳಿ, ಕೆಂಪಯ್ಯನಪಾಳ್ಯ, ಕೆ.ಜಿ.ಗೊಲ್ಲರಪಾಳ್ಯ, ಮಂಡಲಹಳ್ಳಿ, ಅರಳಾಳುಸಂದ್ರ, ಹಾಗೂ ಹಾರೋಹಳ್ಳಿ ತಾಲೂಕು ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಸೇರಿ ಒಟ್ಟು 9 ಕಂದಾಯ ಗ್ರಾಮಗಳ ಸುಮಾರು 7,881 ಎಕರೆ ಸ್ವಾಧೀನಕ್ಕೆ ಒಳಪಡಲಿದ್ದು, ಇದರಲ್ಲಿ ಖಾಸಗಿ ಮಾಲೀಕತ್ವದ 6,731 ಎಕರೆ ಜಮೀನು ಇದೆ. ನಗರಾಭಿವದ್ಧಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಅಂತಿಮ ಅಧಿಸೂಚನೆ ಪ್ರಕಟಿಸುವ ಅವಧಿಯನ್ನು 2027ರ ಮಾ.11ರವರೆಗೆ ವಿಸ್ತರಿಸಿದ್ದರು. ಇದೀಗ 498 ಎಕರೆ 54 ಗುಂಟೆ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದೆ.

ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯ ನಿಧನ

• **ದೊಡ್ಡಬಳ್ಳಾಪುರ:** ತಾಲೂಕಿನ ಹಣಬೆ ಗ್ರಾಮದ ಹಿರಿಯ ರಾಜಕಾರಣಿ, ಮಾಜಿ ಶಾಸಕ ಆರ್.ಜಿ.ವೆಂಕಟಾಚಲಯ್ಯ ಶುಕ್ರವಾರ ಬೆಳಗಿನ ಜಾವ ನಿಧನರಾಗಿದ್ದಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು. ಮೃತರಿಗೆ ಮೂರು ಜನ ಪುತ್ರಿಯರು ಇದ್ದಾರೆ. ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಮುಂಜಾನೆ ನಿಧನರಾಗಿದ್ದಾರೆ.




ಜನಪ್ರಿಯ ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯ ಅವರಿಗೆ ಸಚಿವ ಕೆ.ಎಚ್.ಮುನಿಯಪ್ಪ, ಮಾಜಿ ಶಾಸಕ ಟಿ.ವೆಂಕಟರಮಣಯ್ಯ, ಬಮೂಲ್ ನಿರ್ದೇಶಕ ಬಿ.ಸಿ. ಆನಂದ್‌ಕುಮಾರ್, ಮುಖಂಡರಾದ ರಕ್ಷಾರಾಮಯ್ಯ, ಎಚ್.ಎಸ್. ಅಶ್ವಥ್‌ನಾರಾಯಣ ಕುಮಾರ್, ಟಿ.ವಿ. ಲಕ್ಷ್ಮೀನಾರಾಯಣ್, ಶಿವಶಂಕರ್, ಬಿ.ಎಚ್. ಕೆಂಪಣ್ಣ, ನಾರಾಯಣ ಗೌಡ, ಶರತ್ ಪಟೇಲ್, ನಾಗೇಶ್, ಪುನೀತ್ ಗೌಡ ಮಲ್ಲೋಹಳ್ಳಿ, ಯಶವಂತ್ ರಾಜ ಘಟ್ಟ ಮತ್ತಿತ್ತರರು ಅಂತಿಮ ನಮನ ಸಲ್ಲಿಸಿದರು.

ಮಾವಿನಹಣ್ಣು ತಿಂದು ಸಹೋದರಿಯರಿಬ್ಬರ ಸಾವು

• **ಬೀದರ್:** ಊಟದ ನಂತರ ಮಾವಿನ ಹಣ್ಣು ಸೇವಿಸಿ ಅಸ್ವಸ್ಥಗೊಂಡ ಸಹೋದರಿಯಬ್ಬರು ಚಿಕಿತ್ಸೆ ಫಲಕಾರಿಯಾಗದೆ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ತೆಲಂಗಾಣದ ಹೈದರಾಬಾದ್‌ನಲ್ಲಿ ನಡೆದಿದೆ. ಮೂಲತಃ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಶೆಂಬೆಳ್ಳಿ ಗ್ರಾಮದ ಭವಾನಿ ವೈಜಿನಾಥ ಮೇತ್ರೆ (17) ಹಾಗೂ ಇವರ ಸಹೋದರಿ ಸಂಧ್ಯಾರಾಣಿ ಮೇತ್ರೆ (14) ಮೃತರು ಎಂದು ತಿಳಿದು ಬಂದಿದೆ.

ನೆರವು ಕೋರಿ ಕೇಂದ್ರ ಗೃಹಸಚಿವ ಅಮಿತ್ ಶಾಗೆ ಮುಖ್ಯಮಂತ್ರಿ ಡಿಕೆಶಿ ಮನವಿ

ಪೊಲೀಸ್ ಭದ್ರತೆಗೆ ಒತ್ತು



ಸಿಎಂ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಸರಕಾರದ ಬೇಡಿಕೆಗಳ ಕುರಿತು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಗೆ ದೆಹಲಿಯ ಅವರ ನಿವಾಸದಲ್ಲಿ ಮನವಿ ಸಲ್ಲಿಸಿದರು.

• **ಹೊಸದಿಲ್ಲಿ/ಬೆಂಗಳೂರು:** ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್ ಸೃಷ್ಟಿ, ಪೊಲೀಸ್ ಇಲಾಖೆ ಚಟುವಟಿಕೆಗಳಿಗೆ ಸಿಎಸ್‌ಆರ್ ನಿಧಿ ಬಳಕೆ, ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯ ಮೇಲ್ದರ್ಜೀಕರಣ, ಕಾರಾಗೃಹಗಳ ಆಧುನೀಕರಣ ಸೇರಿದಂತೆ ಕರ್ನಾಟಕ ರಾಜ್ಯದ ಭದ್ರತಾ ಮೂಲಸೌಕರ್ಯ ಮತ್ತು ಪೊಲೀಸ್ ಸಾಮರ್ಥ್ಯ ಸುಧಾರಣೆಗೆ ನೆರವಾಗುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಗೃಹಸಚಿವ ಅಮಿತ್ ಶಾಗೆ ಮನವಿ ಸಲ್ಲಿಸಿದ್ದಾರೆ.

ಶುಕ್ರವಾರ ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ ಅವರು, ರಾಜ್ಯದಲ್ಲಿ ಪೊಲೀಸ್ ಇಲಾಖೆ ಮತ್ತಷ್ಟು ಬಲಪಡಿಸಲು ಕೇಂದ್ರದಿಂದ ಸಹಾಯ ನಿಡುವಂತೆ ಮನವಿ ಮಾಡಿದರು.

ಮನವಿಯ ಪ್ರಮುಖ ಅಂಶಗಳು

1 **ಕರ್ನಾಟಕ ರಾಜ್ಯ ಪೊಲೀಸ್‌ಗೆ ಪ್ರೆಸಿಡೆಂಟ್ಸ್ ಕಲರ್ (ರಾಷ್ಟ್ರಪತಿಗಳ ಅತ್ಯುನ್ನತ ಗೌರವ) ಪ್ರಶಸ್ತಿ:** ಕರ್ನಾಟಕ ರಾಜ್ಯ ಪೊಲೀಸ್‌ಗೆ ಪ್ರೆಸಿಡೆಂಟ್ಸ್ ಕಲರ್ ಪ್ರಶಸ್ತಿಯನ್ನು ನೀಡುವ ಕುರಿತಾದ ಪ್ರಸ್ತಾವನೆಯನ್ನು 2024ರಲ್ಲೇ ರಂದು ಕೇಂದ್ರಕ್ಕೆ ಸಲ್ಲಿಸಲಾಗಿದ್ದು, ಪ್ರಸ್ತುತ ಅದು ಪರಿಶೀಲನೆಯಲ್ಲಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಇನ್ನು ಸಹ ಈ ಪ್ರತಿಷ್ಠಿತ ಗೌರವವನ್ನು ಸ್ವೀಕರಿಸಬೇಕಾಗಿದೆ. ಈ ವಿಷಯವನ್ನು ಶೀಘ್ರವಾಗಿ ಪರಿಶೀಲಿಸಿ ಪ್ರೆಸಿಡೆಂಟ್ಸ್ ಕಲರ್ ಪ್ರಶಸ್ತಿ ನೀಡಲು ಅನುಮೋದನೆ ನೀಡಬೇಕು.

2 **ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್ ಸೃಷ್ಟಿ :** ವಿಜಯನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಇನ್ನೂ ಎರಡು ಹೆಚ್ಚುವರಿ ಐಆರ್‌ಬಿ ಬೆಟಾಲಿಯನ್‌ಗಳನ್ನು ಸ್ಥಾಪಿಸಲು ಅಂದಾಜು 243.87 ಕೋಟಿ ರೂ.ಗಳ ವೆಚ್ಚದ ಹೊಸ ಪ್ರಸ್ತಾವನೆಯನ್ನು ಗೃಹ ಸಚಿವಾಲಯಕ್ಕೆ ಕಳುಹಿಸಲಾಗಿದೆ. ಇದಕ್ಕೆ ಶೀಘ್ರವಾಗಿ ಮಂಜೂರಾತಿ ನೀಡಬೇಕೆಂದು ನಾನು ವಿನಂತಿಸುತ್ತೇನೆ.

3 **ಪೊಲೀಸ್ ವ್ಯವಸ್ಥೆ ಆಧುನೀಕರಣಕ್ಕಾಗಿ ನೆರವು:** ನಾಲ್ಕು ಪ್ರಮುಖ ನಗರಗಳಲ್ಲಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗಳು ಹಾಗೂ ಸಂವಹನ ಉಪಕರಣಗಳ ಸ್ಥಾಪನೆಗಾಗಿ ಅಖಿಖಿಖಿಕ ಯೋಜನೆಯಡಿ 280.00 ಕೋಟಿ ರೂ.ಗಳ ಪ್ರಸ್ತಾವನೆಗೆ ಮಂಜೂರಾತಿ ನೀಡಬೇಕು.

4 **ಪೊಲೀಸ್ ಸಂಬಂಧಿತ ಚಟುವಟಿಕೆಗಳ ಸೇರ್ಪಡೆ:** ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಇಖ್ಖಿ) ನಿಧಿಯಲ್ಲಿ ಪೊಲೀಸ್ ಸಂಬಂಧಿತ ಚಟುವಟಿಕೆಗಳನ್ನು ಸೇರಿಸುವ ಪ್ರಸ್ತಾವನೆ ಸಲ್ಲಿಸಲಾಗುತ್ತಿದ್ದು, ಶೀಘ್ರವಾಗಿ ಅನುಮೋದನೆ ನೀಡಬೇಕು.

5 **ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯ ಮೇಲ್ದರ್ಜೀಕರಣ:** ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸಲು 258.53 ಕೋಟಿ ರೂ.ಗಳ ವಿವರವಾದ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ನೀಡಬೇಕು

6 **ಕಾರಾಗೃಹಗಳ (ಜೈಲುಗಳ) ಆಧುನೀಕರಣ:** ಕಾರಾಗೃಹಗಳ ಆಧುನೀಕರಣ ಯೋಜನೆಯಡಿ ಸಿಸಿಟಿವಿ, ವಾಕಿ-ಟಾಕಿ ಮತ್ತು ಇತರ ಭದ್ರತಾ ಉಪಕರಣಗಳ ಖರೀದಿಗೆ 20 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು.

7 **ಕೇಂದ್ರ ಮೋಟಾರು ವಾಹನಗಳ ನಿಯಮ ಅನುಷ್ಠಾನದ ಗಡುವು ವಿಸ್ತರಣೆ:** ಕರ್ನಾಟಕದಲ್ಲಿ ನಿಯಮ 52-ಅ ಅನ್ನು ಅನುಷ್ಠಾನಗೊಳಿಸಲು ಗಡುವನ್ನು ವಿಸ್ತರಿಸುವಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಪತ್ರ ಬರೆಯಲಾಗಿದೆ. ದಯವಿಟ್ಟು ತಾವು ಈ ವಿಷಯವನ್ನು ಸಂಬಂಧಪಟ್ಟ ಸಚಿವಾಲಯದೊಂದಿಗೆ ಚರ್ಚಿಸಿ, ಆದಷ್ಟು ಬೇಗ ಅನುಮೋದನೆ ಕೊಡಿಸಬೇಕು.

8 **ಪೊಲೀಸ್ ಠಾಣೆಗಳಲ್ಲಿ ಸಿಸಿಟಿವಿ/ಕ್ಯಾಮೆರಾಗಳ ಮೇಲ್ದರ್ಜೀಕರಣ:** ಸುಪ್ರೀಂ ಕೋರ್ಟ್ ಮುಂದೆ ನಡೆದ ಚರ್ಚೆಗಳ ಅನುಸಾರ, ಪೊಲೀಸ್ ಠಾಣೆಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಮೇಲ್ದರ್ಜೆಗೆ ಏರಿಸಲು 278.26 ಕೋಟಿ ರೂ.ಗಳ ಅನುದಾನ ನೀಡಬೇಕು.

9 **ಕರ್ನಾಟಕ ಸೈಬರ್ ಕ್ರೈಮ್ ಕಂಟ್ರೋಲ್ ಅಂಡ್ ಕೋಆರ್ಡಿನೇಷನ್ ಯುನಿಟ್ ಸ್ಥಾಪನೆ:** ನಮ್ಮ ಸರ್ಕಾರವು ಅಂದಾಜು 360 ಕೋಟಿ ರೂ.ಗಳ ವೆಚ್ಚದಲ್ಲಿ ಕರ್ನಾಟಕ ಸೈಬರ್ ಕ್ರೈಮ್ ಕಂಟ್ರೋಲ್ ಅಂಡ್ ಕೋಆರ್ಡಿನೇಷನ್ ಯುನಿಟ್‌ನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಯೋಜನೆಗೆ ಅನುಮೋದನೆ ನೀಡಬೇಕು.

ಇದು ನನ್ನ ಕೊನೆ ಪ್ರಮಾಣ ಪತ್ರ: ಮಲ್ಲಿಕಾರ್ಜುನ ಖರ್ಗೆ

• **ಬೆಂಗಳೂರು:** ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಆದರೆ, ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರ ಆಗಬಹುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಶುಕ್ರವಾರ ಇಲ್ಲಿನ ವಿಧಾನಸೌಧದಲ್ಲಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಎಂ.ಕೆ.ವಿಶಾಲಾಕ್ಷಿ ಅವರಿಂದ ಪ್ರಮಾಣ ಪತ್ರವನ್ನು ಸ್ವೀಕರಿಸಿ ಪ್ರತಿಕ್ರಿಯಿಸಿದರು. ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರ ಆಗಬಹುದು ಎಂದು ನುಡಿದರು.



ಮಧ್ಯಪ್ರದೇಶದಲ್ಲಿ ರಾಜ್ಯಸಭಾ ಸದಸ್ಯರ ಆಯ್ಕೆ ಕುರಿತು ಮಾತನಾಡಿ, ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ ವಿಶೇಷ ಪ್ರಕರಣ. ಸುಪ್ರೀಂಕೋರ್ಟ್ ಹೇಳಿದಂತೆ ನಾವು ಹೈಕೋರ್ಟ್‌ಗೆ ಹೋಗುತ್ತೇವೆ. ಮಧ್ಯಪ್ರದೇಶದಲ್ಲಿ ನಡೆದಿರುವುದು ಕಾನೂನು ಬಾಹಿರ ಮತ್ತು ಪ್ರಜಾಪ್ರಭುತ್ವ ವಿರೋಧಿ. ಪ್ರಧಾನಿ ನರೇಂದ್ರ ಮೋದಿ ಇಲ್ಲದೇ ಇದು ಆಗುತ್ತಿರಲಿಲ್ಲ, ಬಿಜೆಪಿ ಪ್ರಜಾಪ್ರಭುತ್ವವನ್ನು ಕೊಲ್ಲುತ್ತಿದೆ ಎಂದು ತಿಳಿಸಿದರು.

ನನಗೆ 13ನೇ ಬಾರಿ ಜನಪ್ರತಿನಿಧಿಯಾಗುವ ಅವಕಾಶ ಸಿಕ್ಕಿದೆ. ಕಲಬುರಗಿ ಜನತೆಗೆ ಧನ್ಯವಾದ ಹೇಳುತ್ತೇನೆ. ಜೀವನದಲ್ಲಿ ಸತತವಾಗಿ ಈ ಅವಕಾಶ ಸಿಗುತ್ತಿರುವುದು ಕಾಂಗ್ರೆಸ್ ಕೊಡುಗೆಯಾಗಿದೆ. ಮಾಜಿ ಪ್ರಧಾನಿ ಇಂದಿರಾಗಾಂಧಿಯಿಂದ ಇದುವರೆಗೆ ನನಗೆ ಅವಕಾಶ ನೀಡಿದ್ದಾರೆ ಎಂದರು. ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ನನ್ನ ಜತೆ ಇದ್ದು ಪ್ರೋತ್ಸಾಹ ನೀಡಿದ್ದಾರೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹಾಗೂ ರಾಜ್ಯದ ಜನರು ಕೆಲಸ ಮಾಡಲು ಅವಕಾಶ ನೀಡಿದ್ದಾರೆ. ಯಾವಾಗಲೂ ಯಾವುದೇ ಕೆಲಸದಲ್ಲಿ ಮಾಧ್ಯಮ ಬೆಂಬಲ ಇಲ್ಲದೇ ಯಾರೂ ಕೂಡ ಜನರಿಗೆ ಪರಿಚಿತರಾಗುವುದಿಲ್ಲ ಎಂದು ಅವರು ಹೇಳಿದರು.

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ ವಿಶೇಷ ಪ್ರಕರಣ. ಸುಪ್ರೀಂಕೋರ್ಟ್ ಹೇಳಿದಂತೆ ನಾವು ಹೈಕೋರ್ಟ್‌ಗೆ ಹೋಗುತ್ತೇವೆ. ಮಧ್ಯಪ್ರದೇಶದಲ್ಲಿ ನಡೆದಿರುವುದು ಕಾನೂನು ಬಾಹಿರ ಮತ್ತು ಪ್ರಜಾಪ್ರಭುತ್ವ ವಿರೋಧಿ.
■ **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಅಶೋಕ ಆರೋಪ ಆಧಾರರಹಿತ: ಲಕ್ಷ್ಮಣ್

• **ಬೆಂಗಳೂರು:** ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ಯೋಜನೆಗೆ ಸಂಬಂಧಿಸಿದಂತೆ ಬಿಜೆಪಿ ನಾಯಕರು ಮಾಡುತ್ತಿರುವ 39,000 ಕೋಟಿ ರೂ.ಅಕ್ರಮ ಹಾಗೂ ಲೂಟಿ ಆರೋಪಗಳು ಸಂಪೂರ್ಣ ಆಧಾರರಹಿತವಾಗಿದ್ದು, ಜನರನ್ನು ದಾರಿ ತಪ್ಪಿಸುವ ಪ್ರಯತ್ನವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು

ಘನತ್ಯಾಜ್ಯ ವಿಲೇವಾರಿ ಯೋಜನೆಗೆ 30 ವರ್ಷಗಳ ಅವಧಿಯ ಗುತ್ತಿಗೆ ನೀಡಿರುವುದು ಮೂಲಸೌಕರ್ಯ ಅಭಿವೃದ್ಧಿ, ಸಂಸ್ಕರಣಾ ಘಟಕಗಳ ನಿರ್ಮಾಣ ಹಾಗೂ ದೀರ್ಘಾವಧಿಯ ಹೂಡಿಕೆಯನ್ನು ಗಮನದಲ್ಲಿಟ್ಟುಕೊಂಡ, ಕಸ ಸಂಗ್ರಹಣೆ, ಸಾಗಣೆ ಹಾಗೂ ವೈಜ್ಞಾನಿಕ ವಿಲೇವಾರಿಯ ಜವಾಬ್ದಾರಿಯನ್ನು ಗುತ್ತಿಗೆಪಡೆಯುವಸಂಸ್ಥೆ ನಿರ್ವಹಿಸಲಿದೆ. ಪೌರ ಕಾರ್ಮಿಕರ ವೇತನವನ್ನು ಬಿಬಿಎಂಪಿಯೇ ಪ್ರತ್ಯೇಕವಾಗಿ ಭರಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಪ್ರಸ್ತುತ ಬೆಂಗಳೂರಿನಲ್ಲಿ ಪ್ರತಿದಿನ 6,000 ಟನ್ ಕಸ ಉತ್ಪತ್ತಿಯಾಗುತ್ತಿದ್ದು, ಅದನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿದ್ಯುತ್ ಉತ್ಪಾದನೆ ಹಾಗೂ ಸಂಪನ್ಮೂಲ ಮರುಬಳಕೆಯ ಉದ್ದೇಶದಿಂದ ಯೋಜನೆ ರೂಪಿಸಲಾಗಿದೆ ಎಂದರು.


ಅಂತಿಮವಾಗಿ ಸ್ಪರ್ಧಾತ್ಮಕ ಪ್ರಕ್ರಿಯೆಯ ಮೂಲಕ ಸಂಸ್ಥೆ ಆಯ್ಕೆಯಾಗಿದೆ ಎಂದರು. ಆಧಾರವಿಲ್ಲದೆ ಸಿಎಂ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಆರೋಪ ಮಾಡುವುದು ಸರಿಯಲ್ಲ. ಬಿಜೆಪಿ ನಾಯಕರ ಬಳಿ ದಾಖಲೆಗಳಿದ್ದರೆ ತನಿಖಾ ಸಂಸ್ಥೆಗಳಿಗೆ ಸಲ್ಲಿಸಲಿ. ಇಡಿ, ಐಟಿ ಸೇರಿದಂತೆ ಎಲ್ಲ ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಅಧೀನದಲ್ಲಿವೆ. ಅಕ್ರಮ ನಡೆದಿದ್ದರೆ ತನಿಖೆ ನಡೆಸಿ ಸತ್ಯವನ್ನು ಹೊರತರಲಿ ಎಂದು ಸವಾಲು ಹಾಕಿದರು.

ಕೇಂದ್ರ ಕಾರಾಗೃಹದ ಜೈಲರ್ ಆತ್ಮಹತ್ಯೆ

• **ಧಾರವಾಡ:** ನಗರದ ಕೇಂದ್ರ ಕಾರಾಗೃಹದ ಜೈಲರ್ ನೇಣಿಗೆ ಶರಣಾದ ಘಟನೆ ಹೊಸ ಬಸ್ ನಿಲ್ದಾಣದ ಬಳಿ ಇರುವ ಕಾರಾಗೃಹದ ವಸತಿ ಗೃಹದಲ್ಲಿ ಶುಕ್ರವಾರ ನಡೆದಿದೆ. ಸಿದ್ಧರಾಮಪ್ಪ ವಡ್ಡರ್ (37) ಆತ್ಮಹತ್ಯೆಗೆ ಶರಣಾದ ಜೈಲರ್. ಎರಡು ತಿಂಗಳ ಹಿಂದೆ ಸಿದ್ಧರಾಮಪ್ಪ ಕರ್ತವ್ಯ ಲೋಪದ ಹಿನ್ನೆಲೆ ಅಮಾನತುಗೊಂಡಿದ್ದು, ಮೈಸೂರು ಕಾರಾಗೃಹಕ್ಕೆ ವರ್ಗಾವಣೆಯಾಗಿದ್ದರು. ಆದರೆ, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರಲ್ಲಿಲ್ಲ. ಶುಕ್ರವಾರ ಪತ್ನಿ, ಮಕ್ಕಳು ಬೇರೆ ಊರಿಗೆ ಹೋದಾಗ ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣಿಗೆ ಶರಣಾಗಿದ್ದಾರೆ. ಈ ಕುರಿತು ಉಪನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಪಿತೂರಿ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಿ

• **ಬೆಂಗಳೂರು:** ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವು ಪ್ರಕರಣಗಳ ಕುರಿತ ತನಿಖೆಯನ್ನು ಶೀಘ್ರ ಪೂರ್ಣಗೊಳಿಸಲು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಮತ್ತವರ ಕುಟುಂಬದ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಸಿರುವವರ ವಿರುದ್ಧ ಕ್ರಮ ಕೈಗೊಂಡು, ತನಿಖೆಯನ್ನು ಶೀಘ್ರ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಲು ವಿಶೇಷ ತನಿಖಾ ದಳಕ್ಕೆ ನಿರ್ದೇಶಿಸುವಂತೆ ಕೋರಿ ಆರೋಪಿ ಚೆನ್ನಯ್ಯ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಪ್ರಕರಣದಲ್ಲಿ ತನ್ನೊಬ್ಬನನ್ನೇ ಬಲಿಪಶು ಮಾಡಲಾಗಿದ್ದು, ಪಿತೂರಿ ನಡೆಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ಶೀಘ್ರ ಕ್ರಮ ಕೈಗೊಳ್ಳಲು ಎಸ್‌ಐಟಿಗೆ ನಿರ್ದೇಶಿಸಬೇಕು ಎಂದು ಕೋರಿ ಚೆನ್ನಯ್ಯ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು. ಕೆಲ ಕಾಲ ಅರ್ಜಿ ಆಲಿಸಿದ ಪೀಠವು, ಪ್ರತಿವಾದಿಗಳಾದ ರಾಜ್ಯ ಗೃಹ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಎಸ್‌ಐಟಿ ಮುಖ್ಯಸ್ಥರು ಹಾಗೂ ಧರ್ಮಸ್ಥಳ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜೂ.29ಕ್ಕೆ ಮುಂದೂಡಿತು.

ಪ್ರಕಾಶ್ ರಾಜ್ ಕೈವಾಡ?

ಕೇರಳದ ರೆಸಾರ್ಟ್ ಒಂದರಲ್ಲಿ ತಂಗಿದ್ದಾಗ, ಗಿರೀಶ್ ಮಟ್ಟಣ್ಣವರ್ ಅವರು ನಟ ಪ್ರಕಾಶ್ ರಾಜ್ ಅವರಿಗೆ ಕರೆ ಮಾಡಿ ನನಗೆ ಮೊಬೈಲ್ ನೀಡಿದ್ದರು. ಪ್ರಕಾಶ್ ರಾಜ್ ಅವರು ತಮಿಳಿನಲ್ಲಿ ಮಾತನಾಡಿ, ಗಿರೀಶ್ ಹೇಳಿಕೊಟ್ಟಂತೆ ಅಧಿಕಾರಿಗಳ ಮುಂದೆ ಹೇಳಿಕೆ ನೀಡು, ನಂತರ ಬಂದು ನಾನು ನಿನ್ನನ್ನು ಕಾಣುತ್ತೇನೆ ಎಂದು ಧೈರ್ಯ ತುಂಬಿದ್ದರು ಎಂದು ಅರ್ಜಿಯಲ್ಲಿ ಚೆನ್ನಯ್ಯ ವಿವರಿಸಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠ್ಠಲ್ ಗೌಡ, ಜಯಂತ್ ಮತ್ತಿತರರು ನನ್ನನ್ನು ಸಂಪರ್ಕಿಸಿ, ಧರ್ಮಸ್ಥಳದಲ್ಲಿ ಸಾವಿರಾರು ಹೆಣಗಳನ್ನು ಹೂಳಲಾಗಿದೆ ಎಂದು ಸುಳ್ಳು ಹೇಳಿಕೆ ನೀಡುವಂತೆ ಒತ್ತಡ ಹೇರಲಾಗಿತ್ತು.

ಬೆಂಗಳೂರಿನ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿಯಿಂದ ನನ್ನನ್ನು ಜಯಂತ್ ಎಂಬಾತನ ಮನೆಗೆ ಕರೆದೊಯ್ದು, ಅಲ್ಲಿ ಅಯ್ಯಪ್ಪ ಸ್ವಾಮಿ ಟವಲ್ ಮೇಲೆ ಮಾನವನ ತಲೆಬುರುಡೆ, ಮಣ್ಣು ಮತ್ತು ಅರ್ಧ ಬಾಟಲಿ ನೀರನ್ನು ಇಟ್ಟು, ತಲೆಬುರುಡೆಯನ್ನು ಕೈಯಲ್ಲಿ ಹಿಡಿಯುವಂತೆ ಹೆದರಿಸಲಾಗಿತ್ತು. ತಲೆ ಬುರುಡೆ ಮುಟ್ಟುವ ರೀತಿಯಲ್ಲಿ ಫೋಟೋಗಳನ್ನು ತೆಗೆಯಲಾಗಿತ್ತು. ನಂತರ ವಕೀಲ ಕೆ.ವಿ ಧನಂಜಯ್ ಅವರ ಕಚೇರಿಗೆ ಕರೆದೊಯ್ಯಲಾಗಿತ್ತು ಎಂದು ವಿವರಿಸಿದ್ದಾರೆ.

ಧರ್ಮಸ್ಥಳ ಪ್ರಕರಣ ಅತ್ಯಂತ ಸೂಕ್ಷ್ಮ ವಿಷಯವಾಗಿರುವುದರಿಂದ ಮತ್ತು ಕೋಟ್ಯಂತರ ಭಕ್ತರ ನಂಬಿಕೆಯೇ ಸಾಕ್ಷಿಯಾಗಿರುವುದರಿಂದ ಇಂತಹ ಅನುಮಾನಗಳಿಗೆ ಉತ್ತರಿಸುವುದು ನನ್ನ ಕರ್ತವ್ಯ. ಇನ್ನೆರಡು ದಿನಗಳಲ್ಲಿ ನಾನೇ ಉತ್ತರಿಸುತ್ತೇನೆ.
■ **ಪ್ರಕಾಶ್ ರಾಜ್,** ನಟ

ಮಹೇಶ್ ಶೆಟ್ಟಿ ತಿಮರೋಡಿ ಅವರ ಮನೆಯಲ್ಲಿ ನನ್ನನ್ನು ಕೂಡಿಹಾಕಲಾಗಿತ್ತು. ತಪ್ಪಿಸಿಕೊಂಡು ಹೋಗದಂತೆ ಪ್ರದೀಪ್ ಎಂಬಾತ ಕಾವಲು ಕಾಯುತ್ತಿದ್ದನು. ಕುಡ್ಲ ರಾಂಪೇಜ್, ಯೂಟ್ಯೂಬ್ ಚಾನೆಲ್ ಅಜಯ್ ಹಾಗೂ ಯೂಟ್ಯೂಬರ್ ಸಮೀರ್ ನನ್ನಿಂದ ಬಲವಂತವಾಗಿ 30–35 ವಿಡೀಯೊ ಹೇಳಿಕೆಗಳನ್ನು ರೆಕಾರ್ಡ್ ಮಾಡಿಸಿದ್ದರು ಎಂದು ವಿವರಿಸಲಾಗಿದೆ.

ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಡಾ.ವೀರೇಂದ್ರ ಹೆಗ್ಗಡೆ ಮತ್ತವರ ಕುಟುಂಬ ಸದಸ್ಯರ ವಿರುದ್ಧ ಸಾಕ್ಷ್ಯ ನುಡಿಯಲು ಒಪ್ಪಿದಾಗ, ಕೇರಳದಿಂದ ಹಣ ಬರುತ್ತಿದೆ ಹಾಗೂ ಚಿತ್ರದುರ್ಗದ ರಮಾ ನಾಗರಾಜ್ ಎಂಬುವವರು ಧರ್ಮಸ್ಥಳದ ಪಾವಿತ್ರ್ಯತೆಗೆ ಧಕ್ಕೆ ತರಲು ನಿಯಮಿತವಾಗಿ ಫಂಡಿಂಗ್ ಮಾಡುತ್ತಿದ್ದಾರೆ ಎಂದು ಬಹಿರಂಗಪಡಿಸಿದ್ದರು.

ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಎಂ.ಮದನ ಗೋಪಾಲ್

ಆರೆಸ್ಸೆಸ್ ಕಾರ್ಯವೈಖರಿ ಅಚ್ಚರಿ ಮೂಡಿಸುವಂಥದ್ದು

• **ಬೆಂಗಳೂರು:** ಯಾವುದೇ ಪ್ರಚಾರ ಬಯಸದೆ ನಿಸ್ವಾರ್ಥ ಸೇವೆ ಸಲ್ಲಿಸುವ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸ್ವಯಂಸೇವಕರ ಕಾರ್ಯವೈಖರಿ ಅಚ್ಚರಿ ಮೂಡಿಸುವಂತದ್ದು ಎಂದು ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಎಂ.ಮದನ ಗೋಪಾಲ್ ಹೇಳಿದರು.

ನಗರದ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಥಿಂಕರ್ಸ್ ಫೋರಂ ಕರ್ನಾಟಕ ವತಿಯಿಂದ ನಡೆದ ಡಾ. ಮಾಲಿನಿ ಭಟ್ಟಾಚಾರ್ಜಿ ಅವರ ಸ್ವಯಂಸೇವಕ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಶೇ. 5ರಷ್ಟು ಕೆಲಸ ಮಾಡಿ ಶೇ.90ರಷ್ಟು ಪ್ರಚಾರ ಗಿಟ್ಟಿಸಿಕೊಳ್ಳುವ ಇಂದಿನ ನಾಗರಿಕ ಸಮಾಜದ ಸಂಘಟನೆಗಳ ನಡುವೆ, ಯಾವುದೇ ಪ್ರಚಾರ ಬಯಸದೆ ನಿಸ್ವಾರ್ಥ ಸೇವೆ ಸಲ್ಲಿಸುವ ಸಂಘದ ಸ್ವಯಂಸೇವಕರ ಕಾರ್ಯವೈಖರಿ ಅಚ್ಚರಿ ಮೂಡಿಸುವಂತದ್ದು ಎಂದು ಅಭಿಪ್ರಾಯಪಟ್ಟರು.

ಸಮಾಜವೇ ಸರ್ವಸ್ವ ಎಂಬ ಸೇವೆ: ನಾನು ಮಾಡುತ್ತಿದ್ದೇನೆ ಎಂಬ ಭಾವ ಇಲ್ಲದೆ, ಅದ್ವೈತ ತತ್ವದಂತೆ ನಾನಲ್ಲ, ನಾನಲ್ಲ ಎಂಬ ಭಾವದೊಂದಿಗೆ ಸಮಾಜವೇ ತಾನೆಂದು ನಂಬಿ ಬದುಕುವ ಸ್ವಯಂಸೇವಕರ ನೈಜ ಚಿತ್ರಣವನ್ನು ಜಗತ್ತಿನ ಮುಂದೆ ಸ್ವಯಂಸೇವಕ್ ಪುಸ್ತಕದಲ್ಲಿ ಚಿತ್ರಿಸಲಾಗಿದೆ. ಸಂಘದಲ್ಲಿ ಲಿಂಗ ತಾರತಮ್ಯವಿಲ್ಲ



ಎಂಬುದನ್ನು ನಿರೂಪಿಸುವಂತೆ, ಜಮ್ಮು-ಕಾಶ್ಮೀರದಂತಹ ಕಠಿಣ ಸ್ಥಳದಲ್ಲಿ ಪಂಕಜಾವಲ್ಲಿ ಒಬ್ಬ ಪ್ರಚಾರಿಕಾ ಆಗಿ ನಿರ್ವಹಿಸಿದ ಸಾಹಸಮಯ ಪಾತ್ರದವರೆಗೆ, ಮುಂದುವರೆದು ವನವಾಸಿ ಕಲ್ಯಾಣದ ಶಾಂತಾರಾಮ್ ಸಿದ್ದಿ ವರೆಗಿನ ಸ್ವಯಂಸೇವಕರ ಯಶೋಗಾಥೆಯನ್ನು ಕೃತಿಯಲ್ಲಿ ವಿವರಿಸಲಾಗಿದೆ ಎಂದರು.

ಈ ಕೃತಿಯಲ್ಲಿ ಸಂಘದ ಮೈಲಿಗಲ್ಲುಗಳನ್ನು ದಾಖಲಿಸುವುದರ ಜೊತೆಗೆ, ಸಂಘದ ಪರಿಭಾಷೆಗಳಾದ ಅನುಶಾಸನ, ಬೈಠಕ್, ಬಸ್ತಿ, ಪ್ರಚಾರಕ್, ವಿಭಾಗ್ ಮತ್ತು ಸೇವಾ ಬಸ್ತಿಯಂತಹ ಪದಗಳ ಅರ್ಥವನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಶಬ್ದಕೋಶದ ಮೂಲಕ ವಿವರಿಸಲಾಗಿದೆ ಎಂದು ವಿವರಿಸಿದರು.

ಆರ್‌ಎಸ್‌ಎಸ್ ಅಲ್ಪಸಂಖ್ಯಾತ, ಮಹಿಳಾ, ಸಂವಿಧಾನ ವಿರೋಧಿ ಎಂಬ ಮಾತುಗಳೇ ಸದಾ ಚರ್ಚೆಯಾಗುತ್ತಿದ್ದವು. ಈ ವೈರುಧ್ಯವೇ ನನಗೆ ಆರ್‌ಎಸ್‌ಎಸ್ ಬಗ್ಗೆ ಆಳವಾಗಿ ತಿಳಿದುಕೊಳ್ಳುವ ಕುತೂಹಲ ಮೂಡಿಸಿತು.
■ **ಡಾ. ಮಾಲಿನಿ ಭಟ್ಟಾಚಾರ್ಜಿ,** ಲೇಖಕಿ

ಅಪನಂಬಿಕೆಗಳ ಗೋಡೆ ಒಡೆದ ಹತ್ತು ವರ್ಷದ ಪಯಣ: ರಾಜಕೀಯ, ಧಾರ್ಮಿಕ ವಿಶ್ಲೇಷಕ ಜೆರೋಮ್ ಆಂಟೊ ಮಾತನಾಡಿ, ಆರ್‌ಎಸ್‌ಎಸ್ ಎಂದರೆ ಕೆಂಪು ತಿಲಕ ಧರಿಸುವ, ಚರ್ಚ್‌ಗಳ ಮೇಲೆ ದಾಳಿ ಮಾಡುವ ಒಂದು ಸಂಘಟನೆ ಎಂದೇ ನಮಗೆ ಬೋಧಿಸಲಾಗಿತ್ತು. ಆರ್‌ಎಸ್‌ಎಸ್ ಬಗ್ಗೆ ಹೊರಗಿನಿಂದ ಕೇಳಿಬರುವ ಅಪಪ್ರಚಾರಗಳನ್ನು ನಂಬುವ ಮುನ್ನ, ಸಂಘವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಒಮ್ಮೆಯಾದರೂ ಶಾಖೆಗೆ ಬಂದು ಭಾಗವಹಿಸಬೇಕು ಎಂದು ತಿಳಿಸಿದರು.

ಮೂವರು ಪೊಲೀಸ್ ಅಧಿಕಾರಿಗಳ ಅಮಾನತು

• **ಬೆಂಗಳೂರು:** ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಐದೂವರೆ ವರ್ಷದ ಮಗುವಿನ ಕೊಲೆ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದಡಿ ಮೂವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್, ರಂಗಸ್ವಾಮಿ, ಪಿಎಸ್‌ಐ ನಿಂಗರಾಜು ಹಾಗೂ ಕಾನ್ಸ್‌ಟೇಬಲ್ ಹಾಲೇಶ್ ನಾಯ್ಕ್ ಎಂಬುವರು ಅಮಾನತುಗೊಂಡ ಪೊಲೀಸ್ ಅಧಿಕಾರಿಗಳಾಗಿದ್ದಾರೆ. ಮಾರ್ಚ್ 24ರಂದು ಐದೂವರೆ ವರ್ಷದ ಮಗು ವೆನ್ನಿಲಾಳನ್ನು ತಾಯಿ ಪ್ರಿಯಾಂಕಾ ಹಾಗೂ ಈಕೆಯ ಪ್ರಿಯಕರ ಮೋಹನ್ ಹತ್ಯೆ ಮಾಡಿ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದರು ಎಂದು ಆರೋಪಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ಮಗುವಿನ ತಾಯಿ ಪ್ರಿಯಾಂಕಾ ಹಾಗೂ ಆಕೆಯ ಪ್ರಿಯಕರ ಸೇರಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಆರಂಭದಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಮಗುವನ್ನು ಉಸಿರುಗಟ್ಟಿಸಿ ಸಾಯಿಸಲಾಗಿದೆ ಎಂದು ವರದಿ ಬಂದರೂ ಕೊಲೆ ಪ್ರಕರಣ ದಾಖಲಿಸದೇ ಆರೋಪಿಗಳನ್ನು ಬಂಧಿಸದೇ ಪೊಲೀಸರು ನಿರ್ಲಕ್ಷ್ಯ ತೋರಿದ್ದರು ಎಂದು ಆರೋಪಿಸಲಾಗಿದೆ.

ಕೆಕೆಆರ್‌ಟಿಸಿ ಬಸ್ ಜಪ್ತಿ

• **ಬೀದರ್:** ಕೆಕೆಆರ್‌ಟಿಸಿ ಬಸ್ ಹಾಗೂ ಬೈಕ್ ನಡುವೆ ನಡೆದ ಅಪಘಾತದ ಸಂಬಂಧದ ಪರಿಹಾರ ಪ್ರಕರಣದಲ್ಲಿ ನ್ಯಾಯಾಲಯ ಆದೇಶಿಸಿದರೂ ಪರಿಹಾರ ಮೊತ್ತವನ್ನು ಪಾವತಿಸದ ಹಿನ್ನೆಲೆಯಲ್ಲಿ ಔರಾದ್ (ಬಿ) ಡಿಪೋದಲ್ಲಿರುವ ಕೆಕೆಆರ್‌ಟಿಸಿ ಬಸ್ ಜಪ್ತಿ ಮಾಡಲು ಔರಾದ್‌ನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ವಾರಂಟ್ ಹೊರಡಿಸಿತ್ತು. ಅದರಂತೆ ಅರ್ಜಿದಾರರ ಪರ ವಕೀಲ ರವಿಕಾಂತ್ ಎ.ನೌಬಾದೆ ಅವರು ಔರಾದ್ (ಬಿ) ಡಿಪೋದಲ್ಲಿರುವ ಕೆಕೆಆರ್‌ಟಿಸಿ ಬಸ್ ಜಪ್ತಿ ಮಾಡಿದರು.

ಸುವರ್ಣಾ ಅವರು ಸಲ್ಲಿಸಿದ್ದ ದೂರಿನ ಪ್ರಕರಣದಲ್ಲಿ ನ್ಯಾಯಾಲಯವು ಅರ್ಜಿದಾರರ ಪರವಾಗಿ ತೀರ್ಪು ನೀಡಿದ್ದು, ಕೆಕೆಆರ್‌ಟಿಸಿ ಬೀದರ್ ವಿಭಾಗೀಯ ನಿಯಂತ್ರಕರು 31,85,750 ರೂ. ಮೂಲ ಪರಿಹಾರ ಮೊತ್ತ ಹಾಗೂ 4,77,862 ರೂ. ಬಡ್ಡಿ ಸೇರಿದಂತೆ ಒಟ್ಟು 36,63,612 ರೂ. ಪಾವತಿಸುವಂತೆ ಆದೇಶಿಸಿತ್ತು. ಆದರೆ, ನ್ಯಾಯಾಲಯದ ಆದೇಶದಂತೆ ಪರಿಹಾರ ಮೊತ್ತ ಪಾವತಿಸದ ಕಾರಣ, ಡಿಕ್ರಿ ಜಾರಿಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಕೆಕೆಆರ್‌ಟಿಸಿ ಚರಾಸ್ತಿಯನ್ನು ಜಪ್ತಿ ಮಾಡಲು ನ್ಯಾಯಾಲಯ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಔರಾದ್(ಬಿ) ಡಿಪೋದಲ್ಲಿರುವ ಕೆಕೆಆರ್‌ಟಿಸಿಯ ಯಾವುದೇ ಬಸ್ ಅನ್ನು ಜಪ್ತಿ ಮಾಡುವಂತೆ ನ್ಯಾಯಾಲಯವು ವಾರಂಟ್ ಜಾರಿಗೊಳಿಸಿತ್ತು.

ಗ್ಯಾರಂಟಿ ಪರಿಷ್ಕರಣೆ ನೆಪದಲ್ಲಿ ಬಂದ್ ಹುನ್ನಾರ: ಬಿ.ಶ್ರೀರಾಮುಲು

• **ಬೆಂಗಳೂರು:** ಗ್ಯಾರಂಟಿಗಳ ವಿಚಾರದಲ್ಲಿ ಸುಳ್ಳು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈಗ ಅದೇ ಗ್ಯಾರಂಟಿಗಳನ್ನು ಪರಿಷ್ಕರಣೆ ನೆಪದಲ್ಲಿ ಬಂದ್ ಮಾಡಲು ಹುನ್ನಾರ ನಡೆಸಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಆರೋಪಿಸಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಗ್ಯಾರಂಟಿ ಕೊಡಿ ಎಂದು ರಾಜ್ಯದ ಜನರು ಸರ್ಕಾರಕ್ಕೆ ಕೇಳಿರಲಿಲ್ಲ, ಅವರೇ ಸ್ವಾರ್ಥಕ್ಕಾಗಿ ಘೋಷಣೆ ಮಾಡಿದರು. ಉಚಿತ ಬಸ್ ಪ್ರಯಾಣ ಕೊಡಿ ಎಂದು ಹೆಣ್ಣು ಮಕ್ಕಳು ಕೇಳಿರಲಿಲ್ಲ, ಆದರೂ ಸರ್ಕಾರವೇ ಕೊಟ್ಟು ಈಗ ಗ್ಯಾರಂಟಿಗಳನ್ನು ಸ್ಥಗಿತಗೊಳಿಸಲು ಮುಂದಾಗಿದ್ದಾರೆ ಎಂದು ಹೇಳಿದರು.

ಗೃಹಲಕ್ಷ್ಮಿ ಹಣ ಮೃತ ಫಲಾನುಭವಿಗಳ ಖಾತೆಗೆ ಹೋಗುತ್ತಿದೆ ಎಂಬ ವರದಿಗಳಿವೆ. ಸರ್ಕಾರದಲ್ಲಿ ಗ್ಯಾರಂಟಿ ಸಂಬಂಧ ಗೊಂದಲ ಇದೆ. ಎಲ್ಲಾ ಕಡೆ ಲೋಪ ಆಗಿದೆ. ಗ್ಯಾರಂಟಿಗಳು ಕಾಕಾ ಪಾಟೀಲ್‌ಗೆ ಫ್ರೀ, ಸಿದ್ದರಾಮಯ್ಯಗೆ ಫ್ರೀ ಎಂದು ಹೇಳಿದ್ದರು. ಈಗ ಸರಿಯಾಗಿ ಜಾರಿ ಮಾಡದೆ ನಿಲ್ಲಿಸಲು ಮುಂದಾಗಿದ್ದಾರೆ. ಆದ್ದರಿಂದ ಸರ್ಕಾರ ರಾಜ್ಯದ ಜನರ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ಚುನಾವಣೆ ಬಂತು. ಅದರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತು. ಚುನಾವಣೆಗಾಗಿ ಗ್ಯಾರಂಟಿ ಕೊಡಬೇಕಿತ್ತು, ಕೊಟ್ಟರು. ಈಗ ನಿಲ್ಲಿಸುವ ಷಡ್ಯಂತ್ರ ಮಾಡುತ್ತಿದ್ದಾರೆ. ಗೃಹ ಲಕ್ಷ್ಮಿ ಹಣದಲ್ಲಿ ಅಕ್ರಮ ನಡೆದಿದೆ ಎಂದು ಸದನದಲ್ಲೇ ಒಪ್ಪಿಕೊಂಡಿದ್ದರು. ಅಧಿಕಾರಕ್ಕಾಗಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರ ನಡುವೆ ಶೀತಲ ಸಮರ ನಡೆಯುತ್ತಿತ್ತು. ಈಗ ಶಿವಕುಮಾರ್ ಅವರು ಮುಖ್ಯಮಂತ್ರಿ ಆದ ನಂತರ ಸಚಿವ ಸಂಪುಟಕ್ಕಾಗಿ ಕಚ್ಚಾಟ ಆರಂಭವಾಯಿತು. ಬೆಂಗಳೂರು ಅಭಿವೃದ್ಧಿ ಖಾತೆಗೆ ಕೃಷ್ಣ ಬೈರೇಗೌಡ ಕ್ಯಾತೆ ತೆಗೆದಿದ್ದಾರೆ ಎಂದರು. ರಾಮಲಿಂಗಾರೆಡ್ಡಿ ಅವರು ಖಾತೆ ಬೇಡವೆಂದು ರಾಜೀನಾಮೆ ನೀಡಿದ್ದರು.

ರಾಮ ಬಾಣ



ಎಚ್‌ಎಂಟಿಗೆ ಶೀಘ್ರ ಕಾಯಕಲ್ಪ

ಪುಟ ೧ ➡ ಶೀಘ್ರವೇ ವಿತ್ತ ಸಚಿವರನ್ನು ಭೇಟಿಯಾಗಿ ಚರ್ಚೆ ನಡೆಸಲಿದ್ದೇನೆ ಎಂದು ಸಚಿವರು ಹೇಳಿದರು. ಕಳೆದೆರಡು ವರ್ಷಗಳಿಂದ ಎಚ್‌ಎಂಟಿ ಕಂಪನಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ಸರ್ಕಾರ ಕೆಲಸ ಮಾಡುತ್ತಿದೆ.

ನೀತಿ ಆಯೋಗದ ಸದಸ್ಯ ಡಾ.ವಿ.ಕೆ.ಸಾರಸ್ವತ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ವರದಿಯನ್ನು ಪಡೆದುಕೊಳ್ಳಲಾಗಿದೆ. ಸಮಿತಿಯು ಮೌಲಿಕವಾದ ಅನೇಕ ಶಿಫಾರಸುಗಳನ್ನು ಮಾಡಿದೆ. ಆ ಆಧಾರದ ಮೇಲೆ ಕಂಪನಿಯನ್ನು ಮೇಲೆತ್ತುವ ಯೋಜನೆ ಹಾಕಿಕೊಳ್ಳಲಾಗಿದೆ. ನಮ್ಮ ಪ್ರಯತ್ನಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಪೂರ್ಣ ಸಹಕಾರವಿದ್ದು, ಅವರ ಮಾರ್ಗದರ್ಶನದಲ್ಲಿ ಎಚ್‌ಎಂಟಿ ಅಪೂರ್ವ ವೈಭವವನ್ನು ಮರಳಿ ತರುವ ಕೆಲಸ ಆರಂಭಿಸಿದ್ದೇವೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಉತ್ಪಾದನೆ ಮತ್ತು ಉದ್ಯೋಗ ಆಧರಿತ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ನೀಡಲಾಗುತ್ತಿದೆ. ಈ ಮೂಲಕ ಕೈಗಾರಿಕಾ ಕ್ಷೇತ್ರವು ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸುತ್ತಿದೆ. ಉದ್ಯೋಗ ಸೃಷ್ಟಿ ಅಗಾಧವಾಗಿ ಆಗುತ್ತಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಕೈಗಾರಿಕಾ ಸಂಶೋಧನೆಗೆ ಅತಿ ಹೆಚ್ಚು ಒತ್ತು ಕೊಡಲಾಗಿದೆ ಎಂದರು.

ತಾಂತ್ರಿಕ ಶಿಕ್ಷಣ ಪಡೆಯುವ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶ ಸಿಗುವುದು ಕಷ್ಟವೆನ್ನುವ ಪರಿಸ್ಥಿತಿಯ ನಡುವೆ, ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಓದಿರುವ ವಿದ್ಯಾರ್ಥಿಗಳಿಗೆ ವಿಪುಲವಾಗಿ ಉದ್ಯೋಗಗಳನ್ನು ಸೃಷ್ಟಿಸುವ ಕೆಲಸ ನಡೆಯುತ್ತಿದೆ. ಕೌಶಲ ಆಧರಿತ ಉದ್ಯೋಗಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಒತ್ತು ನೀಡುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಿಎಂಟಿಐ ನಿರ್ದೇಶಕ ಡಾ. ನಾಗಹನುಮಯ್ಯ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಕೆಲವರಿಗೆ ಕೇವಲ ಹಿಂದೂ ಧರ್ಮದಲ್ಲಿ ಮಾತ್ರ ಅನ್ಯಾಯಗಳು ಕಾಣುತ್ತವೆ, ಬೇರೆ ಧರ್ಮದ ಯಾವುದೇ ಹುಳುಕುಗಳು ಅವರಿಗೆ ಕಾಣಿಸುವುದಿಲ್ಲ - ವಿಧುಶೇಖರ ಶ್ರೀಗಳು

- ನಿಜವಾಗಿಯೂ ಅವರು ಹಿಂದೂ ಧರ್ಮದ ಬಗ್ಗೆ ಏನು ಹೇಳಿದರೂ ನಡೆಯುತ್ತೆ ಎನ್ನುವ ಧಾರ್ಷ್ಟ್ಯದ ಕೇಡಿಗಳು ಮತ್ತು ಇತರರ ದೋಷಗಳತ್ತ ಕಣ್ಣೆತ್ತಿ ನೋಡಲೂ ಧೈರ್ಯವಿಲ್ಲದ ಹೇಡಿಗಳು!

ದಿನ ಭವಿಷ್ಯ

ಮೇಷ
ಏರಿಳಿತ ಎರಡನ್ನೂ ಇಂದು ಎದುರಿಸುವಿರಿ. ಖಾಸಗಿ ಬದುಕು ಮತ್ತು ವೃತ್ತಿ ಮಧ್ಯೆ ಸಮತೋಲನ ಸಾಧಿಸಿ. ಯಾವುದೇ ಒಂದನ್ನು ಕಡೆಗಣಿಸಬೇಡಿ.

ವೃಷಭ
ಯಾರದೋ ದುರ್ವರ್ತನೆ ನಿಮ್ಮ ಮನಸ್ಸು ಕದಡಬಹುದು. ಅನಗತ್ಯ ವಸ್ತುವಿನ ಮೇಲೆ ಹೆಚ್ಚು ಹಣ ವ್ಯಯಿಸದಿರಿ. ಆರೋಗ್ಯ ಸಮಸ್ಯೆ.

ಮಿಥುನ
ಕಚೇರಿ ರಾಜಕೀಯದಿಂದ ದೂರವಿರಿ. ನಿಮ್ಮ ಗಮನ ಉತ್ತಮ ಕಾರ್ಯದೆಡೆಗೆ ಹರಿಸಿ. ಸಣ್ಣ ವಿಷಯಕ್ಕೆ ಸಂಗಾತಿ ಜತೆ ಜಗಳವಾದೀತು.

ಕಟಕ
ಅಚ್ಚರಿಯ ಬೆಳವಣಿಗೆ ಸಂಭವ. ಫಲ ನೀಡದ ಯೋಜನೆ ಕೈಬಿಡಿ. ವ್ಯಕ್ತಿಯೊಬ್ಬರು ಹೆಚ್ಚು ಆಪ್ತರಾಗುವರು. ಖರ್ಚು ಹೆಚ್ಚಳದ ಚಿಂತೆ.

ಸಿಂಹ
ನಿಮ್ಮ ಸಹನೆ ಪರೀಕ್ಷಿಸುವ ಪ್ರಸಂಗ ಉಂಟಾದೀತು. ಸಂಬಂಧದಲ್ಲಿ ಏರುಪೇರು. ವೃತ್ತಿಯ ಗುರಿ ಸಾಧನೆ ಕಷ್ಟ, ಅಡ್ಡಿ ಒದಗಲಿದೆ.

ಕನ್ಯಾ
ಫಲಪ್ರದ ದಿನ. ಉದ್ದೇಶ ಸಫಲ. ಆಹಾರದಲ್ಲಿ ಪಥ್ಯ ಸಾಧಿಸಿ. ಆರೋಗ್ಯ ಕೆಡಿಸುವ ತಿನಿಸಿನಿಂದ ದೂರವಿರಿ. ಬಂಧು ಜತೆ ವಿರಸ.

ತುಲಾ
ವೃತ್ತಿಯಲ್ಲಿ ಯಶಸ್ಸು. ಆರ್ಥಿಕ ಉನ್ನತಿ. ಹಳೆಯ ಹೂಡಿಕೆ ಲಾಭ ತರಲಿದೆ. ವಿದ್ಯಾರ್ಥಿಗಳ ಶ್ರಮಕ್ಕೆ ಸೂಕ್ತ ಫಲ ಸಿಗಲಿದೆ. ಒತ್ತಡ ನಿವಾರಣೆ.

ವೃಶ್ಚಿಕ
ಇಂದು ಕೆಲವು ಪ್ರಮುಖ ನಿರ್ಧಾರ ತಾಳಬೇಕಾಗುವುದು. ಲೋಪ ಕಂಡರೆ ಕೂಡಲೇ ತಿದ್ದಿಕೊಳ್ಳಿ. ಬಿಗುಮಾನ ಬೇಕಿಲ್ಲ. ಧನವ್ಯಯ.

ಧನು
ಇಂದು ಶುಭದಿನ. ಪ್ರೀತಿಯ ಅಹವಾಲಿಗೆ ಸೂಕ್ತ ಸ್ಪಂದನೆ ಸಿಗಲಿದೆ. ಕೌಟುಂಬಿಕ ಸಮಸ್ಯೆ ಪರಿಹಾರ. ಮನಸ್ಸಿಗೆ ನಿರಾಳತೆ, ನೆಮ್ಮದಿ.

ಮಕರ
ಹುಚ್ಚು ಸಾಹಸಕ್ಕೆ ಮುಂದಾಗಬೇಡಿ. ನಿಯಂತ್ರಣ ಅಗತ್ಯ. ಉತ್ಸಾಹದ ನಡೆ ಪ್ರತಿಕೂಲ ಪರಿಣಾಮ ತರಬಹುದು. ವಿರೋಧ ಕಟ್ಟಿಕೊಳ್ಳುವಿರಿ.

ಕುಂಭ
ಮನೆಯವರ ಜತೆ ಹೊಂದಾಣಿಕೆ ಇರಲಿ. ನಿಮ್ಮ ಆದೇಶ ಹೇರಬೇಡಿ. ಖರ್ಚು ನಿಯಂತ್ರಿಸಿ. ಆಪ್ತ ಬಂಧುವಿನ ರೋಷ ಎದುರಿಸುವಿರಿ.

ಮೀನ
ಕೈಗೊಂಡ ಕಾರ್ಯ ಮುಗಿಸಲು ಗಮನ ಕೊಡಿ. ಹದಗೆಟ್ಟ ಸಂಬಂಧ ದೀರ್ಘ ಎಳೆಯಬೇಡಿ. ನಿಮಗೆ ಸೂಕ್ತವೆನಿಸದ ವಿಷಯ ಅಲ್ಲಿಗೇ ಬಿಡಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 0,4,1,6

ಯಥಾಸ್ಥಿತಿ ಮುಂದುವರಿಸುವ ಮಹತ್ವ ತೀರ್ಮಾನ: ಡಾ.ಶರಣಪ್ರಕಾಶ್ ಪಾಟೀಲ್

ವೈದ್ಯಕೀಯ ಶುಲ್ಕ ಹೆಚ್ಚಳವಿಲ್ಲ

• **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕವನ್ನು ಹೆಚ್ಚಳ ಮಾಡದೇ ಯಥಾಸ್ಥಿತಿಯನ್ನೇ ಮುಂದುವರಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ.



ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯವರೊಂದಿಗೆ ಶುಕ್ರವಾರ ವಿಕಾಸ ಸೌಧದಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ನಿರ್ಧಾರದಿಂದಾಗಿ ಈ ಬಾರಿ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕ ಹೆಚ್ಚಳವಾಗುತ್ತದೆ ಎಂಬ ಆತಂಕದಲ್ಲಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಶುಲ್ಕವನ್ನು ಹೆಚ್ಚಳ ಮಾಡಬೇಕೆಂಬ ಪ್ರಸ್ತಾವನೆಯನ್ನು ನಾವು ಒಪ್ಪಿಕೊಂಡಿಲ್ಲ. ಈ ಹಿಂದೆ ಅಂದರೆ 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿದ್ದ ಶುಲ್ಕವೇ ಮುಂದುವರೆಯಲಿದೆ. ಈ ನಿಯಮವು ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳೆರಡಕ್ಕೂ ಅನ್ವಯಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಪೋಷಕರು ಮತ್ತು ವಿದ್ಯಾರ್ಥಿಗಳು ಶುಲ್ಕ ಹೆಚ್ಚಳವಾಗುತ್ತದೆ ಎಂಬ ಆತಂಕಕ್ಕೆ ಒಳಗಾಗಬಾರದು. ಈಗಾಗಲೇ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ನಡೆದಿದ್ದ ನೀಟ್ ಪ್ರವೇಶ ಪರೀಕ್ಷೆ ರದ್ದಾಗಿ ಮರುಪರೀಕ್ಷೆ ನಡೆಯಬೇಕಿರುವುದರಿಂದ ಒತ್ತಡಕ್ಕೆ ಒಳಗಾಗಿದ್ದಾರೆ. ಇಂತಹ ಸಮಯದಲ್ಲಿ ಶುಲ್ಕ ಹೆಚ್ಚಳ ಮಾಡುವುದು ಸರಿಯಲ್ಲ ಎಂಬ ತೀರ್ಮಾನ ಮಾಡಲಾಗಿದೆ.

ಸಭೆಯಲ್ಲಿ ಕಲಬುರಗಿ ಸಂಸದ ರಾಧಾಕೃಷ್ಣ, ದಂತ ವೈದ್ಯಕೀಯ ಕಾಲೇಜುಗಳ ಪರವಾಗಿ ವಿಧಾನಪರಿಷತ್ ಸದಸ್ಯ ನಾಗರಾಜ್ ಯಾದವ್, ಇಲಾಖೆಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮದ್ ಮೋಹ್ಸಿನ್, ಎಂ.ಎಸ್. ರಾಮಯ್ಯ ಕಾಲೇಜಿನ ಜಯರಾಂ ಹಾಗೂ ವಿವಿಧ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರು ಭಾಗವಹಿಸಿದ್ದರು.

“ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಮಂಡಳಿಯವರು ಶುಲ್ಕ ಹೆಚ್ಚಳ ಮಾಡುವ ಪ್ರಸ್ತಾವನೆಗೆ ನಾವು ಅವಕಾಶವನ್ನೇ ಕೊಟ್ಟಿಲ್ಲ. ಹೀಗಾಗಿ ವಿದ್ಯಾರ್ಥಿಗಳು, ಪೋಷಕರು ಯಾವುದೇ ರೀತಿಯ ಊಹಾಪೋಹಕ್ಕೆ ಕಿವಿಗೊಡಬಾರದು.

■ **ಶರಣಪ್ರಕಾಶ್ ಪಾಟೀಲ್**, ವೈದ್ಯಕೀಯ ಶಿಕ್ಷಣ ಸಚಿವ

ಶುಲ್ಕ ವಿವರ

ಎಂಬಿಬಿಎಸ್	
ಸರ್ಕಾರಿ ಕಾಲೇಜು	55,000 ರೂ.
ಕೆಪಿಸಿಎಫ್ ಸರ್ಕಾರಿ ಕೋಟಾ	1,41,621 ರೂ.
ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟಾ	1,41,621 ರೂ.
ಎಎಂಪಿಸಿಕೆ ಸರ್ಕಾರಿ ಕೋಟಾ	1,41,621 ರೂ.
ಖಾಸಗಿ ವಿಶ್ವವಿದ್ಯಾನಿಲಯಗಳ	
ಸರ್ಕಾರಿ ಕೋಟಾ	1,41,621 ರೂ.
ಕೆಪಿಸಿಎಫ್ ಖಾಸಗಿ ಕೋಟಾ	11,88,167 ರೂ.
ಕೆಆರ್‌ಎಲ್‌ಎಂಪಿಸಿಎ ಖಾಸಗಿ ಕೋಟಾ	11,88,167 ರೂ.
ಎಎಂಪಿಸಿಕೆ ಖಾಸಗಿ ಕೋಟಾ	11,88,167 ರೂ.

ದಂತ ವೈದ್ಯಕೀಯ	
ಸರ್ಕಾರಿ ಕಾಲೇಜುಗಳ ಕೋಟಾ	40,000 ರೂ.
ಕೆಪಿಸಿಎಫ್ ಸರ್ಕಾರಿ ಕೋಟಾ	83,358 ರೂ.
ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟಾ	83,358 ರೂ.
ಎಎಂಪಿಸಿಕೆ ಸರ್ಕಾರಿ ಕೋಟಾ	83,358 ರೂ.
ಖಾಸಗಿ ಕೋಟಾ	
ಕೆಪಿಸಿಎಫ್ ಖಾಸಗಿ ಕೋಟಾ	7,32,625 ರೂ.
ಕೆಆರ್‌ಎಲ್‌ಎಂಪಿಸಿಎ ಖಾಸಗಿ ಕೋಟಾ	7,32,625 ರೂ.
ಎಎಂಪಿಸಿಕೆ ಖಾಸಗಿ ಕೋಟಾ	7,32,625 ರೂ.

ಮುಖ್ಯಮಂತ್ರಿಗಳ ಪ್ರಸ್ತಾವನೆಯ ಪ್ರಮುಖ ಅಂಶಗಳು

ಪುಟ ೧ ➡ **4. ಮಹದಾಯಿ ಕಣಿವೆಯ ಕಳಸಾ ಮತ್ತು ಬಂಡೂರಿ ನಾಲಾ ಯೋಜನೆಗಳು:** ಮಹದಾಯಿ ಕಣಿವೆ ವ್ಯಾಪ್ತಿಯ ಕಳಸಾ ಮತ್ತು ಬಂಡೂರಿ ನಾಲಾ ಯೋಜನೆಗಳನ್ನು ಹುಬ್ಬಳ್ಳಿ-ಧಾರವಾಡದ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಉದ್ದೇಶಿಸಲಾಗಿದೆ. ಇವುಗಳಿಗೆ ಡಿಸೆಂಬರ್ 2022 ರಲ್ಲಿ ಸಿಡಬ್ಲ್ಯುಸಿ/ಜಲಶಕ್ತಿ ಸಚಿವಾಲಯವು ಅನುಮತಿ ನೀಡಿದ್ದರೂ, ಈ ಯೋಜನೆಗೆ ಯಾವುದೇ ಕಾನೂನು ಅಡಚಣೆಗಳಿಲ್ಲದಿದ್ದರೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF CC) ಅರಣ್ಯ/ವನ್ಯಜೀವಿ ಅನುಮತಿ ಇನ್ನೂ ಸಿಕ್ಕಿಲ್ಲ. ಹೀಗಾಗಿ ಆದಷ್ಟು ಬೇಗ ಈ ಯೋಜನೆಗಳಿಗೆ ಅನುಮತಿ ಕೊಡಿಸಬೇಕು.

5. ಏತ ನೀರಾವರಿ, ಕಾಲುವೆ ಕಾಮಗಾರಿಗಳಿಗೆ ಎಐಬಿಪಿ/ ಪಿಎಂಕೆಎಸ್‌ವೈ/ಎಫ್‌ಎಂಬಿಎಪಿ ಯೋಜನೆಗಳಲ್ಲಿ ಕೇಂದ್ರದ ನೆರವು: ಕೇಂದ್ರ ಸರ್ಕಾರದ ಸೊಂತಿ ಏತ ನೀರಾವರಿ, ಇಂಡಿ ಶಾಖಾ ಕಾಲುವೆ, ಮಲಪ್ರಭಾ ಕಾಲುವೆ ಬಾಕಿ ಕಾಮಗಾರಿ, ಘಟಪ್ರಭಾ ಬಲದಂಡೆ ಕಾಲುವೆ ಮತ್ತು ಚಿಕ್ಕೋಡಿ ಶಾಖಾ ಕಾಲುವೆ, ತುಂಗಭದ್ರಾ ಎಡದಂಡೆ ಕಾಲುವೆ ಬಾಕಿ ಕಾಮಗಾರಿ, ಬೆಣ್ಣೆಹಳ್ಳ ನದಿಯ ಪ್ರವಾಹ ನಿಯಂತ್ರಣ ಮತ್ತು ಪ್ರವಾಹ ನಿರ್ವಹಣೆ ಯೋಜನೆಗಳಿಗೆ ಕೇಂದ್ರ ಸರ್ಕಾರ ನೆರವು ನೀಡಬೇಕು.

6. ನದಿ ಜೋಡಣೆ ಯೋಜನೆಯಲ್ಲಿ ರಾಜ್ಯಕ್ಕೆ ನ್ಯಾಯಯುತ ಪಾಲು ಹಂಚಿಕೆ: ಕೇಂದ್ರ ಸರ್ಕಾರದ ನದಿಗಳ ಜೋಡಣೆಯ ಪ್ರಸ್ತಾವನೆಗಳ ಅಡಿಯಲ್ಲಿ, ನದಿ ಜೋಡಣೆ ಯೋಜನೆಗಳಿಂದ ಸಮತೆ ಮತ್ತು ಸಮಾನ ಹಂಚಿಕೆಯ ತತ್ವದ ಮೇಲೆ ಕರ್ನಾಟಕ ರಾಜ್ಯಕ್ಕೆ ನ್ಯಾಯಸಮ್ಮತವಾದ ಪಾಲನ್ನು ಹಂಚಿಕೆ ಮಾಡಬೇಕು ಎಂದು ಕೇಂದ್ರ ಜಲಶಕ್ತಿ ಸಚಿವರಿಗೆ ಮನವಿ ಮಾಡಿದ್ದಾರೆ.

ಭದ್ರಾ ಯೋಜನೆಗೆ 5,300 ಕೋಟಿ ಕೊಡಿ: ಡಿಕೆಶಿ

ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ರಾಜ್ಯದ ನೀರಾವರಿ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ನಾನು, ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹಾಗೂ ಟಿ.ಬಿ. ಜಯಚಂದ್ರ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪು, ಕೃಷ್ಣಾ ನೀರು ವಿವಾದ ನ್ಯಾಯಾಧಿಕರಣ ತೀರ್ಪಿನ ಅನ್ವಯ ಅಧಿಸೂಚನೆ, ಮಹದಾಯಿ ನೀರು, ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದ 5,300 ಕೋಟಿ ರೂ. ಅನುದಾನ ವಿಚಾರವಾಗಿ ಪ್ರಸ್ತಾಪಿಸಿದ್ದೇವೆ ಎಂದು ತಿಳಿಸಿದರು.

ಜೂ.16ರಂದು ಆರೋಗ್ಯ ವಿವಿ 28ನೇ ಘಟಿಕೋತ್ಸವ

• **ಬೆಂಗಳೂರು:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ರಾಆವಿವಿ)ಯಿಂದ ಜೂ.16ರಂದು ಬೆಳಗ್ಗೆ 10 ಗಂಟೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ 28ನೇ ಘಟಿಕೋತ್ಸವವನ್ನು ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಮಾಹಿತಿ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಘಟಿಕೋತ್ಸವದಲ್ಲಿ ಒಟ್ಟು 72,741 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುವುದು. ಒಟ್ಟು 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕಗಳಿಗೆ ಭಾಜನರಾಗಿದ್ದು, ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿ, ಬೆಂಗಳೂರಿನ ಸ್ಪಂದನ ಐ ಅವರು 3 ಚಿನ್ನದ ಪದಕಗಳೊಂದಿಗೆ ಅತಿ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿಯಾಗಿದ್ದಾರೆ. ವಿಶ್ವವಿದ್ಯಾಲಯದ ಒಟ್ಟಾರೆ, ಫಲಿತಾಂಶ ಶೇ.89.22ರಷ್ಟಿದ್ದು, ಇದು ಆರೋಗ್ಯ ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಾಧನೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಹಾಗೂ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ.ಶರಣಪ್ರಕಾಶ್ ಆರ್.ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು. ಪ್ರೊ.ಡಾ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ ಹಾಗೂ ಡಾ.ಎ.ಸಿ. ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನ ಮಾಡಲಾಗುವುದು ಎಂದರು.

ಸಮರ್ಪಕ ತನಿಖೆಗೆ ಬಿಜೆಪಿ ಆಗ್ರಹ

ಪುಟ ೧ ➡ ಇದರಲ್ಲಿ ನೂರಾರು ಕೋಟಿ ರೂ. ಒಳಗೊಂಡದ್ದು ಈಗ ಗೊತ್ತಾಗುತ್ತಿದೆ. ನೂರಾರು ಕೋಟಿ ತೊಡಗಿಸಿಕೊಂಡ ಕಾರಣ ವಿದೇಶಿ ಶಕ್ತಿಗಳ ಕೈವಾಡದ ತನಿಖೆಯೂ ಆಗಬೇಕಿದೆ. ಕಾಂಗ್ರೆಸ್ ಸರ್ಕಾರವು ಇಂಥ ಷಡ್ಯಂತ್ರಗಳಿಗೆ ಶಕ್ತಿ ತುಂಬುವ ಕೆಲಸ ಮಾಡಿರುವುದು ನಮಗೆ ನೋವು ತಂದಿದೆ. ಯಾರ್‍ಯಾರು ಇದರ ಹಿಂದಿದ್ದರು? ಯಾರ್‍ಯಾರು ಬಂಡವಾಳ ಹಾಕಿದ್ದರು? ಅಂದಿನ ಮುಖ್ಯಮಂತ್ರಿ ಯಾಕೆ ಕಣ್ಮುಚ್ಚಿ ಎಸ್‌ಐಟಿಗೆ ಕೊಟ್ಟರು- ಇವೆಲ್ಲದರ ಸತ್ಯಾಸತ್ಯತೆ ಹೊರಕ್ಕೆ ಬರಬೇಕು ಎಂಬುದು ನಾಡಿನ ಜನರ ಮತ್ತು ಹಿಂದುಗಳ ಅಪೇಕ್ಷೆ ಎಂದು ತಿಳಿಸಿದರು.

ವರದಿ ಬಹಿರಂಗಪಡಿಸಲಿ: ಸುನೀಲ್

ಧರ್ಮಸ್ಥಳ ಪ್ರಕರಣದ ತನಿಖೆಗೆ ರಚಿಸಲಾಗಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಆಗಿ ಇಷ್ಟು ತಿಂಗಳು ಕಳೆದರೂ ವರದಿ ಬಹಿರಂಗ ಮಾಡಿಲ್ಲ. ವರದಿಯನ್ನು ಸರ್ಕಾರ ತಕ್ಷಣ ಬಹಿರಂಗ ಮಾಡಬೇಕು. ಈ ಪ್ರಕರಣದ ಹಿಂದೆ ಯಾರ ಕೈವಾಡವಿದೆ ಎಂದು ಸರ್ಕಾರ ತಿಳಿಸಲಿ ಎಂದು ಶಾಸಕ ವಿ.ಸುನೀಲ್ ಕುಮಾರ್ ಆಗ್ರಹಿಸಿದ್ದಾರೆ. ಹಿಂದು ಧಾರ್ಮಿಕ ಕ್ಷೇತ್ರ ಧರ್ಮಸ್ಥಳದ ಬಗ್ಗೆ ವಿನಾಕಾರಣ ಅವಹೇಳನ ಮಾಡಲಾಗುತ್ತಿದೆ. ದೊಡ್ಡ ಷಡ್ಯಂತ್ರ ರೂಪಿಸಿದ್ದ ಗ್ಯಾಂಗಿನ ಆರೋಪಿ ಕೋರ್ಟ್‌ಗೆ ನೀಡಿರುವ ಹೇಳಿಕೆ ಆಘಾತಕಾರಿಯಾಗಿದೆ. ಪ್ರಕರಣದ ಬಗ್ಗೆ ವಿಧಾನಸಭೆ ಹಾಗೂ ಪಕ್ಷದ ವತಿಯಿಂದ ಬೇರೆ ಬೇರೆ ಸಂದರ್ಭದಲ್ಲಿ ಉಲ್ಲೇಖ ಮಾಡಿದ್ದೆವು. ಇದರ ಹಿಂದೆ ಕೇರಳದ ನಂಟಿದೆ, ಬೇರೆ ಬೇರೆ ರಾಜ್ಯದ ನಂಟಿದೆ ಎಂದು ಹೇಳಿದ್ದೆವು. ಆರೋಪಿ ಎಸ್‌ಐಟಿ ಮುಂದೆ ಹೇಳಲಾಗದ್ದನ್ನು ನ್ಯಾಯಾಲಯದ ಮುಂದೆ ಹೇಳಿದ್ದಾನೆಂದರೆ ಎಸ್‌ಐಟಿ ಯಾವ ರೀತಿಯ ತನಿಖೆ ಮಾಡಿತ್ತು. ಇದರ ಹಿಂದಿರುವ ಹುನ್ನಾರ ಏನು? ಎಲ್ಲವೂ ಸಾರ್ವಜನಿಕ ಚರ್ಚೆಗೆ ಬರಬೇಕಾಗಿದೆ ಎಂದರು.

ರೈತರು ಬೀದಿಗಿಳಿದು ಹೋರಾಡಲು ಅವಕಾಶ ಕೊಡಬಾರದು: ಸಂಸದ

• **ಬೆಂಗಳೂರು:** ರಾಜ್ಯ ಸರ್ಕಾರವು ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಮತ್ತು ರೈತರು ಬೀದಿಗಿಳಿದು ಹೋರಾಟ ಮಾಡಲು ಅವಕಾಶ ಕೊಡಬಾರದು ಎಂದು ಸಂಸದ ಗೋವಿಂದ ಕಾರಜೋಳ ಒತ್ತಾಯಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು. ಇದೀಗ ಕೆಇಆರ್‌ಸಿ ಮತ್ತು ಸರ್ಕಾರ ಜತೆಗೂಡಿ ರೈತರಲ್ಲಿ ಆತಂಕ ಸೃಷ್ಟಿಸಿದ್ದಾರೆ. ಟಾಟಾ ಪವರ್‌ನಂಥ ಖಾಸಗಿಯವರಿಗೆ ವಿದ್ಯುತ್ ಸರಬರಾಜಿನ ಅವಕಾಶ ಕೊಡುವ ಯೋಜನೆಯಿಂದ ರೈತರು ಬಂಡಾಯ ಏಳುವ ಸ್ಥಿತಿ ಇದೆ ಎಂದು ತಿಳಿಸಿದರು.

ಡೀಸೆಲ್ ಮಾರಾಟಕ್ಕೆ ಕೇಂದ್ರ ಮಿತಿ

• ಪುಟ ೧ ➡ ಕೈಗಾರಿಕಾ, ವಾಣಿಜ್ಯ ಮತ್ತು ಸಾಂಸ್ಥಿಕ ಗ್ರಾಹಕರಿಗೆ ಚಿಲ್ಲರೆ ಮಾರಾಟ ಮಳಿಗೆಗಳಿಂದ ಪೆಟ್ರೋಲ್ ಅಥವಾ ಡೀಸೆಲ್ ಖರೀದಿಸಲು ಇನ್ನು ಮುಂದೆ ಅವಕಾಶವಿರುವುದಿಲ್ಲ. ಅವರು ಇಂಧನವನ್ನು ತಮ್ಮ ಸ್ವಂತ ಗ್ರಾಹಕ ಪಂಪ್‌ಗಳಿಂದಲೇ ಪಡೆಯಬೇಕು.

ಭಾರೀ ಬೇಡಿಕೆ ಹಿನ್ನೆಲೆ ಕ್ರಮ: ಬೆಲೆ ಏರಿಕೆಯಿಂದಾಗಿ ದೊಡ್ಡ ಪ್ರಮಾಣದ ಬಳಕೆದಾರರು ಪೆಟ್ರೋಲ್ ಪಂಪ್‌ಗಳಿಂದ ಭಾರೀ ಪ್ರಮಾಣದ ಇಂಧನ ಖರೀದಿಸಲು ಪ್ರಾರಂಭಿಸಿದ ನಂತರ ಅದರಲ್ಲೂ ಮುಖ್ಯವಾಗಿ ಡೀಸೆಲ್‌ನ ಭಾರೀ ಬೇಡಿಕೆಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ದಿಲ್ಲಿಯಲ್ಲಿ ಪೆಟ್ರೋಲ್ ಪಂಪ್‌ಗಳಲ್ಲಿ ಲೀಟರ್‌ಗೆ 95.20 ರೂ. ಇದ್ದರೆ, ಸಗಟು ಮಾರಾಟದಲ್ಲಿ ಲೀಟರ್‌ಗೆ 134.50 ರೂ. ಇದೆ.

90 ದಿನಗಳವರೆಗೆ ಚಾಲ್ತಿಯಲ್ಲಿ

ಪುಟ ೧ ➡ ಪ್ರಸ್ತುತ ಪರಿಸ್ಥಿತಿಯಲ್ಲಿ ದೇಶದ ಕೆಲವು ಭಾಗಗಳಲ್ಲಿ ಚಿಲ್ಲರೆ ಮಾರಾಟ ಮಳಿಗೆಗಳ ಮೂಲಕ ಮೋಟಾರ್ ಸ್ಪಿರಿಟ್ (ಪೆಟ್ರೋಲ್), ಹೈಸ್ಪೀಡ್ ಡೀಸೆಲ್ (ಡೀಸೆಲ್) ಮಾರಾಟದಲ್ಲಿ ಭಾರೀ ಹೆಚ್ಚಳವು ಕೈಗಾರಿಕಾ, ವಾಣಿಜ್ಯ ಮತ್ತು ಸಾಂಸ್ಥಿಕ ಗ್ರಾಹಕರನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಸ್ಥಳಾಂತರಿಸುವುದರಿಂದ ಉಂಟಾಗಿದೆ. ಆದ್ದರಿಂದ ಆದೇಶದ ಪ್ರಕಾರ, ಸಾಂಸ್ಥಿಕ, ಕೈಗಾರಿಕಾ, ವಾಣಿಜ್ಯ ಗ್ರಾಹಕರು ಚಿಲ್ಲರೆ ಇಂಧನ ಕೇಂದ್ರಗಳಿಂದ ಪೆಟ್ರೋಲ್, ಡೀಸೆಲ್ ಖರೀದಿಸುವುದನ್ನು ನಿರ್ಬಂಧಿಸಬಹುದು ಮತ್ತು ಬದಲಿಗೆ ತಮ್ಮ ಸ್ವಂತ ಗ್ರಾಹಕ ಪಂಪ್‌ಗಳ ಮೂಲಕ ಸರಬರಾಜು ಮಾಡಬೇಕಾಗುತ್ತದೆ.

ಐತಿಹಾಸಿಕ, ಪರಿವರ್ತನಾತ್ಮಕ ನಾಯಕತ್ವ

ಪುಟ ೧ ➡ 2020ರಿಂದ, ಉಚಿತ ಆಹಾರ ಧಾನ್ಯಗಳ ನಿರಂತರ ಪೂರೈಕೆಯು ಸುಮಾರು 80 ಕೋಟಿ ಜನರ ಆಹಾರ ಭದ್ರತೆ ರಕ್ಷಿಸಿದೆ. ಯಾವುದೇ ದುರ್ಬಲ ನಾಗರಿಕರು ಇದರಿಂದ ವಂಚಿತರಾಗದಂತೆ ನೋಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ, ಈ ಉಪಕ್ರಮಗಳು ಸಹಾನುಭೂತಿಯ ಆಡಳಿತದ ಮತ್ತು ಪ್ರತಿ ಭಾರತೀಯನ ಕಲ್ಯಾಣಕ್ಕಾಗಿ ಇರುವ ಅಚಲ ಬದ್ಧತೆಯ ಸುದೀರ್ಘ ಸಂಕೇತಗಳಾಗಿ ನಿಂತಿವೆ.

ಪ್ರಧಾನಿ ಮೋದಿ ಅವರ ದೂರದೃಷ್ಟಿ ಮಹಿಳೆಯರು, ಯುವಕರು, ರೈತರು ಮತ್ತು ಸೌಲಭ್ಯ ವಂಚಿತರು ಸೇರಿ ಸಮಾಜದ ಪ್ರತಿ ವರ್ಗವನ್ನೂ ಸಬಲೀಕರಿಸಿದೆ. 3 ಕೋಟಿಗೂ ಹೆಚ್ಚು ಲಖ್‌ಪತಿ ದೀದಿಯರ ಉಗಮವು ಮಹಿಳಾ ನೇತೃತ್ವದ ಅಭಿವೃದ್ಧಿಯ ಅವರ ದೂರದೃಷ್ಟಿಗೆ ಬಲವಾದ ಸಾಕ್ಷಿಯಾಗಿದೆ. ಹೊಸ ಐಐಟಿಗಳು, ಏಮ್ಸ್, ವೈದ್ಯಕೀಯ ಕಾಲೇಜುಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಮೂಲಕ ಭಾರತದ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯ ಕ್ಷೇತ್ರವು ಗಮನಾರ್ಹವಾಗಿ ವಿಸ್ತರಿಸಿದೆ. ಇದು ದೇಶದ ಯುವಜನರಿಗೆ ಅಭೂತಪೂರ್ವ ಅವಕಾಶಗಳನ್ನು ಸೃಷ್ಟಿಸಿದೆ.

ಭಾರತವು ಗಮನಾರ್ಹವಾದ ಮೂಲಸೌಕರ್ಯ ಕ್ರಾಂತಿಗೆ ಸಾಕ್ಷಿಯಾಗಿದೆ. ವಂದೇ ಭಾರತ್ ರೈಲುಗಳು, ವಿಮಾನ ನಿಲ್ದಾಣಗಳು, ಹೆದ್ದಾರಿಗಳು ಮತ್ತು ರೈಲು ನಿಲ್ದಾಣಗಳ ಕ್ಷಿಪ್ರ ವಿಸ್ತರಣೆಯಿಂದ ಹಿಡಿದು ಅತ್ಯಂತ ದೂರದ ಪ್ರದೇಶಗಳನ್ನು ತಲುಪುವ ಪರಿವರ್ತನಾತ್ಮಕ ಸಂಪರ್ಕ ಯೋಜನೆಗಳವರೆಗೆ, ಅವರ ನಾಯಕತ್ವವು ಆಧುನಿಕ, ಸುಸಂಪರ್ಕಿತ ಮತ್ತು ಆಕಾಂಕ್ಷೆಯ ಭಾರತಕ್ಕೆ ಬಲವಾದ ಬುನಾದಿ ಹಾಕಿದೆ. ಈ ಸಾಧನೆಗಳು ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸಿರುವುದಲ್ಲದೆ, ದೇಶಾದ್ಯಂತ ಲಕ್ಷಾಂತರ ನಾಗರಿಕರ ಜೀವನದ ಗುಣಮಟ್ಟವನ್ನೂ ಹೆಚ್ಚಿಸಿವೆ.

ಭಾರತವು ಡಿಜಿಟಲ್ ನಾವೀನ್ಯತೆ, ಸೆಮಿಕಂಡಕ್ಟರ್ ಬಾಹ್ಯಾಕಾಶ ತಂತ್ರಜ್ಞಾನ, ಲಸಿಕೆ ಅಭಿವೃದ್ಧಿ ಮತ್ತು ಮೊಬೈಲ್ ಉತ್ಪಾದನೆಯಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮಿದೆ. ಇದು ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಅದರ ಜಾಗತಿಕ ಸ್ಥಾನಮಾನವನ್ನು ಮತ್ತಷ್ಟು ಹೆಚ್ಚಿಸಿದೆ.

ವಿಕಾಸ್ ಭೀ, ವಿರಾಸತ್ ಭೀ (ಅಭಿವೃದ್ಧಿಯೂ ಬೇಕು, ಪರಂಪರೆಯೂ ಬೇಕು): ತಮಿಳು ಪರಂಪರೆಗೆ ಗೌರವ, ತಮಿಳುನಾಡಿನ ಪ್ರಗತಿ ಸಮಕಾಲೀನ ನಾಯಕರಲ್ಲಿ ಪ್ರಧಾನಿ ಮೋದಿಯವರನ್ನು ನಿಜವಾಗಿಯೂ ಅನನ್ಯರನ್ನಾಗಿ ಮಾಡುವುದು ಏನೆಂದರೆ, ಪ್ರಗತಿ ಮತ್ತು ಸಂಪ್ರದಾಯಗಳು ಪರಸ್ಪರ ಪೈಪೋಟಿ ನಡೆಸುವ ಆದರ್ಶಗಳಲ್ಲ, ಬದಲಿಗೆ ಪೂರಕ ಶಕ್ತಿಗಳು ಎಂಬ ಅವರ ಅಚಲ ನಂಬಿಕೆ. ತಮ್ಮ ದೂರದೃಷ್ಟಿಯ ವಿಕಾಸ್ ಭೀ, ವಿರಾಸತ್ ಭೀ (ಅಭಿವೃದ್ಧಿಯೂ ಬೇಕು, ಪರಂಪರೆಯೂ ಬೇಕು) ತತ್ವಜ್ಞಾನದ ಮೂಲಕ, ಒಂದು ರಾಷ್ಟ್ರವು ತನ್ನ ನಾಗರಿಕತೆಯ ಪರಂಪರೆಯಲ್ಲಿ ಆಳವಾಗಿ ಬೇರೂರಿರುವ ಜತೆಜತೆಗೇ, ಕ್ಷಿಪ್ರ ಆಧುನೀಕರಣವನ್ನು ಹೇಗೆ ಮುನ್ನಡೆಸಬಹುದು ಎಂಬುದನ್ನು ಅವರು ಪ್ರದರ್ಶಿಸಿದ್ದಾರೆ.

ಅವರ ನಾಯಕತ್ವದಲ್ಲಿ, ಭಾರತವು ಮೂಲಸೌಕರ್ಯ, ತಂತ್ರಜ್ಞಾನ, ಉತ್ಪಾದನೆ ಮತ್ತು ಸಾಮಾಜಿಕ ಕಲ್ಯಾಣದಲ್ಲಿ ಪರಿವರ್ತಕ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಅದೇ ಸಮಯದಲ್ಲಿ ತನ್ನ ಪ್ರಾಚೀನ ಸಂಸ್ಕೃತಿ, ಭಾಷೆಗಳು, ಆಧ್ಯಾತ್ಮಿಕ ಸಂಪ್ರದಾಯಗಳು ಮತ್ತು ಐತಿಹಾಸಿಕ ಪರಂಪರೆಯ ಬಗ್ಗೆ ನವಚೇತನದ ಹೆಮ್ಮೆಯನ್ನು ಅನುಭವಿಸುತ್ತಿದೆ. ಪವಿತ್ರ ಸ್ಥಳಗಳ ಜೀರ್ಣೋದ್ಧಾರ ಇರಲಿ, ಸಾಂಸ್ಕೃತಿಕ ಲಾಂಛನಗಳ ಪುನಶ್ಚೇತನ ಇರಲಿ, ಶಾಸ್ತ್ರೀಯ ಭಾಷೆಗಳ ಆಚರಣೆ ಇರಲಿ ಅಥವಾ ಅಮೂಲ್ಯವಾದ ಕಲಾಕೃತಿಗಳ ಸಂರಕ್ಷಣೆ ಇರಲಿ, ಅವರ ಆಡಳಿತವು ಆಧುನಿಕ ಆಕಾಂಕ್ಷೆಗಳು ಮತ್ತು ಶಾಶ್ವತ ಮೌಲ್ಯಗಳ ಅಪರೂಪದ ಸಂಶ್ಲೇಷಣೆಯನ್ನು ಪ್ರತಿಬಿಂಬಿಸುತ್ತದೆ.

ನಿಜವಾದ ಅಭಿವೃದ್ಧಿಯನ್ನು ಕೇವಲ ಆರ್ಥಿಕ ಬೆಳವಣಿಗೆಯಿಂದ ಮಾತ್ರ ಅಳೆಯಲಾಗುವುದಿಲ್ಲ, ಬದಲಿಗೆ ಒಂದು ರಾಷ್ಟ್ರವು ತನ್ನ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ, ಪೋಷಿಸುವ ಮತ್ತು ಹಸ್ತಾಂತರಿಸುವ ಸಾಮರ್ಥ್ಯದ ಮೇಲೂ ಅಳೆಯಲಾಗುತ್ತದೆ ಎಂಬುದನ್ನು ನಿರೂಪಿಸುವ ಮೂಲಕ ಪ್ರಧಾನಿ ಮೋದಿ ಅವರ ವಿಧಾನವು ರಾಷ್ಟ್ರ ನಿರ್ಮಾಣವನ್ನು ಮರುಸಂಯೋಜಿಸಿದೆ. ಅವರ ವಿಕಾಸ್ ಭೀ, ವಿರಾಸತ್ ಭೀ ತತ್ವಜ್ಞಾನವು ಆತ್ಮವಿಶ್ವಾಸ ಮತ್ತು ಪುನರುತ್ಥಾನಗೊಳ್ಳುತ್ತಿರುವ ಭಾರತಕ್ಕೆ ಮಾರ್ಗದರ್ಶಿ ಸೂತ್ರವಾಗಿದೆ. ಇದು ತನ್ನ ವೈಭವಯುತ ಭೂತಕಾಲದಲ್ಲಿ ದೃಢವಾಗಿ ನೆಲೆ ನಿಲ್ಲುವ ಜತೆಗೆ ಭವಿಷ್ಯದತ್ತ ಧೈರ್ಯದಿಂದ ಹೆಜ್ಜೆ ಇಡುತ್ತಿದೆ.

ಚೆನ್ನೈ ಮೆಟ್ರೋ ರೈಲು ವಿಸ್ತರಣೆ, ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್‌ವೇ, ತಮಿಳುನಾಡು ರಕ್ಷಣಾ ಕೈಗಾರಿಕಾ ಕಾರಿಡಾರ್, ಬಂದರುಗಳು ಮತ್ತು ವಿಮಾನ ನಿಲ್ದಾಣಗಳ ಆಧುನೀಕರಣ, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ರೈಲ್ವೆ ನಿಲ್ದಾಣಗಳ ಪುನರಾಭಿವೃದ್ಧಿ ಮತ್ತು ಹೊಸ ಪಂಬನ್ ರೈಲು ಸೇತುವೆ ಸೇರಿದಂತೆ ಮೋದಿ ಅವರ ನೇತೃತ್ವದ ಪರಿವರ್ತಕ ಉಪಕ್ರಮಗಳಿಂದ ತಮಿಳುನಾಡು ಅಪಾರವಾಗಿ ಪ್ರಯೋಜನ ಪಡೆದಿದೆ. ಭಾರತದ ಮೊದಲ ವರ್ಟಿಕಲ್ ಲಿಫ್ಟ್ ಸಮುದ್ರ ಸೇತುವೆಯಾದ ಹೊಸ ಪಂಬನ್ ರೈಲು ಸೇತುವೆಯ ಉದ್ಘಾಟನೆಯು ರಾಮೇಶ್ವರಂಗೆ ಸಂಪರ್ಕವನ್ನು ಹೆಚ್ಚಿಸುವ ಮತ್ತು ಭಾರತದ ಇಂಜಿನಿಯರಿಂಗ್ ಶ್ರೇಷ್ಠತೆಯನ್ನು ಬಿಂಬಿಸುವ ಒಂದು ಹೆಗ್ಗುರುತಿನ ಸಾಧನೆಯಾಗಿ ನಿಂತಿದೆ. ಸ್ವಾವಲಂಬಿ ಭಾರತದ ದೃಷ್ಟಿಕೋನವನ್ನು ಅಚಲವಾಗಿ ಮುನ್ನಡೆಸಿದ್ದರಿಂದ ತಮಿಳುನಾಡು ಎಲೆಕ್ಟ್ರಾನಿಕ್ಸ್, ಮೊಬೈಲ್ ಫೋನ್‌ಗಳು ಮತ್ತು ಐಫೋನ್ ಉತ್ಪಾದನೆಗೆ ಪ್ರಮುಖ ಕೇಂದ್ರವಾಗಿಯೂ ಹೊರಹೊಮ್ಮಿದೆ.

ಕಾಶಿ ತಮಿಳು ಸಂಗಮಂ ಮತ್ತು ಸೌರಾಷ್ಟ್ರ ತಮಿಳು ಸಂಗಮಂನಂತಹ ಉಪಕ್ರಮಗಳು ಸಾಂಸ್ಕೃತಿಕ ಬಂಧಗಳನ್ನು ಬಲಪಡಿಸಿವೆ. ನಮ್ಮ ಹೊಸ ಸಂಸತ್ ಭವನದಲ್ಲಿ ಸೆಂಗೋಲ್ ಸ್ಥಾಪನೆಯು ಭಾರತದ ಪ್ರಜಾಸತ್ತಾತ್ಮಕ ಮತ್ತು ನಾಗರಿಕತೆಯ ಪರಂಪರೆಗೆ ತಮಿಳುನಾಡು ನೀಡಿದ ಕೊಡುಗೆಗೆ ಸಂದ ಸೂಕ್ತ ಮನ್ನಣೆಯಾಗಿದೆ. ಮೋದಿ ಅವರ ಗಂಗೈಕೊಂಡ ಚೋಳಪುರಂ ಭೇಟಿಯು, ಚೋಳರ ಪರಂಪರೆ ಉಲ್ಲೇಖಿಸುತ್ತದೆ. ವಿದೇಶಗಳಿಂದ ಅಮೂಲ್ಯವಾದ ಕಲಾಕೃತಿಗಳು ಮತ್ತು ಪ್ರಾಚೀನ ವಸ್ತುಗಳನ್ನು ಮರಳಿ ತರುವ ಉಪಕ್ರಮಗಳು, ಅದರಲ್ಲಿಯೂ ಇತ್ತೀಚಿನ ಅನೈಮಂಗಲಂ ಚೋಳರ ಕಾಲದ ತಾಮ್ರದ ಶಾಸನಗಳನ್ನು ಮರಳಿ ತಂದಿರುವುದು ವ್ಯಾಪಕವಾಗಿ ಶ್ಲಾಘಿಸಲ್ಪಟ್ಟಿದೆ.

ದೇವಾಲಯಗಳು, ಪರಂಪರೆಯ ತಾಣಗಳು, ಶಾಸ್ತ್ರೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳ ಸಂರಕ್ಷಣೆಗೆ ಅವರು ನೀಡಿದ ಬೆಂಬಲದೊಂದಿಗೆ, ಈ ಪ್ರಯತ್ನಗಳು ತಮಿಳು ನಾಗರಿಕತೆಯ ಜಾಗತಿಕ ಸ್ಥಾನಮಾನವನ್ನು ಹೆಚ್ಚಿಸಿವೆ ಮತ್ತು ತಮಿಳು ಭಾಷೆ ಹಾಗೂ ಸಂಸ್ಕೃತಿಯ ಬಗ್ಗೆ ಅವರಿಗಿರುವ ಶಾಶ್ವತ ಗೌರವ ಪ್ರತಿಬಿಂಬಿಸುತ್ತವೆ.

ಪ್ರತಿ ಯುಗದಲ್ಲೂ, ಇತಿಹಾಸವು ತಮ್ಮ ಕಾಲದ ಗಡಿಗಳನ್ನು ಮೀರಿ ನಿಲ್ಲುವ ದೂರದೃಷ್ಟಿ ಮತ್ತು ಕಾರ್ಯಗಳನ್ನು ಹೊಂದಿರುವ ನಾಯಕರ ಉಗಮಕ್ಕೆ ಸಾಕ್ಷಿಯಾಗುತ್ತದೆ. ಅಂತಹ ವ್ಯಕ್ತಿಗಳನ್ನು ಯುಗ ಪುರುಷ ಎಂದು ನೆನಪಿಸಿಕೊಳ್ಳಲಾಗುತ್ತದೆ, ಏಕೆಂದರೆ ಅವರು ರಾಷ್ಟ್ರದ ಭವಿಷ್ಯವನ್ನು ರೂಪಿಸುತ್ತಾರೆ ಮತ್ತು ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತಾರೆ. ತಮ್ಮ ಪರಿವರ್ತಕ ನಾಯಕತ್ವ, ರಾಷ್ಟ್ರೀಯ ಅಭಿವೃದ್ಧಿಗೆ ಬದ್ಧತೆ ಮತ್ತು ಜನರಿಗೆ ದಣಿವರಿಯದ ಸೇವೆಯ ಮೂಲಕ, ಅವರು ಸಮಕಾಲೀನ ಭಾರತದ ನಿಜವಾದ 'ಯುಗ ಪುರುಷ'ರಾಗಿ ಹೊರಹೊಮ್ಮಿದ್ದಾರೆ. ಅವರ ಸಮರ್ಥ ನಾಯಕತ್ವವು ರಾಷ್ಟ್ರವನ್ನು ವಿಕಸಿತ ಭಾರತ 2047 ಕಡೆಗೆ ಮುನ್ನಡೆಸುತ್ತದೆ ಎಂಬ ವಿಶ್ವಾಸ ನನಗಿದೆ.

ಕಿರುಸುದ್ದಿ

ಕಲಬುರಗಿ ಕಾರಾಗೃಹದಲ್ಲಿ ಮೊಬೈಲ್‌ಗಳು ಪತ್ತೆ

ಪ್ರಕರಣ ದಾಖಲು

• **ಕಲಬುರಗಿ:** ನಗರದ ಹೊರವಲಯದ ಸೀತನೂರ ರಸ್ತೆಯಲ್ಲಿರುವ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ನಡೆಸಿದ ಅನಿರೀಕ್ಷಿತ ತಪಾಸಣೆಯ ವೇಳೆ ಎರಡು ಮೊಬೈಲ್ ಫೋನ್‌ಗಳು ಪತ್ತೆಯಾಗಿದ್ದು, ಈ ಹಿನ್ನೆಲೆಯಲ್ಲಿ ಸಂಬಂಧಿತ ಕೈದಿ ವಿರುದ್ಧ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕಳೆದ ಜೂನ್ 9ರಂದು ಮಧ್ಯಾಹ್ನ 1.20ರಿಂದ 1.45ರ ವರೆಗೆ ಸಹಾಯಕ ಅಧೀಕ್ಷಕರ ನೇತೃತ್ವದಲ್ಲಿ ಜೈಲು ಅಧಿಕಾರಿಗಳು ಹಾಗೂ ಸಿಬ್ಬಂದಿಯ ತಂಡವು ಬ್ಯಾರಕ್ ಸಂಖ್ಯೆ 15ರಿಂದ 17ರ ವರೆಗೆ, ಕೈದಿಗಳ ವಸತಿ ಕೊಠಡಿಗಳು ಹಾಗೂ ಕಾರಾಗೃಹದ ಒಳ ಮತ್ತು ಹೊರ ಆವರಣದಲ್ಲಿ ಅನಿರೀಕ್ಷಿತ ತಪಾಸಣೆ ನಡೆಸಿತ್ತು. ತಪಾಸಣೆಯ ವೇಳೆ ಬ್ಯಾರಕ್ ಸಂಖ್ಯೆ 15ರ ಮುಂಭಾಗದಲ್ಲಿರುವ ಹಳೆಯ ಶೌಚಾಲಯದ ಹಿಂಭಾಗದ ಮಣ್ಣಿನಲ್ಲಿ ಅಡಗಿಸಿಟ್ಟಿದ್ದ ಎರಡು ನಿಷೇಧಿತ ವಸ್ತುಗಳು ಪತ್ತೆಯಾಗಿವೆ. ವಶಪಡಿಸಿಕೊಂಡ ಸ್ಮಾರ್ಟ್‌ಫೋನ್ ಪರಿಶೀಲಿಸಿದಾಗ ಅದರಲ್ಲಿ ವಿಚಾರಣಾಧೀನ ಕೈದಿ ಕೃಷ್ಣಪ್ಪ (ಕೈದಿ ಸಂಖ್ಯೆ 3163/2025) ಎಂಬವರ ಫೋಟೋಗಳು ಪತ್ತೆಯಾಗಿದ್ದು, ಮೊಬೈಲ್ ಫೋನ್‌ಗಳು ಅವನ ಬಳಕೆಯಲ್ಲಿದ್ದವು ಎಂಬುದು ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಸಾರಿಗೆ ಬಸ್ಸಿಗೆ ಕಾರು ಡಿಕ್ಕಿ: ಮಹಿಳೆಗೆ ಗಾಯ

• **ದಾಂಡೇಲಿ:** ಧಾರವಾಡದಿಂದ ದಾಂಡೇಲಿಗೆ ಬರುತ್ತಿದ್ದ ಸಾರಿಗೆ ಬಸ್ಸಿಗೆ ಹಿಂಬದಿಯಿಂದ ಬಂದ ಕಾರೊಂದು ಡಿಕ್ಕಿಯಾಗಿ ಕಾರಿನಲ್ಲಿದ್ದ ಓರ್ವ ಮಹಿಳೆಗೆ ಗಾಯವಾದ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ. ಧಾರವಾಡದಿಂದ ದಾಂಡೇಲಿಗೆ ಬರುತ್ತಿದ್ದ ಕೆಎ: 25, ಎಫ್: 2977 ನೋಂದಣಿ ಸಂಖ್ಯೆಯ ಸಾರಿಗೆ ಬಸ್ಸಿಗೆ ಬಸ್ಸಿನ ಹಿಂಬದಿಯಿಂದ ಬರುತ್ತಿದ್ದ ಜಿಎ: 03, ಎಚ್: 6889 ನೋಂದಣಿ ಸಂಖ್ಯೆಯ ಕಾರು ಬಸ್ಸಿಗೆ ಡಿಕ್ಕಿಯಾಗಿದೆ. ಈ ಸಂದರ್ಭದಲ್ಲಿ ಕಾರಿನಲ್ಲಿದ್ದ ಮಹಿಳೆಯೊಬ್ಬರಿಗೆ ಗಾಯವಾಗಿದೆ. ಗಾಯಗೊಂಡ ಮಹಿಳೆಯನ್ನು ತಕ್ಷಣವೇ ನಗರದ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತರಲಾಗಿದೆ.

ರೈತ ಆತ್ಮಹತ್ಯೆ



• **ಸುರೇಬಾನ:** ಸಾಲದ ಬಾಧೆ ತಾಳಲಾರದೆ ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಸುರೇಬಾನ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಗಿನ ಜಾವ ನಡೆದಿದೆ. ಚಿಕ್ಕಮುಲಂಗಿ ಗ್ರಾಮದ ಭೀರಪ್ಪ ಯಲ್ಲಪ್ಪ ಅಣ್ಣೀಜ (43) ಎಂದು ಗುರುತಿಸಲಾಗಿದೆ. ಬೆಳೆಗೆ ಸರಿಯಾಗಿ ಬೆಲೆ ಸಿಗದೆ ಮಾಡಿದ ಸಾಲದ ಕಂತು ಕಟ್ಟಲು ಸಾಧ್ಯವಾಗದೆ. ತನ್ನ ಜಮೀನಿನಲ್ಲಿ ಉಳುಮೆ ಮಾಡಲು ಖಾಸಗಿ ಬ್ಯಾಂಕ್ ಒಂದರಲ್ಲಿ 9 ಲಕ್ಷ ರೂ. ತನ್ನ ಪತ್ನಿಯ ಹೆಸರಿನಲ್ಲಿ ಮಾಡಿದ 1.30 ಲಕ್ಷ ರೂ.ಗಳ ಸಾಲ ತೀರಿಸದೆ ಜೀವನದಲ್ಲಿ ಜಿಗುಪ್ಸೆ ಹೊಂದಿ ತಮ್ಮ ಮನೆ ಚಾವಣಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಸುರೇಬಾನ ಪೊಲೀಸ್ ಠಾಣೆಯ ಪಿಎಸ್‌ಐ ಗುರುರಾಜ ಕಲಬುರ್ಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಶ್ರೀಗಳ ಅಭಿಪ್ರಾಯ

ರಾಮರಾಜ್ಯದ ಕನಸು ನನಸಾಗಲಿ



• **ವಿಜಯಪುರ:** ದೇಶ ಸಮೃದ್ಧಿಯತ್ತ ಸಾಗಬೇಕಾದರೆ ರಾಮರಾಜ್ಯದ ಕನಸು ನನಸಾಗಬೇಕು ಎಂದು ಪೇಜಾವರ ಅಧೋಕ್ಷಜ ಮಠದ ಪೀಠಾಧಿಪತಿ ವಿಶ್ವಪ್ರಸನ್ನತೀರ್ಥ ಶ್ರೀಗಳು ಹೇಳಿದರು.

ಇಲ್ಲಿನ ಶ್ರೀಕೃಷ್ಣ ವಾದಿರಾಜ ಮಠದ ಆವರಣದಲ್ಲಿ ಅಂದಾಜು 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ವಿದ್ಯಾರ್ಥಿ ನಿಲಯದ ದಾನಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬಡವಿದ್ಯಾರ್ಥಿಗಳಿಗೆ ಕಡಿಮೆವೆಚ್ಚದಲ್ಲಿ ಅನುಕೂಲ ಕಲ್ಪಿಸಲು ಹಿರಿಯ ಸ್ವಾಮಿಗಳು ಆರು ದಶಕದ ಹಿಂದೆ ನಿರ್ಮಿಸಿದ ವಿದ್ಯಾರ್ಥಿನಿಲಯ ಶಿಥಿಲಾವಸ್ಥೆಯಲ್ಲಿದ್ದು ಅದನ್ನು ಆಧುನೀಕರಣಗೊಳಿಸಿ ಇಂದಿನ ತಂತ್ರಜ್ಞಾನಯುಗದಲ್ಲಿ ಸಮಸ್ತ ಬಡವರಿಗೂ ನೂತನ ಕಟ್ಟಡ ನಿರ್ಮಿಸಿಕೊಡುವ ಯೋಜನೆಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಅನುದಾನ ನೀಡಿದ್ದಾರೆ. ಒಂದು ಕೋಟಿಯಷ್ಟು ಹಣ ಸಂಗ್ರಹಿಸಿ ಅವರು ಭರವಸೆ ಕೊಟ್ಟಿದ್ದಾರೆ. ಅಲ್ಲದೆ ಸಂಸದ ರಮೇಶ ಜಿಗಜಿಣಗಿ ಅವರೂ ಅನುದಾನ ಬಿಡುಗಡೆ ಮಾಡಿದ್ದಾರೆಂದು ಶ್ಲಾಘಿಸಿದರು.

ಪೇಜಾವರ ಮಠದ ಸಮಸ್ತ ಕಾರ್ಯಗಳಿಗೆ ವಿಜಯಪುರ ಭಕ್ತರು ಮೊದಲಿನಿಂದಲೂ ಸ್ಪಂದಿಸಿದ್ದನ್ನು ಸ್ಮರಿಸಿದ ಅವರು ಈ ಕಟ್ಟಡ ನಿರ್ಮಾಣಕ್ಕೂ ದೇಣಿಗೆ ನೀಡಲು ಮುಂದಾಗಿದ್ದು ಅವರ ಹೃದಯ ಶ್ರೀಮಂತಿಕೆಯನ್ನು ತೋರಿಸುತ್ತದೆ ಎಂದರು.

ಅನೇಕ ಜನ ಹಿರಿಯರು ಒಂದು ಕೋಣೆ ನಿರ್ಮಾಣಕ್ಕೆ ರೂ.5 ಲಕ್ಷ ಕೊಡಲು ಬಂದಿದ್ದಾರೆ. ಹಣ ಮಹತ್ವ ಅಲ್ಲ ಅವರ ಪ್ರೀತಿ ವಿಶ್ವಾಸ ಪ್ರಮುಖ ಎಂದರು.

ಶ್ರೀಮಠದ ಗೌರವಾಧ್ಯಕ್ಷ ಗೋಪಾಲ ನಾಯಕ ಮಾತನಾಡಿ, ಪೇಜಾವರ ಮಠಕ್ಕೂ ವಿಜಯಪುರ ಜಿಲ್ಲೆಯ ಜನರಿಗೂ ಅವಿನಾಭಾವ ಸಂಬಂಧ ಇದೆ. ಐದು ವರ್ಷಗಳ ನಂತರ ಬರಲಿರುವ ಗುರುಗಳ ಜನ್ಮ ಶತಮಾನೋತ್ಸವ ಒಳಗಾಗಿ ಅವರ ಎಲ್ಲ ಕನಸುಗಳನ್ನು ನನಸು ಮಾಡುವ ಉದ್ದೇಶ ಪ್ರಸ್ತುತ ಪೀಠಾಧಿಪತಿ ವಿಶ್ವಪ್ರಸನ್ನತೀರ್ಥರು ಹೊಂದಿದ್ದಾರೆ. ಅವರೊಂದಿಗೆ ಭಕ್ತಾದಿಗಳು ಕೈಜೋಡಿಸೋಣ ಎಂದರು.

ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ ಸ್ವಾಗತಿಸಿದರು. ಭೂಕಂಪ ಸಮಯದಲ್ಲೂ ಪೇಜಾವರ ಮಠ ಗೋವಿಂದಪುರದಲ್ಲಿ ಮನೆ ನಿರ್ಮಿಸಿದ್ದನ್ನು ಸ್ಮರಿಸಿದರು. 5 ಲಕ್ಷ ದೇಣಿಗೆ ಸಂಕಲ್ಪ ಮಾಡಿದ ಗಿರೀಶ ಕುಲಕರ್ಣಿ ಹಾಗೂ ಹೆಚ್ಚಿನ ದಾನ ಕೊಡಲು ಮುಂದಾದ ಡಾ. ಧಾಣಕ ಶಿರೂರ, ಗುರುರಾಜ ಸೊಂಡೂರ ಅವರನ್ನು ಶ್ರೀಗಳು ಫಲ ಮಂತ್ರಾಕ್ಷತೆ ನೀಡಿ ಗೌರವಿಸಿದರು.

ಮಠದ ಸದಸ್ಯರಾದ ಡಾ.ಮಂಗಲಗಿ, ಡಾ.ಮಲಘಾಣ, ಅಶೋಕರಾವ್, ವಿಕಾಸ ಪದಕಿ, ವಿ.ಬಿ.ಕುಲಕರ್ಣಿ, ಗೋವಿಂದ ಜೋಶಿ, ವಿಜಯ ಜೋಶಿ, ಡಾ.ಪ್ರಾಣೇಶ ಜಹಾಗೀರದಾರ ಇದ್ದರು.

ಪ್ರೊ.ಭಗವಾನ್ ಬಂಧನಕ್ಕೆ ಮನವಿ

ಮನೆಗೆ ಮುತ್ತಿಗೆ ಎಚ್ಚರಿಕೆ

• **ಧಾರವಾಡ:** ಶ್ರೀರಾಮನ ಕುರಿತಂತೆ ಅವಹೇಳನ ಮಾಡಿ, ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಪ್ರಕರಣ ದಾಖಲಿಸಲು ಒತ್ತಾಯಿಸಿ ಶಿವಸೇನಾ ಪಕ್ಷದಿಂದ ಶುಕ್ರವಾರ ಶಹರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಿವಸೇನಾ ರಾಷ್ಟ್ರೀಯ ಅಧ್ಯಕ್ಷರಾದ ಗಂಗಾಧರ ಕುಲಕರ್ಣಿ, ಪ್ರೊ.ಕೆ.ಎಸ್.ಭಗವಾನ್ ಅವರು ನಿರಂತರ ಹಿಂದೂ ಧರ್ಮ, ಭಗವದ್ಗೀತೆ, ಧಾರ್ಮಿಕ ಗ್ರಂಥಗಳ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಖಂಡಿಸಿದರು. ಶ್ರೀರಾಮನ ದಶರಥ ರಾಜನ ಮಗನಲ್ಲ ಎಂದ ಭಗವಾನ್ ಅವರು, ಹಿಂದೂ ಧರ್ಮ ಮತ್ತು ಆರಾಧ್ಯ ದೈವಗಳ ವಿರುದ್ಧ ನಾಲಿಗೆ ಹರಿಬಿಟ್ಟು ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡುತ್ತಿರುವುದಾಗಿಯೂ ಗಂಗಾಧರ ಕುಲಕರ್ಣಿ ಆರೋಪ ಮಾಡಿದರು.

ಪೊಲೀಸ್ ಇಲಾಖೆಯು ವಾರದೊಳಗಾಗಿ ಪ್ರೊ.ಕೆ.ಎಸ್.ಭಗವಾನ್ ಅವರ ವಿರುದ್ಧ ಪ್ರಕರಣ ದಾಖಲಿಸಿ, ಕಠಿಣ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ, ಶಿವಸೇನಾದಿಂದ ಮೈಸೂರಿನ ಭಗವಾನ ನಿವಾಸಕ್ಕೆ ಮುತ್ತಿಗೆ ಹಾಕುವ ಎಚ್ಚರಿಕೆ ನೀಡಿದರು. ಶಿವಸೇನಾ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದು, ಶಹರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.



ಧರ್ಮಸ್ಥಳದ ಮಾನವ ಕಲ್ಯಾಣ ಮಾದರಿ



• **ಧರ್ಮಸ್ಥಳ:** ಚತುರ್ವಿಧ ದಾನಪರಂಪರೆಯೊಂದಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ವೀ. ಹೆಗ್ಗಡೆ ಮಾನವ ಕಲ್ಯಾಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮಾಡುತ್ತಿರುವ ಬಹುಮುಖಿ ಸೇವಾಕಾರ್ಯಗಳು ಆದರ್ಶ ಹಾಗೂ ಅನುಕರಣೀಯವಾಗಿವೆ ಎಂದು ಕೊಡಗು ವಿರಾಜಪೇಟೆಯ ಪೂಜ್ಯ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅವರು ಶುಕ್ರವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ವ್ಯಸನಮುಕ್ತರ ಸಮ್ಮಿಲನ ಮತ್ತು ಶತದಿನೋತ್ಸವಸಮಾರಂಭವನ್ನುಉದ್ಘಾಟಿಸಿ ಆಶೀರ್ವಚನ ನೀಡಿದರು. ಧರ್ಮಸ್ಥಳದ ವತಿಯಿಂದ ಬದುಕಿಗೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಿ ಫಲಾನುಭವಿಗಳ ಸ್ವಾವಲಂಬಿ ಜೀವನಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಆಡು ಮುಟ್ಟದ ಸೊಪ್ಪಿಲ್ಲ, ಧರ್ಮಸ್ಥಳದವರು ಕಾರ್ಯ ಮಾಡದ ಸೇವಾ ಕ್ಷೇತ್ರವಿಲ್ಲ ಎಂದರು. ವ್ಯಸನಮುಕ್ತರು ಇಲ್ಲಿಗೆ ಬಂದು ಒಳ್ಳೆಯ ಜ್ಞಾನ ಹಾಗೂ ವಿಚಾರಗಳನ್ನು ಮನದಲ್ಲಿ ತುಂಬಿಕೊಂಡು ಮುಂದೆ ಸಾರ್ಥಕ ಜೀವನ ನಡೆಸಬೇಕು. ಏಕೆಂದರೆ ಇತರ ಕ್ಷೇತ್ರಗಳಲ್ಲಿ ಮಾಡಿದ ಪಾಪಕರ್ಮಗಳು ಪುಣ್ಯಕ್ಷೇತ್ರದಲ್ಲಿ ನಾಶವಾಗುತ್ತವೆ. ಪುಣ್ಯಕ್ಷೇತ್ರದಲ್ಲಿ ಪಾಪ ಮಾಡಿದರೆ ವಜ್ರಲೇಪದಂತೆ ಅದು ಬದುಕಿನಲ್ಲಿ ಶಾಶ್ವತವಾಗಿರುತ್ತದೆ ಎಂದು ಸ್ವಾಮೀಜಿ ಸಲಹೆ ನೀಡಿದರು.

ನವಜೀವನ ಪ್ರಶಸ್ತಿ ಪ್ರದಾನ ಮಾಡಿದ ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಮಾತನಾಡಿ, ವ್ಯಸನಮುಕ್ತರು ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು, ತಮ್ಮ ಕೆಲಸವನ್ನು ಸಂತೋಷದಿಂದ ಮಾಡಿ ಗೌರವಯುತ ಹಾಗೂ ನೆಮ್ಮದಿಯ ಜೀವನ ನಡೆಸಬೇಕು ಎಂದು ಹೇಳಿದರು.

ವಾರ್ಷಿಕ ವರದಿ ಬಿಡುಗಡೆಗೊಳಿಸಿದ ಹೇಮಾವತಿ ವೀ. ಹೆಗ್ಗಡೆ ಮಾತನಾಡಿ, ಮದ್ಯಪಾನ ದಂತಹ ದುಶ್ಚಟಗಳಿಂದ ಕೊಲೆ, ಅನ್ಯಾಯ, ಅತ್ಯಾಚಾರ ಹೆಚ್ಚಾಗುತ್ತದೆ. ಮಹಿಳೆಯರ ಜೀವನ ನರಕಯಾತನೆಯಾಗುತ್ತದೆ. ಮಾನವಜನ್ಮ ಶ್ರೇಷ್ಠವಾಗಿದ್ದು ಬುದ್ಧಿ, ವಿವೇಕ ಮತ್ತು ಶಕ್ತಿಯ ಸದುಪಯೋಗ ಮಾಡಿ ಸುಖ-ಶಾಂತಿ, ನೆಮ್ಮದಿಯ ಕುಟುಂಬಜೀವನ ನಡೆಸಬೇಕು ಎಂದು ಕಿವಿಮಾತು ಹೇಳಿದರು. ಗ್ರಾಮಾಭಿವೃದ್ಧಿ ಯೋಜನೆಯ ಸಿ.ಇ.ಒ. ಅನಿಲ್ ಕುಮಾರ್ ಮಾತನಾಡಿ, ಫಲಾನುಭವಿಗಳ ಕಲ್ಯಾಣಕ್ಕಾಗಿ ಅನುಷ್ಠಾನಗೊಳಿಸಿದ ಯಶಸ್ವಿ ಕಾರ್ಯಕ್ರಮಗಳ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ವ್ಯಸನಮುಕ್ತರು ದೃಢಸಂಕಲ್ಪದಿಂದ ಇದ್ದು ಮುಂದೆ ಯಾವುದೇ ಆಮಿಷ, ಒತ್ತಡಕ್ಕೆ ಒಳಗಾಗಿ ಮತ್ತೆ ದುಶ್ಚಟಕ್ಕೆ ಬಲಿಯಾಗಬಾರದು. ತಾವು ಸಾರ್ಥಕ ಜೀವನ ನಡೆಸುವುದರೊಂದಿಗೆ, ಇತರ ಮದ್ಯವ್ಯಸನಿಗಳೂ ವ್ಯಸನಮುಕ್ತರಾಗುವಂತೆ ಪ್ರೇರಣೆ, ಸಹಕಾರ ನೀಡಬೇಕು ಎಂದರು.

ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದ ಜನಜಾಗೃತಿ ವೇದಿಕೆಯ ಪ್ರಾದೇಶಿಕ ನಿರ್ದೇಶಕ ವಿವೇಕ್ ಪ್ಯಾಸ್ ಮಾತನಾಡಿ, ಈ ವರೆಗೆ 2063 ಮದ್ಯವರ್ಜನ ಶಿಬಿರಗಳ ಮೂಲಕ 1,38,000 ಮದ್ಯವ್ಯಸನಿಗಳನ್ನು ವ್ಯಸನಮುಕ್ತರಾಗಿ ಪರಿವರ್ತನೆ ಮಾಡಿದ್ದು ಇದಕ್ಕಾಗಿ 75 ಕೋಟಿ ರೂ. ವಿನಿಯೋಗಿಸಲಾಗಿದೆ ಎಂದರು. ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ರಾಜ್ಯ ಸಂಘಟನಾ ಅಧ್ಯಕ್ಷ ನಟರಾಜ ಬಾದಾಮಿ ಧನ್ಯವಾದವಿತ್ತರು. ಯೋಜನಾಧಿಕಾರಿ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರ್ವಹಿಸಿದರು.

ಮಾಜಿ ಸೈನಿಕನ ಕೊಲೆ ಪೂರ್ವನಿಯೋಜಿತ

• **ಬೆಳಗಾವಿ/ಯಮಕನಮರಡಿ:** ಅಪಘಾತ ಎಂದು ಬಿಂಬಿಸಲು ಹೊರಟಿದ್ದ ಹುಕ್ಕೇರಿತಾಲೂಕಿನಗೋಡಗೇರಿಗ್ರಾಮದ ನಿವಾಸಿ ಹಾಗೂ ಮಾಜಿ ಸೈನಿಕ ಸಂದೀಪ್ ಮಂಜರಗಿ ಅವರ ನಿಗೂಢ ಸಾವು ಇದೀಗ ರೋಚಕ ತಿರುವು ಪಡೆದುಕೊಂಡಿದೆ.

ಕೊಲೆಯಾದ ಸಂದೀಪ ಪತ್ನಿಯನ್ನು ಪೊಲೀಸರು ಶುಕ್ರವಾರ ವಿಚಾರಣೆ ಮಾಡಿದ ವೇಳೆ ಇದು ಪೂರ್ವನಿಯೋಜಿತ ಕೊಲೆಪ್ರಕರಣ ಎಂದು ಯಮಕಣಮರಡಿ ಪೊಲೀಸರಿಗೆ ಮಾಹಿತಿ ಲಭ್ಯವಾದ ಬಳಿಕ ಕೊಲೆಯಾದ ಮಾಜಿ ಸೈನಿಕನ ಮಣ್ಣು ಮಾಡಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ವೇಳೆ ಪತ್ನಿ ಮತ್ತು ಆಕೆಯ ಪ್ರಿಯಕರ ಸೇರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವ ವೇಳೆ ವಿಷ ಹಾಕಿದ್ದೇವೆ ಎಂದು ಬಾಯಿಬಿಟ್ಟಿದ್ದಾರೆ.

ತನ್ನ ಅನೈತಿಕ ಸಂಬಂಧ ಬಹಿರಂಗವಾಗುವ ಭೀತಿಯಿಂದ ಹಾಗೂ ಪತಿಯ ಹೆಸರಿನ ಸುಮಾರು ಎರಡು ಕೋಟಿ ರೂಪಾಯಿ ವಿಮೆ ಹಣ ಪಡೆಯುವ ಉದ್ದೇಶದಿಂದ ತನ್ನ ಪ್ರಿಯಕರ ಪುಂಡಲೀಕನೊಂದಿಗೆ ಸೇರಿ ತನ್ನ ಪತಿಯನ್ನೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾಳೆ.

ಯಮಕನಮರಡಿ ಸಿಪಿಐ ಜಾವೀದ್ ಮುಶಾಪುರೆ ಅವರ ನೇತೃತ್ವದಲ್ಲಿ ಯಮಕನಮರಡಿ ಹಾಗೂ ಘಟಪ್ರಭಾ ಪೊಲೀಸರು ತನಿಖೆ ಚುರುಕುಗೊಳಿಸಿದ ಬಳಿಕ ಕೊಲೆ ಆರೋಪಿಗಳು ಎಲ್ಲವನ್ನು ಬಾಯಿ ಬಿಟ್ಟಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಮೃತರ ಸಹೋದರ ಸಂಜಯ್ ಮಂಜರಗಿ, ನಾವು ಇದನ್ನು ಅಪಘಾತದ ಸಾವು ಎಂದುಕೊಂಡಿದ್ದೆವು. ಆದರೆ, ಸಿಪಿಐ ಜಾವೀದ್ ಮುಶಾಪುರೆ ನೇತೃತ್ವದ ಪೊಲೀಸ್ ತಂಡದ ಸೂಕ್ಷ್ಮ ತನಿಖೆಯಿಂದ ಸತ್ಯಾಂಶ ಹೊರಬಂದಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.



ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1856	5808
ಉದ್ದಿನಕಾಳು	1510	7177
ಹೆಸರುಕಾಳು	819	6177
ಜೋಳ	2795	4210
ಈರುಳ್ಳಿ	600	2200
ಆಲೂಗಡ್ಡೆ	1200	1700
ಸೋಯಾಬಿನ್	6225	7036
ಗೋಧಿ	2107	4766

IN THE COURT OF THE CIVIL JUDGE & J.M.F.C AT SIRUGUPPA
Cri. Misc. Case No. 490/2026
Between :-
Sri N M Nanjayya son of Sadashivaiah N M aged about 62 years, R/o 2nd Ward, Sirigeri village, Siruguppa Taluk, Bellary District. .....Petitioner
-V/s-
1) The Tahasildar cum-Birth and Deaths Registrar Taluk Office, Siruguppa Siruguppa Taluk, Bellary District.
2) Sri Veerashaiah N M S/o Sadashivayya, aged about 65 years, Sirigeri village, Siruguppa Taluk, Bellary District.
.....Respondents
TO WHOM SO EVER IT MAY CONCERN
NOTICE
WHEREAS above named petitioner herein have instituted above petition under section 13(3) of Birth & Deaths Act 1964 against the Respondent for the purpose of seeking death certificate of petitioner's father by name SADASHIVAIAH S/O VEERABHADRAIAH, who died on 18-06-1969 at his residence.
Any person interested are hereby summoned to appear before this court in presence of by pleader duly instructed and able to answer all material questions relating to the petition on 18/07/2026 at 11-00 am before this court.
In default of your appearance on the date/day of above petition will be heard & determined as "Ex-parte".
Given under my hand & Seal of the court on this 04 day of July 2026.
By order of the court
Sd/- CHIEF MINISTRIAL OFFICER
C.J. & J.M.F.C. COURT SIRUGUPPA
Sd/- JAGADISH S. M.
Advocate, Siruguppa

ಸಾರ್ವಜನಿಕ ನೋಟಿಸು
ಈ ಮೂಲಕ ನಮ್ಮ ಪಕ್ಷಗಾರರಾದ ಶ್ರೀಮತಿ ಫರೀದಾಬೇಗಂ ಕೋಂ ದಾವಲಸಾಬ ಬಮ್ಮಿಗಟ್ಟಿ, ಸಾ॥ ಹನಮಾಪೂರ, ತಾ॥ಕಲಘಟಗಿ, ಜಿ॥ಧಾರವಾಡ, ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ,
ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕ ಕಲಘಟಗಿ ಪಟ್ಟಣ ಪಂಚಾಯತ ವ್ಯಾಪ್ತಿಯ ವಾರ್ಡ ನಂ.13ರಲ್ಲಿ ಸ್ವತ್ತಿನ ಸಂಖ್ಯೆ: 27-511-166, ಸ್ವತ್ತಿನ ಹಳೇ ಸಂಖ್ಯೆ:ರಿ.ಸ.ನಂ.62/*/1 ಪ್ಲಾಟ ನಂ.31 ಹಾಗೂ ಸ್ವತ್ತಿನ ಸಂಖ್ಯೆ:27-511-164, ಸ್ವತ್ತಿನ ಹಳೇ ಸಂಖ್ಯೆ: ರಿ.ಸ.ನಂ.62/*/1 ಪ್ಲಾಟ ನಂ.30 ನೇ ದ್ದವುಗಳನ್ನು, ಮಾಲೀಕರಾದ 1)ವಿಶಾಲ ತಂದೆ ದೀಪಕ ಮಗಜಿಕೊಂಡಿ, 2)ಸುನೀಲ ತಂದೆ ಜಗನ್ನಾಥ ಪವಾರ, ಇವರಿಂದ ನಮ್ಮ ಪಕ್ಷಗಾರರು ಖರೀದಿ ನೋಂದ ಮಾಡಿಕೊಳ್ಳುವವರಿದ್ದು, ಕಾರಣ ಸದರಿ ಆಸ್ತಿಗಳ ಕುರಿತು ಸಾರ್ವಜನಿಕರಿಂದಾಗಲೀ ಅಥವಾ ಯಾವುದೇ ಹಣಕಾಸಿನ ಸಂಸ್ಥೆಗಳಿಂದಾಗಲೀ ಯಾವುದಾದರೂ ಭೋಜಾ, ಒತ್ತಿಹಕ್ಕು ವಗೈರೆ ಹಿತಸಂಬಂಧ ಇದ್ದಲ್ಲಿ ಹಾಗೂ ಆಸ್ತಿಗಳ ಮಾಲೀಕರ ವಾರಸುದಾರರಿಂದಾಗಲೀ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ಈ ನೋಟೀಸ ಪ್ರಕಟವಾದ 07ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಲಿಖಿತವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ ಸದರಿ ನೋಟಿಸ್‌ಗೆ ಸದರಿ ಅವಧಿಯ ಒಳಗಾಗಿ ಯಾವುದೇ ರೀತಿಯ ತಕರಾರು ಬರದೆ ಹೋದಲ್ಲಿ ನಮ್ಮ ಪಕ್ಷಗಾರರು ಸದರ ಮೇಲ್ಕಂಡ ಆಸ್ತಿಗಳ ಕುರಿತು ಖರೀದಿ ವ್ಯವಹಾರ ನೋಂದಣಿ ಮಾಡಿಕೊಳ್ಳುವವರು ಇರುತ್ತಾರೆ, ನಂತರ ಬಂದ ಯಾವುದೇ ತಕರಾರುಗಳು ಸದರಿ ವ್ಯವಹಾರಕ್ಕೆ ಬಾಂಧಯಿಸುವದಿಲ್ಲ ಅಂತಾ ಕೊಟ್ಟಸಾರ್ವಜನಿಕ ನೋಟೀಸು,
ಸ್ಥಳ: ಕಲಘಟಗಿ
ದಿನಾಂಕ: 12/06/2026
ಶ್ರೀ ಆರ್.ವಾಯ್.ರೊಳ್ಳಿ,
ವಕೀಲರು, ಕಲಘಟಗಿ.
ತಾ॥ ಕಲಘಟಗಿ ಜಿ॥ ಧಾರವಾಡ.

IN THE COURT OF THE CIVIL JUDGE & J.M.F.C AT SIRUGUPPA
Cri.Misc. Case No 488/2026
Between:-
Sri. H Dyavanna S/o Late Ramalingappa, aged about 66 years, R/o Karur village, Siruguppa Taluk, Bellary District. .....Petitioner
-V/s-
1) The Tahasildar cum-Birth and Deaths Registrar Taluk Office Siruguppa, Siruguppa Taluk, Bellary District.
2) Smt. Lakshmamma W/o. Late Lakshmappa, aged about 68 years, R/o. Karur village, Siruguppa Taluk, Bellary District. 3) Sri. H. Sanna Dyavanna S/o. Ramalingappa, aged about 51 years, R/o. Karur village, Siruguppa Taluk, Bellary District. .....Respondents
TO WHOM SO EVER IT MAY CONCERN
NOTICE
WHEREAS above named petitioner herein have instituted above petition under section 13(3) of Birth & Deaths Act 1964 against the Respondent for the purpose of seeking death certificate of petitioner's mother by name SIDDAMMA W/o. RAMALINGAPPA who died on 10-02-2009 at Karur village.
Any person interested are hereby summoned to appear before this court in presence of by pleader duly instructed and able to answer all material questions relating to the petition on 18 July 2026 at 11-00 am before this court.
In default of your appearance on the date/day of above petition will be heard & determined as "Ex-parte".
Given under my hand & Seal of the court on this 09 day of June 2026.
By order of the court
Sd/- CHIEF MINISTRIAL OFFICER
C.J. & J.M.F.C. COURT SIRUGUPPA
Sd/- JAGADISH S. M.
Advocate, Siruguppa

IN THE COURT OF THE CIVIL JUDGE & J.M.F.C AT SIRUGUPPA
Cri.Misc. Case No 489/2026
Between:-
Sri. H Dyavanna S/o Late Ramalingappa, aged about 66 years, R/o Karur village, Siruguppa Taluk, Bellary District. .....Petitioner
-V/s-
1) The Tahasildar cum-Birth and Deaths Registrar Taluk Office Siruguppa, Siruguppa Taluk, Bellary District.
2) Smt. Lakshmamma W/o. Late Lakshmappa, aged about 68 years, R/o. Karur village, Siruguppa Taluk, Bellary District. 3) Sri. H. Sanna Dyavanna S/o. Ramalingappa, aged about 51 years, R/o. Karur village, Siruguppa Taluk, Bellary District. .....Respondents
TO WHOM SO EVER IT MAY CONCERN
NOTICE
WHEREAS above named petitioner herein have instituted above petition under section 13(3) of Birth & Deaths Act 1964 against the Respondent for the purpose of seeking death certificate of petitioner's father by name RAMALINGAPPA S/O. SHEKHAPPA who died on 10-04-1995 at Karur village.
Any person interested are hereby summoned to appear before this court in presence of by pleader duly instructed and able to answer all material questions relating to the petition on 18 July 2026 at 11-00 am before this court.
In default of your appearance on the date/day of above petition will be heard & determined as "Ex-parte".
Given under my hand & Seal of the court on this 09 day of June 2026.
By order of the court
Sd/- CHIEF MINISTRIAL OFFICER
C.J. & J.M.F.C. COURT SIRUGUPPA
Sd/- JAGADISH S. M.
Advocate, Siruguppa

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಿಆರ್‌ಎಲ್.ಎಮ್.ಸಿ. ಸಂಖ್ಯೆ : 600/2026
ಅರ್ಜಿದಾರರು 1) ಜಿ ಮಹಾಲಿಂಗಪ್ಪ ತಂದೆ ದಿ॥ ಸೋಮಣ್ಣ ವಯಸ್ಸು: 68 ವರ್ಷ, ವಾಸ: ಮನೆ ನಂ.ಬಿ/55, 13ನೇ ವಾರ್ಡ್, ಗೌಳೇರ್ ಓಣಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ. 2) ಜಿ. ಕುಮಾರಸ್ವಾಮಿ ತಂದೆ ಲೇಟ್ ಜಿ. ಹನುಮಂತಪ್ಪ ವಯಸ್ಸು: 41 ವರ್ಷ, ವಾಸ: ಮನೆ ನಂ.ಬಿ/55, 13ನೇ ವಾರ್ಡ್, ಗೌಳೇರ್ ಓಣಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ. 3) ಜಿ. ಪುಷ್ಪಾವತಿ ಗಂಡ ಲೇಟ್ ಜಿ. ಕೃಷ್ಣಪ್ಪ ವಯಸ್ಸು: 47 ವರ್ಷ, ವಾಸ: ಮನೆ ನಂ. 55/ಬಿ1, 13ನೇ ವಾರ್ಡ್, ಗೌಳೇರ್ ಓಣಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು ಜನನ ಮತ್ತು ಮರಣ ನೊಂದಣಾಧಿಕಾರಿಗಳು ಪುರಸಭೆ, ಸಂಡೂರು.
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1ರವರ ತಾಯಿ ಮತ್ತು ಅರ್ಜಿದಾರ 2ರವರ ಅಜ್ಜಿ ಮತ್ತು ಅರ್ಜಿದಾರ 3ರವರ ಅತ್ತೆಯಾದ ಜಿ. ರಾಚಮ್ಮ ಗಂಡ ದಿವಂಗತ ಸೋಮಣ್ಣ ಇವರು ದಿನಾಂಕ: 05-01-1995 ರಂದು ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 18-7-2026 ಬೆಳಿಗ್ಗೆ 11:00 ಗಂಟೆಗೆ ಮುದ್ದುಪ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 10-06-2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಸೋಮಶೇಖರ ಹೆಚ್.
ಅರ್ಜಿದಾರರ ಪರ ವಕೀಲರು ಸಂಡೂರು

ಸಾರ್ವಜನಿಕ ನೋಟಿಸ್
ಎಂ.ಸಿ.ನಂ. 39/2025
ಹಾನಗಲ್ಲ ಸಿವ್ಹಿಲ್ ಜಡ್ಜ (ಹಿ.ವಿ) ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರ:ಮಾರುತಿ ತಂದೆ ಕೇಜಪ್ಪ ಹಿರೇಕಣಗಿ ಸಾ॥ಮಂತಗಿ ತಾ॥ಹಾನಗಲ್ಲ ಜಿ॥ ಹಾವೇರಿ.
ವಿರುದ್ಧ
ಎದುರುಗಾರಳು:ಶ್ರೀಮತಿ ವಾಣಿ ಕೋಂ.ಮಾರುತಿ ಹಿರೇಕಣಗಿ ಸಾ॥ಮಂತಗಿ, ಹಾಲಿವಸ್ತಿ ವೀರನಗೌಡ ಪೊಲೀಸ ಪಾಟೀಲಸಾ॥ ಗೌರಿಪುರ, ಕನಕಗಿರಿ ತಾ॥ಗಂಗಾವತಿ ಜಿ॥ ಕೊಪ್ಪಳ.
ಇಸ್ತಿಹಾರ
ಸದರ ಮೇಲ್ಕಂಡ ಅರ್ಜಿಯಲ್ಲಿ ಅರ್ಜಿದಾರನು ಮಾನ್ಯ ಹಾನಗಲ್ಲ ಪ್ರಧಾನ ಹಿರಿಯ ಸಿವಿಲ್ ಜಡ್ಜ ಹಾಗೂ ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ ಅರ್ಜಿದಾರನ ಹಾಗೂ ಎದುರುಗಾರಳ ವಿವಾಹ ವಿಚ್ಛೇದನ ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ, ಸದರ ಅರ್ಜಿಯಲ್ಲಿ ಎದುರುಗಾರಳಿಗೆ ಮಾನ್ಯ ನ್ಯಾಯಾಲಯದಿಂದ ನೋಟಿಸ್ ವ ಸಮನ್ಸ ಜ್ಯಾರಿಯಾಗದೇ ಇದ್ದುದ್ದರಿಂದ ಅವರಿಗೆ ನೋಟಿಸ್ ವ ಸಮನ್ಸ ಜ್ಯಾರಿಯಾಗಲು "ಹೊಸದಿಗಂತ" ದಿನ ಪತ್ರಿಕೆಯ ಮುಖಾಂತರ ಜಾಹಿರಾತು ಪಡಿಸಿದ್ದು ಇರುತ್ತದೆ. ಈ ಕುರಿತು ಈ ಅರ್ಜಿಗೆ ಹಿತಾಸಕ್ತಿವುಳ್ಳವರು ಯಾರಾದರೂ ಇದ್ದಲ್ಲಿ ಅವರು ತಮ್ಮ ತಕರಾರ ವಗೈರೆ ಸಲ್ಲಿಸುವವರಿದ್ದಲ್ಲಿ ದಿನಾಂಕ:14-07-2026 ರಂದು ಬೆಳ್ಳಿಗ್ಗೆ 11-00 ಗಂಟೆಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲಿ ನಿಮ್ಮ ಅಹವಾಲನ್ನು ಸಲ್ಲಿಸ ತಕ್ಕದ್ದು, ಇಲ್ಲವಾದಲ್ಲಿ ಯಾರದೂ ತಕರಾರು ವ ಹಿತಾಸಕ್ತಿ ಉಳಿದಿರುವುದಿಲ್ಲ ಅಂತಾ ಪರಿಗಣಿಸಿ ಮುಂದಿನ ಹುಕುಂ ಮಾಡಲಾಗುವುದು. ಈ ದಿವಸ ದಿನಾಂಕ:11-6-2026ರಂದು ಮಾನ್ಯ ಹಾನಗಲ್ಲ ಪ್ರಧಾನ ಹಿರಿಯ ಸಿವಿಲ್ ಜಡ್ಜ ಇವರ ನ್ಯಾಯಾ ಲಯದ ಮೊಹರ ಮತ್ತು ಸಹಿಯೊಂದಿಗೆ ಹೊರಡಿಸಲಾಯಿತು.
ಈ ದಿವಸ ನ್ಯಾಯಾಲಯದ ಆದೇಶದ ಮೇರೆಗೆ ನ್ಯಾಯಾಲಯದ ಮೊಹರಿನೊಂದಿಗೆ.ಕೊಡಲ್ಪಟ್ಟಿದೆ.
ಸ್ಥಳ:ಹಾನಗಲ್ಲ.
ದಿನಾಂಕ:11-06-2026
ಸಹಿ/-ಶಿರಸ್ತೇದಾರರು ಪ್ರಧಾನ ಹಿರಿಯ ಸಿವಿಲ್ ಜಡ್ಜ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಹಾನಗಲ್ಲ.
ಅರ್ಜಿದಾರನ ಪರ ವಕೀಲರು,
ಸಹಿ/-ಎಸ್.ಎಸ್.ಕೆರೂಡಿ ವಕೀಲರು, ಹಾನಗಲ್ಲ.

ಸಾರ್ವಜನಿಕ ನೋಟೀಸು
ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ,
ಧಾರವಾಡ ಜಿಲ್ಲಾ, ಹುಬ್ಬಳ್ಳಿ ತಾಲೂಕ, ಛಬ್ಬಿ ಹೋಬಳಿ, ಛಬ್ಬಿ ಗ್ರಾಮದ ಹದ್ದಿಯಲ್ಲಿ ಇರುವ 1) ಸರ್ವೆ/ಬ್ಲಾಕ ನಂ. 55, ಹಿಸ್ಸಾ-2, ಕ್ಷೇತ್ರ 02 ಎಕರೆ ಪೈಕಿ, ಮಧ್ಯ ಭಾಗದ ಕ್ಷೇತ್ರ 16 ಗುಂಟೆ, 2) ಸರ್ವೆ/ಬ್ಲಾಕ ನಂ. 358, ಹಿಸ್ಸಾ-1ಬ, ಕ್ಷೇತ್ರ 05 ಎಕರೆ 34 ಗುಂಟೆ ಜಮೀನಿನ ಪೈಕಿ, ಪಶ್ಚಿಮ ಕಡೆಯ ಮಧ್ಯ ಭಾಗದ ಕ್ಷೇತ್ರ 01 ಎಕರೆ 07 ಗುಂಟೆ ಇದರಲ್ಲಿ ಪಿ.ಕೆ. 00 ಎಕರೆ 06 ಗುಂಟೆ ವಿಸ್ತೀರ್ಣದ ಜಮೀನುಗಳನ್ನು, ಅವುಗಳ ಮಾಲಕರಾದ ಶ್ರೀ ಲಕ್ಷ್ಮಣ ತಂದೆ ಯಲ್ಲಪ್ಪ ಚಾವಕೇರ ಇವರಿಂದ ನನ್ನ ಪಕ್ಷಗಾರರು ಖರೀದಿಸುವವರಿದ್ದು, ಈ ಆಸ್ತಿಗಳ/ ವ್ಯವಹಾರಗಳ ಕುರಿತು, ಯಾರದಾದರೂ ಏನಾದರು ಹಕ್ಕು, ಹಿತಾಸಕ್ತಿ, ಸಂಚಗಾರ, ಖರೀದಿ, ಭೋಜಾ, ಋಣಗಳು, ವಗೈರೆ ತಂಟೆ ವ ತಕರಾರುಗಳಿದ್ದಲ್ಲಿ, ಈ ನೋಟಿಸು ಪ್ರಕಟವಾದ ಏಳು (07) ದಿನಗಳೊಳಗಾಗಿ, ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಲಿಖಿತ ತಕರಾರುಗಳನ್ನು ಸಲ್ಲಿಸಬೇಕು.
ಒಂದು ವೇಳೆ ನಿಗಧಿತ ಅವಧಿಯೊಳಗೆ ಯಾವುದೇ ತಕರಾರು ಬಾರದಿದ್ದಲ್ಲಿ, ಸದರಿ ಆಸ್ತಿಗಳು ಬಿನ್ ತಕರಾರು ಅಂತಾ ಗೃಹಿಸಿ, ಸದರಿ ಆಸ್ತಿಗಳ ಖರೀದಿ ಪತ್ರ ನೋಂದಾಯಿಸಿಕೊಳ್ಳುತ್ತಾರೆ. ನಂತರ ಬಂದ ತಕರಾರುಗಳು ನಮ್ಮ ಪಕ್ಷಗಾರರಿಗೆ ಯಾವುದೇ ರೀತಿಯಿಂದ ಬಾಂಧಾಯಿಸುವದಿಲ್ಲ ತಿಳಿಯಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.
ಶಿವಾನಂದ ಮ. ವಡ್ಡಟ್ಟಿ, ವಕೀಲರು,
ತಿಮ್ಮಸಾಗರ ಓಣಿ, ಹುಬ್ಬಳ್ಳಿ-28
ಮೊ: 9742024135
ಹುಬ್ಬಳ್ಳಿ,
12-06-2026

IN THE COURT OF THE 4th ADDITIONAL CIVIL JUDGE & JMFC AT BALLARI
Crl Misc No. 239/2026
Between
Sri. Yerriswamy and Others .....Petitioners
And
The Tahasildar Cum Registrar of Birth and Deaths, Taluk Office, Ballari .....Respondent
Notice
To,
Respondent
1. Tahasildar cum the Registrar of Birth and Death, Taluk Office, Ballari.
Whereas, the above named petitioners has instituted above petition u/s 13(2) of the Births and Death Act 1969 against the above Respondent for purpose seeking death of the Petitioners' Mother Smt. Gangamma W/o. Late Devappa died on 05-07-2011 at Joladarashi village, Ballari Taluk and District. You are here by directed to appear in this court in person or by a pleader duly instructed on 30/07/2026 at about 11-00 am in the fore-noon before this court to show cause against the above petitions filling wherein the petition will be heard and determined ex-parte.
Given under my hand and seal of the same court on this 12th day of June 2026.
By Order of the court
Sd/- Chief Ministerial Officer
4th Additional Civil Judge Ballari
Sd/- Talavara Somappa
Advocate for the petitioners

ಸಮನ್ಸ
ಅಸಲು ದಾವಾ ನಂ: 296/2025
ಮಾನ್ಯ ಪ್ರಧಾನ 1ನೇ ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ
1.ಸುರೇಶ ತಂ: ಬಸಪ್ಪ ಹಾರಿವಾಳ ----ವಾದಿ
ವಿರುದ್ಧ
01)ಗಣಪತಿ ತಂ:ಹಣಮಂತ ರಾಠೋಡ
ಗೆ ಸಮನ್ಸ
1)ಪ್ರತಿವಾದಿ:ಗಣಪತಿ ತಂ:ಹಣಮಂತ ರಾಠೋಡ ವಯಾ:37ವರ್ಷ, ಉದ್ಯೋಗ: ಶೇತ್ಕಿ ಸಾ:ಸವಳಹಳ್ಳ ತಾಂಡಾ, ಬಸವನ ಬಾಗೇವಾಡಿ ತಾ:ಬಸವನ ಬಾಗೇವಾಡಿ ಜಿ: ವಿಜಯಪುರ
----ಪ್ರತಿವಾದಿ
ಸಿವ್ಹಿಲ್ ಪ್ರಕ್ರಿಯಾ ಸಂಹಿತೆ ಆದೇಶ 5ನಿಯಮ 20,(1ಎ)ರ ಅಡಿಯಲ್ಲಿ ನೋಟಿಸು.
ಈ ಮೂಲಕ ಪ್ರತಿವಾದಿಯಾದ ನಿಮಗೆತಿಳಿಸುವ ದೇನೆಂದರೆ.
ಅರ್ಜಿದಾರನು/ವಾದಿಯು ನಿಮ್ಮ ವಿರುದ್ಧ ಅಸಲ ದಾವೆ ದಾಖಲ ಮಾಡಿದ್ದು ಇರುತ್ತದೆ. ನಿಮಗೆ ಅನೇಕ ಬಾರಿ ದಾವೆಯ ಸಮನ್ಸ ಹಾಗೂ ಆರ್.ಪಿ.ಇ.ಡಿ ಕಳುಹಿಸಿದರೂ ಸಹಿತ ಉದ್ದೇಶಪೂರ್ವಕವಾಗಿ ಮುಖಿತಪಿಸಿ ತಿರುಗಾಡ ಹತ್ತಿರುತ್ತೀರಿ ಮತ್ತು ದಾವೆಯ ಸಮನ್ಸ ರಜಿಸ್ಟರ ಅಂಚೆಯ ಮೂಲಕ ಕಳಿಸಿದರೂ ಸಹ ಅದನ್ನು ಪಡೆಯುತ್ತಿಲ್ಲ ಕಾರಣ ಈ ನೋಟಿಸನ್ನು ಪ್ರಕಟಪಡಿಸಿದೆ. ಈ ದಾವೆಯು ಮುದ್ದತನ್ನು ದಿನಾಂಕ:27-07-2026 ರಂದು ನಿಗದಿಪಡಿಸಲಾಗಿದೆ. ಕಾರಣ ಅಂದು ನೀವು ಬೆಳಿಗ್ಗೆ 10-45 ಘಂಟೆಗೆ ನೀವಾಗಲಿ ನಿಮ್ಮ ಪರ ವಕೀಲರಾಗಲಿ ಈ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮದೇನಾದರೂ ತಕರಾರು ವಗೈರೆ ಇದ್ದಲ್ಲಿ ಸಲ್ಲಿಸತಕ್ಕದ್ದು, ಒಂದು ವೇಳೆ ನೀವು ಗೈರು ಹಾಜರಿ ಉಳಿದಲ್ಲಿ ದಾವೆಯನ್ನು ಏಕತರ್ಫಿಯಾಗಿ ಇತ್ಯರ್ಥಪಡಿಸಲಾಗುತ್ತದೆ ಅಂತಾ ಕೊಟ್ಟ ಸಮನ್ಸ
ಈ ಹೊತ್ತು ದಿನಾಂಕ: 10-06-2026 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.
ಸ್ಥಳ: ಬಸವನ ಬಾಗೇವಾಡಿ
ದಿನಾಂಕ: 01-04-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು, (ಆಡಳಿತ)
ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಧೀಶರ
ನ್ಯಾಯಾಲಯ ಬ.ಬಾಗೇವಾಡಿ
ಸಹಿ/-ಶ್ರೀ.ಎಮ್.ಎಸ್.ಗೋಳಸಂಗಿ
ವಕೀಲರು ಬಸವನ ಬಾಗೇವಾಡಿ

IN THE COURT OF THE 4TH ADDITIONAL CIVIL JUDGE & JMFC AT BALLARI
Crl. M.C. No. 246/2026
Between :-
1) HANUMANTHAPPA S/O LATE. SITARAMAPPA, aged about 63 years
2) POMPANNA S/O LATE. SITARAMAPPA, aged about 60 years
3) HANUMANTHAMMA W/O SHANKARAPPA D/O LATE. SITARAMAPPA, aged about 58 years 4) NAGAMMA W/O. KRISHNA D/O. LATE. SITARAMAPPA, aged about 56 years 5) Garinti MALLAMMA W/O G. NAGENDRA D/O LATE. SITARAMAPPA, aged about 54 years 6) BOJJAMMA W/O SANNA GANGAPPA D/O LATE. POTHAPPA, aged about 90 years. 7) GANGAMMA W/O LATE. ERANNA, aged about 68 years,
8) BAJJAMMA W/O LATE LINGAPPA, aged about 50 years, all are resident of Sindhuvala village, Ballari taluk and District. .....Petitioners
And
RESPONDENT :
The Register of Births & Death's, Thasildhar, Taluk office, Ballari .....Respondent
NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 Grandmother by name BASAMMA W/o. Late POTHAPPA was died on 05-10-1995 at Sindhuvala village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 22-7-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 12th day of June 2026.
By Order of the court.
Sd/- Chief Ministerial Officer
4th Addl. Civil Judge & JMFC Ballari
Sd/- G.Venkatarama
Advocates for the petitioners

IN THE COURT OF THE 4TH ADDITIONAL CIVIL JUDGE & JMFC AT BALLARI
Crl. M.C. No. 249/2026
Between :-
1) HANUMANTHAPPA S/O LATE. SITARAMAPPA, aged about 63 years
2) POMPANNA S/O LATE. SITARAMAPPA, aged about 60 years
3) HANUMANTHAMMA W/O SHANKARAPPA D/O LATE. SITARAMAPPA, aged about 58 years 4) NAGAMMA W/O. KRISHNA D/O. LATE. SITARAMAPPA, aged about 56 years 5) Garinti MALLAMMA W/O G. NAGENDRA D/O LATE. SITARAMAPPA, aged about 54 years 6) BOJJAMMA W/O SANNA GANGAPPA D/O LATE. POTHAPPA, aged about 90 years. 7) GANGAMMA W/O LATE. ERANNA, aged about 68 years,
8) BAJJAMMA W/O LATE LINGAPPA, aged about 50 years, all are resident of Sindhuvala village, Ballari taluk and District. .....Petitioners
And
RESPONDENT :
The Register of Births & Death's, Thasildhar, Taluk office, Ballari .....Respondent
NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 Grandfather by name POTHAPPA S/o. Late LINGAPPA was died on 12-11-1993 at Sindhuvala village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 22-7-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 12th day of June 2026.
By Order of the court.
Sd/- Chief Ministerial Officer
4th Addl. Civil Judge & JMFC Ballari
Sd/- G.Venkatarama
Advocates for the petitioners

IN THE COURT OF THE 4TH ADDITIONAL CIVIL JUDGE & JMFC AT BALLARI
Crl. M.C. No. 250/2026
Between :-
1) HANUMANTHAPPA S/O LATE. SITARAMAPPA, aged about 63 years
2) POMPANNA S/O LATE. SITARAMAPPA, aged about 60 years
3) HANUMANTHAMMA W/O SHANKARAPPA D/O LATE. SITARAMAPPA, aged about 58 years 4) NAGAMMA W/O. KRISHNA D/O. LATE. SITARAMAPPA, aged about 56 years 5) Garinti MALLAMMA W/O G. NAGENDRA D/O LATE. SITARAMAPPA, aged about 54 years 6) BOJJAMMA W/O SANNA GANGAPPA D/O LATE. POTHAPPA, aged about 90 years. 7) GANGAMMA W/O LATE. ERANNA, aged about 68 years,
8) BAJJAMMA W/O LATE LINGAPPA, aged about 50 years, all are resident of Sindhuvala village, Ballari taluk and District. .....Petitioners
And
RESPONDENT :
The Register of Births & Death's, Thasildhar, Taluk office, Ballari .....Respondent
NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 father by name SITARAMAPPA S/O. POTHAPPA was died on 14-01-2007 at Sindhuvala village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 22-7-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 12th day of June 2026.
By Order of the court.
Sd/- Chief Ministerial Officer
4th Addl. Civil Judge & JMFC Ballari
Sd/- G.Venkatarama
Advocates for the petitioners

ಸಾರ್ವಜನಿಕ ಪ್ರಕಟಣೆ
ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ
ಕ್ರಿಮಿ. ನಂ. 8/2026
1ನೇ ತುಕರಾಮ ನಾರಾಯಣ ನಾಯ್ಕ ಕೂಡಾ .....ಅರ್ಜಿದಾರರು
ವಿರುದ್ಧ
1ನೇ ತಹಶೀಲ್ದಾರರು ತಾ: ಸಿದ್ದಾಪುರ (ಉ.ಕ.)
ಕೂಡಾ - .....ಎದುರುದಾರರು
ಸದ್ರಿಪ್ರಕರಣದ ಎದುರುದಾರರು ಮತ್ತು ಹಿತಾಸಕ್ತಿಯುಳ್ಳ ಸಂಬಂಧಿಕರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ:-
ಈ ಪ್ರಕರಣದ ಅರ್ಜಿದಾರರು ಸಿದ್ದಾಪುರ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ತಮ್ಮ ಚಿಕ್ಕಪ್ಪ ವೀರಭದ್ರ ತಿಮ್ಮ ನಾಯ್ಕ ಸಾ: ಕೋಲಸಿರ್ಸಿ ಗ್ರಾಮದ ಕೋಲಸಿರ್ಸಿ ಇವರು ದಿನಾಂಕ 15-03-1979 ರಂದು ಸಿದ್ದಾಪುರ ತಾಲೂಕು ಕೋಲಸಿರ್ಸಿ ಗ್ರಾಮದ ಕೋಲಸಿರ್ಸಿ ಊರಿನಲ್ಲಿ ಮೃತರಾಗಿರುವುದಾಗಿಯೂ ಮತ್ತು ಮೃತರ ಮರಣ ದಾಖಲೆಯನ್ನು ಅರ್ಜಿದಾರರಿಗೆ ಪೂರೈಸುವಂತೆ 1 ಮತ್ತು 2ನೇ ಎದುರುದಾರರಿಗೆ ಆದೇಶವಾಗುವಂತೆ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾನೆ. ಅರ್ಜಿದಾರನ ಕೋರಿಕೆಗೆ ಯಾವುದಾದರೂ ತಕ್ರಾರುಗಳಿದ್ದಲ್ಲಿ ದಿನಾಂಕ 23/7/2026 ರಂದು ಬೆಳಿಗ್ಗೆ 10-30 ಗಂಟೆಗೆ ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರಾಗಿ ಮೇಲೆ ಹೇಳಿದ ಪ್ರಕರಣದಲ್ಲಿ ತಮ್ಮ ತಕ್ರಾರು ಸಲ್ಲಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ.
ಇಂದು ದಿನಾಂಕ 4-6-2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಸಹಿ ಮಾಡಿ ನೀಡಲಾಗಿದೆ.
ಸಿದ್ದಾಪುರ
ದಿನಾಂಕ: 4-6-2026
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಂ.ಎಫ್.ಸಿ. ಕೋರ್ಟ ಸಿದ್ದಾಪುರ (ಉ.ಕ.)
ಸಹಿ/- ಎಂ.ಡಿ. ನಾಯ್ಕ
ಅರ್ಜಿದಾರರ ಪರ ವಕೀಲರು

CHANGE OF NAME
I, **WASIYA JABEEN** (Old Name) Resident of H No: 193/A/1 Ward No: 10 Bagalkot, Karnataka - 587101, have changed my name as **WASIYA JABEEN MOHAMMAD IRFAN SILEDOR** (New Name) henceforth I will be called and recognized by new name for all future purposes, dated: 12/06/2026.

CHANGE OF NAME
I, **NAMRATA RAJKUMAR RATHOD** (Old Name) Resident of 73A/74A, Tejmani Building Ashok Nagar, Nipani - 591237, have changed my name as **NAMRATA SHRIPAL SHAH** (New Name) henceforth I will be called and recognized by new name for all future purposes, dated: 12/06/2026.

ಮಾಲೂರು ನಗರ ಯೋಜನಾ ಪ್ರಾಧಿಕಾರ
ಮಾಲೂರು, ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151-299920.
Web Site: www.malur.tpa.gov.in,
Email: ms.malur.planning.authority@gmail.com
ಸಂಖ್ಯೆ: ಮಾಯೋಪ್ರಾ/ಭೂ.ಬ/2026-27/ ದಿನಾಂಕ:10.06.2026
ತಿದ್ದುಪಡಿ ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಮಾಲೂರು ತಾಲ್ಲೂಕು ಕಸಬಾ ಹೋಬಳಿ, ತೊರ್ನಹಳ್ಳಿ ಗ್ರಾಮದ ಸ.ನಂ. 134/3, 134/2, 285/3, 285/1, 277/1, 277/2, 277/3, 277/4, 278/1, 278/2 ಹಾಗೂ ಇತರೆ ಜಮೀನುಗಳನ್ನು "ಕೃಷಿ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಿ, ದಿನಾಂಕ: 30.05.2026 ರಂದು ನೀಡಲಾಗಿರುವ ಪತ್ರಿಕಾ ಪ್ರಕಣೆಯಲ್ಲಿ "ಸದರಿ ಪ್ರದೇಶವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು" ಎಂದು ಕೈ ತಪ್ಪಿನಿಂದ ನಮೂದಾಗಿದ್ದು, "ವಸತಿ" ಎನ್ನುವುದರ ಬದಲು ಹಿಂದಿನ ಪ್ರಕಟಣೆಯಲ್ಲಿ ಮೇಲೆ ನಮೂದಿಸಿರುವಂತೆ "ಕೃಷಿ" ಎಂದು ಓದಿಕೊಳ್ಳುವುದು, "ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು" ಎಂದು ತಿದ್ದುಪಡಿ ಮಾಡಿ ನಮೂದಿಸುತ್ತಾ ಈ ವಿಷಯಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.
ಸಹಿ/- ಸದಸ್ಯ ಕಾರ್ಯದರ್ಶಿ
ಮಾಲೂರು ಯೋಜನಾ ಪ್ರಾಧಿಕಾರ ಮಾಲೂರು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:113/ಕೆಎಸ್‌ಎಂಸಿಎ/2026-27

ಸಂಪಾದಕೀಯ

ಖಂಡನೀಯ ದಾಳಿ

ಅಮೆರಿಕನ್ ಪಡೆಗಳಿಂದ ಮೂರು ದಿನಗಳಲ್ಲಿ ಮೂರು ದಾಳಿ. ಎಲ್ಲವೂ ಭಾರತೀಯ ನಾವಿಕರಿದ್ದ ಹಡಗುಗಳ ಮೇಲೆ. ಈ ದಾಳಿಯಲ್ಲಿ ಮೂವರು ಭಾರತೀಯರ ಸಾವು... ಇವೆಲ್ಲ ಭಾರತೀಯರಿಗೆ ಆಘಾತತರುವ ಸುದ್ದಿಗಳೆ. ಒಮಾನ್ ಬಳಿಯ ಸಮುದ್ರದಲ್ಲಿ ಅಮೆರಿಕನ್ ಪಡೆಗಳು ನಡೆಸಿರುವ ಈ ದಾಳಿಗಳು ಖಂಡನೀಯವೂ ಹೌದು. ಭಾರತವು ಈ ಕುರಿತಂತೆ ಅಮೆರಿಕದ ರಾಯಭಾರಿಯನ್ನು ಕರೆಸಿಕೊಂಡು ತನ್ನ ಖಂಡನೆಯನ್ನು ವ್ಯಕ್ತಪಡಿಸಿರುವುದು ಯುಕ್ತ ರಾಜತಾಂತ್ರಿಕ ಕ್ರಮವಾದರೂ, ಉದ್ಧಟ ಅಮೆರಿಕಕ್ಕೆ ಇಂತಹ ಖಂಡನೆಗಳು



ನಾಟುವುದು ದೂರವೇ ಉಳಿದಿದೆ. ನೌಕೆಗಳ ಮೇಲೆ ನಡೆಸಿದ ದಾಳಿಯಲ್ಲಿ ಇನ್ನೂ ಅಧಿಕ ಸಾವುನೋವುಗಳಾಗುವ ಸಾಧ್ಯತೆಗಳಿದ್ದು, ಅದೃಷ್ಟವಶಾತ್ ಒಮನ್ ಪಡೆಗಳು 20ಕ್ಕೂ ಅಧಿಕ ಭಾರತೀಯ ನಾವಿಕರನ್ನು ರಕ್ಷಿಸಿದ್ದವು.

ಇರಾನ್ ಹೊರ್ಮುಜ್ ಜಲಸಂಧಿಯ ಮೇಲೆ ನಿರ್ಬಂಧ ಹೇರಿ ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ತನ್ನ ಸಮರದಲ್ಲಿ ಜಗತ್ತಿನ ಇನ್ನಿತರ ರಾಷ್ಟ್ರಗಳೂ ಸಂಕಷ್ಟ ಅನುಭವಿಸುವಂತೆ ಮಾಡಿದ ಕ್ರಮವು ಎಷ್ಟು ಖಂಡನೀಯವೋ, ಈಗ ಅಮೆರಿಕ ಕೂಡಾ ಇರಾನಿನ ಮೇಲೆ ಸಮುದ್ರ ದಿಗ್ಬಂಧನ ಹೇರುವ ನೆಪದಲ್ಲಿ ಇತರ ದೇಶಗಳ ತೈಲ ಟ್ಯಾಂಕರ್‌ಗಳು ಮತ್ತು ವಾಣಿಜ್ಯ ಹಡಗುಗಳು ಸಂಚರಿಸದಂತೆ ಮಾಡುತ್ತಿರುವುದು ಕೂಡಾ ಅಷ್ಟೇ ಖಂಡನೀಯ. ಇರಾನಿನಿಂದ ತೈಲ ಹಾಗೂ ಇನ್ನಿತರ ವಾಣಿಜ್ಯಿಕ ಸರಕುಗಳು ಹೊರಹೋಗದಂತೆ ನಿರ್ಬಂಧಿಸುವ ಪ್ರಯತ್ನದಲ್ಲಿ ಅಮೆರಿಕವು ಇತರ ದೇಶಗಳ ನೌಕೆಗಳ ಮೇಲೆ ದಾಳಿ ಮಾಡಿ ಸಾವು ನೋವುಗಳಿಗೆ ಕಾರಣವಾಗುತ್ತಿದೆ. ಜಗತ್ತಿನ ಬಹುತೇಕ ವಾಣಿಜ್ಯಿಕ ನೌಕೆಗಳಲ್ಲಿ ಭಾರತೀಯ ನಾವಿಕರು, ಇಂಜಿನಿಯರ್‌ಗಳು, ಅಧಿಕಾರಿಗಳು ದೊಡ್ಡ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾಗರದಲ್ಲಿ ಇಂತಹ ನೌಕೆಗಳ ಮೇಲೆ ನಡೆಯುವ ದಾಳಿಯಲ್ಲಿ ಭಾರತೀಯ ಪ್ರಜೆಗಳು ಕಾರಣವಿಲ್ಲದೇ ಬಲಿಪಶುಗಳಾಗುತ್ತಿದ್ದಾರೆ.

ಇದೀಗ ಅಮೆರಿಕವು ಭಾರತೀಯ ನಾವಿಕರ ಸಾವಿಗೆ ಕಾರಣವಾಗಿರುವುದರಿಂದ ಭಾರತವು ಕಠಿಣವಾಗಿ ಪ್ರತಿಕ್ರಿಯಿಸುವುದು ಅನಿವಾರ್ಯವಾಗಿದೆ. ಸದ್ಯಕ್ಕಂತೂ ಭಾರತವು ಕಠಿಣ ಮಾತುಗಳಲ್ಲೇ ತನ್ನ ಖಂಡನೆಯನ್ನು ವ್ಯಕ್ತಪಡಿಸಿದೆಯಾದರೂ ಅಮೆರಿಕದೊಂದಿಗಿನ ಇನ್ನಿತರ ರಾಜತಾಂತ್ರಿಕ ಸಂಬಂಧಗಳಿಗೆ ಧಕ್ಕೆಯೊದಗದ ರೀತಿಯಲ್ಲಿ ವಿವೇಕವನ್ನು ಪ್ರದರ್ಶಿಸಿದೆ. ಇದೇವೇಳೆ, ಅಮೆರಿಕದ ಇಂತಹ ಉಪಕ್ರಮಗಳ ವಿರುದ್ಧವಾಗಿ ಇನ್ನಿತರ ರಾಷ್ಟ್ರಗಳ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿಕೊಂಡು ಭವಿಷ್ಯದಲ್ಲಿ ಇಂತಹ ಅವಘಡಗಳು ಸಂಭವಿಸದಂತೆ ಅಮೆರಿಕವನ್ನಾಗಲಿ, ಇರಾನನ್ನಾಗಲಿ ಎಚ್ಚರಿಸುವುದು ಕೂಡಾ ಅಗತ್ಯವಾಗಿದೆ.

ನರಕವಾಸಿಗಳ ಗುರುತುಗಳು

ಅತ್ಯಂತಕೋಪಃ ಕುಟಿಲಾ ಚ ವಾಣೀ ದರಿದ್ರತಾ ಚ ಸ್ವಜನೇಷು ವೈರಮ್।
ನೀಚಪ್ರಸಂಗಃ ಕುಲಹೀನಸೇವಾ ಚಿಹ್ನಾನಿ ದೇಹೇ ನರಕಸ್ಥಿತಾನಾಮ್॥

ಅತಿಯಾದ ಸಿಟ್ಟು, ಕೊಂಕುನುಡಿ, ದಾರಿದ್ರ್ಯ, ಸ್ವಜನರಲ್ಲಿ ವೈರ, ನೀಚರ ಸಂಗ, ಕುಲಹೀನರ ಸೇವೆ ಇವುಗಳು ದೇಹದಲ್ಲಿರುವುದು ನರಕವಾಸಿಗಳ ಗುರುತುಗಳಾಗಿರುತ್ತವೆ- ಎಂಬುದು ಶ್ಲೋಕಾರ್ಥ.

ಸ್ವರ್ಗ ನರಕಗಳ ಕಲ್ಪನೆ ನಮ್ಮಲ್ಲಿ ಇಂದೂ ಇದೆ. ನೋಡಿ ಬಂದವರು ಯಾರೂ



ಇಲ್ಲ. ಆದರೂ ನಂಬುತ್ತೇವೆ. ಇದಕ್ಕೆ ಆಪ್ತ ವಾಕ್ಯವೆಂಬ ಪ್ರಮಾಣವೇ ಕಾರಣ. ವಚನಕಾರರು 'ಸ್ವರ್ಗ ನರಕಗಳೆಂಬುದು ಬೇರಿಲ್ಲ ನೋಡಿರೋ' ಎಂದಿದ್ದಾರೆ. ಸತ್ಯವನ್ನು ನುಡಿಯುವುದು, ಧರ್ಮ ಮಾರ್ಗದಲ್ಲಿ ನಡೆಯುವುದು ಸ್ವರ್ಗವೆನಿಸಿದರೆ, ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ನರಕ. ಬದುಕನ್ನು ಚೆನ್ನಾಗಿ ನಿರ್ವಹಿಸಬೇಕು. ಪ್ರಾಮಾಣಿಕವಾಗಿ ಬದುಕಬೇಕು. ಇರುವಷ್ಟರಲ್ಲಿ ಸಂತೋಷವನ್ನು ಕಾಣಬೇಕು. ಒಟ್ಟಿನಲ್ಲಿ ನೆಮ್ಮದಿಯ ಜೀವನ ನಡೆಸಬೇಕು ಎಂಬುದು ಸ್ವರ್ಗದ ಕಲ್ಪನೆಯಾಗಿದೆ.

ನಮ್ಮ ಹದ ಮೀರಿದ ವ್ಯವಹಾರಾದಿಗಳೇ ನರಕವೆನಿಸಿಕೊಳ್ಳುತ್ತದೆ. ನಮ್ಮ ಶರೀರದಲ್ಲಿಯೇ ನರಕದ ಕುರುಹುಗಳನ್ನು ಕಾಣಬಹುದು. ನಮ್ಮ ದೇಹದಲ್ಲಿರುವ ಕೆಲವು ಕೆಟ್ಟ ಅಂಶಗಳನ್ನು ನರಕವಾಸಿಗಳು ಎಂಬುದಾಗಿ ಗುರುತಿಸಬಹುದು. ಅಂತಹ ಗುರುತುಗಳು ಯಾವುವು ಎಂಬುದನ್ನು ಈ ಶ್ಲೋಕದಲ್ಲಿ ತಿಳಿಸಲಾಗಿದೆ.

ಮೊದಲನೆಯದಾಗಿ ಅತಿ ಕೋಪವನ್ನು ಕವಿ ಹೇಳಿದ್ದಾನೆ. ಕೋಪದಿಂದ ಯಾರೂ ಒಳ್ಳೆಯವರಾದದ್ದಿಲ್ಲ. ಕೋಪ ಪಾಪಕ್ಕೆ ಮೂಲ. ಕೋಪ ಪಾಪದ ಕೆಲಸಕ್ಕೆ ಎಡೆ ಮಾಡಿಕೊಡುತ್ತವೆ. ಕಡು ಕೋಪಿಷ್ಠನನ್ನು ಯಾರೂ ಒಪ್ಪುವುದಿಲ್ಲ. ಸಹವಾಸವನ್ನೂ ಬಯಸುವುದಿಲ್ಲ. ಅದೇರೀತಿ, ಕೊಂಕುನುಡಿಯುವವನನ್ನು ಜನರು ದೂರವಿಡುತ್ತಾರೆ. ನಂಜಿನ ಮಾತು, ಹೊಟ್ಟೆಕಿಚ್ಚಿನ ಮಾತು ಯಾರಿಗೂ ಒಪ್ಪಿಗೆಯಾಗದು. ಇಂಥವರ ಸಹವಾಸವನ್ನು ಯಾರೂ ಬಯಸರು.

ದಾರಿದ್ರ್ಯ ಬದುಕಿನಲ್ಲಿ ಹತಾಶೆಯನ್ನುಂಟುಮಾಡುತ್ತದೆ. ಯಾವುದೇ ಕೆಲಸ ಮಾಡಲು ದಾರಿದ್ರ್ಯದಿಂದಾಗಿ ಸಾಧ್ಯವಾಗುವುದಿಲ್ಲ. ಬಡವನನ್ನು ಎಲ್ಲರೂ ದೂರವಿರಿಸುತ್ತಾರೆ. ಆಕ್ಷೇಪಕ್ಕೂ, ಆರೋಪಕ್ಕೂ ತಲೆಕೊಡಬೇಕಾಗುತ್ತದೆ. ದರಿದ್ರನ ಪಾಲಿಗೆ ಎಲ್ಲವೂ ಶೂನ್ಯ. ಇಂಥವರ ಬದುಕು ಸಾಕ್ಷಾತ್ ನರಕವೇ ಸರಿ.

ತನ್ನವರು ಆಪತ್ತಿನಲ್ಲಿ ಜೊತೆಗಿರುವವರು. ಅವರೊಂದಿಗೆ ವೈರ ಎಂದೂ ಸಲ್ಲದು. ಇಲ್ಲಸಲ್ಲದ ವಿಚಾರಕ್ಕೆ ಜಗಳಕಾಯ್ದು, ದ್ವೇಷಮಾಡಿ ಮಾತನಾಡದೆ ಮುಖ ತಿರುಗಿಸಿದರೆ ಸಂಕಟದ ಸಮಯದಲ್ಲಿ ಒದಗಿ ಬರಬೇಕಾದ ಅವರೇ ಬರುವುದಿಲ್ಲ. ಲಾಭಕ್ಕಾಗಿ ಹತ್ತಿರ ಬಂದವರು ಬರುತ್ತಾರೆಯೇ? ಲಾಭವಿಲ್ಲದಲ್ಲಿ ಇವರೂ ಇರುವುದಿಲ್ಲ.

ನೀಚರು ಸಹವಾಸ ಮಾಡುವುದು ಸ್ವಾರ್ಥಕ್ಕಾಗಿಯೇ ವಿನಾ ಇನ್ನಾವ ಉದಾತ್ತ ಉದ್ದೇಶವೂ ಇರುವುದಿಲ್ಲ. ಸಹವಾಸ ಮಾಡಿ ಅವನನ್ನು ಸಂಪೂರ್ಣ ಮುಗಿಸಿಬಿಡುವುದು ನೀಚರ ಸ್ವಭಾವ. ಇವರ ಒಡನಾಟವೂ ನರಕವನ್ನು ಮನೆಗೆ ಕರೆತಂದಂತೆ.

'ಸೇವಾ ಹಿ ಪರಮೋಧರ್ಮ' ಎಂಬುದು ಸತ್ಯ. ಯಾರ ಸೇವೆ ಎಂಬ ಕಲ್ಪನೆ ಇರಬೇಕು. ಸಜ್ಜನರ ಸೇವೆ ಮಾಡಬೇಕಾದದ್ದು ಧರ್ಮ. ಕರ್ತವ್ಯ ಕೂಡ. ಇದರಿಂದ ಇಹಪರಗಳಲ್ಲಿ ಪ್ರಯೋಜನವಿದೆ. ಇದಕ್ಕೆ ಬದಲಾಗಿ ಕುಲಹೀನರ ಸೇವೆ ಮಾಡಿದರೆ ಬೇರೆ ನರಕವಿಲ್ಲ. ಇದೇ ನರಕ. ಜೀವನದಲ್ಲೆಂದೂ ಕುಲಹೀನರ ಸೇವೆ ಮಾಡಬಾರದು. ಒಡನಾಟವೂ ಸಲ್ಲದು. ಹೀಗೆ ಕವಿಯು ನರಕಕ್ಕೆ ಒಯ್ಯುವ ಅಥವಾ ಇಹವನ್ನೇ ನರಕವನ್ನಾಗಿಸುವ ಅಂಶಗಳನ್ನು, ಸನ್ನಿವೇಶಗಳನ್ನು ಹೇಳಿ ಇವುಗಳ ಹತ್ತಿರ ಸುಳಿಯದಂತೆ ಎಚ್ಚರದ ಜೀವನ ನಡೆಸಬೇಕೆನ್ನುತ್ತಾನೆ.

ವಿಷ ಮಂಥನ

ವಿಶುದ್ಧ ಚಕ್ರದ ಸಮತೋಲನವೆಂದರೆ ಸಮುದ್ರ ಮಂಥನದಂತೆ ಒಂದು ಶುದ್ಧತೆಯ ಪ್ರಕ್ರಿಯೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರವನ್ನು ಅರ್ಥ ಮಾಡಿಕೊಳ್ಳಲು ಸಮುದ್ರ ಮಂಥನದ ಕತೆಯನ್ನು ಹೇಳಲಾಗುತ್ತದೆ. ದೇವತೆಗಳು ಮತ್ತು ದಾನವರು ತಮ್ಮ ಶಕ್ತಿಯ ವರ್ಧನೆಗಾಗಿ ಶಕ್ತಿಯ ಪಾಕವನ್ನು ಪಡೆಯಲು ಸಮುದ್ರವನ್ನು ಕಡೆದರು. ಆಗ ಮೊದಲಿಗೆ ಬಂದಿದ್ದು ವಿಷ. ಜಗತ್ತನ್ನೇ ನಾಶ ಮಾಡಬಲ್ಲ ಸಾಮರ್ಥ್ಯದ ವಿಷವಾದ ಹಾಲಾಹಲವನ್ನು ತಡೆಯುವುದು ಸುಲಭವಾಗಿರಲಿಲ್ಲ. ಅದು ದ್ರವ ರೂಪದಲ್ಲಿ ಇದ್ದ ಕಾರಣ ಜಗತ್ ಸಂರಕ್ಷಕನಾದ ಶಿವನು ಅದನ್ನು ಗಟಗಟನೆ ಕುಡಿದೇ ಬಿಟ್ಟನು. ಆದರೆ ಆ ವಿಷ ಹೊಟ್ಟೆಗೆ ಹೋಗದಂತೆ ಪಕ್ಕದಲ್ಲೇ ಇದ್ದ ಸಾಕ್ಷಾತ್ ಲಲಿತಾಂಬಿಕೆಯ ಸ್ವರೂಪಿಣಿ ಪಾರ್ವತೀ ದೇವಿಯು ಗಂಟಲನ್ನು ಬಿಗಿ ಹಿಡಿದು ಅಲ್ಲಿಯೇ ನಿಲ್ಲಿಸಿದಳು. ಆಗ ವಿಶುದ್ಧ ಚಕ್ರವು ತನ್ನ ಕೆಲಸವನ್ನು ಆರಂಭಿಸಿತು. ಅದು ವಿಷವನ್ನು ಶುದ್ಧಗೊಳಿಸತೊಡಗಿತು. ಹೀಗೆ ಶುದ್ಧವಾದ ವಿಷವು ಅಮೃತವಾಯಿತು. ವಿಷವು ಗಂಟಲಲ್ಲೇ ಉಳಿದು ಗರಳಕಂಠ ಎಂದು ಶಿವನ ಹೆಸರಾಯಿತು. ಹಾಗೂ ಅವನ ಕಂಠವು ನೀಲಿಯಾಗಿಯೇ ಉಳಿಯಿತು.

ನಿಮ್ಮ ದೈನಂದಿನ ಜೀವನದಲ್ಲಿ ಸಮಾಜದಿಂದ, ಜನರಿಂದ ಸಾಕಷ್ಟು ಅವಮಾನ, ಬೇಸರ ಉಂಟಾಗುತ್ತದೆ. ಅವರ ಕೋಪ, ನಿಂದನೆ, ಟೀಕೆ, ವಿಮರ್ಶೆ ಇವುಗಳನ್ನೆಲ್ಲಾ ನೀವು ಎದುರಿಸಬೇಕಾಗುತ್ತದೆ. ಇವೆಲ್ಲಾ ವಿಷಗಳೇ ಆಗಿವೆ. ವಿಶುದ್ಧ ಚಕ್ರವು ಜಾಗೃತವಾದರೆ ಇವುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿ ಉಳಿಸಿಕೊಳ್ಳುವುದಿಲ್ಲ. ಕೆಲವೊಮ್ಮೆ ಅವುಗಳನ್ನೆಲ್ಲಾ ಕಿರುನಗೆಯಿಂದ ಎದುರಿಸುತ್ತಾನೆ. ಕೆಲವೊಮ್ಮೆ ಮೌನದಿಂದ, ಸೂಕ್ತವಾದ ಉತ್ತರವನ್ನು ನೀಡುವುದರಿಂದ, ನಿರ್ಲಕ್ಷ್ಯ ಮಾಡುವುದರಿಂದ ಹೀಗೆ ನಾನಾ ವಿಧಗಳಿಂದ ಅಲ್ಲಿಯೇ ಅದನ್ನು ಪರಿಹರಿಸಿಕೊಳ್ಳುತ್ತಾನೆ. ನಕಾರಾತ್ಮಕವಾದ ವಿಷವನ್ನು ತನ್ನ ಮನಸ್ಸಿಗೆ ಇಳಿಸಿಕೊಳ್ಳದೇ ಅಲ್ಲಿಯೇ ಪರಿಹರಿಸಿಕೊಳ್ಳುತ್ತಾನೆ ಮತ್ತು ಕೊಲ್ಲುತ್ತಾನೆ. ಮನಸ್ಸಿಗೆ ಇಳಿಸಿಕೊಳ್ಳದೇ, ಸಮಾಧಾನದ ಮಾತುಗಳನ್ನಾಗಿ ಬದಲಾಯಿಸುತ್ತಾನೆ. ಪ್ರೀತಿಯ ನುಡಿಯನ್ನಾಗಿಸುತ್ತಾನೆ. ಹೀಗೆ ವಿಷವು ಅಮೃತವಾಗಿ ಬದಲಾಗುತ್ತದೆ.

ಯಾರು ಸದಾ ಕೆಣಕುವುದು, ಇತರರಿಗೆ ಸದಾ ಉಪದೇಶವನ್ನು ನೀಡುತ್ತಾ, ಹಾಗೆ ಮಾಡು ಹೀಗೆ ಮಾಡು ಎನ್ನುತ್ತಿರುವುದು, ಸುಳ್ಳು ಹೇಳುವುದು, ಗಾಳಿಸುದ್ದಿ ಹಬ್ಬಿಸುವುದು, ಮಾತಿನಿಂದ ಚುಚ್ಚುವುದು, ವಟವಟ ಎನ್ನುತ್ತಾ ಇರುವುದು ಹೀಗೆಲ್ಲಾ ಮಾಡುತ್ತಿದ್ದರೆ, ಅವರೊಂದಿಗೆ ಮಾತನ್ನು ಮುಂದುವರಿಸಲೇ ಬಾರದು. ಅವರು ನೀವು ಹೇಳಿದ್ದನ್ನು, ರೆಕ್ಕೆಪುಕ್ಕ ಸೇರಿಸಿ ಬಾಲ ಕಟ್ಟಿ ಇನ್ನೊಬ್ಬರಿಗೆ ಹೇಳುತ್ತಾರೆ. ವಿಷವನ್ನು ಇನ್ನಷ್ಟು ಕಕ್ಕುತ್ತಾರೆ. ಹೀಗೆ ತಮ್ಮ ಮಾನಮರ್ಯಾದೆಯನ್ನೇ ಹೊರಹಾಕುತ್ತಾರೆ. ಹೀಗೆ ವಿಶುದ್ಧ ಚಕ್ರವು ಅವರಲ್ಲಿ ಮುಚ್ಚಿಕೊಳ್ಳುತ್ತಾ ಒಂದು ದಿನ ಸಂಪೂರ್ಣವಾಗಿ ಅಡಗಿಹೋಗುತ್ತದೆ. ಅಂತಹವರಿಗೆ ವೇದಿಕೆಯಲ್ಲಿ ಮಾತನಾಡಲು ಆಗುವುದಿಲ್ಲ. ನಾಲ್ಕು ಜನ ಇರುವಾಗ ಧೈರ್ಯದಿಂದ ಎಲ್ಲರ ಮನಮೆಚ್ಚುವ ಮಾತುಗಳನ್ನೂ ಸಹಾ ಆಡಲಾಗುವುದಿಲ್ಲ.

ನೀವು ನಿಮ್ಮೊಳಗೆ ಉಂಟಾಗುವ ವಿಪ್ಲವಗಳನ್ನು ಶಮನ ಮಾಡಿಕೊಂಡು ಮಾತನಾಡುವುದು ಮುಖ್ಯ. ಹಾಗಂತಾ ಖಂಡಿತವಾಗಿ ಸತ್ಯವನ್ನು ಹೇಳದೇ ಉಳಿಯಬಾರದು. ಸತ್ಯವನ್ನು ಕಟುವಾಗಿ ಹೇಳದೇ ಮೃದುವಾಗಿ ನಗುತ್ತಾ ಹೇಳುವುದನ್ನು ಕಲಿಯಿರಿ.

ಉದಾಹರಣೆಗೆ; ಸ್ವಾಮಿ ವಿವೇಕಾನಂದರಲ್ಲಿ ಎಲ್ಲಾ ಚಕ್ರಗಳೂ ಜಾಗೃತವಾಗಿದ್ದವು. ಅದರಲ್ಲೂ ವಿಶುದ್ಧ ಚಕ್ರವಂತೂ ತನ್ನ ಉತ್ತುಂಗತೆಯನ್ನು ತಲುಪಿತ್ತು. ಅವರ ಧ್ವನಿ ಮತ್ತು ಮಾತುಗಳಲ್ಲಿ ಮೂಡುತ್ತಿದ್ದ ಶಬ್ದಗಳ ಜೋಡಣೆ ಅದ್ವಿತೀಯವಾಗಿತ್ತು. ಆಕರ್ಷಣೆಯಂತೂ ಜಗತ್ತನ್ನೇ ಬೆರಗುಗೊಳಿಸಿತ್ತು.

ಲತಾ ಮಂಗೇಶ್ಕರ್‌ರವರ ಕಂಠದಲ್ಲಿ ಸಾಕ್ಷಾತ್ ಸರಸ್ವತಿಯೇ ನೆಲೆಸಿದ್ದಾಳೆ ಎನ್ನುವಷ್ಟರ ಮಟ್ಟಿಗೆ ಆಕೆಯ ಕಂಠ ಜಗತ್ ಪ್ರಸಿದ್ಧಿಯನ್ನು ಪಡೆಯಿತು. ಅದೊಂದು ದೈವಿಕ ಶಕ್ತಿಯಾಗಿ ಬದಲಾಗಿತ್ತು. ಅದು ನೈಸರ್ಗಿಕವಾಗಿ ಸಿಕ್ಕ ಬಳುವಳಿಯಾಗಿತ್ತು. ಆಕೆ ಸಂಗೀತವನ್ನೇ ತಪಸ್ಸಾಗಿ ಮಾಡಿಕೊಂಡು ತಮ್ಮ ಕಂಠವನ್ನು ತಿದ್ದಿ ತೀಡಿ ಮಾಡಿದ್ದರು. ಆ ತಪಸ್ಸಿನ ಫಲವೇ ಕಂಠ ಶುದ್ಧಿ ಮತ್ತು ಸರಸ್ವತಿಯ ನೆಲೆಯಾಗಿ ಮಾರ್ಪಾಟಾಗಿದ್ದು. ವಿಶುದ್ಧ ಚಕ್ರವು ಅವರಲ್ಲಿ ಎಂದಿಗೂ ಅಸಮತೋಲನವಾಗಲೇ ಇಲ್ಲ.

ಕರ್ನಾಟಕ ಸಂಗೀತ ಶಿರೋಮಣಿ ಎಮ್. ಎಸ್. ಸುಬ್ಬುಲಕ್ಷ್ಮಿಯವರ ಸುಪ್ರಭಾತವನ್ನು ಕೇಳದವರೇ ಇಲ್ಲ. ಇಂದಿನ ಪೀಳಿಗೆ ಸಹಾ ಅದೇ ಸುಪ್ರಭಾತವನ್ನೇ ಕೇಳುತ್ತಾ ಬೆಳಕಾಗುವುದನ್ನು ಕಾಣುತ್ತಿದೆ. ಅದನ್ನು ಕೇಳುತ್ತಾ ಬೆಳಗಿನ ಮನಸ್ಸಿನ ಶಾಂತಿಯನ್ನು, ಆಧ್ಯಾತ್ಮಿಕವಾದ ಅನುಭೂತಿಯನ್ನು ನೀವು ಪಡೆಯುತ್ತೀರಿ. ಇದಕ್ಕೆ ಕಾರಣ ಅವರ ಕಂಠದ ಮಹಿಮೆ; ವಿಶುದ್ಧ ಚಕ್ರದ ಪ್ರಭಾವ.

ಭಾರತಕ್ಕೆ ಸಾಹಿತ್ಯದ ನೊಬೆಲ್ ಪ್ರಶಸ್ತಿಯನ್ನು ತಂದು ಕೊಟ್ಟ ಮಹಾ ಕವಿ ರವೀಂದ್ರನಾಥ್ ಟ್ಯಾಗೋರ್‌ರವರು ಸೃಜನಶೀಲತೆಯ ಪ್ರತೀಕ. ಅವರ ಸಂಗೀತವಂತೂ ಇಂದಿಗೂ ಸಹಾ ವಿಭಿನ್ನ ಪ್ರಕಾರವಾಗಿ ಗುರುತಿಸಲಾಗಿದೆ. ವಿಶುದ್ಧ ಚಕ್ರದ ಉತ್ತುಂಗದ ಕಾರಣಕ್ಕೆ ಇವರು ಜಗತ್ಪ್ರಸಿದ್ಧರಾದರು.

ಸತ್ಯದ ಶಕ್ತಿಯನ್ನು ದೇಶವಿದೇಶಗಳಲ್ಲಿ ಪ್ರತಿಪಾದಿಸುತ್ತಾ ಪ್ರಖ್ಯಾತರಾದವರು ಗಾಂಧಿಯವರು. ತಮ್ಮ ಮಾತು ಮತ್ತು ಬರೆಹಗಳ ಮೂಲಕ ಕೋಟ್ಯಾಂತರ ಜನರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರೆತಂದವರು. ಅಂದು ಉಪ್ಪಿನ ಸತ್ಯಾಗ್ರಹಕ್ಕಾಗಿ ಅರಬ್ಬಿ ಸಮುದ್ರ ತೀರದಲ್ಲಿ ಸೇರಿದ ಜನರನ್ನು ನೋಡಿ ಬ್ರಿಟಿಶ್ ಲೇಖಕಿ ಬರ್ಕ್ ವೈಟ್‌ರವರು ಫೋಟೋ ತೆಗೆಯುತ್ತಾ ಉದ್ಗರಿಸುತ್ತಾರೆ "ಅತ್ತ ಅರಬ್ಬಿ ಸಮುದ್ರ ವಿಶಾಲವಾಗಿ ದಿಗಂತದ ಅಂಚನ್ನು ಮುಟ್ಟಿದರೆ, ಇತ್ತ ಜನ ಸಮುದ್ರ ಅರಬ್ಬಿ ಸಮುದ್ರಕ್ಕಿಂತಲೂ ಹೆಚ್ಚು ಎನ್ನುವಷ್ಟು ವಿಶಾಲವಾಗಿ ಮತ್ತೊಂದು ತುದಿ ಕಾಣದಷ್ಟಿತ್ತು. ಅಬ್ಬಾ ಅವರ ಶಕ್ತಿಯೇ, ಬ್ರಿಟೀಶರೇಕೇ ಇಡೀ ಪ್ರಪಂಚವೇ ಅವರತ್ತ ತಿರುಗಿ ನೋಡುವಂತೆ ಮಾಡಿದ ಸನ್ನಿವೇಶವದು. ಅಂತಹಾ ಶಕ್ತಿಯ ಸಂಚಲನಕ್ಕೆ ಕಾರಣ ಅವರಲ್ಲಿ ಜಾಗೃತವಾದ ವಿಶುದ್ಧ ಚಕ್ರದ ಪವಾಡ. ಪರಿಶುದ್ಧ ವಿಶುದ್ಧ ಚಕ್ರವು ಸತ್ಯದ ಪ್ರತಿಪಾದನೆ ಮತ್ತು ಸತ್ಯಕ್ಕಾಗಿ ಉಪವಾಸ ಸತ್ಯಾಗ್ರಹವನ್ನು ಮಾಡುವುದಕ್ಕೆ ಪ್ರೇರೇಪಣೆಯನ್ನು ನೀಡುತ್ತವೆ.

ಇಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅತ್ಯಂತ ಹೆಚ್ಚು ಅವಧಿಯವರೆಗೆ ಭಾರತವನ್ನು ಆಳಿದ ಪ್ರಧಾನಿಯೆಂದು ದಾಖಲೆ ಬರೆದರು. ಕಾರಣ ತಮ್ಮ ಅದ್ಭುತವಾದ ಭಾಷಣ ಕಲೆ, ಸಂಮೋಹನ ಶೈಲಿಯಿಂದ ಜಗತ್ತನ್ನೇ ಆಕರ್ಷಿಸುತ್ತಿದ್ದಾರೆ. ಜಗತ್ತಿನ ನಾಯಕರಾಗಿದ್ದಾರೆ. ವಿಶುದ್ಧ ಚಕ್ರವು ಪ್ರಬಲವಾಗಿದ್ದರೆ ಮಾತ್ರ ಕೋಟ್ಯಾಂತರ ಜನರನ್ನು ತಮ್ಮ ವರ್ತನೆಯಿಂದ, ಸಂವಹನದಿಂದ, ಮಾತಿನಿಂದ ಸೆಳೆಯಲು ಸಾಧ್ಯ.

ಆಂತರಿಕ ಮಂಥನ

ವಿಶುದ್ಧ ಚಕ್ರವು ನಿಮ್ಮನ್ನು ಮೊದಲಿಗೆ ಒಳ್ಳೆಯ ಕೇಳುಗನನ್ನಾಗಿ ಮಾಡುತ್ತದೆ. ಇತರರ ಮಾತನ್ನು ಅವರದೇ ಅರ್ಥದಲ್ಲಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಕಲಿಸುತ್ತದೆ. ಅವರ ಆಲೋಚನೆಗಳನ್ನು ನಿಮಗೆ ಸರಿಯಾದ ರೀತಿಯಲ್ಲಿ ಸಂವಹನ ಆಗುವಂತೆ ಮಾಡುತ್ತದೆ. ನೀವು ಅವರನ್ನು ಸಹಾನುಭೂತಿಯಿಂದ, ತಾಳ್ಮೆಯಿಂದ ಕೇಳಿಸಿಕೊಳ್ಳುವುದು ಅಭ್ಯಾಸವಾಗುತ್ತದೆ. ಹೀಗೆ ನಿಮ್ಮ ಮತ್ತು ಜನರ ನಡುವಿನ ಸಂಬಂಧ ಗಟ್ಟಿಯಾಗುತ್ತಾ ಹೋಗುತ್ತದೆ. ನಿಮ್ಮ ಕುರಿತು ಜನರು ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ನೀವು ನಿಧಾನವಾಗಿ ಜನಪ್ರಿಯರಾಗುತ್ತಾ ಹೋಗುತ್ತೀರಿ.

ನಿಮ್ಮೊಳಗಿನ ಆಂತರಿಕ ಸತ್ಯ ನಿಮಗೆ ಸುಳ್ಳು ಹೇಳಲು ಬಿಡುವುದಿಲ್ಲ. ಇನ್ನೊಬ್ಬರನ್ನು ಮೆಚ್ಚಿಸಲು ನಿಮ್ಮ ಬದುಕು ಇಲ್ಲ ಎನ್ನುವುದು ನಿಮಗೆ ತಾನಾಗಿಯೇ ಅರ್ಥವಾಗುತ್ತದೆ. ನಿಮ್ಮ ನಿಷ್ಠೆಯು ನಿಮಗೆ ಮುಖವಾಡ ಹಾಕಿಕೊಳ್ಳಲು ಬಿಡುವುದಿಲ್ಲ. ನೀವು ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತೀರಿ ಮತ್ತು ಇತರರನ್ನು ಕ್ಷಮಿಸುವ ಉದಾರ ಗುಣವನ್ನು ಹೊಂದುತ್ತೀರಿ. ನೀವು ಮುಕ್ತರಾಗುತ್ತಾ ಹೋದಂತೆ ವಿಶಾಲತೆ ನಿಮ್ಮನ್ನು ಆಕಾಶದೆತ್ತರಕ್ಕೆ ಬೆಳೆಸುತ್ತದೆ.

ಮನಸ್ಸಿನಲ್ಲಿ ಯಾವುದೂ ಸಹಾ ಉಳಿಯುವುದಿಲ್ಲ. ಅದು ಕೋಪ, ದುಃಖ, ನೋವು, ಹೀಗೆ ಎಲ್ಲವೂ ಹೊರಹೋಗಿ ಬಿಡುತ್ತದೆ. ಇದರಿಂದ ಮನಸ್ಸು ಹಗುರವಾಗುತ್ತದೆ ಹಾಗೂ ನೀವು ಖಿನ್ನತೆಯಿಂದ ದೂರವೇ ಇರುತ್ತೀರಿ. ನಿಮ್ಮ ಬಗ್ಗೆ ನಿಮಗಿರುವ ಕೀಳರಿಮೆ ಶೂನ್ಯವಾಗುತ್ತದೆ. ಯಾರು ಏನನ್ನುತ್ತಾರೋ ಅನ್ನುವ ಆತಂಕ ಲವಲೇಶವೂ ಉಳಿಯುವುದಿಲ್ಲ. ನೀವು ಒಬ್ಬ ಧೀಮಂತ ವ್ಯಕ್ತಿಯಾಗುತ್ತೀರಿ.

ದೈಹಿಕ ಮಂಥನ

ವಿಶುದ್ಧ ಚಕ್ರದ ಸಮತೋಲನವೆಂದರೆ ಸಮುದ್ರ ಮಂಥನದಂತೇ ಒಂದು ಶುದ್ಧತೆಯ ಪ್ರಕ್ರಿಯೆ. ಗಂಟಲಿಗೆ ಸಂಬಂಧಿಸಿದ ನೋವು, ರೋಗಗಳೆಲ್ಲವೂ ನಿವಾರಣೆಯಾಗುತ್ತದೆ. ಧ್ವನಿ ಎಂದಿಗೂ ಕುಂದುವುದೇ ಇಲ್ಲ. ನಿಮಗೆ ಒಂದೊಮ್ಮೆ ಕಫವಾದರೂ ಯಾವುದೇ ತೊಂದರೆ ಕೊಡದೇ ತಕ್ಷಣದಲ್ಲಿ ನಿವಾರಣೆಯಾಗುತ್ತದೆ. ಸೋಂಕು ಹೆಚ್ಚು ಕಾಲ ಉಳಿಯುವುದಿಲ್ಲ. ಕಿವಿ ಸಹಾ ಸದಾ ಚುರುಕಾಗಿ ಇರುತ್ತದೆ. ನೋವು, ಸೋಂಕು, ಕೇಳದಿರುವುದು ಹೀಗೆ ಯಾವುದೇ ತೊಂದರೆಯಾಗುವುದಿಲ್ಲ. ದೇಹದ ವಿಷದ ಅಂಶಗಳನ್ನು ಹೊರಹಾಕುವ ಕಾರಣ ದೇಹವೂ ಸಹಾ ಯಾವುದೇ ನಂಜಿಗೆ ಒಳಗಾಗದೇ ಸುಸ್ಥಿರವಾಗಿ ಇರಲು ಸಹಕರಿಸುತ್ತದೆ. ಗಂಟಲಿನ ಮುಖ್ಯ ಹಾರ್ಮೋನ್ ಥೈರಾಯ್ಡ್. ಈ ಗ್ರಂಥಿಯು ಒಂದು ಹಾರ್ಮೋನನ್ನು ಸ್ರವಿಸುತ್ತದೆ. ಕೇವಲ ಮೂರ್‍ನಾಲ್ಕು ಮಿಲಿಗ್ರಾಂಗಳಿಂದ ಮೈಕ್ರೋಗ್ರಾಂ ಮತ್ತು ನ್ಯಾನೋಗ್ರಾಂಗಳಷ್ಟು ಥೈರಾಕ್ಸಿನ್, ಟ್ರಯೋಡೋಥೈರೋಮಿನ್ ಮತ್ತು ಕ್ಯಾಲ್ಸಿಟೋನಿನ್ ಮಾತ್ರ ಸ್ರವಿಸುವುದು. ಇವುಗಳು ಕಮ್ಮಿಯಾದರೂ ರೋಗ ಬರುತ್ತದೆ. ಹೆಚ್ಚಾದರೂ ರೋಗ ಬರುತ್ತದೆ. ದೇಹದ ಚಯಾಪಚಯ ಕ್ರಿಯೆಗಳ ನಿಯಂತ್ರಣ, ದೇಹದ ಉಷ್ಣತೆ ಮತ್ತು ದೈಹಿಕ ಮತ್ತು ಮಾನಸಿಕ ಬೆಳವಣಿಗೆಗಳನ್ನು ಇದು ನಿಯಂತ್ರಿಸುತ್ತದೆ.

ಶಿಕ್ಷಣದಲ್ಲಿ ಭಾರತೀಯತೆ-ಮೌಲ್ಯಗಳು

ಹಿಂದೆ ಭಾರತ ಜಗತ್ತಿಗೆ ಜ್ಞಾನ-ವಿಜ್ಞಾನಗಳ ಕೊಡುಗೆ ನೀಡಿದೆ. ಮುಂದೆಯೂ ಅಂತಹ ಕೊಡುಗೆ ನೀಡಲು ಯುವಪೀಳಿಗೆಯನ್ನು ಸನ್ನದ್ಧಗೊಳಿಸುವ ಅಗತ್ಯವಿದೆ.

ಒಳನೋಟ
• ಹೆ.ಬಾ. ಮಲ್ಯ



ಇತ್ತೀಚೆಗೆ 'ಜಿರಳೆ ಪಾರ್ಟಿ' (Cockroach Janatha Party -CJP) ಹೆಸರಿನಲ್ಲಿ ನಡೆದ ಕಪಟ ನಾಟಕದ ಬಗ್ಗೆ ಈಗಾಗಲೇ ಜನರಿಗೆ ತಿಳಿದಿದೆ. ಈ ಪ್ರತಿಭಟನೆಯ ಹಿಂದಿರುವ ರಾಜಕಾರಣಿಗಳು, ವಿದೇಶಿ ಭಾರತ ವಿರೋಧಿ ಶಕ್ತಿಗಳ ಷಡ್ಯಂತ್ರವೂ ಬಯಲಾಗಿದೆ. ದಿಲ್ಲಿಯ ಜಂತರ್ ಮಂತರ್‌ನಲ್ಲಿ ಲಕ್ಷಾಂತರ ಯುವಕರ ಬೃಹತ್ ಆಂದೋಲನ ನಡೆಯಲಿದೆ ಎಂದು ಅವರ ನಾಯಕರು ಕೊಚ್ಚಿಕೊಂಡಿದ್ದರು. ಕೊನೆಗೆ ಈ ಪ್ರತಿಭಟನೆ ಹೇಗೆ ಠುಸ್ ಆಯಿತೆಂಬುದನ್ನೂ ದೇಶದ ಜನರು ನೋಡಿದ್ದಾರೆ. ದೇಶಾದ್ಯಂತ ಯುವಕರನ್ನು ಪ್ರಚೋದಿಸಿ, ಅಶಾಂತಿ ಸೃಷ್ಟಿಸಿ, ಮೋದಿ ಸರಕಾರವನ್ನು ಉರುಳಿಸುವ ಸಂಚು ಇದಾಗಿತ್ತು. ಬರೇ ಗಾಳಿಯಿಂದ ಉಬ್ಬಿದ ಈ ಬಲೂನಿಗೆ ಚಿಕ್ಕ ಸೂಜಿಯಿಂದ ಚುಚ್ಚಿ ಅದನ್ನು ಮೋದಿ-ಶಾ ಅವರು ಹೇಗೆ ನಿಷ್ಕ್ರಿಯಗೊಳಿಸಿದರೆಂಬುದನ್ನೂ ಜನ ನೋಡಿದ್ದಾರೆ. ಪೊಲೀಸು, ಬಂಧನ ಯಾವುದೂ ನಡೆಯಲಿಲ್ಲ. ವಿಷಯ ಅದಲ್ಲ, ಭಾರತದ ಹಿಂದು ಯುವಕರೇ ದಾರಿ ತಪ್ಪಲು ಕಾರಣವೇನು ಎಂಬುದರ ಬಗ್ಗೆ ಆಳಕ್ಕೆ ಹೋಗಿ ಚಿಂತಿಸುವ ಅಗತ್ಯವಿದೆ.

ಸ್ವಾತಂತ್ರ್ಯ ಬಂದು ಆರೇಳು ದಶಕಗಳವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ ಶಿಕ್ಷಣ ಕ್ಷೇತ್ರದ ಬಗ್ಗೆ ಗಮನವನ್ನೇ ಕೊಡಲಿಲ್ಲ. ಯುವಕರಲ್ಲಿ ದೇಶಭಕ್ತಿ, ಸಾಮಾಜಿಕ ಪ್ರಜ್ಞೆಗಳನ್ನು ಜಾಗೃತಗೊಳಿಸುವ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಿಲ್ಲ. ಸರ್ಕಾರಿ ಶಾಲೆಗಳ ದುರವಸ್ಥೆ ಇದಕ್ಕೆ ಸಾಕ್ಷಿ. ಬಡವರು ಬಡವರಾಗಿಯೇ ಇರಬೇಕು, ಅಶಿಕ್ಷಿತರಾಗಿಯೇ ಇರಬೇಕು, ಅದರಿಂದ ಅವರು ಸದಾ ತಮ್ಮ ಪಕ್ಷಕ್ಕೆ ಮತ ನೀಡಿ ತಾವು ಸದಾ ಅಧಿಕಾರದಲ್ಲಿರುವಂತಾಗಬೇಕು, ತಮ್ಮ ವಂಶವೇ ಸದಾ ಕಾಲಕ್ಕೂ ಆಡಳಿತದಲ್ಲಿರಬೇಕು ಎಂಬುದು ಇದರ ಹಿಂದಿನ ಹುನ್ನಾರ. ಹೀಗೆ ಆರೇಳು ದಶಕಗಳವರೆಗೆ ರಾಷ್ಟ್ರ ಭಾವನೆ ಜಾಗೃತಗೊಳಿಸದ ಕಳಪೆ ಶಿಕ್ಷಣದ ಪರಿಣಾಮವಾಗಿ ಯುವಕರು ದಾರಿತಪ್ಪಿ ಸಮಾಜಕಂಟಕರಾಗುವಂತಾಯಿತು. ಆದರೆ ತಮ್ಮ ಮಕ್ಕಳಿಗೆ, ಸರ್ಕಾರಿ ಅಧಿಕಾರಿಗಳು ಹಾಗೂ ಶ್ರೀಮಂತರ ಮಕ್ಕಳಿಗಾಗಿ ಖಾಸಗಿ ಶಾಲೆ-ಕಾಲೇಜುಗಳಿಗೆ ಉತ್ತೇಜನ ನೀಡಲಾಯಿತು. ಕೆಲವು ಯುವಕರು ದಾರಿ ತಪ್ಪಿದರೂ ಅವರಲ್ಲಿ ಸ್ವತಂತ್ರವಾಗಿ ಯೋಚಿಸುವ ಶಕ್ತಿಯೂ ಬೆಳೆಯಲಾರಂಭಿಸಿತು. ದೇಶದ ಎಲ್ಲ ಯುವಕರೂ ದಾರಿತಪ್ಪಿದ್ದಾರೆ ಎನ್ನಲಾಗದು. ಆದರೆ ದೇಶದ ಯುವಕ-ಯುವತಿಯರಲ್ಲಿ ಜಾಗೃತಿ ಮೂಡಿರುವುದು ಕೇವಲ ಖಾಸಗಿ- ವ್ಯಾಪಾರೀ ಶಿಕ್ಷಣ ಸಂಸ್ಥೆಗಳಿಂದಲ್ಲ, ಸಂಘ ಪರಿವಾರ, ವಿದ್ಯಾಭಾರತಿ, ರಾಮಕೃಷ್ಣಾಶ್ರಮ ಹಾಗೂ ಇನ್ನಿತರ ರಾಷ್ಟ್ರವಾದೀ ಸಂಘಟನೆಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆ, ಶಾಲೆಗಳಲ್ಲಿ ನೀಡಲಾಗುತ್ತಿರುವ ಸಂಸ್ಕಾರಯುಕ್ತ, ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯಿಂದ. ಸ್ವಾತಂತ್ರ್ಯಾನಂತರದ ಎಂಭತ್ತು ವರ್ಷಗಳಲ್ಲಿ ಎರಡು ಪೀಳಿಗೆಗಳೇ ಕಳೆದು ಮೂರನೇ ಪೀಳಿಗೆಯ ಯುವಕರು ತಯಾರಾಗಿದ್ದಾರೆ. ಆದರೆ ಗುರುಕುಲ ಶಿಕ್ಷಣದ ಬದಲಾಗಿ ಮೆಕಾಲೆ ಶಿಕ್ಷಣವನ್ನೇ ಮುಂದುವರಿಸಿದ್ದರಿಂದ ಹಿಂದಿನ ಎರಡು ಪೀಳಿಗೆಯ ಜನ ಹಿಂದು ಧರ್ಮ, ಸಂಸ್ಕೃತಿ, ಇತಿಹಾಸ, ಮೌಲ್ಯಗಳನ್ನೇ ಮರೆಯುವಂತಾಯಿತು. ಕೇವಲ ಹಣ ಗಳಿಕೆಯೇ ಮುಖ್ಯವಾಯಿತು. ಮೆಕಾಲೆ ಊಹಿಸಿದಂತೆ ಇವರು ಕರಿತೊಗಲಿನ ಬ್ರಿಟಿಷರಾಗಿ ರೂಪುಗೊಂಡರು. ಆದರೆ ಸಂಘ ಪರಿವಾರ ಹಾಗೂ ಇನ್ನಿತರ ರಾಷ್ಟ್ರೀಯ ಸಂಘಟನೆಗಳ ಪ್ರಯತ್ನದ ಫಲವಾಗಿ ಇಂದಿನ ಮೂರನೇ ಪೀಳಿಗೆಯಲ್ಲಿ ತಮ್ಮ ಅಸ್ಮಿತೆಯ ಜಾಗೃತಿಯಾಗಲಾರಂಭಿಸಿರುವುದು ಸಮಾಧಾನಕರ ಸಂಗತಿ. ಇಂದು ಹಿಂದು ಪರ ಸರಕಾರ ಕೇಂದ್ರದಲ್ಲಿ ಹಾಗೂ 21 ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದೆ. ಮೋದಿ ಸರಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಶಿಕ್ಷಣದಲ್ಲಿ



ಭಾರತೀಯತೆಯನ್ನು ತುಂಬುವ ಪ್ರಯತ್ನ ನಡೆಯುತ್ತಿದೆ. ಜಗತ್ತಿನಲ್ಲಿ ಇಂದು ಅತಿ ಹೆಚ್ಚು ಯುವಕರಿರುವ ದೇಶ ಭಾರತ ಎಂದು ಅಂಕಿ ಅಂಶಗಳು ಹೇಳುತ್ತಿವೆ. ಇಂದಿನ ಭಾರತ ಯುವ ಪೀಳಿಗೆಯ ಭಾರತ ಎನ್ನಬಹುದು. ಇವರೇ ನಾಳಿನ ಭಾರತವನ್ನು ಮುನ್ನಡೆಸುವವರು.

ಮಕ್ಕಳನ್ನು ತಿದ್ದುವುದು ಕೇವಲ ಸರಕಾರ, ಶಾಲೆಗಳು ಹಾಗೂ ಶಿಕ್ಷಕರ ಹೊಣೆಗಾರಿಕೆ ಎಂಬ ಭಾವನೆ ಸರಿಯಲ್ಲ. ಹೆತ್ತವರ ಮೇಲೆಯೂ ಮಕ್ಕಳಿಗೆ ಯೋಗ್ಯ ಸಂಸ್ಕಾರಗಳನ್ನು ನೀಡಿ ಬೆಳೆಸುವ ಜವಾಬ್ದಾರಿ ಇದೆ ಎಂಬುದನ್ನು ಮರೆಯಬಾರದು. 3-4 ವರ್ಷದ ಮಕ್ಕಳು ತಾಯಿಯ ಮಡಿಲಲ್ಲೇ ಬೆಳೆಯುತ್ತವೆ. ''ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮಗುವಿನ ಮೊದಲ ಗುರು'' ಎಂಬ ಮಾತೊಂದಿದೆ. ಹಾಗೆಯೇ ವ್ಯಾವಹಾರಿಕ ಸಂಗತಿಗಳಲ್ಲಿ ತಂದೆಯ ಜವಾಬ್ದಾರಿಯೂ ಇದೆ. ಮಕ್ಕಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಒಂದು ಸುಭಾಷಿತ ಇದೆ.

ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್।
ಶೋಡಷವರ್ಷಪ್ರಾಪ್ತೇ ಪುತ್ರಂ ಮಿತ್ರವದಾಚಾರೇತ್॥

ಮಕ್ಕಳನ್ನು 5 ವರ್ಷ ಪ್ರಾಯವಾಗುವವರೆಗೆ ಮುದ್ದು ಮಾಡಬೇಕು. ಆದರೆ ಅತಿ ಮುದ್ದು ಸಲ್ಲದು. ಹೊಡೆಯಬಾರದು. ಪ್ರೀತಿಯಿಂದ ತುಂಟತನ ಮಾಡಬಾರದೆಂದು ತಾಯಿ ಬುದ್ಧಿ ಹೇಳಬೇಕು. ನಂತರವೂ ಅತಿ ತುಂಟತನ ನಡೆಸಿದರೆ ಸ್ವಲ್ಪ ಚುರುಕು ಮುಟ್ಟಿಸಬೇಕು. ಸಿಟ್ಟಿನಿಂದ ಸಿಕ್ಕಾಪಟ್ಟೆ ಹೊಡೆಯುವುದು ಸರಿಯಲ್ಲ. ಇದರಿಂದ ಮಕ್ಕಳು ಉದ್ದಂಡ ಸ್ವಭಾವದವರಾಗುವುದೇ ಹೆಚ್ಚು ಅಥವಾ ಅವರ ಸ್ವಂತದ ಪ್ರತಿಭೆಗಳು ಬೆಳೆಯದಂತಾಗುತ್ತದೆ.

ಮಕ್ಕಳು ತಂದೆ-ತಾಯಂದಿರು ಹೇಳಿದಂತೆ ನಡೆದುಕೊಳ್ಳುವುದಿಲ್ಲ. ಪೋಷಕರ ನಡೆಯನ್ನು ಅನುಕರಿಸುತ್ತವೆ. ಪೋಷಕರು ಹಗಲಿಡೀ ಮೊಬೈಲ್, ವಾಟ್ಸಪ್, ಟಿ.ವಿ.ಗಳಲ್ಲೇ ಮಗ್ನರಾಗಿದ್ದರೆ ಮಕ್ಕಳೂ ಅದನ್ನೇ ಮಾಡುತ್ತವೆ. ಮೊಬೈಲ್ ಕೊಡದಿದ್ದರೆ ಹಟ ಮಾಡುತ್ತವೆ. ಕಿರಿಕಿರಿ ತಪ್ಪಿಸಿಕೊಳ್ಳಲು ಚಿಕ್ಕ ಶಿಶುಗಳ ಕೈಗೆ ತಾಯಿ ಮೊಬೈಲ್ ಕೊಡುವುದರಿಂದ ಮಕ್ಕಳ ಪ್ರತಿಭೆಗಳು, ಮಿದುಳಿನ ಶಕ್ತಿ ಕುಂದುವುದಲ್ಲದೆ, ಚಿಕ್ಕ ಶಿಶುಗಳಿಗೆ ಕಣ್ಣಿನ ಸಮಸ್ಯೆಯಾಗಿ ಕನ್ನಡಕ ಬರುತ್ತದೆ. ಮಕ್ಕಳಿಗೆ ಮೊಬೈಲೇ ಕೊಡಬೇಕೆಂದೇನಿಲ್ಲ, ಬೇರೆ ಆಕರ್ಷಕ ಆಟದ ವಸ್ತುಗಳನ್ನು ಕೊಡುವುದರಿಂದ ಮಗು ಬೊಂಬೆಗಳ ಆಟದಲ್ಲಿ ಮಗ್ನವಾಗುತ್ತದೆ. ಜೊತೆಗೆ ಮಕ್ಕಳ ಮುಂದೆ ತಾವೇ ಸ್ವತಃ ಮೊಬೈಲ್‌ನಲ್ಲಿ ತಲ್ಲೀನರಾಗಿರಕೂಡದು. ಆಗ ಮಕ್ಕಳಿಗೆ ಏನಾದರೂ ಅಪಾಯ ಸಂಭವಿಸಿದರೂ ತಾಯಿಯ ಅರಿವಿಗೇ ಬರುವುದಿಲ್ಲ.

ಇಂದು ವಸ್ತುಸ್ಥಿತಿ ಹೇಗಿದೆಯೆಂದರೆ ತಂದೆತಾಯಿಗಳು ಮೆಕಾಲೆ ಶಿಕ್ಷಣ ಪಡೆದು ಬೆಳೆದವರಾದ್ದರಿಂದ ಅವರಿಗೆ ಹಿಂದು ಧರ್ಮ, ಸಂಸ್ಕೃತಿ, ಪರಂಪರೆ, ಆಚರಣೆಗಳ ಬಗ್ಗೆ ಯಾವುದೇ ಜ್ಞಾನವಿಲ್ಲ. ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆಯನ್ನು ಓದಿರುವುದಿಲ್ಲ. ಮಕ್ಕಳಿಗೆ ಪುರಾಣ ಕತೆಗಳನ್ನು ಹೇಳಿ ಅವರಲ್ಲಿ ಉತ್ತಮ ಗುಣಗಳನ್ನು ಬೆಳೆಸುವಲ್ಲಿ ತಂದೆ ತಾಯಂದಿರು ಸೋಲುತ್ತಾರೆ. ಮಕ್ಕಳು ಹೇಗೆ ಹೇಗೋ ಬೆಳೆದು ಸಮಾಜ ಕಂಟಕರಾಗುತ್ತಾರೆ. ಮುಸ್ಲಿಂ ಮಕ್ಕಳು ಮದ್ರಸಾ ಶಿಕ್ಷಣ ಪಡೆಯುವುದರಿಂದ ಅನೇಕರು ಭಯೋತ್ಪಾದಕರು, ಮತಾಂಧರೂ ಆಗಿ ರೂಪುಗೊಳ್ಳುತ್ತಾರೆ. ಕಾಫಿರರೆಂದು ಹಿಂದುಗಳ ಮೇಲೆ ಹಲ್ಲೆ, ಅತ್ಯಾಚಾರ, ಕಲ್ಲೆಸೆಯುವುದು, ಮೂರ್ತಿ ಭಂಜನೆ, ಕೊಳ್ಳಿ ಇಡುವುದು ತಮ್ಮ ಮತದಂತೆ ಸರಿ ಎಂದು ಭಾವಿಸುತ್ತಾರೆ. ಅದಕ್ಕೇ ಹೇಳುವುದು ಏಕರೂಪ ನಾಗರಿಕ ಸಂಹಿತೆ ಹಾಗೂ ಏಕರೂಪದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು.

ನರೇಂದ್ರ ಮೋದಿಯವರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದಾರೆ. ಇಂಗ್ಲಿಷ್ ಭಾಷೆಯ ಹಾಗೂ ಕಾನ್ವೆಂಟ್ ಶಿಕ್ಷಣದ ಮೋಹವನ್ನು ಬದಿಗೆ ಸರಿಸಿ ರಾಷ್ಟ್ರೀಯ ಸಂಸ್ಕಾರದ ಶಿಕ್ಷಣದತ್ತ ಗಮನಹರಿಸಬೇಕು. ಮಾತೃಭಾಷೆಯಲ್ಲೇ ಶಿಕ್ಷಣ ನೀಡುವ ಅಗತ್ಯವನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಸ್ಪಷ್ಟಪಡಿಸಿವೆ. ಇಂದು ಕ್ರಮೇಣ ಮಕ್ಕಳ ಪಾಲಕರಲ್ಲೂ ಇಂಥ ಸಂಸ್ಕಾರಯುಕ್ತ ಶಿಕ್ಷಣದ ಅವಶ್ಯಕತೆಯ ಬಗ್ಗೆ ಅರಿವು ಮೂಡುತ್ತಿರುವುದು ಒಂದು ಶುಭಲಕ್ಷಣ. ಸಂಘ ಪರಿವಾರ, ರಾಷ್ಟ್ರೋತ್ಥಾನ ಪರಿಷತ್ತು, ವಿದ್ಯಾಭಾರತಿಯ ಶಿಶುಮಂದಿರಗಳು, ಪ್ರಾಥಮಿಕ ಹಾಗೂ ಹೈಸ್ಕೂಲುಗಳಿಗೆ ತಮ್ಮ ಮಕ್ಕಳನ್ನು ಕಳಿಸುವ ಪಾಲಕರ ಸಂಖ್ಯೆ ಹೆಚ್ಚಾಗುತ್ತಿರುವುದೇ ಇದಕ್ಕೆ ಸಾಕ್ಷಿ. ಭಾರತ ಸದ್ಯದಲ್ಲೇ ವಿಶ್ವಗುರುವಾಗುವುದು ಖಚಿತ. ಹಿಂದೂ ಧರ್ಮದಲ್ಲಿ ಅಂಥ ಅವಿನಾಶಿಯಾದ ಅಂತಃಸತ್ವ ಅಡಗಿದೆ. ಸ್ವಾಮಿ ವಿವೇಕಾನಂದರೂ ಇದನ್ನೇ ಹೇಳಿದ್ದರು. ಭಾರತ ಮೇಲೇಳುವುದು. ಹಿಂದೆಯೂ ಭಾರತ ಜಗತ್ತಿಗೆ ಜ್ಞಾನ-ವಿಜ್ಞಾನಗಳ ಕೊಡುಗೆ ನೀಡಿದೆ. ಮುಂದೆಯೂ ಆ ಜ್ಞಾನ-ವಿಜ್ಞಾನದ ಕೊಡುಗೆ ನೀಡಲು ಭಾರತವನ್ನು, ಅದರ ಯುವಪೀಳಿಗೆಯನ್ನು ಸನ್ನದ್ಧಗೊಳಿಸುವ ಅಗತ್ಯವಿದೆ.

'ನವ ಭಾರತ'ದ ಹರಿಕಾರ ನರೇಂದ್ರ ಮೋದಿ

▸ ಡೇವಿಡ್ ಫ್ರಾಲಿ

ನರೇಂದ್ರ ಮೋದಿಯವರು ಈಗ ಭಾರತದ ಅತಿ ದೀರ್ಘಾವಧಿ ಸೇವೆ ಸಲ್ಲಿಸುತ್ತಿರುವ ಚುನಾಯಿತ ಪ್ರಧಾನಿಯಾಗಿದ್ದಾರೆ. ಈ ಸಾಧನೆಯ ಜತೆಗೇ ಭಾರತವನ್ನು ಒಂದು ಆರ್ಥಿಕ ಶಕ್ತಿಯಾಗಿಸಿದ ಮತ್ತು ಭಾರತಕ್ಕೆ ಜಾಗತಿಕ ಮನ್ನಣೆ ದೊರಕಿಸಿದ ಕೀರ್ತಿಯೂ ಅವರದ್ದಾಗಿದೆ. ಭಾರತದ ಮೂಲ ಪ್ರೇರಣೆಯಾದ ಧರ್ಮದ ಮಾರ್ಗದರ್ಶನದೊಂದಿಗೆ ಭವಿಷ್ಯದ ಭಾರತವನ್ನು ನಿರ್ಮಿಸುವಂತಹ ಬದ್ಧತೆಯನ್ನೂ ಮೋದಿ ಪ್ರದರ್ಶಿಸುತ್ತಿದ್ದಾರೆ.

ಭಾರತದ ಪುನರುತ್ಥಾನ

ಮೋದಿಯವರ ಆಳ್ವಿಕೆಯು ನೆಹರೂ ಕಾಲದ ನೀತಿಗಳ ಅಂತ್ಯವನ್ನು ಸೂಚಿಸಿದೆ. ನೆಹರೂ ಅಳವಡಿಸಿದ ನೀತಿಗಳು ಸ್ವಾತಂತ್ರ್ಯೋತ್ತರ ಭಾರತವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಮತ್ತು ದೇಶದ ಪುರಾತನ ನಾಗರಿಕ ಪರಂಪರೆಯೊಂದಿಗೆ ಹೊಂದಿಕೊಳ್ಳಲು ವಿಫಲವಾಗಿತ್ತು. ಆದರೆ ಮೋದಿಯವರ ಆಡಳಿತದಲ್ಲಿ ಭಾರತವು ಮಹತ್ವದ ಆರ್ಥಿಕ ಪ್ರಗತಿ ಸಾಧಿಸಿದ್ದು, ಜಾಗತಿಕವಾಗಿ ತನ್ನ ಸ್ಥಾನಮಾನ ಹೆಚ್ಚಿಸಿಕೊಂಡಿದೆ. ರಾಜತಾಂತ್ರಿಕ, ಪಾರಿಸರಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿದೆ.

ಮೋದಿಯವರ ನಾಯಕತ್ವದಲ್ಲಿ 'ನವಭಾರತ'ವೊಂದು ಉದಿಸುತ್ತಿದೆ. ಇದು ವಸಾಹತುಶಾಹಿ ನೆರಳಿನಿಂದ ಪೂರ್ಣವಾಗಿ ಹೊರಬಂದ ಹಾಗೂ ತನ್ನ ಐತಿಹಾಸಿಕ ಶ್ರೇಷ್ಠತೆಯನ್ನು, ಸಾಂಸ್ಕೃತಿಕ ಆತ್ಮವಿಶ್ವಾಸವನ್ನು ತುಂಬಿಕೊಂಡ ಭಾರತವಾಗಿದೆ. ಭಾರತವು ತನ್ನ ಧಾರ್ಮಿಕ ಪರಂಪರೆಯ ಆಧಾರದಲ್ಲಿ ಆರ್ಥಿಕ, ಸಾಂಸ್ಕೃತಿಕ ಮತ್ತು ನಾಗರಿಕ ಪುನರುತ್ಥಾನವನ್ನು ಕಾಣುತ್ತಿದೆ.



ಭಾರತವು ವಿಶ್ವದ ಅತ್ಯಂತ ಪುರಾತನ ಮತ್ತು ಅತ್ಯಂತ ಪ್ರಭಾವೀ ನಾಗರಿಕತೆ ಹೊಂದಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಭಾರತವು ಆತ್ಮಜ್ಞಾನ ಮತ್ತು ಆಧ್ಯಾತ್ಮಿಕ ಚಿಂತನೆಯ ತೊಟ್ಟಿಲಾಗಿತ್ತು. ಮೋದಿಯವರ ಅಡಿಯಲ್ಲಿ ಈ ಸಾಂಸ್ಕೃತಿಕ ಭಾರತ ಇನ್ನಷ್ಟು ಶಕ್ತಿ ತುಂಬಿ ಪ್ರಜ್ವಲಿಸುತ್ತಾ ಬೆಳೆಯುತ್ತಿದೆ. ವಸಾಹತುಶಾಹಿ ಬಂಧನಗಳನ್ನೆಲ್ಲಾ ಕಳಚಿಹಾಕುತ್ತಿವೆ. ತನ್ನ ಧಾರ್ಮಿಕ ಮತ್ತು ಯೋಗದ ಪರಂಪರೆಯನ್ನು ಜಗತ್ತಿನೊಂದಿಗೆ ಹಂಚಿಕೊಳ್ಳುತ್ತಿದೆ. ವಿದೇಶಿ ಪ್ರಭಾವವನ್ನು ಕಳಚಿಕೊಂಡು ಜಾಗತಿಕ ನಾಯಕನಾಗಿ ಮತ್ತೆ ಉದಿಸುತ್ತಿದೆ. ನೂತನ ಭಾರತವು ನೆಹರೂ ಮಾದರಿಗಿಂತ ಭಿನ್ನವಾಗಿದೆ. ನೆಹರೂ ಮಾದರಿಯು ವಸಾಹತುಶಾಹಿ ಚೌಕಟ್ಟಿನಲ್ಲೇ ಬೆಳೆದಿದ್ದು ಸಮಾಜವಾದಿ ಮತ್ತು ಮಾರ್ಕ್ಸಿಸ್ಟ್ ಸಿದ್ಧಾಂತಗಳನ್ನು ಅನುಸರಿಸಿಕೊಂಡಿತ್ತು.

ಪ್ರಧಾನಿ ಮೋದಿಯವರು ಭಾರತದ ಪುರಾತನ ಧಾರ್ಮಿಕ ಪರಂಪರೆಗಳನ್ನು, ದೇವಾಲಯಗಳನ್ನು ಮತ್ತು ಪ್ರಾಚೀನ ಚಿಂತನೆಗಳನ್ನು ಉಳಿಸಿಕೊಳ್ಳುವತ್ತ ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಭಾರತದ ವೈದಿಕ, ಬೌದ್ಧ, ಜೈನ ಮತ್ತು ಸಿಕ್ಖ್ ಸಂಪ್ರದಾಯಗಳು ಏಷ್ಯಾ ಮತ್ತು ಇನ್ನಿತರ ಪ್ರದೇಶಗಳ ಮೇಲೆ ಪ್ರಭಾವ ಬೀರಿದ್ದು ಮಧ್ಯ ಏಷ್ಯಾ, ಪೂರ್ವ ಏಷ್ಯಾ ಮತ್ತು ಆಗ್ನೇಯ ಏಷ್ಯಾಗಳ ಸಂಸ್ಕೃತಿಗಳನ್ನು ಪ್ರಭಾವಿಸಿವೆ. ಯುರೋಪು ಮತ್ತು ಪಶ್ಚಿಮ ಏಷ್ಯಾದಲ್ಲೂ ಭಾರತದ ಪಾರಂಪರಿಕ ಪ್ರಭಾವವಿದೆ.

ಭಾರತದ ನಾಗರಿಕತೆಯು ಬಹಳ ಪುರಾತನವಾದುದು. 8000 ವರ್ಷಗಳ ಹಿಂದೆ ಸರಸ್ವತಿ ನದಿಯ ದಡದಲ್ಲಿ ಭಾರತದ ನಾಗರಿಕತೆ ಉದಿಸಿತ್ತು. ಆಗಲೇ ಭಾರತವು ವಿದೇಶಗಳೊಂದಿಗೆ ವ್ಯಾಪಾರ ಸಂಬಂಧ, ಸಾಗರ ಸಂಪರ್ಕವನ್ನು ಹೊಂದಿತ್ತು. ಆಧುನಿಕ ಭಾರತದಲ್ಲಿ ಸ್ವಾಮಿ ವಿವೇಕಾನಂದರಂಥ ಮಹನೀಯರು ಪಾಶ್ಚಿಮಾತ್ಯ ಜಗತ್ತಿಗೆ ಯೋಗ ಮತ್ತು ವೇದಾಂತಗಳನ್ನು ಪರಿಚಯಿಸಿದ್ದರು.

ಈ ನಿಟ್ಟಿನಲ್ಲಿ ನೋಡುವುದಾದರೆ ಪ್ರಧಾನಿ ಮೋದಿಯವರು ಸ್ವಾಮಿ ವಿವೇಕಾನಂದರ ರಾಜಕೀಯ ಅಪರವತಾರವೆಂಬಂತೆ ಕಂಡುಬರುತ್ತಾರೆ. ವಿವೇಕಾನಂದರ ಸಾಂಸ್ಕೃತಿಕ ಆತ್ಮವಿಶ್ವಾಸ ಮತ್ತು ನಾಗರಿಕ ಪುನರುಜ್ಜೀವನದ ಕನಸನ್ನು ಮೋದಿಯವರು ಸಾಕಾರ ಮಾಡಲು ಯತ್ನಿಸುತ್ತಿದ್ದಾರೆ. ಸನಾತನ ಧರ್ಮದ ಪುನರುತ್ಥಾನದ ಸಂಕೇತವಾಗಿ ಶ್ರೀರಾಮ ಮಂದಿರ ನಿರ್ಮಾಣವಾಗಿದ್ದು ಇದು ಭಾರತದ ಧಾರ್ಮಿಕ ಪರಂಪರೆಯತ್ತ ಇಡೀ ಜಗತ್ತಿನ ಗಮನ ಸೆಳೆದಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವು ದೇಶದ ಸಾಂಸ್ಕೃತಿಕ ಪುನರುತ್ಥಾನದ ಕೇಂದ್ರ ಬಿಂದು ಎಂಬುದಾಗಿ ಭಾವಿಸಬಹುದು.

ನವಭಾರತ ಮತ್ತು ಜಗತ್ತು

ಭಾರತದ ಸಾಕ್ಷಿಪ್ರಜ್ಞೆಯನ್ನು ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ಲೋಕಮಾನ್ಯ ತಿಲಕ್, ಶ್ರೀ ಅರವಿಂದ ಮುಂತಾದವರು ಜಗತ್ತಿಗೆ ಪ್ರಚುರಪಡಿಸಿದ್ದರು. ಈ ಪರಂಪರೆಯನ್ನು ಪ್ರಧಾನಿ ಮೋದಿ ಮುಂದುವರಿಸುತ್ತಿದ್ದಾರೆ.

ಸಾಂಸ್ಕೃತಿಕ ವಿಶ್ವಾಸ, ಆರ್ಥಿಕ ಅಭಿವೃದ್ಧಿ, ಬೌದ್ಧಿಕ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಬಲದಲ್ಲಿ ಭಾರತದ ಅಸ್ತಿತ್ವ ಅಡಗಿದೆ ಎಂಬುದು ಮೋದಿ ನಿಲುವು. 2014ರಲ್ಲಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ ಅವರ ನಾಯಕತ್ವದಲ್ಲಿ ಭಾರತವು ಜಾಗತಿಕವಾಗಿ ಏಕಾಂಗಿಯಾಗಬಹುದು ಹಾಗೂ ಅಭಿವೃದ್ಧಿ ಕುಂಠಿತವಾಗಬಹುದು ಎಂದು ಟೀಕಾಕಾರರು ಎಚ್ಚರಿಸಿದ್ದರು. ಆದರೆ ಈಗ ಜಾಗತಿಕವಾಗಿ ಭಾರತದ ಘನತೆ ಹೆಚ್ಚಿದೆ. ಆರ್ಥಿಕವಾಗಿ ಮಹತ್ವದ ಪ್ರಗತಿ ಸಾಧಿಸಿದೆ. ಭಾರತವೀಗ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ರಾಜತಾಂತ್ರಿಕವಾಗಿ ಭಾರತವನ್ನು ವಿಶ್ವದ ಗೌರವಾನ್ವಿತ ಮತ್ತು ಪ್ರಭಾವಿ ರಾಷ್ಟ್ರಗಳ ಪಟ್ಟಿಗೆ ಮೋದಿಯವರು ಸೇರಿಸಿದ್ದಾರೆ. ಎಲ್ಲಾ ರಾಷ್ಟ್ರಗಳ ಜತೆಗೂ ಭಾರತದ ಸಂಬಂಧವು ಸೌಹಾರ್ದಯುತವಾಗಿರುವಂತೆ ಮಾಡಿದ್ದಾರೆ. ಜಗತ್ತನ್ನೇ ಒಂದು ಕುಟುಂಬವಾಗಿ ಪರಿಗಣಿಸುವ ಮೂಲಕ ತಮ್ಮ ರಾಜಕೀಯ ದೃಷ್ಟಿಕೋನವನ್ನು ಅವರು ವಿಸ್ತರಿಸಿಕೊಂಡಿದ್ದಾರೆ. ಭಾರತವು ಒಂದು ಆರ್ಥಿಕ ಶಕ್ತಿಯಷ್ಟೇ ಅಲ್ಲ, ಜಗತ್ತಿನ ಏಕತೆ ಮತ್ತು ಸಹಕಾರವನ್ನು ಪ್ರತಿಪಾದಿಸುವ ಶಕ್ತಿ ಎಂಬ ಸಂದೇಶವನ್ನು ಸಾರಿದ್ದಾರೆ.

ಪ್ರಸ್ತುತ ಮೋದಿಯವರು ಭಾರತದ ಅತ್ಯಂತ ಪ್ರಭಾವೀ ಪ್ರಧಾನಿಯಷ್ಟೇ ಅಲ್ಲದೆ ಮಹತ್ವದ ಜಾಗತಿಕ ನಾಯಕರೂ ಆಗಿದ್ದಾರೆ. ಅವರ ಸಾಧನೆಯನ್ನು ಕೇವಲ ಅವರ ದೀರ್ಘಕಾಲದ ಆಳ್ವಿಕೆಯಿಂದಷ್ಟೇ ಅಳೆಯಲಾಗುವುದಿಲ್ಲ. ದೇಶದ ಪುನರುತ್ಥಾನ ದಲ್ಲಿ ಮತ್ತು ಜಾಗತಿಕ ಶಕ್ತಿಗಳ ಜತೆಗೆ ಭಾರತವನ್ನು ಸೇರಿಸುವಲ್ಲಿ ಸಾಧಿಸಿದ ಸಾಫಲ್ಯದಲ್ಲೂ ಅವರ ಸಾಧನೆ ಅಡಗಿದೆ.

ರಾಯಭಾರಿಗೆ 2ನೇ ಬಾರಿ ಸಮನ್ಸ್ | ಪ್ರತಿಭಟನೆ

ಅಮೆರಿಕಕ್ಕೆ ಭಾರತ ಖಡಕ್ ಸಂದೇಶ

ಹೊಸದಿಲ್ಲಿ: ಒಮಾನ್ ಕರಾವಳಿಯ ಬಳಿ ಭಾರತೀಯ ನಾವಿಕರನ್ನು ಹೊಂದಿದ್ದ ಮತ್ತೊಂದು ವಾಣಿಜ್ಯ ಹಡಗಿನ ಮೇಲೆ ದಾಳಿ ನಡೆದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಅಮೆರಿಕದ ಕಾರ್ಯನಿರ್ವಾಹಕ ರಾಯಭಾರಿ ಜೇಸನ್ ಮಿಕ್ಸ್ ಅವರನ್ನು ಈ ವಾರದಲ್ಲೇ ಎರಡನೇ ಬಾರಿ ವಿದೇಶಾಂಗ ಸಚಿವಾಲಯಕ್ಕೆ ಕರೆಸಿಕೊಂಡು, ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ.

ಕಳೆದ ನಾಲ್ಕು ದಿನಗಳಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳು ದಾಳಿಗೆ ಒಳಗಾಗಿರುವುದು ಹೊಸದಿಲ್ಲಿಯ ಆತಂಕವನ್ನು ಹೆಚ್ಚಿಸಿದ್ದು, ಅಮೆರಿಕಕ್ಕೆ ಖಡಕ್ ಸಂದೇಶ ರವಾನಿಸಿದೆ. ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ, ಭಾರತೀಯ ನೌಕಾಯಾನ ಮಹಾನಿರ್ದೇಶನಾಲಯ (ಡಿಜಿಎಸ್) ಹಾರ್ಮುಜ್ ಜಲಸಂಧಿ, ಒಮಾನ್ ಕೊಲ್ಲಿ ಹಾಗೂ ಸುತ್ತಮುತ್ತಲಿನ ಸಮುದ್ರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 18,000 ಭಾರತೀಯ ನಾವಿಕರಿಗೆ ವಿಶೇಷ ಭದ್ರತಾ ಸಲಹೆ ಜಾರಿಗೊಳಿಸಿದೆ.

ಮೂರು ದಾಳಿ, ಮೂವರು ಸಾವು: ಜೂ.8ರಂದು ಎಂಟಿ ಮಾರಿವೆಕ್ಸ್ ಹಡಗಿನಲ್ಲಿ ಅನುಮಾನಾಸ್ಪದ ದಾಳಿಯ ನಂತರ ಬೆಂಕಿ ಕಾಣಿಸಿಕೊಂಡಿತ್ತು. ಹಡಗಿನಲ್ಲಿದ್ದ 24 ಭಾರತೀಯ ಸಿಬ್ಬಂದಿ ಸುರಕ್ಷಿತರಾಗಿದ್ದರು.

ಜೂ.10ರಂದು ಎಂಟಿ ಸೆಟ್ಟೆಬೆಲ್ಲೊ ಹಡಗಿನ ಮೇಲೆ ಗುಂಡಿನ ದಾಳಿ ನಡೆದಿದ್ದು, 24 ಭಾರತೀಯರಲ್ಲಿ 21 ಮಂದಿಯನ್ನು ರಕ್ಷಿಸಲಾಯಿತು. ಆರಂಭದಲ್ಲಿ ನಾಪತ್ತೆಯಾಗಿದ್ದ ಮೂವರು ಭಾರತೀಯ ನಾವಿಕರು ಮೃತಪಟ್ಟಿರುವುದು ನಂತರ ದೃಢಪಟ್ಟಿತು.

ಇದೀಗ ಎಂಟಿ ಜಲ್ವೀರ್ ಎಂಬ ಹಡಗು ಒಮಾನ್ ಕರಾವಳಿಯ ಬಳಿ ದಾಳಿಗೆ ಒಳಗಾಗಿದೆ ಎಂದು ವರದಿಯಾಗಿದೆ. ಈ ಹಡಗಿನಲ್ಲಿ 20 ಭಾರತೀಯ ಸಿಬ್ಬಂದಿ ಇದ್ದರು. ದಾಳಿಯ ಸ್ವರೂಪದ ಬಗ್ಗೆ ಅಧಿಕಾರಿಗಳು ಇನ್ನೂ ಅಧಿಕೃತ ಮಾಹಿತಿ ನೀಡಿಲ್ಲ.

ಸಾವಿರಾರು ಭಾರತೀಯ ನಾವಿಕರಿಗೆ ಆತಂಕ: ಅಧಿಕೃತ ಅಂದಾಜಿನ ಪ್ರಕಾರ, ಹಾರ್ಮುಜ್ ಜಲಸಂಧಿಯ ಸುತ್ತಮುತ್ತ 13 ಭಾರತೀಯ ಧ್ವಜದ ಹಡಗುಗಳಲ್ಲಿ 622 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ, ಗಲ್ಫ್ ಪ್ರದೇಶದಲ್ಲಿ ನೂರಾರು ವಿದೇಶಿ ಹಡಗುಗಳಲ್ಲಿ ಸುಮಾರು 18,000 ಭಾರತೀಯರು ಸೇವೆ ಸಲ್ಲಿಸುತ್ತಿದ್ದಾರೆ.



ಭಾರತದ ನೌಕೆಗಳ ಮೇಲೆ ದಾಳಿ ನಡೆಸಿದ್ದು ಇರಾನ್!

ಭಾರತೀಯ ಹಡಗುಗಳ ಮೇಲಿನ ಡ್ರೋನ್ ದಾಳಿಯನ್ನು ಇರಾನ್ ನಡೆಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆರೋಪಿಸಿದ್ದು, ಇದು ಯಾವುದೇ ಕಾರಣಕ್ಕೂ ಸ್ವೀಕಾರಾರ್ಹವಲ್ಲ ಎಂದು ಶುಕ್ರವಾರ ಹೇಳಿದ್ದಾರೆ. ಬುಧವಾರ ಒಮಾನ್ ಕರಾವಳಿಯಲ್ಲಿ ಭಾರತೀಯ ಸಿಬ್ಬಂದಿಯಿದ್ದ ಮೂರು ಹಡಗುಗಳ ಮೇಲೆ ಡ್ರೋನ್ ದಾಳಿ ನಡೆದಿತ್ತು. ಈ ಅನಿರೀಕ್ಷಿತ ದಾಳಿಗೆ ಮೂವರು ಭಾರತೀಯ ಸಿಬ್ಬಂದಿ ಮೃತಪಟ್ಟಿದ್ದರು. ಹಾರ್ಮುಜ್ ಜಲಸಂಧಿಯನ್ನು ಹಾದುಹೋಗುತ್ತಿದ್ದ ಭಾರತೀಯ ತೈಲ ಹಡಗುಗಳ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿರುವುದು ಸ್ವೀಕಾರಾರ್ಹವಲ್ಲ ಎಂದು ಅಧ್ಯಕ್ಷ ಟ್ರಂಪ್ ಟ್ರುತ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಂಧೇರಾ ಛಟೇಗಾ, ಸೂರಜ್ ನಿಕ್ಲೇಗಾ, ಕಮಲ್ ಖಿಲೇಗಾ(ಕಗ್ಗತ್ತಲು ಸರಿಯಲಿದೆ, ಸೂರ್ಯ ಉದಯಿಸಲಿದ್ದಾನೆ, ತಾವರೆ ಅರಳುತ್ತದೆ) – ಇದು ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ ಎಂಬ ಮಹಾತ್ಮನ ಮಾತು. ಮಾತು ಎನ್ನುವುದಕ್ಕಿಂತ ಇದನ್ನು ವಾಜಪೇಯಿ ಅವರ ಭವಿಷ್ಯವಾಣಿ. ಅಂದು ವಾಜಪೇಯಿ ಅವರ ಪರಿಶ್ರಮ, ಕನಸು ಇಂದು ನನಸಾಗಿದೆ. ಅಟಲ್ ಭವಿಷ್ಯವಾಣಿ ಸತ್ಯವಾಗಿದೆ. ಇಂದು ಬಿಜೆಪಿ ನೇತೃತ್ವದ ಎನ್‌ಡಿಎ 22 ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಬಿಜೆಪಿಯ ಈ ಗೆಲುವು ಹೇಗೆ ಸಾಧ್ಯವಾಯಿತು ಎಂಬ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಗೆಲುವೊಂದೇ ಗುರಿಯಲ್ಲ; ರಾಜ್ಯಮಟ್ಟದ ಪಕ್ಷ ವಿಸ್ತರಣೆ, ಸಂಸತ್ತಿನಲ್ಲಿ ಬಹುಮತ ಸಾಧಿಸುವ ಗುರಿ

ಸತ್ಯವಾಯ್ತು ಅಟಲ್ ಭವಿಷ್ಯವಾಣಿ

ತಾವರೆಯ ಬಲವರ್ಧನೆ





ಅಮೃತಕಾಲದಲ್ಲಿ ಅಟಲ್ ಅಮೃತವಾಣಿ ನೆನಪು

ಭಾರತೀಯ ಜನತಾ ಪಕ್ಷದ(ಬಿಜೆಪಿ) 1980ರ ಏ.6ರಲ್ಲಿ ಸ್ಥಾಪನೆಯಾಯಿತು. ಅಟಲ್ ಬಿಹಾರಿ ವಾಜಪೇಯಿ ಅವರು ಬಿಜೆಪಿಯ ಸ್ಥಾಪನಾ ಅಧ್ಯಕ್ಷರಾಗಿದ್ದರು. ಪಕ್ಷ ಸ್ಥಾಪನೆಯ ಬಳಿಕ 1980ರ ಡಿಸೆಂಬರ್ ತಿಂಗಳಲ್ಲಿ ಮುಂಬೈನಲ್ಲಿ ನಡೆದ ಬಿಜೆಪಿಯ ಮೊದಲ ರಾಷ್ಟ್ರೀಯ ಅಧಿವೇಶನದಲ್ಲಿ ವಾಜಪೇಯಿ ಹೇಳಿದ್ದ ಮಾತಿದು. 1984ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 229 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, ಕೇವಲ 2 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಗೆಲುವು ಸಾಧಿಸಿತ್ತು. ಗುಜರಾತ್‌ನ ಮೆಹ್ಸಾನಾ ಮತ್ತು ಆಂಧ್ರಪ್ರದೇಶದ (ಇಂದಿನ ತೆಲಂಗಾಣ) ಹನಮ್‌ಕೊಂಡ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿತ್ತು. ಆದರೆ ನಾಲ್ಕು ದಶಕಗಳ ಬಳಿಕ ಬಿಜೆಪಿ ಪ್ರಬಲ ರಾಷ್ಟ್ರೀಯ ಶಕ್ತಿಯಾಗಿ ಹೊರಹೊಮ್ಮಿದೆ.

ಬಂಗಾಳದಲ್ಲಿ ಮಹತ್ವದ ಗೆಲುವು

ಬಿಜೆಪಿ ಪಾಲಿಗೆ ಪಶ್ಚಿಮ ಬಂಗಾಳ ಇನ್ನೊಂದು ರಾಜ್ಯವಷ್ಟೇ ಅಲ್ಲ, ಬಂಗಾಳದಲ್ಲಿನ ಗೆಲುವು ಬಿಜೆಪಿಗೆ ಬಹಳ ಮಹತ್ವದ್ದಾಗಿದೆ. ಬಿಜೆಪಿಯ ರಾಜ್ಯ ಮಟ್ಟದ ಪಕ್ಷ ವಿಸ್ತರಣೆ ಯೋಜನೆಗೆ ಬಂಗಾಳ ಶ್ರೇಷ್ಠ ಉದಾಹರಣೆ. ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ 15 ವರ್ಷಗಳ ಆಡಳಿತವು ಅಂತ್ಯಗೊಂಡಿದ್ದು, 294ರಲ್ಲಿ ಬಿಜೆಪಿ 208 ಸ್ಥಾನಗಳನ್ನು ಗೆದ್ದಿರುವುದು ಅಭೂತಪೂರ್ವ ಸಾಧನೆ. 2021ರಲ್ಲಿ ಬಿಜೆಪಿ 77 ಸ್ಥಾನಗಳನ್ನು ಗೆದ್ದಿದ್ದು, ಐದೇ ವರ್ಷಗಳಲ್ಲಿ 130 ಸ್ಥಾನಗಳನ್ನು ಹೆಚ್ಚಿಸಿದೆ.

ಸಂಸತ್ತಿನ ಪ್ರಾಧಾನ್ಯತೆ

ಕಳೆದೊಂದು ದಶಕದ ಬಿಜೆಪಿಯ ಬೆಳವಣಿಗೆ ಲೋಕಸಭೆಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸಿದೆ. 2014ರಲ್ಲಿ ನರೇಂದ್ರ ಮೋದಿ ನೇತೃತ್ವ ವಹಿಸಿಕೊಂಡ ಬಳಿಕ ಶೇ.31.3 ಮತಗಳೊಂದಿಗೆ 282 ಸ್ಥಾನಗಳನ್ನು ಗೆಲ್ಲಿಸಿಕೊಟ್ಟರು. ಮೂರು ದಶಕಗಳ ನಂತರ ಕಾಂಗ್ರೆಸೇತರ ನಾಯಕರೊಬ್ಬರು ಪೂರ್ಣ ಬಹುಮತವನ್ನು ಪಡೆದಿದ್ದರು. ಐದು ವರ್ಷಗಳ ಬಳಿಕ, ಬಿಜೆಪಿ ಪಡೆದ ಮತ ಶೇ.37.4ಕ್ಕೇರಿದ್ದು, ಒಟ್ಟು 303 ಸ್ಥಾನಗಳನ್ನು ಬಾಚಿಕೊಂಡಿತು. 2024ರ ಲೋಕಸಭಾ ಚುನಾವಣೆ ಬಿಜೆಪಿಗೊಂದು ರಿಯಾಲಿಟಿ ಚೆಕ್ ಆಗಿತ್ತು. ದಾಖಲೆಯ 303 ಸ್ಥಾನಗಳನ್ನು ಗೆದ್ದ ಬಿಜೆಪಿ 240 ಸ್ಥಾನಗಳಿಗೆ ಕುಸಿತ ಕಂಡಿದ್ದನ್ನು ಬಿಜೆಪಿ ನಾಯಕತ್ವವು, ಸರ್ಕಾರ ರಚನೆಗೆ ಬಹುಮತ ಬೇಕಾಗುತ್ತದೆ. ಆದರೆ ಪರಿವರ್ತನಾತ್ಮಕ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಸಂಸತ್ತಿನಲ್ಲಿ ದೊಡ್ಡ ಬಹುಮತವನ್ನು ಸಾಧಿಸಬೇಕೆಂಬ ಪಾಠವನ್ನಾಗಿ ಪರಿಗಣಿಸಿದಂತಿದೆ.

27 ವರ್ಷ ಬಳಿಕ ದಿಲ್ಲಿ ಗದ್ದುಗೆ

ಬಹುತೇಕ ಮೂರು ದಶಕಗಳ ಬಳಿಕ ದಿಲ್ಲಿಯ 70 ಕ್ಷೇತ್ರಗಳಲ್ಲಿ 48ನ್ನು ಗೆದ್ದುಕೊಂಡು 2025ರಲ್ಲಿ ಬಿಜೆಪಿ ಗದ್ದುಗೆಯನ್ನೇರಿತು. ಆಡಳಿತದಲ್ಲಿದ್ದ ಆಮ್ ಆದ್ಮಿ 22 ಸ್ಥಾನಗಳಿಗೆ ತೃಪ್ತಿ ಕಂಡಿತು. ಅರವಿಂದ ಕೇಜ್ರಿವಾಲ್ ಬೆಳವಣಿಗೆಯಿಂದ ರಾಜ್ಯದಲ್ಲಿ ಆಪ್ ಮತ್ತು ಬಿಜೆಪಿ ಎರಡನೇ ಪಕ್ಷಗಳು ಮುನ್ನೆಲೆಗೆ ಬಂದಿದ್ದವು.

ಬಿಹಾರ: ಜೂನಿಯರ್ ಈಗ ಸೀನಿಯರ್

ಬಿಹಾರದಲ್ಲಿ ಜೆಡಿ(ಯು) ನಾಯಕ ನಿತೀಶ್ ಕುಮಾರ್ ಅವರೊಂದಿಗೆ ಬಿಜೆಪಿ ಮೈತ್ರಿ ಪಕ್ಷವಾಗಿ ಗುರುತಿಸಿಕೊಂಡಿದ್ದು, 2025ರಲ್ಲಿ ಜೆಡಿಯುಗಿಂತ(85) ನಾಲ್ಕು ಸ್ಥಾನಗಳನ್ನು ಹೆಚ್ಚು ಗೆದ್ದ ಬಿಜೆಪಿ ಪ್ರಮುಖ ಪಕ್ಷವಾಯಿತು. ಬಿಜೆಪಿ ನೇತೃತ್ವದ ಎನ್‌ಡಿಎ 243ರಲ್ಲಿ 200 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಿತು. ಇದಲ್ಲದೆ, ನಿತೀಶ್ ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ಬಿಜೆಪಿಗೆ ಬಿಟ್ಟುಕೊಡಬೇಕಾಯಿತು.

ಒಡಿಶಾ: ಪ್ರಾದೇಶಿಕ ಕೋಟೆ ಮುರಿದ ಬಿಜೆಪಿ

ಪ್ರಾದೇಶಿಕ ಪಕ್ಷಗಳ ಕೋಟೆಯಾದ ಒಡಿಶಾದಲ್ಲಿ ರಾಷ್ಟ್ರೀಯ ಪಕ್ಷ ಬಿಜೆಪಿ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡಿದೆ. ಒಡಿಶಾ ರಾಜ್ಯ, ಬಿಜೆಪಿಯ 21 ಸಂಸದರನ್ನು ಲೋಕಸಭೆಗೆ ಮತ್ತು 10 ಸಂಸದರನ್ನು ರಾಜ್ಯಸಭೆಗೆ ಕಳುಹಿಸಿದೆ.

ಮಹಾ ವಿಕಾಸ್ ಅಘಾಡಿಗೆ ಮುಖಭಂಗ

2024ರ ಲೋಕಸಭಾ ಚುನಾವಣೆಯಲ್ಲಿ ಪ್ರಬಲ ಪ್ರದರ್ಶನ ನೀಡಿದ್ದ ಮಹಾ ವಿಕಾಸ್ ಅಘಾಡಿ ತಿಂಗಳುಗಳ ಬಳಿಕ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಕಾಡೆಯಾಗಿ ಮಲಗಿತು. ಬಿಜೆಪಿ ನೇತೃತ್ವದ ಮಹಾಯುತಿ ಮ್ಯಾಜಿಕ್ ನಂ. 145ನ್ನು ಸುಲಭದಲ್ಲಿ ದಾಟಿದ್ದು, 288ರಲ್ಲಿ 235 ಸ್ಥಾನಗಳನ್ನು ಗೆದ್ದಿತು.

ಕ್ಷೇತ್ರ ಪುನರ್ ವಿಂಗಡಣೆಗೆ ಬಲ

ಜನಸಂಖ್ಯೆಯ ಬದಲಾವಣೆಗಳನ್ನು ಆಧರಿಸಿ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಗಡಿ ಮರುನಿರ್ಣಯಿಸುವುದು ಮತ್ತು ಕ್ಷೇತ್ರಗಳ ಸಂಖ್ಯೆ ಮರುಹಂಚಿಕೆ ಮಾಡುವುದನ್ನು ಹೀಗೆ ಕರೆಯಲಾಗುತ್ತದೆ. ಈ ಪ್ರಕ್ರಿಯೆಯನ್ನು ಸೀಮಾ ನಿರ್ಣಯ ಆಯೋಗ (ಡಿಲಿಮಿಟೇಶನ್ ಕಮಿಷನ್) ನಡೆಸುತ್ತದೆ. 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ 2001ರವರೆಗೆ ಹಾಗೂ 2001ರಲ್ಲಿ 84ನೇ ತಿದ್ದುಪಡಿಯಲ್ಲಿ 2026ರವರೆಗೆ ತಡೆಹಿಡಿಯಲಾಗಿತ್ತು. ಜನಸಂಖ್ಯೆಗೆ ಅನುಗುಣವಾಗಿ ಪ್ರತಿನಿಧಿತ್ವ ಇರಬೇಕೆಂಬುದೇ ಬಿಜೆಪಿಯ ವಾದ. ಇದು ಜಾರಿಗೆ ಬಂದರೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿದೆ.

ಒನ್ ನೇಷನ್ ಒನ್ ಎಲೆಕ್ಷನ್ ಸಲೀಸು

ದೇಶಾದ್ಯಂತ ಲೋಕಸಭೆ ಮತ್ತು ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಒಂದೇ ಸಮಯದಲ್ಲಿ ನಡೆಸುವ ಚುನಾವಣಾ ವ್ಯವಸ್ಥೆ ಜಾರಿಗೆ ತರಬೇಕೆಂಬುದು ಬಿಜೆಪಿಯ ವಾದ. ಯಾಕೆಂದರೆ ಇದು ಚುನಾವಣಾ ವೆಚ್ಚ ಕಡಿಮೆ ಮಾಡಲಿದ್ದು, ಪದೇ ಪದೆ ಜಾರಿಯಾಗುವ ಚುನಾವಣಾ ನೀತಿ ಸಂಹಿತೆಯ ಪರಿಣಾಮ ಕಡಿಮೆಯಾಗಲಿದೆ.

ರಾಜ್ಯಸಭೆಯಲ್ಲಿ 2/3 ಬಹುಮತ

ಬಿಜೆಪಿ ತನ್ನ ಶಾಸನಾತ್ಮಕ ಬದಲಾವಣೆಗಳು, ಪರಿವರ್ತನಾತ್ಮಕ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ರಾಜ್ಯಸಭೆಯಲ್ಲಿ 2/3 ಪ್ರತಿನಿಧಿತ್ವ ಇರಬೇಕಾಗುತ್ತದೆ. ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ದೊಡ್ಡ ಬಹುಮತ ಇದ್ದರೆ, ಬಿಜೆಪಿ ನಿರಾತಂಕವಾಗಿ ತನ್ನ ಅಜೆಂಡಾಗಳನ್ನು ಸಾಧಿಸಬಹುದು. ರಾಜ್ಯಸಭೆ 245 ಸದಸ್ಯರ ಬಲ ಹೊಂದಿದ್ದು, ಗುರುವಾರ 12 ಬಿಜೆಪಿ ಸಹಿತ 20 ಎನ್‌ಡಿಎ ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದು, ಬಿಜೆಪಿ ರಾಜ್ಯಸಭೆ ಸಂಸದರ ಸಂಖ್ಯೆ 125 ತಲುಪಿದೆ. 2/3 ಬಹುಮತ ಆಗಬೇಕಿದ್ದರೆ ಬಿಜೆಪಿ ಸಂಸದರ ಸಂಖ್ಯೆ 163+ ಆಗಬೇಕಿದೆ.

ಏನಾಸಂ ಜಾರಿಗೂ ತಯಾರಿ

ಬಿಜೆಪಿ ಅಜೆಂಡಾಗಳಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಪ್ರಮುಖವಾದದ್ದು. ದೇಶದ ಎಲ್ಲಾ ನಾಗರಿಕರಿಗೆ ಜಾತಿ, ಧರ್ಮ ಅಥವಾ ಸಮುದಾಯದ ಬೇಧವಿಲ್ಲದೆ ಸಮಾನ ನೀತಿಯ ಕಾನೂನು ಅನ್ವಯಿಸುವ ವ್ಯವಸ್ಥೆ ಇದಾಗಿರಲಿದೆ. ಇದನ್ನು ಬಿಜೆಪಿ ಆಡಳಿತದ ಅಸ್ಸಾಂ ವಿಧಾನಸಭೆ ಅಂಗೀಕರಿಸಿದೆ.

ಅಂತಿಮ ಹಂತಕ್ಕೆ ಶಾಂತಿ ಒಪ್ಪಂದ: ಟ್ರಂಪ್

ಇರಾನ್ ವಿರುದ್ಧ ಯುದ್ಧ ಅಂತ್ಯ!

ವಾಷಿಂಗ್ಟನ್: ಇರಾನ್‌ನೊಂದಿಗಿನ ನಮ್ಮ ಯುದ್ಧವು ಕೊನೆಗೊಂಡಿದೆ. ಇನ್ನೇನು ವಾರಾಂತ್ಯ ಯುರೋಪ್‌ನಲ್ಲಿ ಶಾಂತಿ ಒಪ್ಪಂದ ಅಂತಿಮಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಇರಾನ್ ತೈಲ ಉದ್ಯಮವನ್ನು ಸಂಪೂರ್ಣ ಕಬ್ಜಾ ಮಾಡುವುದಾಗಿ ಬೆದರಿಕೆ ಹಾಕಿದ ಬಳಿಕ ಟ್ರಂಪ್ ಸೇನಾ ಕಾರ್ಯಾಚರಣೆಯನ್ನು ತಡೆಹಿಡಿದಿದ್ದಾರೆ.

ಒಂದು ವೇಳೆ ಇರಾನ್‌ನೊಂದಿಗೆ ಶಾಂತಿ ಒಪ್ಪಂದ ಅಂತಿಮವಾದರೆ, ಅದು ಟ್ರಂಪ್ ಅಧ್ಯಕ್ಷತೆಯಲ್ಲಿ ಅಮೆರಿಕದ ದೊಡ್ಡ ಸಾಧನೆಗಳಲ್ಲಿ ಒಂದಾಗಿರಲಿದೆ.

ವಾರಾಂತ್ಯದಲ್ಲಿ ಯುರೋಪ್‌ನಲ್ಲಿ ನಡೆಯುವ ಶಾಂತಿ ಒಪ್ಪಂದ ಸಹಿ ಹಾಕುವ ಕಾರ್ಯಕ್ರಮದಲ್ಲಿ ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ಟ್ರಂಪ್ ಹೇಳಿದ್ದಾರೆ. ಇತ್ತೀಚೆಗಿನ ಶಾಂತಿ ಒಪ್ಪಂದ ಬೆಳವಣಿಗೆಯ ಕುರಿತು ಈಗಾಗಲೇ ಕತಾರ್, ಯುಎಇ, ಸೌದಿ ಅರೇಬಿಯಾ, ಬಹ್ರೈನ್, ಕುವೈತ್ ಹಾಗೂ ಪಾಕಿಸ್ತಾನ ರಾಷ್ಟ್ರ ನಾಯಕರೊಂದಿಗೆ ಮಾತನಾಡಿದ್ದಾಗಿ ಹೇಳಿದ್ದಾರೆ. ಇರಾನ್ ತೈಲ ಸಂಪನ್ಮೂಲ ಮತ್ತು ಅನಿಲ ಕ್ಷೇತ್ರಗಳನ್ನು ಹೊಂದಿರುವ ಖಾರ್ಗ್ ದ್ವೀಪದ ಮೇಲೆ ಸೇನಾ ಕಾರ್ಯಾಚರಣೆ ನಡೆಸಿ ಸಂಪೂರ್ಣ ನಿಯಂತ್ರಣವನ್ನು ಪಡೆಯುವುದಾಗಿ ಅಧ್ಯಕ್ಷ ಟ್ರಂಪ್ ಇರಾನ್‌ಗೆ ಬೆದರಿಕೆ ಹಾಕಿದ್ದರು. ವಾರಾಂತ್ಯದ ಶಾಂತಿ ಒಪ್ಪಂದದ ಕುರಿತು ಟ್ರಂಪ್ ಭಾರೀ ನಿರೀಕ್ಷೆ ಹೊಂದಿದ್ದಾರೆ.

ಒಪ್ಪಂದದ ಸುಳಿವು ನೀಡಿದ ಇರಾನ್: ಶಾಂತಿ ಒಪ್ಪಂದ ಹಿಂದೆಂದಿಗಿಂತಲೂ ಬಹಳ ಸನಿಹದಲ್ಲಿದೆ. ಶೀಘ್ರದಲ್ಲಿ ಸಂಪೂರ್ಣ ಮಾಹಿತಿ ನೀಡುವುದಾಗಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

ಕಿರುಸುದ್ದಿ

ಕೇರಳಕ್ಕೆ ಡಾ.ಮೋಹನ್ ಭಾಗವತ್ ಆಗಮನ

ತಿರುವನಂತಪುರಂ: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಮೂರು ದಿನಗಳ ಕೇರಳ ಪ್ರವಾಸಕ್ಕಾಗಿ ಶುಕ್ರವಾರ ತಿರುವನಂತಪುರಂಗೆ ಆಗಮಿಸಿದ್ದಾರೆ. ಆರ್‌ಎಸ್‌ಎಸ್‌ನ ಶತಮಾನೋತ್ಸವ ಕಾರ್ಯಕ್ರಮಗಳ ಅಂಗವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯಲಿರುವ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಲಿದ್ದಾರೆ. ಶುಕ್ರವಾರ ಸಂಜೆ ವಿಮಾನದ ಮೂಲಕ ತಿರುವನಂತಪುರಂ ತಲುಪಿದ ಭಾಗವತ್, ಜೂ.13ರಂದು ಸಂಜೆ 4.30ಕ್ಕೆ ತಿರುವನಂತಪುರಂನ ಉದಯ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಿರುವ ಆಹ್ವಾನಿತ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ಆಹ್ವಾನಿತರೊಂದಿಗೆ ಸಂವಾದ ನಡೆಸಿ ಅವರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಜೂ.14ರಂದು ಸಂಜೆ 4.30ಕ್ಕೆ ತ್ರಿಶೂರ್ ನಗರದ ಹಯಾತ್ ರೀಜೆನ್ಸಿಯಲ್ಲಿ ಇದೇ ಮಾದರಿಯ ಮತ್ತೊಂದು ಕಾರ್ಯಕ್ರಮ ನಡೆಯಲಿದೆ.

ಅಮರನಾಥ ಯಾತ್ರೆ: ಬಹುಹಂತದ ಭದ್ರತೆ

ಹೊಸದಿಲ್ಲಿ: ಅಮರನಾಥ ಯಾತ್ರಾ ಮಾರ್ಗದಲ್ಲಿ ಮತ್ತು ಪ್ರವಾಸಿ ಸ್ಥಳಗಳಲ್ಲಿ ಶಾಂತಿಯುತ ತೀರ್ಥಯಾತ್ರೆಯನ್ನು ಖಚಿತಪಡಿಸಿಕೊಳ್ಳಲು ಸಿಎಪಿಎಫ್‌ಗಳು, ಜಮ್ಮು-ಕಾಶ್ಮೀರ ಪೊಲೀಸರು ಮತ್ತು ಎಲ್ಲಾ ಭದ್ರತಾ ಸಂಸ್ಥೆಗಳು ಬಹು ಹಂತದ, ಅಭೇದ್ಯ ಭದ್ರತಾ ಜಾಲವನ್ನು ಸ್ಥಾಪಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ. ಜು.3ರಂದು ಪ್ರಾರಂಭವಾಗುವ ಯಾತ್ರೆಯ ಸನ್ನದ್ಧತೆಯ ಕುರಿತ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಶಾ, ಡ್ರೋನ್‌ಗಳು, ಸಿಸಿಟಿವಿ ಮೇಲ್ವಿಚಾರಣೆ, ಕಣ್ಗಾವಲು ವ್ಯವಸ್ಥೆಗಳು ಮತ್ತು ಇತರ ಆಧುನಿಕ ತಂತ್ರಜ್ಞಾನಗಳ ವ್ಯಾಪಕ ಬಳಕೆಯ ಮೂಲಕ ಸಾಂಪ್ರದಾಯಿಕ ಭದ್ರತಾ ಉಪಕರಣಗಳನ್ನು ಮತ್ತಷ್ಟು ಬಲಪಡಿಸಬೇಕು ಎಂದರು.

ಟಿವಿ, ರೇಡಿಯೋ ಏಕ ನಿಯಂತ್ರಣ ಚೌಕಟ್ಟಿಗೆ

ಹೊಸದಿಲ್ಲಿ: ಕೇಂದ್ರ ದೂರದರ್ಶನ ಮತ್ತು ರೇಡಿಯೋ ಪ್ರಸಾರ ಸೇವೆಗಳಿಗೆ ಒಂದೇ ನಿಯಂತ್ರಕ ಚೌಕಟ್ಟನ್ನು ಪ್ರಸ್ತಾಪಿಸಿದ್ದು, ಟಿವಿ ಚಾನೆಲ್‌ಗಳಿಂದ ಖಾಸಗಿ ರೇಡಿಯೋ ಸೇವೆಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆ ಮತ್ತು ಸಾಮಾಜಿಕ ಪ್ರಸ್ತುತತೆಯ ವಿಷಯಗಳ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಬಾಧ್ಯತೆ ವಿಸ್ತರಿಸಿದೆ. ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಶುಕ್ರವಾರ ಸಾರ್ವಜನಿಕಗೊಳಿಸಿದ ಕರಡು ದೂರಸಂಪರ್ಕ(ದೂರದರ್ಶನ, ರೇಡಿಯೋ ಮತ್ತು ಸಂಬಂಧಿತ ಸೇವೆಗಳು) ನಿಯಮಗಳು, 2026, ಟಿವಿ ಚಾನೆಲ್‌ಗಳು ಪ್ರತಿದಿನ ಬೆಳಗ್ಗೆ 6ರಿಂದ ರಾತ್ರಿ 11ರವರೆಗೆ ಕನಿಷ್ಠ 30 ನಿಮಿಷಗಳ ಕಾಲ ಈ ವಿಷಯಗಳ ಬಗ್ಗೆ ವಿಷಯವನ್ನು ಪ್ರಸಾರ ಮಾಡಬೇಕಾಗುತ್ತದೆ.

ಭಾಗವತ್ ಇದ್ದ ರೈಲಿಗೆ ಕಲ್ಲೆಸೆತ: ಇಬ್ಬರ ಸೆರೆ

ಫಿರೋಜಾಬಾದ್: ಲಖನೌ–ಹೊಸದಿಲ್ಲಿ ಸ್ವರ್ಣ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿಗೆ ಫಿರೋಜಾಬಾದ್ ಬಳಿ ಕಲ್ಲೆಸೆದ ಘಟನೆ ಗುರುವಾರ ಸಂಜೆ ನಡೆದಿದ್ದು, ಈ ಕುಕೃತ್ಯವೆಸಗಿದ ಇಬ್ಬರು ಅಪ್ರಾಪ್ತರನ್ನು ಪೊಲೀಸರು ಬಂಧಿಸಿದ್ದು, ಮೂರನೆಯವನಿಗಾಗಿ ಶೋಧಿಸಲಾಗುತ್ತಿದೆ. ಗುರುವಾರ ಸಂಜೆ 7.20ರ ಸುಮಾರಿಗೆ ಪೇಮೇಶ್ವರ ಗೇಟ್ ಬಳಿ ಈ ಕೃತ್ಯ ನಡೆದಿದ್ದು, ಎಕ್ಸ್‌ಪ್ರೆಸ್ ರೈಲಿನ ಇ1 ಬೋಗಿಯತ್ತ ಕಲ್ಲೆಸೆಯಲಾಗಿತ್ತು. ಇದರಿಂದ ರೈಲಿನ ಕಿಟಕಿಗೆ ಹಾನಿಯಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ್ ಡಾ. ಮೋಹನ್ ಭಾಗವತ್ ಅವರು ಕಾನ್ಪುರದಲ್ಲಿ ರೈಲನ್ನೇರಿ ಪ್ರಯಾಣಿಸುತ್ತಿದ್ದರು. ಅವರಿಗೆ ಯಾವುದೇ ಹಾನಿಯಾಗಿಲ್ಲ. ಈ ಹೀನ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಮತ್ತು ರೈಲ್ವೆ ಇಲಾಖೆಯು ಆಗ್ರಾ ವಿಭಾಗದ ಅಡಿಶನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಎಸ್.ಕೆ. ಭಗತ್ ನೇತೃತ್ವದಲ್ಲಿ 7 ತಂಡಗಳನ್ನು ರಚಿಸಿತ್ತು. ಬಳಿಕ ನಡೆದ ತನಿಖೆಯ ವೇಳೆ 50 ಸಿಸಿಟಿವಿ ಕ್ಯಾಮೆರಾಗಳ ದಾಖಲೆಗಳನ್ನು ಪರಿಶೀಲಿಸಿದಾಗ ಮೂವರು ಅಪ್ರಾಪ್ತರು ಕಲ್ಲೆಸೆದಿರುವುದು ಕಂಡುಬಂದಿದೆ. ಇವರು ಚಿಂದಿ ಆಯುವವರು ಎನ್ನಲಾಗುತ್ತಿದ್ದು, ಇವರಿಗೆ ಎಲ್ಲಿಂದ ಪ್ರಚೋದನೆ ಲಭಿಸಿತ್ತು ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ದೇಶದಲ್ಲಿ ಕುಕೃತ್ಯಗಳನ್ನೆಸಗಲು ಅಪ್ರಾಪ್ತರನ್ನು ಬಳಸುವ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಅಪ್ರಾಪ್ತರ ವಿರುದ್ಧವೂ ಕಾನೂನು ಕ್ರಮಕ್ಕೆ ಅಗತ್ಯ ನಿಯಮಗಳನ್ನು ರೂಪಿಸಬೇಕೆಂಬ ಆಗ್ರಹ ವ್ಯಕ್ತವಾಗುತ್ತಿರುವುದಿಲ್ಲಿ ಉಲ್ಲೇಖನೀಯ.


ಗಡಿ ನುಸುಳುವಿಕೆ ಬಗ್ಗೆ ಭಾರತ-ಬಾಂಗ್ಲಾ ಚರ್ಚೆ

ಹೊಸದಿಲ್ಲಿ: ಭಾರತ ಮತ್ತು ಬಾಂಗ್ಲಾದೇಶ ನಡುವೆ ಡಿಜಿ ಮಟ್ಟದ ನಾಲ್ಕು ದಿನಗಳ ಮಾತುಕತೆಯು ಜೂ.11ರಂದು ಸಮಾಪನಗೊಂಡಿದ್ದು, ಗಡಿಯಲ್ಲಿನ ಸಾವುಗಳು ಮತ್ತು ಅಕ್ರಮ, ದುಸ್ಸಾಹಸದ ಮತ್ತು ಬಲವಂತದ ನುಸುಳುವಿಕೆಯಂತಹ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಶುಕ್ರವಾರ ಬಿಡುಗಡೆಗೊಳಿಸಲಾದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಕಟ್ಟೆಚ್ಚರ, ಶಾಂತಿ, ಸಮನ್ವಯ, ಗಡಿ ಸಹಕಾರ, ಪರಸ್ಪರ ವಿಶ್ವಾಸ, ಧನಾತ್ಮಕ ನೆಲೆಗಳಲ್ಲಿ ಸಮನ್ವಯ ಸಾಧಿಸುವುದಕ್ಕೆ ಮಾತುಕತೆಯಲ್ಲಿ ಒತ್ತು ನೀಡಲಾಗಿದೆ.

ಬಾಂಗ್ಲಾದೇಶದ ಬಾರ್ಡರ್ ಗಾರ್ಡ್ ಬಾಂಗ್ಲಾದೇಶ್(ಡಿಜಿಬಿ) ಮಹಾನಿರ್ದೇಶಕ ಮೇಜರ್ ಜ.ಮೊಹಮ್ಮದ್ ಅಶ್ರಫುಜ್ಜಮಾನ್ ಸಿದ್ದಿಖಿ ನೇತೃತ್ವದ ನಿಯೋಗವೊಂದು ದಿಲ್ಲಿಗೆ ಆಗಮಿಸಿದ್ದು, ಭಾರತೀಯ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಮಹಾನಿರ್ದೇಶಕ ಪ್ರವೀಣ್ ಕುಮಾರ್ ನೇತೃತ್ವದ ನಿಯೋಗದೊಂದಿಗೆ ಮಾತುಕತೆ ನಡೆಸಿದೆ. ಮುಂದಿನ ಮಾತುಕತೆ ನವೆಂಬರ್‌ನಲ್ಲಿ ಢಾಕಾದಲ್ಲಿ ನಡೆಯುವ ನಿರೀಕ್ಷೆಯಿದೆ. ಈ 57ನೇ ದ್ವೈವಾರ್ಷಿಕ ಆವೃತ್ತಿಯ ಡಿಜಿ ಮಟ್ಟದ ಗಡಿ ಸಹಕಾರ ಸಮ್ಮೇಳನವು ಜೂ.8ರಿಂದ 11ರವರೆಗೆ ಬಿಎಸ್‌ಎಫ್‌ನ ಕೇಂದ್ರ ಕಚೇರಿಯಲ್ಲಿ ನಡೆದಿದೆ. ಮಾದಕದ್ರವ್ಯ, ಶಸ್ತ್ರಾಸ್ತ್ರ, ಕಳ್ಳನೋಟು, ಚಿನ್ನ ಮತ್ತಿತರ ನಿಷಿದ್ಧ ವಸ್ತುಗಳ ಕಳ್ಳಸಾಗಣೆ, ಅಕ್ರಮ ಗಡಿ ದಾಟುವಿಕೆ, ಮಾನವ ಕಳ್ಳಸಾಗಣೆಯಂತಹ ಗಡಿಯಾಚೆಯ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಎರಡೂ ಕಡೆಗಳವರು ವಿಸ್ತೃತವಾಗಿ ಚರ್ಚಿಸಿರುವುದಾಗಿ ಬಿಎಸ್‌ಎಫ್ ಹೇಳಿಕೆ ತಿಳಿಸಿದೆ.

ಟ್ರಂಪ್ ಹೇಳಿಕೆ ನಂತರ ತೈಲ ಅಗ್ಗ, ಸೆನ್ಸೆಕ್ಸ್ ಜಿಗಿತ

ಮುಂಬೈ: ಇರಾನ್ ಜತೆಗಿನ ಯುದ್ಧ ಕೊನೆಗೊಂಡಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಬಳಿಕ ಜಾಗತಿಕ ಕಚ್ಚಾ ತೈಲ ಬೆಲೆ ಕುಸಿತ ಕಂಡಿದ್ದು, ಷೇರುಪೇಟೆ ಸೂಚ್ಯಂಕಗಳೂ ಧನಾತ್ಮಕ ಸ್ಪಂದನೆ ವ್ಯಕ್ತಪಡಿಸಿವೆ. ಭಾರತದಲ್ಲಿ ಬಿಎಸ್‌ಇ ಸೆನ್ಸೆಕ್ಸ್ 1,695 ಅಂಕಗಳ ಏರಿಕೆಯನ್ನು ಕಂಡಿದ್ದು, ಎನ್‌ಎಸ್‌ಇ ನಿಫ್ಟಿ ಸಹ 23,600 ಅಂಕಗಳನ್ನು ದಾಟಿದೆ. ಈ ಮೂಲಕ ಮಾರುಕಟ್ಟೆ ಬಂಡವಾಳ 9.71 ಲಕ್ಷ ಕೋಟಿ ರೂ. ಹೆಚ್ಚಳವಾಗಿದೆ. ಶುಕ್ರವಾರದ ವಹಿವಾಟು ಮುಕ್ತಾಯದ ವೇಳೆಗೆ ಬಿಎಸ್‌ಇ ಸೆನ್ಸೆಕ್ಸ್ 1,695.40 ಅಂಕಗಳ, ಅಂದರೆ ಶೇ.2.3ರ ಏರಿಕೆಯೊಂದಿಗೆ 75,527.95 ಅಂಕಗಳನ್ನು ತಲುಪಿತ್ತು. ಆದರೆ, ದಿನದ ವಹಿವಾಟಿನ ವೇಳೆ ಸೆನ್ಸೆಕ್ಸ್ 1,775.47 ಅಂಕಗಳ (ಶೇ.2.4) ಏರಿಕೆಯೊಂದಿಗೆ 75,608.02 ಅಂಕಗಳನ್ನು ತಲುಪಿತ್ತು. ಅದೇ ರೀತಿ ಶುಕ್ರವಾರದ ವಹಿವಾಟು ಅಂತ್ಯಗೊಳಿಸಲು ಎನ್‌ಎಸ್‌ಇ ನಿಫ್ಟಿ 461.30 ಅಂಕಗಳ (ಶೇ.1.99) ಏರಿಕೆಯೊಂದಿಗೆ 23,622.90 ಅಂಕಗಳನ್ನು ತಲುಪಿದೆ. ಇಂಟ್ರಾ–ಡೇ ವಹಿವಾಟಿನ ವೇಳೆ ನಿಫ್ಟಿ ಸೂಚ್ಯಂಕ 483.75 ಅಂಕಗಳ (ಶೇ.2) ಏರಿಕೆಯೊಂದಿಗೆ 23,645.35 ಅಂಕಗಳನ್ನು ತಲುಪಿತ್ತು. ಬಜಾಜ್ ಫೈನಾನ್ಸ್, ಲಾರ್ಸನ್ ಆ್ಯಂಡ್ ಟರ್ಬೊ, ಇಂಟರ್‌ಗ್ಲೋಬ್ ಏವಿಯೇಷನ್, ಟೈಟಾನ್, ಎಟರ್ನಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಏರಿಕೆ ಕಂಡಿವೆ. ಟೆಕ್ ಮಹೀಂದ್ರ ಮತ್ತು ಪವರ್‌ಗ್ರಿಡ್ ಷೇರುಗಳ ಹಿಂದೆ ಉಳಿದುಕೊಂಡಿವೆ. ಕಚ್ಚಾ ತೈಲ ಬೆಲೆ ಇಳಿಕೆ: ಟ್ರಂಪ್ ಹೇಳಿಕೆಯ ನಂತರ ಕಚ್ಚಾ ತೈಲ ಬೆಲೆ ಶೇ.4ರಷ್ಟು ಇಳಿಕೆಯಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್‌ಗೆ 90 ಡಾಲರ್‌ಗೂ ಕಡಿಮೆ ಬೆಲೆಗೆ ಮಾರಾಟವಾಗಿದೆ.



ಮೋದಿ ಫ್ರಾನ್ಸ್ ಪ್ರವಾಸ ಇಂದು

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರದಿಂದ ಫ್ರಾನ್ಸ್ ಮತ್ತು ಸ್ಲೋವಾಕಿಯಾಗೆ ಅಧಿಕೃತ ಭೇಟಿ ನೀಡಲಿದ್ದಾರೆ. ಫ್ರಾನ್ಸ್‌ನಲ್ಲಿ ನಡೆಯುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಅವರು ಜೂ.14ರಂದು ಫ್ರಾನ್ಸ್‌ನ ನೀಸ್ ನಗರದಲ್ಲಿ ನಡೆಯಲಿರುವ ಭಾರತ್ ಇನೋವೇಟ್ಸ್ 2026 ಕಾರ್ಯಕ್ರಮವನ್ನು ಜಂಟಿಯಾಗಿ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾರತದ 120 ನವೋದ್ಯಮಿಗಳು, ಸುಮಾರು 15 ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ 500ಕ್ಕೂ ಹೆಚ್ಚು ಹೂಡಿಕೆದಾರರು ಭಾಗವಹಿಸಲಿದ್ದಾರೆ. ಜಾಗತಿಕ ಕಾರ್ಪೊರೇಟ್ ಸಂಸ್ಥೆಗಳು, ವೆಂಚರ್ ಕ್ಯಾಪಿಟಲ್ ಕಂಪನಿಗಳು, ಪ್ರಮುಖ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು(ಸಿಇಒ) ಹಾಗೂ ಕೈಗಾರಿಕಾ ವಲಯದ ನಾಯಕರು ಸಹ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ. ಪ್ರವಾಸದ ಎರಡನೇ ಹಂತದಲ್ಲಿ, ಪ್ರಧಾನಿ ಮೋದಿ ಅವರು ಪ್ರಧಾನಿ ರಾಬರ್ಟ್ ಫಿಕೋ ಅವರ ಆಹ್ವಾನದ ಮೇರೆಗೆ ಸ್ಲೋವಾಕಿಯಾಗೆ ಐತಿಹಾಸಿಕ ಅಧಿಕೃತ ಭೇಟಿ ನೀಡಲಿದ್ದಾರೆ.

ಪಾಶ್ಚಿಮಾತ್ಯರ ಬೂಟಾಟಿಕೆ ಬಯಲಿಗೆಳೆದ ವಿದೇಶಾಂಗ ಸಚಿವ ಜೈಶಂಕರ್

ಯುರೋಪ್ ಶಸ್ತ್ರಾಸ್ತ್ರ ಭಾರತ ವಿರುದ್ಧ ಬಳಕೆ!

ಹೊಸದಿಲ್ಲಿ: ಪದೇ ಪದೆ ರಷ್ಯಾದಿಂದ ತೈಲ ಖರೀದಿ ವಿಚಾರದಲ್ಲಿ ಭಾರತವನ್ನು ಟೀಕಿಸುವ ಯುರೋಪ್ ರಾಷ್ಟ್ರಗಳಿಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಖಡಕ್ ಪ್ರತ್ಯುತ್ತರ ನೀಡಿದ್ದಾರೆ.

ಇಂದು ನಿನ್ನೆಯ ಕತೆಯಲ್ಲ, ಹಲವು ವರ್ಷಗಳಿಂದ ಯುರೋಪಿಯನ್ನರು ಮಾರಾಟ ಮಾಡಿದ ಶಸ್ತ್ರಾಸ್ತ್ರಗಳು ಭಾರತದ ಮೇಲೆ ದಾಳಿಗೆ ಬಳಕೆಯಾಗುತ್ತಿದ್ದವು. ನಾವು ಭಾರತೀಯರು ಯುರೋಪ್‌ಗೆ ಅಪಾಯ ಆಗುವಂತಹ ಯಾವುದೇ ಕೆಲಸಗಳನ್ನು ಮಾಡಿಲ್ಲ, ನನ್ನ ಪ್ರಕಾರ ಇದು ನ್ಯಾಯವಾದ ಅಂಶ ಎಂದು ಜೈಶಂಕರ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಫಿನ್‌ಲ್ಯಾಂಡ್‌ನಲ್ಲಿ ನಡೆದ ಕುಲ್ತಾರಂತ ಟಾಕ್ಸ್‌ನಲ್ಲಿ ಜಾಗತಿಕ ರಾಜಕೀಯ ಸ್ಪರ್ಧೆ ವಿಷಯದ ಕುರಿತ ಮಾತುಕತೆಯಲ್ಲಿ ಜೈಶಂಕರ್ ಭಾಗವಹಿಸಿದ್ದರು. ಮಾತುಕತೆಯಲ್ಲಿ ಫಿನ್‌ಲ್ಯಾಂಡ್ ಪತ್ರಕರ್ತರೊಬ್ಬರು, ಭಾರತ ರಷ್ಯಾ ಮೇಲೆ ಅತಿಯಾದ ಕಾಳಜಿಯನ್ನು ಹೊಂದಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಪ್ರಶ್ನೆಗೆ ಉತ್ತರಿಸಿದ ಸಚಿವ ಜೈಶಂಕರ್, ವೆಚ್ಚ ಮತ್ತು ಲಭ್ಯತೆ ಆಧಾರದಲ್ಲಿ ನಾವು ತೈಲ ಖರೀದಿಸುತ್ತೇವೆಯೇ ಹೊರತು ರಾಜಕೀಯ ಒತ್ತಡದ ಆಧಾರದ ಮೇಲೆ ಅಲ್ಲ. ಯುರೋಪಿಯನ್ನರು ನಮ್ಮ ಸಾಂಪ್ರದಾಯಿಕ ತೈಲ ಪೂರೈಕೆದಾರ ಮಧ್ಯಪ್ರಾಚ್ಯದಿಂದ ತೈಲ ಖರೀದಿಸುತ್ತಿದ್ದಾರೆ. ಈ ವೇಳೆ ರಷ್ಯಾ ತೈಲ ಲಭ್ಯವಿತ್ತು. ಹೀಗಾಗಿ ರಷ್ಯಾದಿಂದ ತೈಲ ಖರೀದಿಸುವ ಅಗತ್ಯ ಎದುರಾಯಿತು ಎಂದು ಮನದಟ್ಟು ಮಾಡಿದ್ದಾರೆ.

ಆಯ್ದ ವಿಚಾರಗಳಲ್ಲಷ್ಟೇ ನೈತಿಕತೆ: ಪಾಶ್ಚಿಮಾತ್ಯ ಶಕ್ತಿಗಳು ಆಯ್ದ ವಿಚಾರಗಳಲ್ಲಿ ಮಾತ್ರ ಯಾಕೆ ನೈತಿಕ ಮಾನದಂಡವನ್ನು ಪರಿಗಣಿಸುತ್ತವೆ? ಎಂದು ಜೈಶಂಕರ್ ಟೀಕಿಸಿದ್ದಾರೆ. ಜಾಗತಿಕ ತೈಲ ಮಾರುಕಟ್ಟೆಯನ್ನು ಸ್ಥಿರಗೊಳಿಸುವಲ್ಲಿ ಭಾರತ ಪಾತ್ರವನ್ನು ಅಮೆರಿಕ ಶ್ಲಾಘಿಸಿತ್ತೆಂದು ವಾಷಿಂಗ್ಟನ್ ಗುರಿಯಾಗಿಸಿ ಹೇಳಿದ್ದಾರೆ. ಜಾಗತಿಕ ತೈಲ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಭಾರತವು ರಷ್ಯಾದಿಂದ ತೈಲ ಖರೀದಿಸಬೇಕು ಎಂದು ಅಮೆರಿಕ ಹೇಳಿದ್ದನ್ನು ಜನ ಮರೆಯಬಾರದು ಎಂದಿದ್ದಾರೆ.



ನಮ್ಮ ಶಸ್ತ್ರಾಸ್ತ್ರ ನಿಮ್ಮ ವಿರುದ್ಧ ಬಳಕೆ ಆಗಿಲ್ಲ

ಯಾವುದೇ ಯುರೋಪ್ ರಾಷ್ಟ್ರಗಳು ಭಾರತೀಯ ಶಸ್ತ್ರಾಸ್ತ್ರಗಳಿಂದ ದಾಳಿಗೆ ಒಳಗಾಗಿಲ್ಲ, ಶಸ್ತ್ರಾಸ್ತ್ರಗಳ ವಿಷಯದಲ್ಲಿ ಯುರೋಪ್ ರಾಷ್ಟ್ರಗಳೂ ಇದೇ ಮಾತನ್ನು ಭಾರತಕ್ಕೆ ಹೇಳಬಹುದಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಜೈಶಂಕರ್ ಟೀಕಾಸ್ತ್ರ ಪ್ರಯೋಗಿಸಿದ್ದಾರೆ.

ಮಾಸಿಕ 30 ಸಾವಿರ ರೂ. ಆದಾಯ ನಿಗದಿ ಮಾಡಿದ ಸುಪ್ರೀಂ

ಗೃಹಿಣಿಯರು ರಾಷ್ಟ್ರ ನಿರ್ಮಾತೃಗಳು

ಹೊಸದಿಲ್ಲಿ: ಗೃಹಿಯರು ಕೇವಲ ಮನೆಯ ನಿರ್ವಹಣೆಗೆ ಸೀಮಿತವಾಗಿರುವವರಲ್ಲ, ಅವರು ದೇಶ ನಿರ್ಮಾಣದ ಪ್ರಮುಖ ಶಕ್ತಿಯಾಗಿದ್ದಾರೆ ಎಂದು ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿರುವ ಭಾರತದ ಸುಪ್ರೀಂ ಕೋರ್ಟ್, ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳಲ್ಲಿ ಗೃಹಿಯರ ಸೇವೆಯ ಮೌಲ್ಯಮಾಪನಕ್ಕಾಗಿ ಮಾಸಿಕ 30 ಸಾವಿರವನ್ನು ಕನಿಷ್ಠ ಕಾಲ್ಪನಿಕ ಆದಾಯವಾಗಿ ಪರಿಗಣಿಸುವಂತೆ ಐತಿಹಾಸಿಕ ತೀರ್ಪು ನೀಡಿದೆ. ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎನ್. ಕೋಟೀಶ್ವರ್ ಸಿಂಗ್ ಅವರಿದ್ದ ಪೀಠವು, ಗೃಹಿಯರ ಗೃಹ ಆರೈಕೆ ಸೇವೆಯ ನಷ್ಟವನ್ನು ಪ್ರತ್ಯೇಕ ಪರಿಹಾರದ ಶೀರ್ಷಿಕೆಯಾಗಿ ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಿದೆ. ಗೃಹಿಯರ ಶ್ರಮವನ್ನು ಕೇವಲ ವೇತನದ ಕೆಲಸದ ಮಾನದಂಡಗಳಿಂದ ಅಳೆಯಲು ಸಾಧ್ಯವಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಗೃಹಿಣಿಯರು ಕುಟುಂಬದ ಬೆಳವಣಿಗೆಗೆ ಮಾತ್ರವಲ್ಲ, ರಾಷ್ಟ್ರದ ನಿರ್ಮಾಣಕ್ಕೂ ಕೊಡುಗೆ ನೀಡುತ್ತಾರೆ. ಆದ್ದರಿಂದ ಅವರನ್ನು ರಾಷ್ಟ್ರ ನಿರ್ಮಾತೃಗಳು ಎಂದು ಗುರುತಿಸಬೇಕು ಎಂದು ನ್ಯಾಯಪೀಠ ಹೇಳಿದೆ. 2001ರಲ್ಲಿ ಪಂಜಾಬ್‌ನಲ್ಲಿ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಮಹಿಳೆಯೊಬ್ಬರ ಪ್ರಕರಣದ ವಿಚಾರಣೆ ವೇಳೆ ಈ ಮಹತ್ವದ ತೀರ್ಪು ಹೊರಬಿದ್ದಿದೆ. ಗೃಹಿಣಿಯರ ಕೊಡುಗೆ ಮನೆಯ ಸುಗಮ ನಿರ್ವಹಣೆ, ಮಕ್ಕಳ ಪೋಷಣೆ, ಜೀವನ ಸಂಗಾತಿಗೆ ಬೆಂಬಲ ಹಾಗೂ ಹಿರಿಯರ ಆರೈಕೆ ಸೇರಿದಂತೆ ಹಲವು ಆಯಾಮಗಳನ್ನು ಹೊಂದಿದೆ ಎಂದು ಕೋರ್ಟ್ ಉಲ್ಲೇಖಿಸಿದೆ. ಇದುವರೆಗೆ ಗೃಹಿಣಿಯರನ್ನು ಅನೇಕ ಪ್ರಕರಣಗಳಲ್ಲಿ ಕೌಶಲ್ಯರಹಿತ ಅಥವಾ ಅಲ್ಪ ಆದಾಯದ ಕಾರ್ಮಿಕರಿಗೆ ಹೋಲಿಸಿ ಪರಿಹಾರ ನಿಗದಿಪಡಿಸಲಾಗುತ್ತಿತ್ತು. ಆದರೆ ಈ ತೀರ್ಪಿನ ಮೂಲಕ ಗೃಹಿಯರ ವೇತನೇತರ ಶ್ರಮದ ಆರ್ಥಿಕ ಮೌಲ್ಯವನ್ನು ನ್ಯಾಯಾಂಗವು ಅಧಿಕೃತವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೆ, ಮೂರು ವರ್ಷಗಳಿಗೊಮ್ಮೆ ಈ ಮೊತ್ತವನ್ನು ಶೇ.10ರಷ್ಟು ಹೆಚ್ಚಳ ಮಾಡುವ ವ್ಯವಸ್ಥೆಯನ್ನೂ ಕೋರ್ಟ್ ಸೂಚಿಸಿದೆ.



ಜಿಲ್ಲಾ ಪಂಚಾಯತ ಉತ್ತರ ಕನ್ನಡ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ

Email: dhoukannada@gmail.com
Phone: 08382-226339, Fax: 08382-222452

ನಂ:ಜಿಆಕುಕ/ಜಯೋಕಾಸಾಂ/ಡಿಎಂಎಫ್/ವಿವ–59(3)/2025–26
ದಿನಾಂಕ: 12–06–2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯುರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ : 2025–26ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ ಅವಶ್ಯಕವಿರುವ ಶವಗಳನ್ನಿಡುವ ಡೀಪ್ ಫ್ರೀಜರ್ ಸಲಕರಣೆಯನ್ನು ಪೂರೈಸಲು ಇ–ಟೆಂಡರ್ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ 2025–26 ನೇ ಸಾಲಿಗೆ ಅವಶ್ಯಕವಿರುವ ಶವಗಳನ್ನಿಡುವ ಡೀಪ್ ಫ್ರೀಜರ್ ಸಲಕರಣೆಗಳನ್ನು ಪೂರೈಸಲು ಈ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.

ಇ– ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್

ಕ್ರ. ಸಂ	ವಿವರಗಳು	ದಿನಾಂಕ
1	ಇ.ಎಂ.ಡಿ ಮೊತ್ತ 2.5%	ರೂ. 60,000/–
2	ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ	ದಿನಾಂಕ: 12–06–2026, ಬೆಳಿಗ್ಗೆ 10.00 ಘಂಟೆಯಿಂದ
3	ಟೆಂಡರ್‌ನಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 16–06–2026 4–30 ಘಂಟೆಯವರೆಗೆ
4	ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 20–06–2026 ರ ಸಾಯಂಕಾಲ 5–00 ಘಂಟೆಯವರೆಗೆ
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 22–06–2026 ಸಾಯಂಕಾಲ 5–00 ಘಂಟೆಗೆ
6	ಟೆಂಡರ ಅಂದಾಜು ಮೊತ್ತ	ರೂ. 24,00,000/– ಮಾತ್ರ

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಉ.ಕ. ಕಾರವಾರ.

ಫಾರ್ಮ್ ಜಿ

ತೆಲಂಗಾಣದಲ್ಲಿ ರಿಫೈನ್ಡ್ ಗೋಧಿ ಹಿಟ್ಟು, ಸೆಮೋಲಿನಾ, ಇಡೀ ಗೋಧಿಯ ಹಿಟ್ಟು ಮತ್ತು ಹೊಟ್ಟು ಉತ್ಪಾದನೆ ಮತ್ತು ಪ್ಯಾಕೇಜಿಂಗ್‌ನಲ್ಲಿ ತೊಡಗಿಸಿಕೊಂಡಿರುವ

ಮೆಸರ್ಸ್ ಮಹರ ಪುಷ್ಪಾ ಅಗ್ರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ಗೆ ನಿರ್ಣಯ ಯೋಜನೆಯನ್ನು ಸಲ್ಲಿಸಲು ಆಸಕ್ತಿ ಅಭಿವ್ಯಕ್ತಿಯ ಆಹ್ವಾನ

[ಭಾರತದ ದಿವಾಳಿತನ ಮತ್ತು ಪಾಪರಿಕೆ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ಮಂಡಳಿ ನಿಬಂಧನೆಗಳು-2016ರ ನಿಬಂಧನೆ 36ಎ(1) ಅಡಿಯಲ್ಲಿ]

ಸೂಕ್ತ ವಿವರಗಳು

1.	ಕಾರ್ಪೊರೇಟ್ ಸಾಲಗಾರರ ಹೆಸರು, ಪಾನ್ & ಸಿಐಎನ್/ಎಲ್‌ಎಲ್‌ಪಿ ನಂಬರ್ ಸಹಿತ	ಮೆಸರ್ಸ್ ಮಹರ ಪುಷ್ಪಾ ಅಗ್ರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಸಿಐಎನ್: ಯು15400ಟಿಜಿ2015ಪಿಟಿಸಿ082028 ಪಾನ್: ಎಎಐಸಿಎಂ2898ಎನ್
2.	ನೋಂದಾಯಿತ ಕಚೇರಿ ವಿಳಾಸ.	ಕೋಶಲ್ ನಿವಾಸ್, ನಂ. 55/ಇ, 15ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು– 560040
3.	ವೆಬ್‌ಸೈಟ್‌ನ ಯುಆರ್‌ಎಲ್	ಸಿ.ಡಿಯ ವೆಬ್‌ಸೈಟ್ ಲಭ್ಯವಿಲ್ಲ
4.	ಬಹುತೇಕ ನಿಶ್ಚಿತ ಆಸ್ತಿಗಳು ಇರುವ ಸ್ಥಳದ ವಿವರಗಳು	ಪ್ಲಾಂಟ್ ಸ್ಥಳ: ಚೆನ್ನಾಯಿಕೆಪಲ್ಲಿ, ಕೊಂದುರ್ಗ್, ರಂಗಾರೆಡ್ಡಿ, ತೆಲಂಗಾಣ–509207 ವಿಳಾಸದಲ್ಲಿದೆ.
5.	ಮುಖ್ಯ ಉತ್ಪನ್ನ/ ಸೇವೆಗಳ ಸಂಸ್ಥಾಪಿತ ಸಾಮರ್ಥ್ಯ	ದಿನಕ್ಕೆ 600 ಮೆಟ್ರಿಕ್ ಟನ್
6.	ಕಳೆದ ಹಣಕಾಸು ವರ್ಷದಲ್ಲಿ ಮಾರಾಟವಾದ ಮುಖ್ಯ ಉತ್ಪನ್ನ/ ಸೇವೆಗಳ ಪ್ರಮಾಣ ಮತ್ತು ಮೌಲ್ಯ	ಹಣಕಾಸು ವರ್ಷ 2022–23– ರೂ. 116.42 ಕೋಟಿ (ಪರಿಶೋಧಿತ) ಹಣಕಾಸು ವರ್ಷ 2023–24– ರೂ. 57.69 ಕೋಟಿ (ಪರಿಶೋಧಿತ) ಪ್ರಸ್ತುತ ಈ ಘಟಕವು ಕಾರ್ಯಾಚರಣೆ ನಡೆಸುತ್ತಿಲ್ಲ
7.	ಉದ್ಯೋಗಿಗಳು/ ಕಾರ್ಮಿಕರ ಸಂಖ್ಯೆ	ಸಮಾಪನಾ ದಿನಾಂಕ ಆರಂಭಕ್ಕೆ ಇದ್ದಂತೆ 4
8.	ಕೊನೆಯದಾಗಿ ಕಳೆದ ಎರಡು ವರ್ಷಗಳಲ್ಲಿ ಲಭ್ಯವಿರುವ ಹಣಕಾಸು ಹೇಳಿಕೆಗಳು (ವೇಳಾಪಟ್ಟಿ ಸಹಿತ), ಸಾಲದಾರರ ಪಟ್ಟಿ, ಪ್ರಕ್ರಿಯೆಯ ಆ ಬಳಿಕದ ಘಟನಾವಳಿಗಳ ಸೂಕ್ತ ದಿನಾಂಕಗಳು ಈ ಯುಆರ್‌ಎಲ್‌ನಲ್ಲಿ ಲಭ್ಯ:	ವಿವರವಾದ ಆಸಕ್ತಿ ಅಭಿವ್ಯಕ್ತಿ ಆಹ್ವಾನ (ಪ್ರೊಸೆಸ್ ಡಾಕ್ಯುಮೆಂಟ್) ಅನ್ನು mahara.cirp@gmail.com ಇ–ಮೇಲ್‌ಗೆ ಸಂಪರ್ಕಿಸುವ ಮೂಲಕ ಮಾಹಿತಿಗಳನ್ನು ಪಡೆಯಬಹುದಾಗಿದೆ.
9.	ಸಂಹಿತೆಯ ಸೆಕ್ಷನ್ 25(2)(ಎಚ್) ಅಡಿಯಲ್ಲಿ ನಿರ್ಣಯ ಅರ್ಜಿದಾರರಿಗೆ ಅರ್ಹತೆ ಈ ಯುಆರ್‌ಎಲ್‌ನಲ್ಲಿ ಲಭ್ಯವಿದೆ:	www.ibbi.gov.in ನಲ್ಲಿ ಲಭ್ಯವಿದೆ ಅಥವಾ mahara.cirp@gmail.com ಗೆ ಇ–ಮೇಲ್ ಕಳುಹಿಸುವ ಮೂಲಕವೂ ಪಡೆಯಬಹುದಾಗಿದೆ.
10.	ಆಸಕ್ತಿ ಅಭಿವ್ಯಕ್ತಿ ಸ್ವೀಕರಿಸಲು ಕೊನೆಯ ದಿನಾಂಕ	ಮೂಲ ಕೊನೆಯ ದಿನಾಂಕ:18.05.2026 ವಿಸ್ತರಿತ ಕೊನೆಯ ದಿನಾಂಕ: 28.06.2026
11.	ಸಂಭಾವ್ಯ ನಿರ್ಣಯ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆಯ ದಿನಾಂಕ	08.07.2026ಅಥವಾ ಇಒಐ ಸ್ವೀಕರಿಸುವ ಕೊನೆಯ ದಿನಾಂಕದ ಬಳಿಕ ಹತ್ತು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
12.	ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	13.07.2026 ಅಥವಾ ತಾತ್ಕಾಲಿಕ ಸಂಭಾವ್ಯ ನಿರ್ಣಯ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದ ಬಳಿಕ ಐದು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
13.	ಸಂಭಾವ್ಯ ನಿರ್ಣಯ ಅರ್ಜಿದಾರರ ಅಂತಿಮ ಪಟ್ಟಿ ಬಿಡುಗಡೆಯ ದಿನಾಂಕ	23.07.2026 ಅಥವಾ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ಬಳಿಕ ಹತ್ತು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
14.	ಮಾಹಿತಿ ಒಡಂಬಡಿಕೆ, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ನಿರ್ಣಯ ಯೋಜನೆಗಳ ಮನವಿಯನ್ನು ಸಂಭಾವ್ಯ ನಿರ್ಣಯ ಅರ್ಜಿದಾರರಿಗೆ ನೀಡುವ ದಿನಾಂಕ	28.07.2026 ಅಥವಾ ಸಂಭಾವ್ಯ ನಿರ್ಣಯ ಅರ್ಜಿದಾರರ ಅಂತಿಮ ಪಟ್ಟಿ ಬಿಡುಗಡೆಯ ದಿನಾಂಕದ ಬಳಿಕ ಐದು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
15.	ನಿರ್ಣಯ ಯೋಜನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	27.08.206 ಅಥವಾ ಮಾಹಿತಿ ಒಡಂಬಡಿಕೆ, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ಆರ್‌ಎಫ್‌ಆರ್‌ಪಿಗಳನ್ನು ಸಂಭಾವ್ಯ ನಿರ್ಣಯ ಅರ್ಜಿದಾರರಿಗೆ ನೀಡುವ ದಿನಾಂಕದ ಬಳಿಕ ಮೂವತ್ತು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
16.	ಇಒಐ ಸಲ್ಲಿಕೆಗೆ ಪ್ರೊಸೆಸ್ ಇ–ಮೇಲ್ ಐಡಿ	mahara.cirp@gmail.com
17.	ಎಂಎಸ್‌ಎಂಇ ಆಗಿ ಕಾರ್ಪೊರೇಟ್ ಸಾಲದಾರರ ನೋಂದಣಿ ಸ್ಥಿತಿಗತಿ	ಉದ್ಯಮ್–ಟಿಎಸ್–09–0051937 ದಿನಾಂಕ: 30.12.2022

ದಿನಾಂಕ: 13.06.2026
ಸ್ಥಳ: ಹೈದರಾಬಾದ್

ಸಹಿ/–
ರಾಜೇಶ್ ಚಿಲ್ಲಾಳೆ, ನಿರ್ಣಯ ವೃತ್ತಿಪರರು
ಮೆಸರ್ಸ್ ಮಹರ ಪುಷ್ಪಾ ಅಗ್ರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್
ಐಬಿಬಿಐ/ಐಪಿಎ–001/ಐಪಿ–ಪಿ00699/2017–2018/11226
ಎಎಫ್‌ಎ ವಿವರಗಳು: 31.12.2026ರವರೆಗೆ ಮಾನ್ಯತೆ ಹೊಂದಿದೆ
ಪಿ–725, ಪಶ್ಚಿಮ ಪಾರ್ಶ್ವ, ಓಯು ಕಾಲೋನಿ, ಎಚ್‌ಎಸ್ ದರ್ಗಾ, ಓಯು ಕಾಲೋನಿ, ಹೈದರಾಬಾದ್– 500008

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.

ಐ.ಎಸ್.ಆರ್ ರಸ್ತೆ, ಚಿತ್ತವಾಡ್ಗಿ, ಹೊಸಪೇಟೆ–583 201,
ದೂರವಾಣಿ ಸಂಖ್ಯೆ: 08394–227749
E-mail:hospethuda@gmail.com

ಸಂಖ್ಯೆ:ಹೊನಅಪ್ರಾ:ಎ1/ಭೂಉಬ 05/2026–27 ದಿನಾಂಕ:11.06.2026

::ಸಾರ್ವಜನಿಕ ಪ್ರಕಟಣೆ ::

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14 ಎ ರಡಿಯಲ್ಲಿ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಪೇಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ ತಾ: ಚಿತ್ತವಾಡ್ಗಿ ಗ್ರಾಮದ ಸ.ನಂ.278/4 ರಲ್ಲಿ 0.22 ಎಕರೆ, ಸ.ನಂ.280/1 ರಲ್ಲಿ 0.45 ಎಕರೆ,ಸ.ನಂ.280/2 ರಲ್ಲಿ 0.45 ಎಕರೆ, ಮತ್ತು ಸ.ನಂ.280/3 ರಲ್ಲಿ 0.86 ಎಕರೆ ಒಟ್ಟು 1.98 ಎಕರೆ ಜಮೀನನ್ನು ಶ್ರೀ.ಎ.ಮನೋಹರ ಇವರ ಮಾಲೀಕತ್ವದಲ್ಲಿ ಇರುತ್ತದೆ.

ಸದರಿ ಜಮೀನು ಅನುಮೋದಿತ ಮಹಾಯೋಜನೆ(ಪ–1)ರಲ್ಲಿ ಕೃಷಿ ವಲಯದಲ್ಲಿ ಬರುತ್ತದೆ. ಕಾಲುವೆ ಮೇಲಿನ ಸೇವಾ ರಸ್ತೆಯಿಂದ ಸಂಪರ್ಕ ಇರುತ್ತದೆ. ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡಿ, ವಿನ್ಯಾಸವನ್ನು ಅಭಿವೃದ್ಧಿ ಪಡಿಸಿ ಕೈಗೆಟುಕುವ ಧರದಲ್ಲಿ ನಿವೇಶನಗಳನ್ನು ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

ಕಾರಣ ಪ್ರಸ್ತಾಪಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಸಾರ್ವಜನಿಕರ ಸಲಹೆ/ಆಕ್ಷೇಪನೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಆಯುಕ್ತರು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಲಿಖಿತ ಸಲಹೆ/ ಆಕ್ಷೇಪಣೆಗಳನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸುವಂತೆ ತಿಳಿಸಲಾಗಿದೆ. ಅವಧಿಯ ನಂತರ ಬಂದ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–ಆಯುಕ್ತರು,
ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/137

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ: VTU/BGM/SAP/CW1/T-748/2026-27/1153 ದಿನಾಂಕ: 12–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. **ಕೆಲಸದ ಹೆಸರು: Tender for Establishment of M. Tech Laboratory in Quantum Technologies at VTU-VRIF-TCOE Centre, VTU Regional Office, Bengaluru.** ಟೆಂಡರ್ ಪ್ರೀ ಬಿಡ್ ಮೀಟಿಂಗ್ ದಿನಾಂಕ: **17–06–2026** ರಂದು **ಬೆಳಿಗ್ಗೆ 11.00 ಗಂಟೆಗೆ ಆನ್‌ಲೈನ್ ಮೂಲಕ**. ಟೆಂಡರಿಗಿಟ್ಟ ಮೊತ್ತ: ರೂ. **4,99,87,160/–**, ಮುಂಗಡ ಠೇವಣಿ ಮೊತ್ತ: ರೂ. **7,50,000/–**. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **27–06–2026** ರಂದು ಮಧ್ಯಾಹ್ನ **2.30** ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: **29–06–2026** ರಂದು ಬೆಳಿಗ್ಗೆ **11.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.vtu.ac.in** ಮತ್ತು **www.kppp.karnataka.gov.in** ನೋಡಬಹುದು.

ಸಹಿ/–
ಕುಲಸಚಿವರು

ವಾಸಾಸಂಇ/ಬೆಳಗಾವಿ/421/ಅಡ್ವರ್ಟೋರ್/2026–27

Cr. Misc. No: 22/2026

IN THE COURT OF HON'BLE IIIrd JMFC COURT HUBLI AT: HUBBALLI

Petitioner : Muhammad Zakir S/o Hajrathsab Dharwad

V/S

Respondents : 1) The Commissioner Hubballi-Dharwad Municipal Corporation, Sir Siddappa Kambali Marg, Lamigton Road, Hubballi & another.

DRAFT PUBLICATION CITATION SUMMONS UNDER ORDER V RULE 20 (1) (1A) R/W SEC 26 OF CPC.

To, 1) The Comissioner Hubballi-Dharwad Municipal Corporation, Sir Siddappa Kambali Marg, Lamigton Road, Hubballi.
2) Assistant Commissioner, Zonal No. 8, Hubballi-Dharwad Municipal Corporation Behind Town Hall, JC Nagar, Hubballi.

Whereas the above named Petitioner had instituted this *petition against respondent no. 1 & 2 above mentioned, whereas you are all and general public is hereby cautioned and informing that the deceased **late Hazarathsab S/o Nannesab Dharwad (ದಿ. ಹಜರತಸಾಬ ತಂದೆ ನನ್ನೇಸಾಬ ಧಾರವಾಡ)** with date of death 28-01-2022, Age: 76 years at his resident H.No.44/45, Nehru College Road, Mantoor Road, Hubballi had lost his breathe on 28-01-2022, the petitioner is being one of his successor and son to the deceased, therefore, the public at large is hereby issued this citation publication to put in their individual claim or objections for such claim as prayed before this Hon'ble court for the entry in the death registered maintained by the respondent no. 1 and 2 in the name of **late Hazarathsab S/o Nannesab Dharwad (ದಿ. ಹಜರತಸಾಬ ತಂದೆ ನನ್ನೇಸಾಬ ಧಾರವಾಡ)** with date of death 28-01-2022 Age: 76 years at his resident H.No.44/45, Nehru College Road, Mantor Road, Hubballi who was the father of petitioner in this petition accordingly the public at large and interested persons who have any claim against the said claim of the petitioner in this petition is issued citation publication as provided **under order V Rule 20(1) (1-A) of CPC** and order of this Hon'ble Court to appear before this court personally of through advocate concern to defend the petition filed by the petitioner according to law on 18-07-2026 at 11-00 am failing which the petition shall be heard in your absence according to law.

Given under my hand & Seal of the court dt. 11-06-2026.

COURT SEAL

Z.K. Tatagar
Advocate for the Petitioners

By order of the Court
Sd/- Sheristedar,
Hon'ble III- J.M.F.C. Court, Hubballi

ಸಾರ್ವಜನಿಕ ನೋಟೀಸು

ನಾನು, ಸಿ.ಪಿ.ಬೀಳಗಿ, ವಕೀಲರು, ಮುಧೋಳ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ

ಬೆಳಗಾವಿ ಜಿಲ್ಲಾ ಬೆಳಗಾವಿ ತಾಲೂಕಿನ ಬೆಳಗಾವ ನಗರದ ಹಿಂಡಲಗಾ ರಿ.ಸ.ನಂ.170 ಪ್ಲಾಟ ನಂ.42 ವಿಸ್ತೀರ್ಣ 40×60 ಆಸ್ತಿಗೆ ಸಂಬಂಧಿಸಿದಂತೆ ಈ ಆಸ್ತಿಯ ಮಾಲೀಕರಾದ ಕಮೀಷನರ ಕಾರ್ಪೋರೇಷನ ಸಿಟಿ ಬೆಳಗಾವ ಇವರು ಶ್ರೀಮತಿ ಆಶಾ ಚಂದ್ರಗೌಡ ಪಾಟೀಲ ಇವರಿಗೆ ಬರೆದುಕೊಟ್ಟ ಖರೀದಿ ಪತ್ರ ದಸ್ತ ನಂ.BEL–I–05518–2004–05, CD No BELD 30 ದಿನಾಂಕ:25/10/2004 ಇದ್ದು ಸದರ ಆಸ್ತಿಯ ಈಗಿನ ಮಾಲೀಕರಾದ–ಶ್ರೀಮತಿ ಆಶಾಚಂದ್ರಗೌಡ ಪಾಟೀಲ ಸದರ ದಸ್ತನ್ನು ಬೆಳಗಾವಿ ಯಲ್ಲಿ ಝೂರಾಕ್ಸ್ ಮಾಡಿಸಲು ಹೋದಾಗ ನಜರ ಚೂಕಿಯಿಂದ ಕಳೆದುಕೊಂಡಿದ್ದು, ಎಷ್ಟು ಹುಡುಕಿದರು ಸಿಕ್ಕಿರುವುದಿಲ್ಲ ಮತ್ತು ಅದನ್ನು ಯಾವುದೇ ಸಾಲಕ್ಕೆ ಆಧಾರವಾಗಿಟ್ಟಿಲ್ಲ ಅಂತಾ ತಿಳಿಸಿರುತ್ತಾರೆ. ಸದರಿ ಖರೀದಿಪತ್ರ ಯಾರಲ್ಲಿಯಾದರೂ ಸಾಲಕ್ಕೆ ಆಧಾರವಾಗಿ ಇದ್ದರೇ ಅಥವಾ ಸದರಿ ಆಸ್ತಿಯ ಮೇಲೆ ಯಾರದಾದರೂ ಹಕ್ಕು ವ ಹಿತಾಸಕ್ತಿ ಮತ್ತು ಋಣಭಾರ, ಖರೀದಿ ಕರಾರು, ಕೋರ್ಟ ವ್ಯಾಜ್ಯ, ಮುಟ್ಟುಗೋಲು ಆದೇಶ ವಗೈರೆ ಇದ್ದರೇ ಅಂತವರು ಈ ಪ್ರಕಟಣೆ ಹೊರಡಿಸಿದ ಏಳು(07) ದಿವಸಗಳ ಒಳಗಾಗಿ ಲಿಖಿತವಾಗಿ ಮತ್ತು ಆಧಾರ ಸಹಿತವಾಗಿ ನನ್ನ ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕು.

ದಿನಾಂಕ :10/06/2026

ಸಿ.ಪಿ.ಬೀಳಗಿ, ವಕೀಲರು,
ಮುಧೋಳ, ಜಿಲ್ಲಾ: ಬಾಗಲಕೋಟ
ಮೊ:9880907052

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು–560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080–25586321
E-mail: ho@kspcb.gov.in, Website: https://kspcb.karnataka.gov.in

ಮಾನಿಮಂ/03/ಪಿಪಿಳ/ಗಣಿ/ಪಸಾಸ/2026–27/974 ದಿನಾಂಕ: 11.06.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ. ಬಸವರಾಜ್ ಎಸ್. ಮಲ್ಲಿ ಪಾಟೀಲ್ ಇವರು ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು, ಹೆಡಿಗಿನಾಳ ಗ್ರಾಮದ ಸರ್ವೆ ನಂ. 283/1, 284, 286/1, 287/4 ಮತ್ತು 287/3ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯಲ್ಲಿರುವ "ಸಾಮಾನ್ಯ ಮರಳು ಬ್ಲಾಕ್–ಆರ್‌ಎಸ್‌ಬಿ–52" ರಲ್ಲಿ ಒಟ್ಟು 12.20 ಎಕರೆ (5.058 ಹೆಕ್ಟೇರ್) ಸರ್ಕಾರಿ ಕಂದಾಯ ಭೂಮಿಯಲ್ಲಿ ವಾರ್ಷಿಕ 25,000 ಟನ್ ಉತ್ಪಾದನಾ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷಗಳ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ಮತ್ತು ತಿದ್ದುಪಡಿಗಳಂತೆ ಬಿ1 ವರ್ಗದ ಚಟುವಟಿಕೆ 1(ಎ) – 'ಖನಿಜಗಳ ಗಣಿಗಾರಿಕೆ' ವರ್ಗವೆಂದು ಪರಿಗಣಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ **14.09.2006ರ** (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 84 MIN 2026, ದಿನಾಂಕ:**16.04.2026** ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ **ದಿನಾಂಕ: 18.04.2026ರ** ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಯಚೂರು, ಇವರ ಪತ್ರ **ದಿನಾಂಕ: 27.05.2026ರಲ್ಲಿ** ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ: ಶ್ರೀ. ಬಸವರಾಜ್ ಎಸ್. ಮಲ್ಲಿ ಪಾಟೀಲ್, ತಂದೆ ಶಂಕರಗೌಡ ಮಲ್ಲಿ ಪಾಟೀಲ್,** ತಿಡಿಗೋಳ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ–584 128.
2. **ಉದ್ದೇಶಿತ ಯೋಜನೆಯ ಸ್ಥಳ:** ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು, ಹೆಡಿಗಿನಾಳ ಗ್ರಾಮದ ಸರ್ವೆ ನಂ. 283/1, 284, 286/1, 287/4 ಮತ್ತು 287/3ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯಲ್ಲಿರುವ "ಸಾಮಾನ್ಯ ಮರಳು ಬ್ಲಾಕ್–ಆರ್‌ಎಸ್‌ಬಿ–52".
3. **ಉದ್ದೇಶಿತ ಯೋಜನೆಯ ವಿವರ :** ವಾರ್ಷಿಕ 25,000 ಟನ್ ಉತ್ಪಾದನಾ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷಗಳ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ :** ದಿನಾಂಕ : 13.07.2026 (ಸೋಮವಾರ), ಸಮಯ : ಬೆಳಿಗ್ಗೆ 11:00 ಗಂಟೆ, ಸ್ಥಳ: ಆಂಜನೇಯ ಸ್ವಾಮಿ ದೇವಸ್ಥಾನ, ಹಳೇಊರು, ಹೆಡಿಗಿನಾಳ, ಸಿಂಧನೂರು.
5. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ. :** ಅ. ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು ಆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ, ರಾಯಚೂರು. ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಜಿಲ್ಲೆ, ರಾಯಚೂರು. ಈ. ತಹಶೀಲ್ದಾರರ ಕಾರ್ಯಾಲಯ, ಸಿಂಧನೂರು ತಾಲ್ಲೂಕು, ಉ. ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಯಚೂರು. ಊ. ನಗರ ಸಭೆ ಕಾರ್ಯಾಲಯ, ಸಿಂಧನೂರು, ರಾಯಚೂರು ಜಿಲ್ಲೆ.
ಋ. ಗ್ರಾಮ ಪಂಚಾಯತ್ ಕಾರ್ಯಾಲಯ, ಹೆಡಿಗಿನಾಳ ಗ್ರಾಮ, ಸಿಂಧನೂರು ತಾಲ್ಲೂಕು. ಎ. ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ. ಏ. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು. ಐ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು–560 001. ಒ. ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮುಧೋಳ

ಕ್ರಮ ಸಂಖ್ಯೆ: ಕೃಉಮಾಸ (ಮ):91/2026–27 ದಿನಾಂಕ: 11–06–2026

ಅಲ್ಪಾವಧಿ ಟೆಂಡರ ಪ್ರಕಟಣೆ

ಈ ಮೂಲಕ ಪೇಟೆಕಾರ್ಯಕರ್ತರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮುಧೋಳ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವಿವಿಧ ಕಟ್ಟಡಗಳಿಗೆ ಸಮಿತಿಯಿಂದ ಲೈಸನ್ಸ ಪಡೆದ ಅರ್ಹ ಪೇಟೆಕಾರ್ಯಕರ್ತರಿಗೆ ನಿಯಮ 13 ರಡಿ ಮತ್ತು ಸಾರ್ವಜನಿಕರಿಗಾಗಿ ನಿಯಮ 14 ರಡಿ ನಿಯಮಾನುಸಾರ ಲೀವ್& ಲೈಸನ್ಸ ಫೀಆಧಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ 33 ತಿಂಗಳ ನಂತರ ಪ್ರತಿಶತ 5 ರಷ್ಟು ಲೀವ್& ಲೈಸನ್ಸ ಫೀ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಕೇಳಿದಾಗ ಬಿಟ್ಟುಕೊಡುವ ಷರತ್ತಿಗೊಳಪಟ್ಟು ಈ ಕೆಳಗಿನ ಕಟ್ಟಡಗಳಿಗೆ ಸಮಿತಿಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ.

ಮುಖ್ಯ ಮಾರುಕಟ್ಟೆ ಪ್ರಾಂಗಣ ಮುಧೋಳ

ಅ ನಂ	ಕಟ್ಟಡಗಳ ವಿವರ	ನಿಗದಿ ಪಡಿಸಿದ ಮಾಸಿಕ ಲೀ&ಲೈ ಫೀದರ	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಷರಾ
1	ಮುಖ್ಯ–ಮಾರುಕಟ್ಟೆ ಮುಧೋಳದಲ್ಲಿ ಹರಾಜುಕಟ್ಟೆ ನಂ.3 ಭಾಗ 2 ಅರ್ಧಭಾಗ ಮೀಸಲಾತಿ : ಪರಿಶಿಷ್ಟ ಜಾತಿ	ದರ ರೂ.13,803=00	ರೂ. 28,000=00	ನಿಯಮ 13 ರಡಿಯಲ್ಲಿ ಅರ್ಹ ಪೇಟೆ ಕಾರ್ಯಕರ್ತರಿಗೆ ಜೇಷ್ಠತಾ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
2	ಮುಖ್ಯ–ಮಾರುಕಟ್ಟೆ ಮುಧೋಳದಲ್ಲಿರುವ ಚಿಕ್ಕಅಂಗಡಿ–ವ–ಗೋದಾಮು ಸಂಖ್ಯೆ.2 ಮೀಸಲಾತಿ : ಸಾಮಾನ್ಯ ವರ್ಗ	ದರ ರೂ.8,595=00	ರೂ. 16,000=00	
3	ಬಾಳೆಹಣ್ಣಿನ ಅಂಗಡಿ 1,3,4,5 ಮೀಸಲಾತಿ ಬಾ ಅಂಗಡಿ : 1 ಎಫ್‌ಭಿಜ ಇತರೆ ಬಾ ಅಂಗಡಿ : 3 ಸಾಮಾನ್ಯ ಮಹಿಳೆ ಬಾ ಅಂಗಡಿ : 4 ಸಾಮಾನ್ಯ ವರ್ಗ ಬಾ ಅಂಗಡಿ : 5 ಪರಿಶಿಷ್ಟ ಜಾತಿ	ದರ ರೂ.4,352=00	ರೂ.8,800=00 (ಪ್ರತಿಯೊಂದಕ್ಕು)	
4	ಮುಖ್ಯ–ಮಾರುಕಟ್ಟೆ ಮುಧೋಳದಲ್ಲಿರುವ ಟೀ ಸ್ಟಾಲ್ (ಪರಿವರ್ತಿತ ಗೋದಾಮು) ಮೀಸಲಾತಿ:ಪರಿಶಿಷ್ಟ ವರ್ಗ	ದರ ರೂ.5,939=00	ರೂ. 12,000=00	
	ಮುಖ್ಯ–ಮಾರುಕಟ್ಟೆ ಮುಧೋಳ ಚಿಕ್ಕ ಮಳಿಗೆಗಳ ವಿವರ			
5	ಸಿಂಗಲ್ ಚಿಕ್ಕ ಮಳಿಗೆಗಳ ಸಂಖ್ಯೆ : 32 ಮೀಸಲಾತಿ: ಸಾಮಾನ್ಯ ವರ್ಗ	ದರ ರೂ. 2,835=00	ರೂ. 6,000=00	ನಿಯಮ 14 ರಡಿಯಲ್ಲಿ ಟೆಂಡರ–ಕಂ–ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಲಾಗುವುದು
6	ಚಿಕ್ಕ ಮಳಿಗೆ ಸಂಖ್ಯೆ: 80 ಮೀಸಲಾತಿ: ಪರಿಶಿಷ್ಟ ಜಾತಿ	ದರ ರೂ.6,250=00	ರೂ. 12,500=00	
	ಉಪ–ಮಾರುಕಟ್ಟೆ ಲೋಕಾಪುರ			
1	ಉಪ–ಮಾರುಕಟ್ಟೆ ಲೋಕಾಪುರದಲ್ಲಿರುವ ಗೋದಾಮು ಸಂಖ್ಯೆ : 02	ದರ ರೂ. 34,708=00	ರೂ. 70,000=00	ನಿಯಮ 13 ರಡಿಯಲ್ಲಿ ಅರ್ಹ ಪೇಟೆಕಾರ್ಯಕರ್ತರಿಗೆ ಜೇಷ್ಠತಾ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

ನೊಂದಣಿ ಶುಲ್ಕ ರೂ.500=00 ಹಾಗೂ ಫಾರ್ಮ ಶುಲ್ಕ ರೂ.1000=00 ಗಳನ್ನು ತೆರಿಗೆ ಪ್ರತ್ಯೇಕ ರೂ.ಗಳಲ್ಲಿ ನಗದು ರೂಪದಲ್ಲಿ ಸಲ್ಲಿಸತಕ್ಕದ್ದು.ಇ.ಎಂ.ಡಿ. ಮೊತ್ತವನ್ನುಡಿಡಿ/ನಗದು ಮುಖಾಂತರ SECRETARY APMC MUDHOL ಇವರ ಹೆಸರಿನಲ್ಲಿ ಪಾವತಿಸತಕ್ಕದ್ದು. ಇ.ಎಂ.ಡಿ. ಮೊತ್ತವನ್ನುಡಿ.ಡಿ ಮುಖಾಂತರ ಸಲ್ಲಿಸಿದ ನಂತರವೇ ಫಾರ್ಮನ್ನು ಪೂರೈಸಲಾಗುವುದು. ಖಾಲಿ ಟೆಂಡರ ಫಾರ್ಮಗಳನ್ನು ಪಡೆಯಲು ಖುದ್ದಾಗಿ ಕಛೇರಿ ವೇಳೆಯಲ್ಲಿ ದಿ:30–06–2026 ರಂದು ಬೆಳಿಗ್ಗೆ 10.30 ರಿಂದ ದಿ:06–07–2026 ಸಂಜೆ 5.30 ರವರೆಗೆ ಪಡೆಯತಕ್ಕದ್ದು, ಮೊಹರು ಮಾಡಿದ ಲಕೋಟೆಯ ಮೇಲೆ ಸಮಿತಿಯಿಂದ ಪಡೆಯಲಿಚ್ಛಿಸುವ ಕಟ್ಟಡದ ಹೆಸರುಗಳನ್ನು ನಮೂದಿಸಬೇಕು. ಭರ್ತಿ ಮಾಡಿದಟೆಂಡರ ಫಾರ್ಮಗಳನ್ನು ಸ್ವೀಕರಿಸುವ ಕೊನೆಯ ದಿ:–18–07–2026 ರಂದು ಸಂಜೆ 5:00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ದಿ:21–07–2026 ರಂದು ಬಹಿರಂಗ ಹರಾಜಿನಲ್ಲಿ ಗೈರು ಹಾಜರಾದ ಅಧಿಭೋಗದಾರರ ಟೆಂಡರ ಅರ್ಜಿಯನ್ನು ಸಮಿತಿಯು ಪರಿಗಣಿಸುವುದಿಲ್ಲ.

ನಿಯಮಾನುಸಾರ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಮೀಸಲಾತಿ ಪಡೆಯಲಿಚ್ಛಿಸುವವರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಿಗದಿತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/–(ಡಿ.ಜಿ.ಪಟ್ಟಣಶೆಟ್ಟಿ)
ಕಾರ್ಯದರ್ಶಿ
ಕೃ.ಉ.ಮಾ.ಸ. ಮುಧೋಳ

ಸಹಿ/–(ಸಂಗಪ್ಪ ಶಂಕ್ರೆಪ್ಪ ಇಮ್ಮನ್ನವರ)
ಅಧ್ಯಕ್ಷರು
ಕೃ.ಉ.ಮಾ.ಸ. ಮುಧೋಳ

DIPR/BGK/RO-NO-89/KSMCA/2026-27

ಕರ್ನಾಟಕ ಸರ್ಕಾರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಹಾಪುರ

ಯಾದಗಿರಿ ರಸ್ತೆ, ಶಹಾಪುರ– 585223 ಇ–ಮೇಲ್: apmcshahapur@gmail.com
ಕಛೇರಿ/ಫ್ಯಾಕ್ಸ್: (08479)243341

ಸಂ: ಕೃಮಾಇ : ಕೃಉಮಾಸ(ಶ) :49 :2026–27 ದಿನಾಂಕ:10.06.2026

~:ಜಾಹಿರಾತು ಪ್ರಕಟಣೆ:~

ಶಹಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಾಣಿಸಿದ ವರ್ತಕರು ಮಾರಾಟ ಮಾಡಲು ಇಚ್ಛಿಸಿದ್ದು ಸದರಿ ನಿವೇಶನ/ಕಟ್ಟಡಕ್ಕೆ ಸಂಬಂದಿಸಿದಂತೆ ಮಾರಾಟ ಮಾಡಲು ಪೇಟೆ ಕಾರ್ಯಕರ್ತರು ರೈತರ ಆಕ್ಷೇಪಣೆ ತಕರಾರು ಇದ್ದಲಿ ಈ ಕಾರ್ಯಾಲಯಕ್ಕೆ ಒಂದು ವಾರದೊಳಗಾಗಿ ಲಿಖಿತವಾಗಿ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಸಮಯದ ನಂತರ ಬಂದ ಆಕ್ಷೇಪಣೆ/ ತಕರಾರು ಪರಿಗಣಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

1) **ಪ್ರಸ್ತುತ ಇದ್ದವರ ಹೆಸರು:** ಮೆ॥ ಕೆ.ವಿ ಪಾಟೀಲ್ ಹೆರುಂಡಿ ಮಾ॥ ವೀರುಪಾಕ್ಷಪ್ಪಗೌಡ ತಂದೆ ಬಸಣ್ಣಗೌಡ ಪಾಟೀಲ್ ಹೆರುಂಡಿ ಸಾ॥ ಶಹಾಪುರ. **ನಿವೇಶನ ಸಂಖ್ಯೆ:** 42 **ವರ್ಗಾವಣೆ ಬಯಸಿದವರ ಹೆಸರು:** ಮೆ॥ ಶರಣ ಟ್ರೇಡರ್ಸ ಶಹಾಪುರ ಮಾ॥ ವಿಶ್ವನಾಥ ತಂದೆ ಶರಣಪ್ಪಗೌಡ ಹೆರುಂಡಿ

ಸಹಿ/– ಕಾರ್ಯದರ್ಶಿ
ವಾ.ಸಾ.ಸಂ.ಇ/ಯಾದಗಿರಿ/112/ಕೆ.ಎಸ್.ಎಂ.ಸಿ.ಎ/2026–27 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಹಾಪುರ.

ಮಹಾನಗರ ಪಾಲಿಕೆ, ಕಲಬುರಗಿ

ದೂರವಾಣಿ: 08472-278675, ಫ್ಯಾಕ್ಸ್ : 08472-260776, ಇ–ಮೇಲ್:itstaff_ulb_gulbarga@yahoo.com

No: KMP/TS-01/KKRDB GARDEN/01/2026-27 Date :12.06.2026

ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ.

1) ಕಾಮಗಾರಿಯ ವಿವರ : 1. Development of Meheboob Gulshan Garden in Kalburagi City (Call-2) 2. Development of Rajiv Gandhi Theme park at Dariyapur in Kalaburagi City (cal-2) 2) ಲೆಕ್ಕ ಶೀರ್ಷಿಕೆ : **2024-25 & 2025-26 Macro KKRDB,** 3) ಟೆಂಡರರಿಗಿಟ್ಟ ಮೊತ್ತ **1. ರೂ.3,00,00,000.00, 2.ರೂ.3,00,00,000.00, 4)** ಗುತ್ತಿಗೆದಾರರ ಅರ್ಹತೆ : Class-II & above, **5)** ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ : **22.06.2026 ಬೆಳಿಗ್ಗೆ 11:00, 6)** ಟೆಂಡರ ಸಲ್ಲಿಸಲು ಅಂತಿಮ **ದಿನಾಂಕ 29.06.2026** ಸಾಯಂಕಾಲ **4:30** ಗಂಟೆಯುವರೆಗೆ, **7)** ಟೆಂಡರ್ ತೆರೆಯುವ ದಿನಾಂಕ ತಾಂತ್ರಿಕ : **30.06.2026 ಸಾಯಂಕಾಲ 4:35 ಗಂಟೆಯ ವರೆಗೆ, 8)** ಟೆಂಡರ್ ತೆರೆಯುವ ದಿನಾಂಕ ಆರ್ಥಿಕ : **01.07.2026 ಬೆಳಿಗ್ಗೆ 11:30 ಗಂಟೆಗೆ, 9)** ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: 1.ಟೆಂಡರ ಫಾರಂ ಬೆಲೆ As per e- portal EMD ಮೊತ್ತ **ರೂ.4,50,000.00,** 2.ಟೆಂಡರ ಫಾರಂ ಬೆಲೆ As per e- portal EMD ಮೊತ್ತ **ರೂ.4,50,000.00, 10)** ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೊ.ನಂ.:ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 8095986929, **11)** ಅಂತರಜಾಲ ತಾಣದ ವಿಳಾಸ: **www.kppp.karnataka.gov.in**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/211/ದೇಶಪಾಂಡೆ ಪಬ್ಲಿಸಿಟಿ/2025–26

ಕೃಷಿ ಮಾರಾಟ ಇಲಾಖೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಣೇಬೆನ್ನೂರು

ಕ.ಸಂ:ಕೃಮಾಇ/ಕೃಉಮಾಸ(ರಾ)/ಭ.ಸಿ–ಸ್ವಚ್ಛತೆ/434–435/2026–27 ದಿನಾಂಕ : 09–06–2026

ಪ್ರಕಟಣೆ

2026–27 ನೇ ಸಾಲಿನ ಅವಧಿಗೆ (ಕೆಲಸದ ಆದೇಶ ನೀಡಿದ ದಿನಾಂಕದಿಂದ 31–05–2027 ರವರೆಗೆ) ಈ ಸಮಿತಿಯ ಭದ್ರತಾ ವ್ಯವಸ್ಥೆಗಾಗಿ ಹಾಗೂ ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ತರಕಾರಿ ಮಾರುಕಟ್ಟೆ ಉಪ ಪ್ರಾಂಗಣ, ಜಾನುವಾರು ಮಾರುಕಟ್ಟೆ ಉಪ ಪ್ರಾಂಗಣ, ಹಲಗೇರಿ ಉಪ ಮಾರುಕಟ್ಟೆ ಹಾಗೂ ಹೂಲಿಹಳ್ಳಿ ಕೋನಬೇವು ಉಪ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಛತಾ ವ್ಯವಸ್ಥೆಗಾಗಿ ಅರ್ಹ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆ / ಏಜೆನ್ಸಿಯವರಿಂದ ಚಾಲ್ತಿಯಲ್ಲಿರುವ ಮೀಸಲಾತಿ ನೀತಿಯಂತೆ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಗಿನ ಸೇವೆಗೆ ಪ್ರತ್ಯೇಕವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು	ಭದ್ರತಾ ಠೇವಣಿ ರೂ.
1	ಸಮಿತಿಗೆ ಅವಶ್ಯಕ ವಿರುವ ವಿವಿಧ ವರ್ಗದ 34 ಜನ ಭದ್ರತಾ ಸಿಬ್ಬಂದಿ ಪೂರೈಸುವ ಸೇವೆ Indent No: APMC/2026-27/SE0886	ರೂ. 7,00,000/–
2	ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ತರಕಾರಿ ಮಾರುಕಟ್ಟೆ ಉಪ ಪ್ರಾಂಗಣ, ಜಾನುವಾರು ಮಾರುಕಟ್ಟೆ ಉಪ ಪ್ರಾಂಗಣ, ಹಲಗೇರಿ ಉಪ ಮಾರುಕಟ್ಟೆ ಹಾಗೂ ಹೂಲಿಹಳ್ಳಿ ಕೋನಬೇವು ಉಪ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಛತಾ ಸೇವೆಗೆ 08 ಜನ ಸ್ವಚ್ಛತಾ ಸಿಬ್ಬಂದಿ ಮತ್ತು ಒಬ್ಬ (01) ಸಫಾಯಿ ಕರ್ಮಚಾರಿ ಸೇವೆಯನ್ನು ಪೂರೈಸುವುದು ಹಾಗೂ ತ್ಯಾಜ್ಯವನ್ನು ಪ್ರಾಂಗಣದಿಂದ ಟ್ರಾಕ್ಟರ್ ಮೂಲಕ ಹೊರಗಡೆ ಸಾಗಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು. Indent No: APMC/2026-27/SE0887	ರೂ. 3,00,000/–

ಈ–ವೆಬ್ ಸೈಟ್ https://kppp.karnataka.gov.in ಪೋರ್ಟಲ್ ನಲ್ಲಿ ಭರ್ತಿ ಮಾಡಿದ ಟೆಂಡರನ್ನು ದಿನಾಂಕ : **30–06–2026** ರ ಸಾಯಂಕಾಲ 5.30 ಗಂಟೆಯೊಳಗಾಗಿ ಸಲ್ಲಿಸುವುದು ಸಾಧ್ಯವಾದಲ್ಲಿ ದಿನಾಂಕ : **02–07–2026** ರಂದು ತಾಂತ್ರಿಕ ಬಿಡ್‌ನ್ನು ಹಾಗೂ ದಿನಾಂಕ : **04–07–2026** ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಟೆಂಡರ್ ಷರತ್ತು–ವ–ನಿಬಂಧನೆಗಳನ್ನು ಈ–ಪೋರ್ಟಲ್ ಮೂಲಕ ಹಾಗೂ ಸಮಿತಿಯ ಕಛೇರಿ ದೂರವಾಣಿ **08373–266456** ರ ಮೂಲಕ ಪಡೆಯಬಹುದಾಗಿದೆ.

ಯಾವುದೇ ಕಾರಣವನ್ನು ನೀಡದೆ ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದೇ ಟೆಂಡರನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– (ಎಂ. ವಿ. ಶೈಲಜಾ)
ಕಾರ್ಯದರ್ಶಿ, ಕೃ.ಉ.ಮಾ.ಸ., ರಾಣೇಬೆನ್ನೂರು

ಸಹಿ/– (ಆರ್. ಎಂ. ಕುಮಾರಸ್ವಾಮಿ)
ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ರಾಣೇಬೆನ್ನೂರು

ವಾಸಾಸಂಇ/ಹಾವೇರಿ/154/ಕೆಎಸ್‌ಎಂಸಿಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರರ ಕಚೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ , ಧಾರವಾಡ–580008.
E-mail id: eesliddwd@gmail.com Ph No. 0836-2461218

No. KNNL/SLID/DWD/PB-2/Tender/2026-27/213 Date: 11-06-2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ: 1) ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 900 ದಿನಾಂಕ: 28.01.2026 (First call)
2) ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 97, ದಿನಾಂಕ: 08.05.2026 (Second Call)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ. ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

Sl. No.	Name of Work	Tender Amount (Rs. in Lakhs)	
1	"Improvement and Development of Belavalkoppa Tank in Belavalkoppa village of Shiggaon Taluk of Haveri district".	252.00	3rd Call
2	"Improvement and Development of Nala from Mouneshwara Temple in Hulagur village to Madapura Tank in Shiggaon Taluk Haveri District."	417.68	3rd Call
3	"Improvement And Development Of Gaddihalla And Construction Of CD Across Nala Near Hiremalluru Village, Shiggaon Taluk Of Haveri District"	420.08	1st Call
4	"Improvement And Development Of Gaddihalla From Hiremallur Village To Chikkamalluru Village And Construction Of CD Across Nala In Shiggaon Taluk Of Haveri District"	419.97	1st Call
5	"Improvement And Development Of Belagatti Tank, Construction Of Causeway Across Yerikere Nala Crossing At Halebankapur To Bommanahalli Road Construction Of Check Dam And Improvement Of Gaddihalla In Shiggaon And Savanur Taluk Of Haveri Disctrict"	355.88	1st Call
6	"Improvement And Development Of Nala From Veeraktha Matha To Hadi Matha And Construction Of Box Culvert Across Nala In Bommanahalli Village, Shiggaon Taluk Of Haveri District"	418.63	1st Call
7	"Improvement And Development Of Hiremanakatti, Belagali, Hungund, Kursapur And Madhapur Tanks In Shiggaon Taluk Of Haveri District".	419.09	1st Call

ಸದರಿ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ **(http://kppp.karnataka.gov.in)** ಮುಖಾಂತರವೇ **ದಿನಾಂಕ: 18.06.2026 ಬೆಳಿಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 17.07.2026ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು **ದಿನಾಂಕ 24.06..2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು **ದಿನಾಂಕ: 18.07.2026 ರಂದು ಸಂಜೆ 4.30 ಗಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ: 22.07.2026 ರಂದು ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
(ಮಂಜುನಾಥ ಬಿ.)
ಕಾರ್ಯಪಾಲಕ ಇಂಜಿನೀಯರ್,
ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/300/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ

ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2026-27

ದಿನಾಂಕ: 09.06.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಗಳಡಿ ಅನುದಾನ ನಿರೀಕ್ಷೇಯ ಮೇರೆಗೆ ನೆಡುತೋಪು ನಿರ್ಮಾಣ ಹಾಗೂ 14x20 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ದಿನಾಂಕ: 11.06.2026 ರಿಂದ 18.06.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಕರೆಯಲಾಗಿದೆ ಹಾಗೂ (ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **20.06.2026 ರಂದು ಬೆಳಿಗ್ಗೆ 11.00 ಘಂಟೆಗೆ**) ಭಾಗವಹಿಸಲಿಚ್ಛಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/151/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್-08 /2026/1639 ದಿ: 10.06.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ಕ್ರಸಂ 1ರ ಕಾಮಗಾರಿಯ ಟೆಂಡರ್‌ನ್ನು ದಿ: 23.06.2026ರ ಸಂಜೆ 4.00 ಗಂಟೆಯವರೆಗೆ ಹಾಗೂ ಕ್ರಸಂ 2ರ ಹಾಗೂ ಕ್ರಸಂ 3ರ ಕಾಮಗಾರಿಗಳ ಟೆಂಡರ್‌ಗಳನ್ನು ದಿ: 19.06.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/357/ 26-27 dt. 12.06.2026

ಕರ್ನಾಟಕ ಸರ್ಕಾರ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ ಉಪ ವಿಭಾಗ ಆಸ್ಪತ್ರೆ, ಗಂಗಾವತಿ-583227 ಜಿ||ಕೊಪ್ಪಳ.

ದೂ.08533-230102/230103
e-mail: sdh.gangavathi@gmail.com

ಸಂಖ್ಯೆ:ಉವಿಆ/ಎಮ್‌ಸಿಹೆಚ್/ಜಿವಿಟಿ/ಟೆಂಡರ್/2026-27/431

ದಿನಾಂಕ:12/06/2026

ಮ್ಯಾನ್ವಲ್ ಟೆಂಡರ್

ವಿಷಯ:-ಉಪ ವಿಭಾಗ ಆಸ್ಪತ್ರೆ, ಗಂಗಾವತಿಯಲ್ಲಿ ಸಿಟಿ ಸ್ಕ್ಯಾನಿಂಗ್ ಪರಿಶೀಲಿಸಿ ವರದಿ ನೀಡುವ ಸೇವೆ ಪಡೆಯಲು ಅಲ್ಪಾವಧಿ ಮ್ಯಾನ್ವಲ್ ಟೆಂಡರ್ ಕರೆದಿರುವ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ, ಸಿಟಿ ಸ್ಕ್ಯಾನಿಂಗ್ ಪರಿಶೀಲಿಸಿ ವರದಿ ನೀಡುವ ಸೇವೆ ಪಡೆಯಲು ಅಂದಾಜು ಮೊತ್ತ ರೂ:-4,98,840.00 ಗಳ ಇಎಮ್‌ಡಿ ಮೊತ್ತ ರೂ:-12471.00 ಗಳ ಮ್ಯಾನ್ವಲ್ ಟೆಂಡರ್ ಕರೆಯಲಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿರುತ್ತದೆ.

1.ಟೆಂಡರ್ ಅರ್ಜಿ ನೀಡಲು ಪ್ರಾರಂಭ ದಿನಾಂಕ: **15.06.2026** 2.ಟೆಂಡರ್ ಅರ್ಜಿ ನೀಡುವ ಕೊನೆಯ ದಿನಾಂಕ: **25.06.2026** ರಂದು ಸಂಜೆ 4.30 ಗಂಟೆಗೆ 3.ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ **29.06.2026** ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 12.45 4.ತಾಂತ್ರಿಕ ಬಿಡ್ ಪರಿಶೀಲನೆ ದಿನಾಂಕ **29.06.2026** ರಂದು ಮಧ್ಯಾಹ್ನ 3.00 ಕ್ಕೆ

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ಉಪ ವಿಭಾಗ ಆಸ್ಪತ್ರೆ ಗಂಗಾವತಿ ಜಿ||ಕೊಪ್ಪಳ.

ಡಿಐಪಿಆರ್/ಕೊಪ್ಪಳ/158/ಕೆಎಸ್‌ಎಂಸಿಎ/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂಕೇಶ್ವರ

ಸಂಖ್ಯೆ: ಕೃಮಾಇ/ಕೃಉಮಾಸ(ಸಂ)/61/2026-27 ದಿನಾಂಕ:08/06/2026.

ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

2026-27 ನೇ ಸಾಲಿಗಾಗಿ ಸಂಕೇಶ್ವರ ಮುಖ್ಯ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಈ ಕೆಳಕಾಣಿಸಿದ ಸೇವೆಗಳಿಗೆ ಪ್ರತ್ಯೇಕವಾಗಿ ಸಂಬಂಧಿಸಿದ ಇಲಾಖೆಗಳಲ್ಲಿ ನೋಂದಾಯಿತ ಹಾಗೂ ಇ-ಪ್ರೊಕ್ಯೂರಮೆಂಟ್‌ನಲ್ಲಿ ನೊಂದಾಯಿತ ಅರ್ಹ ಭದ್ರತಾ ಏಜೆನ್ಸಿದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ ಆಹ್ವಾನಿಸಲಾಗಿದೆ. ಟೆಂಡರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸ್ವೀಕರಿಸುವ ಹಾಗೂ ತೆರೆಯುವ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

1)ಪ್ರೀ ಬಿಡ್ ಮಿಟಿಂಗ್ ದಿನಾಂಕಃ25/06/2026 ಸಾಯಂಕಾಲ 4.00 ಗಂಟೆಗೆ. 2)ಟೆಂಡರ ಸಲ್ಲಿಸಲು ಕೊನೆಯ ದಿನಾಂಕಃ04/07/2026 ಸಾಯಂಕಾಲ 4.30 ಗಂಟೆಗೆ. 3) ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕಃ06/07/2026 ಸಾಯಂಕಾಲ 4.00 ಗಂಟೆಗೆ. 4)ಆರ್ಥಿಕ ಬಿಡ್ ಟೆಂಡರ ತೆರೆಯುವ ದಿನಾಂಕಃ 10/07/2026 ಸಾಯಂಕಾಲ 4.30 ಗಂಟೆಗೆ. 5) ಟೆಂಡರಗಳನ್ನು ತೆರೆಯುವ ಸ್ಥಳ:ಆಡಳಿತ ಕಚೇರಿ, ಕೃ.ಉ.ಮಾ.ಸ., ಸಂಕೇಶ್ವರ.

ಕ್ರ.ಸಂ:1)ಸೇವೆಯ ಹೆಸರು:ಭದ್ರತಾ ಸಿಬ್ಬಂದಿ ಪೂರೈಸುವುದು, ಪೂರೈಸ ಬೇಕಾದ ಸಿಬ್ಬಂದಿ ಸಂಖ್ಯೆ:04, ಭದ್ರತಾ ಠೇವಣಿ (ಇ.ಎಂ.ಡಿ):75,000-00, ಖಾಲಿ ಟೆಂಡರ್ ಫಾರಂ ಬೆಲೆ:KPPP Portal ನಿಯಮಗಳನ್ವಯ, ವಿವರ:1)ಗಣಕಯಂತ್ರ ನಿರ್ವಾಹಕರು-01, 02)ಭದ್ರತಾಕಾವಲುಗಾರರು -03 **ಒಟ್ಟು-04,** ಕ್ರ.ಸಂ:2)ಸೇವೆಯ ಹೆಸರು:ಸ್ವಚ್ಛತಾ ವಾರ್ಷಿಕ ನಿರ್ವಹಣೆ, ಪೂರೈಸ ಬೇಕಾದ ಸಿಬ್ಬಂದಿ ಸಂಖ್ಯೆ:02 ಸಿಬ್ಬಂದಿ ಮತ್ತು ವಾಹನ, ಭದ್ರತಾ ಠೇವಣಿ (ಇ.ಎಂ.ಡಿ):1,50,000-00, ಖಾಲಿ ಟೆಂಡರ್ ಫಾರಂ ಬೆಲೆ:KPPP Portal ನಿಯಮಗಳನ್ವಯ, ವಿವರ:ಸಂಕೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶೇಖರಣೆಯಾಗುವ ಘನತ್ಯಾಜ್ಯ ವಾಹನ ಮೂಲಕ ವಿಲೇವಾರಿ ಘಟಕಕ್ಕೆ ಸಾಗಿಸಿ ಡಂಪ್ ಮಾಡುವ ಕುರಿತು.

ಟೆಂಡರ ಪ್ರೊಸೆಸ್ಸಿಂಗ KPPP Portal ನಿಯಮಗಳನ್ವಯ ಇರುತ್ತದೆ. ಟೆಂಡರ ಷರತ್ತುಗಳು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತವೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ ವೆಬ್‌ಸೈಟನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ KPPP Portal ಸಹಾಯವಾಣಿ 080-22501216/ 25501227 ಹಾಗೂ ಕಛೇರಿಯ ದೂರವಾಣಿ 9844157095/ 9740315301 ಮೂಲಕ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ.,. ಸಂಕೇಶ್ವರ

ಸಹಿ/- ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ.,. ಸಂಕೇಶ್ವರ

DIPR/BGM/RO-NO-419/KSMCA/2026-27

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ. ದೂ.: 08137-283336.

ಸಂಖ್ಯೆ : ಕಾ.ಇಂ./ಲೋ.ಇ.ವಿ./ಮಧು/ಸ.ಇಂ.-1/ಟೆಂಡರ್/2026-27/321
ದಿನಾಂಕ : 08-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ - 9/2026-27

(ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ) ದ್ವಿ-ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ. - 3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು ಕೆ.ಪಿ.ಪಿ.ಪಿ. ಆಕ್ಟ್ 1999 ಮತ್ತು ಕೆ.ಟಿ.ಪಿ.ಪಿ. ಕಾಯ್ದೆ 2000 ರಲ್ಲಿ **ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಮಧುಗಿರಿ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ** ಆಹ್ವಾನಿಸಲಾಗಿದೆ.

1) ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು : ರೂ. 80.55 ಲಕ್ಷಗಳವರೆಗೆ, 2) ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 16-06-2026 ರ ಸಂಜೆ 4.00 ಗಂಟೆಯವರೆಗೆ, 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 17-06-2026 ರ ಸಂಜೆ 4.15 ಗಂಟೆಯ ನಂತರ, 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 18-06-2026 ರ ಸಂಜೆ 4.15 ಗಂಟೆಯ ನಂತರ, 4) ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 12-06-2026 ರ ಸಂಜೆ 4.00 ಗಂಟೆಗೆವರೆಗೆ.

ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ : **08137 – 283336.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋ.ಇ., ವಿಭಾಗ ಮಧುಗಿರಿ.

ಡಿಐಪಿಆರ್/ತುಮಕೂರು/33/ಮಣಿಪಾಲ್/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜನೀಯರವರ ಕಛೇರಿ ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ-580 001. ಫೋನ: 0836-2955347

ಇ-ಮೇಲ್: eesliddwd@gmail.com

No.EE/KNNL/SLID/DWD/PB-1/O&M-Manpower/Tender/2026-27/211 Date : 11/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, "Operation and Maintenance of Micro Irrigation system for 9900Ha command Area Comes under Shiggaon Lift Irrigation System includes intake canal,Jackwell/pumphouse,M. S Raising Main pipeline, Delivery Chambers,110/6.6 Kv Substation,and Micropipeline with HDPE/ PVC pipe line network, Discharge control valve, Air valve, Panel cum Store rooms, 119 No's Sumps , 110/33 kV (1No) and 33/11 kV (2 No's) Electrical sub-stations, electrical distribution network . Diversion weir and Gates , DG Room for one year (From 2026-27 to 2027-28)" ಕಾಮಗಾರಿಗೆ (ಟೆಂಡರಗಿಟ್ಟ ಮೊತ್ತ ರೂ. **279.93** ಲಕ್ಷಗಳು) ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿ ಮುಖಾಂತರ ನಿರ್ವಹಿಸಲು ಶೇಕಡಾವಾರು ಟೆಂಡರ್‌ನ್ನು ಕೆ.ಪಿ.ಪಿ-ಪೋರ್ಟಲ್‌ನಲ್ಲಿ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು, ಕೆ.ಪಿ.ಪಿ.-ಪೋರ್ಟಲ್‌ನ ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ ದಿನಾಂಕ : **17/06/2026** ಬೆಳಿಗ್ಗೆ 11.00 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **29/06/2026** ರ ಸಂಜೆ 4.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. Pre-bid ಸಭೆಯನ್ನು ದಿನಾಂಕ : **20/06/2026** ರಂದು ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 1.00 ಘಂಟೆವರೆಗೆ ಕಾರ್ಯಪಾಲಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಅರ್ಹತೆಯ ಟೆಂಡರ್ ತೆರೆಯುವ ದಿನಾಂಕ : **30/06/2026** ರಂದು ಸಂಜೆ 4.30 ಘಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ : **04/07/2026** ರಂದು ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP-portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ, ಮಾರ್ಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/- (ಮಂಜುನಾಥ.ಬಿ.) ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ,
ಧಾರವಾಡ

ವಾಸಾಸಂಇ/ಧಾ/299/ಕೆಎಸ್‌ಎಂಸಿಎ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜನೀಯರವರ ಕಚೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ-580 001.
E-mail id: eesliddwd@gmail.com Ph No. 0836-2955347

No.KNNL/SLID/DWD/PB-1/Shiggaon-Additional/ Tender/2026-27/215 Dt:11-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (4 ನೇ ಕರೆ)

(ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ : **1. KNNL/SLID/DWD/PB-1/Savanur Additional/ Tender/2025-26/884, Dated: 21-01-2026**
2. KNNL/SLID/DWD/PB-1/Shiggaon-Additional/Tender/ 2025-26/968 , Dated:16-02-2026
3. KNNL/SLID/DWD/PB-1/Shiggaon-Additional/Tender/ 2026-27/45 , Dated:18-04-2026

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ **ಕಾರ್ಯಪಾಲಕ ಇಂಜನಿಯರ್,** ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ **ವಿಭಾಗ ಧಾರವಾಡ ರವರು,** ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ

" Filling up of Additional 26 Tanks under Shiggaon Lift Irrigation Scheme"(Extension of Hotanhalli and Chandapura Tank Filling Scheme) (i) Package–1 : Pumping Machinery and Construction of Sump Cum Pump House and Construction of substation & Construction of tapping point and erection of 11kV SC Line and O & M for 5 years (Amount put to tender Rs.349.86 Lakhs) (ii) Package–2 : Construction of Rising main for a length of 7.760 Km of HDPE Pipe for extension of Hothanahalli tank filling scheme and O & M for 5 years (Amount put to tender Rs.413.25 Lakhs) (iii) Package–3 : Construction of Bleeder 1,2,3,4,5,6,7 & 8 Distribution of HDPE and Construction of Gravity Distribution Network of Chandapura Tank Filling Scheme and O & M for 5 years (Amount put to tender Rs.420.70 Lakhs).

ಒಟ್ಟು 3 ಸಂಖ್ಯೆಯ ಕಾಮಗಾರಿಗಳಿಗೆ ಟರ್ನಕೀ ಆಧಾರದ ಮೇಲೆ ದ್ವಿ-ಲಕೋಟೆ ಪದ್ಧತಿಯ ಮುಖಾಂತರ ಕೆ.ಪಿ.ಪಿ.-ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಕೆ.ಪಿ.ಪಿ.-ಪೋರ್ಟಲ್ ವೆಬ್‌ಸೈಟ್ **(http://kppp.karnataka.gov.in)** ಮುಖಾಂತರವೇ **ದಿನಾಂಕ: 17-06-2026 ಬೆಳಿಗ್ಗೆ 11.00 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 29-06-2026 ರ ಸಂಜೆ 4.00 ಗಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ: 20-06-2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ: **30-06-2026 ರಂದು ಸಂಜೆ 4.30 ಗಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ: 04-07-2026 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.**

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP-portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/- (ಮಂಜುನಾಥ. ಬಿ)
ಕಾರ್ಯಪಾಲಕ ಇಂಜನೀಯರರು
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/ 303/ಮಣಿಪಾಲ್/2026-27

CHANGE OF NAME

I, **FATIMA** (Old Name) Resident of Ward No.06, Kalal Galli Shahpur Gate Vijayapura. 586101 (address), have changed my name as **SHAHANAZ ABDULAZIZ MAQBOOL SUNNEWALE** (New Name) henceforth I will be called and recognized by new name for all future purposes, dated: 12/06/2026.

CHANGE OF NAME

I, **ABDUL AZIZ SUNNEWALE** (Old Name) Resident of Ward No.06, Kalal Galli Shahpur Gate Vijayapura 586101 (address), have changed my name as **ABDULAZIZ MAQBOOL SUNNEWALE** (New Name) henceforth I will be called and recognized by new name for all future purposes, dated: 12/06/2026.

CHANGE OF NAME

I, **HONNAPPANAVAR MANJULA** (Old Name) Resident of H No: 91, Hogarti, At Post Sutagatti, Tq: Hukkeri, Dist: Belagavi - 591147, Karnataka, India, have changed my name as **CHENNAVVA GANGAPPA ASARANNAVAR** (New Name) henceforth I will be called and recognized by new name for all future purposes, dated: 12/06/2026.

CHANGE OF NAME

I, **MOHAMMAD IRFAN** (Old Name) Resident of Near Karihalla Extention Area H No: 193/A/1 Ward No: 10 Bagalkot, Karnataka - 587101, have changed my name as **MOHAMMAD IRFAN SILEDAR** (New Name) henceforth I will be called and recognized by new name for all future purposes, dated: 12/06/2026.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(11ಇ)2026-27:ಜೆಇ-3 ದಿನಾಂಕ: 11.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ: 5054-03-337-0-17-154 ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ" ಅಡಿಯಲ್ಲಿ ಇಂಡೆಂಟ್ ನಂ: 36281 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 30.06.2026** ಆಗಿದ್ದು, ಈ ಕಾಮಗಾರಿಗೆ ಈ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, **(ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ.1300.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗೆ KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/358/26-27 dt.12.06.2026

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಲಿ/ಶಿವಿಶಿ/ಜೆಇ-2/ಐಎಫ್‌ಟಿ-08/ತಿ-01/2026-27

ದಿನಾಂಕ:12-06-2026

ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ ಸಂ: ಕಾಪಾಅ/ಶಿವಿಶಿ/ಎಇ-1&2/ಜೆಇ-1&2/ಐಎಫ್‌ಟಿ-08/ಮು-01/2026-27 ದಿನಾಂಕ:06-06-2026

ಉಲ್ಲೇಖಿತ ಟೆಂಡರ್ ಪ್ರಕಟಣೆ ಅನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಾಗರ ತಾಲ್ಲೂಕಿಗೆ ಸಂಬಂಧಿಸಿದಂತೆ ಇ.ನಂ.:36346 ಕಾಮಗಾರಿಯ ನಿಬಂಧನೆಗಳಲ್ಲಿ ಎಸ್.ಸಿ ಎಂಬುದಾಗಿ ಮೀಸಲಾಗಿ ಪ್ರಚುರಗೊಂಡಿದ್ದು, ಅದನ್ನು ಎಸ್.ಟಿ ಮೀಸಲು ಎಂಬುದಾಗಿಯೂ ಮತ್ತು ಇ.ನಂ:36337 ಕಾಮಗಾರಿಯ ನಿಬಂಧನೆಗಳಲ್ಲಿ ಎಸ್.ಟಿ ಎಂದು ಮೀಸಲಾಗಿ ಪ್ರಚುರಗೊಂಡಿದ್ದು, ಅದನ್ನು ಎಸ್.ಸಿ ಮೀಸಲು ಎಂಬುದಾಗಿ ಓದಿಕೊಳ್ಳತಕ್ಕದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿದ್ದುಪಡಿ ಮಾಡಲಾಗಿದ್ದು, ಸದರಿ ನಿಬಂಧನೆಗಳನ್ನು ಅಪ್‌ಲೋಡ್ ಸಹ ಮಾಡಲಾಗಿರುತ್ತದೆ.

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-23010900/23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/54/06/363

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಅಥಣಿ

ಕ್ರ.ಸಂ. ಕೃ.ಉ.ಮಾ.ಸ(ಅ)/ಲಿ.ಲೈ.ಫೀ/ಟೆಪ್ರ/171/2026-27 ದಿನಾಂಕ:10-06-2026

–ಲೀವ್ಹ್ ಮತ್ತು ಲೈಸನ್ಸ್ ಫೀ ಹಂಚಿಕೆಯ ಪ್ರಕಟಣೆ–

ಅಥಣಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಹಾಗೂ ಕಾಗವಾಡ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿರುವ ಈ ಕೆಳಕಂಡ ಮಳಿಗೆಗಳನ್ನು, ಹಾಗೂ ಇತರೆ ಕಟ್ಟಡಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು-2004 ರ ನಿಯಮ 13, ರನ್ವಯ ಸಮಿತಿಯಿಂದ/ಇಲಾಖೆಯಿಂದ ಅಧಿಕೃತ ಲೈಸನ್ಸ್ ಪಡೆದುಕೊಂಡ ಪೇಟೆಕಾರ್ಯಕರ್ತರಿಗೆ ಮಾತ್ರ ಜೇಷ್ಠತಾ ಪಟ್ಟಿ ಆಧಾರದ ಮೇಲೆ ಹಾಗೂ ನಿಯಮ 14 ರನ್ವಯ ಸಾರ್ವಜನಿಕರಿಗೆ ಪ್ರತಿ 11 ತಿಂಗಳ ಅವಧಿಗೆ ನವೀಕರಿಸುವ ಹಾಗೂ 33 ತಿಂಗಳಿಗೆ ಶೇಕಡಾ 5% ರಷ್ಟು ಲೀವ್ ಮತ್ತು ಲೈಸನ್ಸ್ ಫೀ ದರಗಳನ್ನು ಹೆಚ್ಚಿಸುವ ಮತ್ತು ಸಮಿತಿಯು ಕಾಲಕಾಲಕ್ಕೆ ವಿಧಿಸುವ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಗರಿಷ್ಠ 55 ತಿಂಗಳ ಗರಿಷ್ಠ ಅವಧಿಗೆ ಲೀವ್ ಮತ್ತು ಲೈಸನ್ಸ್ ಫೀ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅ ನಂ	ಕಟ್ಟಡದ ಹೆಸರು	ಸಕ್ಷಮ ಪ್ರಾಧಿಕಾರದಿಂದ ನಿಗಧಿಪಡಿಸಿದ ಮಾಸಿಕ ಲಿ.ಲೈ.ಫೀ ದರ	ಫಾರ್ಮ, ಫೀ (ತೆರಿಗೆ ಪ್ರತ್ಯೇಕ)	ಪಾವತಿಸಬೇಕಾದ ಮುಂಗಡ ಠೇವಣಿ ಮೊತ್ತ (ಇಎಂಡಿ)
	ಅಥಣಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ನಿಯಮ 13 ರನ್ವಯ ಪೇಟೆಕಾರ್ಯಕರ್ತರಿಗೆ ಮಾತ್ರ ಜೇಷ್ಠತಾ ಪಟ್ಟಿ ಆಧಾರದ ಮೆಲೆ. (ಒಟ್ಟು 07 ಸಂಖ್ಯೆ ಮಳಿಗೆ/ಕಟ್ಟಡಗಳು)			
1	ಅಥಣಿಯ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಪ್ರಾಂಗಣದ 08 ಸಂಖ್ಯೆ ಮಳಿಗೆಳ ಪೈಕಿ ಮಳಿಗೆ ನಂ-03,05,06,08. (ಮಳಿಗೆ ಸಂಖ್ಯೆ-08 ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-03 ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-05 ನ್ನು ಸಾಮಾನ್ಯ ವರ್ಗದ ಮಹಿಳೆಯರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-06 ನ್ನು ಎಪ್.ಪಿ.ಓ ದವರಿಗೆ ಮೀಸಲಿರಿಸಿದೆ)	ರೂ.8,400/- (ಪ್ರತಿಯೊಂದಕ್ಕೆ)	ರೂ.2,000/-	ರೂ.16,800/-
2	ಅಥಣಿ ಮುಖ್ಯ ಮಾರುಕಟ್ಟೆ ಪ್ರಾಂಗಣದ 250 ಎಂಟಿ ಸಾಮರ್ಥ್ಯದ ಆರ್.ಕೆ.ವಿ.ವೈ ಗೋದಾಮು. (ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ)	ರೂ.33,800/-	ರೂ.2,000/-	ರೂ. 67,600/-
3	ಅಥಣಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಒಳಗಡೆಯ ಪೆಟ್ರೋಲ್ ಪಂಪ್ ಪಕ್ಕದಲ್ಲಿನ ಪ್ರಾಂಗಣದ ಶೆಡ್ಡ್. (ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ)	ರೂ.2,900/-	ರೂ.2,000/-	ರೂ. 5,800/-
4	ಅಥಣಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಹರಾಜು ಕಟ್ಟೆ ಪರಿವರ್ತಿತ 04 ಸಂಖ್ಯೆ ಮಳಿಗೆಗಳ ಪೈಕಿ ಮಳಿಗೆ ನಂ-01. (ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ)	ರೂ.6550/-	ರೂ.2,000/-	ರೂ. 13100/-
	ಅಥಣಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ನಿಯಮ 14 ರನ್ವಯ ಸಾರ್ವಜನಿಕರಿಗೆ ಟೆಂಡರ ಕಂ ಬಹಿರಂಗ ಹರಾಜು ಮೂಲಕ. (ಒಟ್ಟು 04 ಸಂಖ್ಯೆ ಮಳಿಗೆ/ಕಟ್ಟಡಗಳು)			
5	ಅಥಣಿಯ 03 ಸಂಖ್ಯೆ ಚಿಕ್ಕಮಳಿಗೆಗಳ ಪೈಕಿ ಮಳಿಗೆ ನಂ-01 ಮತ್ತು 03. (ಮಳಿಗೆ ಸಂಖ್ಯೆ-01 ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-03 ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿದೆ)	ರೂ.3800/-	ರೂ.2,000/-	ರೂ.38000/-
6	ಅಥಣಿಯ 04 ಸಂಖ್ಯೆ ಚಿಕ್ಕಮಳಿಗೆಗಳ ಪೈಕಿ ಮಳಿಗೆ ನಂ-03. (ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ)	ರೂ.4050/-	ರೂ.2,000/-	ರೂ.40500/-
7	ಅಥಣಿಯ 08 ಸಂಖ್ಯೆ ಚಿಕ್ಕಮಳಿಗೆಗಳ ಮಧ್ಯದ ಚಿಕ್ಕ ಅಂಗಡಿಯ ಶೆಡ್ಡ್. (ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ)	ರೂ.1,200/-	ರೂ.2,000/-	ರೂ.5,000/-
	ಕಾಗವಾಡ ಉಪ ಮಾರುಕಟ್ಟೆ ಪ್ರಾಂಗಣದ ನಿಯಮ 14 ರನ್ವಯ ಸಾರ್ವಜನಿಕರಿಗೆ ಟೆಂಡರ ಕಂ ಬಹಿರಂಗ ಹರಾಜು ಮೂಲಕ. (ಒಟ್ಟು 32 ಸಂಖ್ಯೆ ಮಳಿಗೆ/ಕಟ್ಟಡಗಳು)			
8	ಕಾಗವಾಡದ ಹೊಸ 14 ಸಂಖ್ಯೆ ಚಿಕ್ಕ ಮಳಿಗೆಗಳ ಪೈಕಿ ಮುಂದಿನ 02,03,04 ಸಂಖ್ಯೆಯ ಮಳಿಗೆಗಳು (ಮಳಿಗೆ ಸಂಖ್ಯೆ-02.03.04 ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ)	ರೂ.4650/-	ರೂ.2,000/-	ರೂ.46500/-
9	ಕಾಗವಾಡದ ಹೊಸ 14 ಸಂಖ್ಯೆ ಚಿಕ್ಕ ಮಳಿಗೆಗಳ ಪೈಕಿ ಹಿಂದಿನ 08,12,13, ಸಂಖ್ಯೆಯ ಚಿಕ್ಕ ಮಳಿಗೆಗಳು (ಮಳಿಗೆ ಸಂಖ್ಯೆ-08, ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-13 ನ್ನು ಸಾಮಾನ್ಯ ವರ್ಗದ ಮಹಿಳೆಯರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-12 ನ್ನು ಎಪ್.ಪಿ.ಓ ದವರಿಗೆ ಮೀಸಲಿರಿಸಿದೆ)	ರೂ.2800/-	ರೂ.2,000/-	ರೂ.28000/-
10	ಕಾಗವಾಡದ ಹೊಸ 10 ಸಂಖ್ಯೆಯ ಮಳಿಗೆಗಳು (ಮಳಿಗೆ ಸಂಖ್ಯೆ-01,02,06, 07,08,10 ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-04 ನ್ನು ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-03 ನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-05 ನ್ನು ಸಾಮಾನ್ಯ ವರ್ಗದ ಮಹಿಳೆಯರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-09 ನ್ನು ಎಪ್.ಪಿ.ಓ ದವರಿಗೆ ಮೀಸಲಿರಿಸಿದೆ)	ರೂ.3100/-	ರೂ.2,000/-	ರೂ.31000/-
11	ಕಾಗವಾಡದ ಹಳೆಯ 10 ಸಂಖ್ಯೆಯ ಮಳಿಗೆಗಳು (ಮಳಿಗೆ ಸಂಖ್ಯೆ-03.04.05. 06.07.09.10ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-01 ಮತ್ತು 02 ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-08 ನ್ನು ಎಪ್.ಪಿ.ಓ ದವರಿಗೆ ಮೀಸಲಿರಿಸಿದೆ)	ರೂ.1800/-	ರೂ.2,000/-	ರೂ.18000/-
12	ಕಾಗವಾಡದ 06 ಸಂಖ್ಯೆಯ ಮಳಿಗೆಗಳು (ಮಳಿಗೆ ಸಂಖ್ಯೆ-02,03,04, ನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-01 ಮತ್ತು 05 ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿದೆ) (ಮಳಿಗೆ ಸಂಖ್ಯೆ-06 ನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದೆ)	ರೂ.4300/-	ರೂ.2,000/-	ರೂ.43000/-

1)ಸದರಿ ಚಿಕ್ಕಮಳಿಗೆಗಳು, ಮತ್ತು ಇತರೆ ಕಟ್ಟಡಗಳನ್ನು ಪಡೆಯಲಿಚ್ಛಿಸುವವರು ಈ ಮೇಲಿನಂತೆ ಮುಂಗಡ ಠೇವು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ ಇವರ ಹೆಸರಿನಲ್ಲಿ ಡಿಡಿ ಮೂಲಕ ಮಾತ್ರ ಸಂದಾಯ ಮಾಡಬೇಕು. 2)ನೋಂದಣಿ ಶುಲ್ಕ-500/- ಮತ್ತು ರೂ-2000/- ಗಳ ಫಾರ್ಮ ಫೀಯನ್ನು ಪ್ರತ್ಯೇಕ ತೆರಿಗೆಗಳೊಂದಿಗೆ ನಗದಾಗಿ ಪಾವತಿಸಿ ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ:25/06/2026 ರಂದು ಸಾಯಂಕಾಲ 4-00 ಘಂಟೆಯವರೆಗೆ ಪಡೆಯಬಹುದು. 3)ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ಅಗತ್ಯ ದಾಖಲೆಗಳೊಂದಿಗೆ ಇ.ಎಂ.ಡಿ ಠೇವಣಿಯ ಡಿಡಿಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ:08/07/2026 ಮಧ್ಯಾಹ್ನ 03-00 ಘಂಟೆಯವರೆಗೆ ಸ್ವೀಕರಿಸಲಾಗುವುದು ಮತ್ತು ದಿನಾಂಕ: 09/07/2026 ಮುಂಜಾನೆ 11-00 ಕ್ಕೆ ಅಥಣಿ ಸಮಿತಿಯಲ್ಲಿ ಬಹಿರಂಗ ಹರಾಜು ಮಾಡಲಾಗುವುದು ನಂತರ ಟೆಂಡರ ತೆರೆಯಲಾಗುವುದು. 4)ಮೇಲೆ ವಿವರಿಸಿದ ಮಳಿಗೆ/ಕಟ್ಟಡಗಳಿಗೆ ಆಯಾ ಪ್ರಾಂಗಣವಾರು ಹಾಗೂ ಖಾಲಿ ಇರುವ ಕಟ್ಟಡಗಳ ಸಂಖ್ಯೆಗೆ ಅನುಗುಣವಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು-2004 ರ ನಿಯಮ 13 ಮತ್ತು 14 ರನ್ವಯ ಪ್ರತ್ಯೇಕವಾದ ಮಿಸಲಾತಿ ನಿಗದಿಪಡಿಸಿ ಕಾಯ್ದಿರಿಸಲಾಗಿದೆ. ಮಿಸಲಾತಿ ಪಡೆಯಲಿಚ್ಛಿಸುವವರು ಕಡ್ಡಾಯವಾಗಿ ಅರ್ಜಿಯೊಂದಿಗೆ ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರ ಮತ್ತು ಇನ್ನಿತರ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಸದರಿ ಮಳಿಗೆಗಳಿಗೆ ಮೀಸಲಿರಿಸಿದ ವರ್ಗದವರಿಂದ ಅರ್ಜಿಗಳು ಸ್ವಿಕೃತವಾಗದೇ ಇದ್ದಲ್ಲಿ ಸಾಮಾನ್ಯ ವರ್ಗದ ಅರ್ಹ ಅರ್ಜಿದಾರರಿಗೆ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು. 5)ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು-2004 ರ ನಿಯಮ 13 ಅನ್ವಯಿಸುವ ಮಳಿಗೆ/ಕಟ್ಟಡಗಳನ್ನು ಸಮಿತಿಯಿಂದ/ಇಲಾಖೆಯಿಂದ ಅಧಿಕೃತ ಲೈಸನ್ಸ್ ಪಡೆದುಕೊಂಡ ಪೇಟೆಕಾರ್ಯಕರ್ತರಿಕೆ ಮಾತ್ರ ಜೇಷ್ಠತೆಯ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು, ಒಂದು ವೇಳೆ ಅಧಿಕೃತ ಪೇಟೆಕಾರ್ಯಕರ್ತರಿಂದ ಅರ್ಜಿಗಳು ಸ್ವಿಕೃತವಾಗದೇ ಇದ್ದಲ್ಲಿ ಇತರೆ ಸಾಮಾನ್ಯ ಅರ್ಹ ಅರ್ಜಿದಾರರಿಗೆ ಹಂಚಿಕೆ ಮಾಡಲಾಗುವುದು. 6)ಸದರಿ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಮಂಜೂರಾತಿಗೆ ಒಳಪಟ್ಟಿರುತ್ತದೆ. 7)ಯಾವುದೇ ಕಾರಣ ನೀಡದೇ ಟೆಂಡರಗಳನ್ನು ಸ್ವಿಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ. 8)ಇನ್ನುಳಿದ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ವಿವರಗಳನ್ನು ಕಚೇರಿ ಸಮಯದಲ್ಲಿ ಪಡೆಯಬಹುದು

ಸಹಿ/-ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.

ಸಹಿ/-ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.

DIPR/BGM/RO-NO-418/KSMCA/2026-27

ಕಿರುಸುದ್ದಿ

ಮಹಾರಾಜ ಟ್ರೋಫಿಗೆ ಕಲ್ಯಾಣಿ ಬೆಂಗಳೂರು ಸಿದ್ಧ



ಬೆಂಗಳೂರು: ಕಲ್ಯಾಣಿ ಮೋಟಾರ್ಸ್ ನೇತೃತ್ವದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಹೊಸ ಶಕ್ತಿ, ನಿರ್ಭೀತ ಉದ್ದೇಶದೊಂದಿಗೆ ಮತ್ತು ಬೆಂಗಳೂರಿಗೆ ಟ್ರೋಫಿಯನ್ನು ತರುವ ಸಂಕಲ್ಪದೊಂದಿಗೆ ತಮ್ಮ ಮಹಾರಾಜ ಟ್ರೋಫಿ ಅಭಿಯಾನವನ್ನು ಪ್ರಾರಂಭಿಸಲು ಸಜ್ಜಾಗಿದೆ.

ಶುಕ್ರವಾರ, 12 ಜೂನ್ 2026 ರಂದು, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 2026 ರ ತಮ್ಮ ಅಧಿಕೃತ ಜೆರ್ಸಿಯನ್ನು ಬೆಂಗಳೂರಿನ ಲಲಿತ್ ಅಶೋಕ್‌ನಲ್ಲಿ ಅನಾವರಣಗೊಳಿಸಿತು. ಈ ಅದ್ದೂರಿ ಕಾರ್ಯಕ್ರಮದಲ್ಲಿ ಭಾರತದ ಮಾಜಿ ಕ್ರಿಕೆಟಿಗ ಮತ್ತು ಮಾಜಿ ಕೋಚ್ ಅನಿಲ್ ಕುಂಬ್ಳೆ ಅತಿಥಿಯಾಗಿ ಭಾಗವಹಿಸಿದ್ದರು.

ಬ್ಲಾಸ್ಟರ್ಸ್ ಫ್ರಾಂಚೈಸಿಯ ಜೆರ್ಸಿ ಅನಾವರಣ

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ರೋಹನ್ ಎಂ. ರಾಜು, ಪ್ರಿಯಾಂಕ ಎಂ. ರಾಜು, ಕಲ್ಯಾಣಿ ಗ್ರೂಪ್ ಆಫ್ ಕಂಪನಿಗಳ ನಿರ್ದೇಶಕರು ಮತ್ತು ಕಲ್ಯಾಣಿ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಎ. ವೆಂಕಟೇಶ್ವರ ರಾವ್ ಭಾಗವಹಿಸಿದ್ದರು.

ಮಹಿಳಾ ವಿಶ್ವಕಪ್: ಒಂದೇ ದಿನ, 3 ಪಂದ್ಯ

ಲಂಡನ್: ಭರ್ಜರಿ ಚಾಲನೆ ಪಡೆದಿರುವ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಎರಡನೇ ದಿನದಂದು ಸ್ಕಾಟ್ಲೆಂಡ್ ತಂಡವನ್ನು ಐರ್ಲೆಂಡ್ ಎದುರಿಸಲಿದ್ದರೆ, ಬಲಿಷ್ಠ ಆಸ್ಟ್ರೇಲಿಯಾವನ್ನು ದ. ಆಫ್ರಿಕಾ ಎದುರಿಸಲಿದೆ. ಮೂರನೇ ಪಂದ್ಯದಲ್ಲಿ ವಿಂಡೀಸ್ ಮತ್ತು ನ್ಯೂಜಿಲೆಂಡ್ ತಂಡಗಳು ಎದುರಾಗಲಿವೆ. ಶುಕ್ರವಾರ ತಡರಾತ್ರಿ ಪಂದ್ಯಾವಳಿ ಶುರುವಾಯಿತು. ಶ್ರೀಲಂಕಾ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗುವ ಮುನ್ನವೇ ಸಂಭ್ರಮದ ಉದ್ಘಾಟನಾ ಸಮಾರಂಭ ನೆರವೇರಿತು. ತಾರೆಯರ ಪ್ರದರ್ಶನ, ಹಿರಿಯರ ಮಾತು ಮತ್ತು ದಿಗ್ಗಜರ ಉಪಸ್ಥಿತಿ ಕಾರ್ಯಕ್ರಮಕ್ಕೆ ಶೋಭ ತಂದಿತು. ರಾತ್ರಿ 11 ಗಂಟೆಗೆ ಮೊದಲ ಪಂದ್ಯ ಶುರುವಾಯತು. ಎರಡನೇ ದಿನ ಮೂರು ಪಂದ್ಯಗಳಿರುವುದು ವಿಶೇಷ. ಮಹಿಳಾ ಕ್ರಿಕೆಟ್ ಕ್ಷೇತ್ರದಲ್ಲಿ ಯಾರಿಗೂ ಮುಟ್ಟಲಾಗದ ಸ್ಥಾನ ಪಡೆದು ಗೆಲುವಿನಲ್ಲೇ ಮಿಂಚುತ್ತಿರುವ ಆಸ್ಟ್ರೇಲಿಯಾ ತಂಡವು ದ.ಆಫ್ರಿಕಾವನ್ನು ಎದುರಿಸಲು ಸಜ್ಜಾಗಿದೆ. ಅತ್ತ ವಿಂಡೀಸ್ ಕೂಡ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಸವಾಲಿಗೆ ಸಿದ್ಧವಾಗುತ್ತಿದೆ.

ಆಸ್ಟ್ರೇಲಿಯಾ ಆಫ್ರಿಕಾ ಪಂದ್ಯ ಇಂದು

ದಿಗ್ಗಜ ಶೂಟರ್ ಜಸ್‌ಪಾಲ್ ನಿಧನ

ಹೊಸದಿಲ್ಲಿ: ಮುನಿಚ್‌ನಿಂದ ದಿಲ್ಲಿಗೆ ಬರುತ್ತಿರುವ ಮಾರ್ಗದಲ್ಲಿ ಹೃದಯಾಘಾತದಿಂದ ಭಾರತದ ದಿಗ್ಗಜರ ಶೂಟರ್, ತರಬೇತುದಾರರಾದ ಜಸ್‌ಪಾಲ್ ರಾಣಾ ನಿಧನರಾದರು. ಅವರಿಗೆ 49 ವಯಸ್ಸಾಗಿತ್ತು. ಪಿಸ್ತೂಲ್ ಮಾದರಿಯ ವಿವಿಧ ವಿಭಾಗಗಳಲ್ಲಿ ದಾಖಲೆಗಳನ್ನು ಬರೆದಿರುವ ಜಸ್‌ಪಾಲ್, ವೈಯಕ್ತಿಕ ಏಷ್ಯನ್ ಚಾಂಪಿಯನ್‌ಶಿಪ್, ಏಷ್ಯನ್ ಗೇಮ್ಸ್ ಸೇರಿದಂತೆ ವಿವಿಧ ಅಂತಾರಾಷ್ಟ್ರೀಯ ಕೂಟದಲ್ಲಿ 9 ಚಿನ್ನ ಸೇರಿದಂತೆ 15 ಪದಕಗಳನ್ನು ಗೆದ್ದಿದ್ದರು. ಅಲ್ಲಿಗೆ ನಿಲ್ಲಿಸದ ಅವರು, ಶೂಟರ್ ಮನು ಭಾಕರ್ 2 ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಪರಿಣಾಮ ಅವರಿಗೆ ಪಿಸ್ತೂಲ್ ವಿಭಾಗದ ಹೈ–ಪರ್ಫಾಮನ್ಸ್ ಕೋಚ್ ಆಗಿಯೂ ನೇಮಕ ಮಾಡಲಾಗಿತ್ತು. ಅದರದ್ದೇ ಕೆಲಸದ ಭಾಗವಾಗಿ ಮುನಿಚ್‌ನಿಂದ ಮರಳುತ್ತಿರುವಾಗ ಹೃದಯಾಘಾತದಿಂದ ಮೃತಪಟ್ಟರು.

ವಿಂಬಲ್ಡನ್ ಬಹುಮಾನ ಶೇ.20ರಷ್ಟು ಹೆಚ್ಚಳ

ಲಂಡನ್: ಗ್ರ್ಯಾಂಡ್‌ಸ್ಲ್ಯಾಮ್ ಆದಾಯದಲ್ಲಿ ಹೆಚ್ಚಿನ ಪಾಲು ನೀಡುವಂತೆ ಆಟಗಾರರಿಂದ ಹೆಚ್ಚುತ್ತಿರುವ ಕರೆಗಳ ಮಧ್ಯೆ, ವಿಂಬಲ್ಡನ್ 2026 ರ ಚಾಂಪಿಯನ್ ಶಿಪ್‌ಗಾಗಿ ಬಹುಮಾನದ ಹಣವನ್ನು ಶೇಕಡಾ 20 ರಷ್ಟು ಹೆಚ್ಚಿಸುವುದಾಗಿ ಘೋಷಣೆಯಾಗಿದೆ. ಪುರುಷ ಮತ್ತು ಮಹಿಳಾ ಸಿಂಗಲ್ಸ್ ಚಾಂಪಿಯನ್‌ಗಳು ತಲಾ ದಾಖಲೆಯ 3.6 ಮಿಲಿಯನ್ (4.8 ಮಿಲಿಯನ್ ಡಾಲರ್) ಯೂರೊ ಪಡೆಯಲಿದ್ದಾರೆ. ಗುರುವಾರ ಈ ಘೋಷಣೆ ಮಾಡಿದ ಆಲ್ ಇಂಗ್ಲೆಂಡ್ ಕ್ಲಬ್ ಅಧ್ಯಕ್ಷೆ ಡೆಬೊರಾ ಜೆವಾನ್ಸ್, ಆಟಗಾರರ ದೈನಂದಿನ ವೇತನ ಸೇರಿದಂತೆ ಒಟ್ಟು ಬಹುಮಾನ ನಿಧಿ 64.2 ಮಿಲಿಯನ್ ಯೂರೋ (85.8 ಮಿಲಿಯನ್ ಡಾಲರ್) ಗೆ ಏರಲಿದೆ. ಆಟಗಾರರು ತಮ್ಮ ಆದಾಯದ ಹೆಚ್ಚಿನ ಪಾಲನ್ನು ಸ್ಪರ್ಧಿಗಳಿಗೆ ಹಂಚಿಕೆ ಮಾಡಲು ಗ್ರ್ಯಾಂಡ್ ಸ್ಲ್ಯಾಮ್ ಪಂದ್ಯಾವಳಿಗಳನ್ನು ಒತ್ತಾಯಿಸುತ್ತಿರುವ ಸಮಯದಲ್ಲಿ ಈ ಹೆಚ್ಚಳವಾಗಿದೆ.

ದ.ಆಫ್ರಿಕಾ ವಿರುದ್ಧ ಮೆಕ್ಸಿಕೋಗೆ 2–0 ರಿಂದ ಜಯ | ಮೊದಲ ಪಂದ್ಯದಲ್ಲೇ ಕೆಂಪು ಕಾರ್ಡ್‌ಗಳ ಸದ್ದು

ಮೆಕ್ಸಿಕೋ ಮಾಸ್, ಕೊರಿಯಾ ಕ್ಲಾಸ್!

ಮ್ಯಾಕ್ಸಿಕೋ: ತನ್ನ ಮಾಸ್ ಆಟದೊಂದಿಗೆ ಮಿಂಚಿರುವ ಆತಿಥ್ಯ ಮೆಕ್ಸಿಕೋ ಪ್ರತಿಷ್ಠಿತ ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿತು. ಮೆಕ್ಸಿಕೊ ಸಿಟಿಯ ಐತಿಹಾಸಿಕ ಅಜ್ಟೆಕಾ ಕ್ರೀಡಾಂಗಣದಲ್ಲಿ 80,824 ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಜುಲಿಯನ್ ಕ್ವಿನೋನ್ಸ್ ಮತ್ತು ರೌಲ್ ಜಿಮೆನೆಸ್ ಮಿಂಚಿದರು. ಅತ್ತ ಎರಡನೇ ಪಂದ್ಯದಲ್ಲಿ ಜೆಕ್ ಗಣರಾಜ್ಯ ತಂಡದೊಂದಿಗೆ ಮಿಂಚಿದ ದಕ್ಷಿಣ ಕೊರಿಯಾ ಗೆಲುವ ಸಾಧಿಸಿತು.

ಭಾರತೀಯ ಕಾಲಮಾನ ಪ್ರಕಾರ ಮಧ್ಯರಾತ್ರಿ ನಡೆದ ಪಂದ್ಯದ 9ನೇ ನಿಮಿಷದಲ್ಲೇ ಕ್ವಿನೋನ್ಸ್ ಗೋಲು ಬಾರಿಸಿ ಮೆಕ್ಸಿಕೋಗೆ ಮುನ್ನಡೆ ತಂದುಕೊಟ್ಟರು. ಬಳಿಕ 66ನೇ ನಿಮಿಷದಲ್ಲಿ ಜಿಮೆನೆಸ್ ಹೆಡರ್ ಮೂಲಕ ಮತ್ತೊಂದು ಗೋಲು ದಾಖಲಿಸಿ ತಂಡದ ಗೆಲುವು ಖಚಿತಪಡಿಸಿದರು.

2-0
ಗೋಲ್‌ನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಮೆಕ್ಸಿಕೋ ಜಯ

- ಮೆಕ್ಸಿಕೋ ಪರ ಜಿಮೆನೆಸ್‌ನ 46ನೇ ಅಂತಾರಾಷ್ಟ್ರೀಯ ಗೋಲು
- ದಕ್ಷಿಣ ಆಫ್ರಿಕಾದ ಇಬ್ಬರು ಆಟಗಾರರಿಗೆ ಕೆಂಪು ಕಾರ್ಡ್
- ಮೆಕ್ಸಿಕೋದ ಸೀಸರ್ ಮೊಂಟೆಸ್‌ಗೆ ಹೆಚ್ಚುವರಿ ವೇಳೆಯಲ್ಲಿ ಕೆಂಪು ಕಾರ್ಡ್



ಸಿಥೋಲೆ ಹಾಗೂ ತೆಂಬಾ ಜ್ವಾನೆಗೆ ಕೆಂಪು ಕಾರ್ಡ್

ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಸ್ವೆಹೆಲೊ ಸಿಥೋಲೆ ಹಾಗೂ ತೆಂಬಾ ಜ್ವಾನೆ ಕೆಂಪು ಕಾರ್ಡ್ ಪಡೆದು ಹೊರನಡೆದ ಕಾರಣ ತಂಡ 9 ಆಟಗಾರರೊಂದಿಗೆ ಪಂದ್ಯ ಮುಗಿಸಬೇಕಾಯಿತು. ಹೆಚ್ಚುವರಿ ಸಮಯದಲ್ಲಿ ಮೆಕ್ಸಿಕೋದ ಸೀಸರ್ ಮೊಂಟೆಸ್ ಕೂಡ ಕೆಂಪು ಕಾರ್ಡ್ ಪಡೆದರು. ವಿಶ್ವಕಪ್ ಉದ್ಘಾಟನಾ ಪಂದ್ಯದಲ್ಲಿ ಮೊದಲ ಬಾರಿಗೆ ಮೂರು ಕೆಂಪು ಕಾರ್ಡ್‌ಗಳು ಪ್ರದರ್ಶಿತವಾದವು.


09 ನೇ ನಿಮಿಷ ಜುಲಿಯನ್ ಕ್ವಿನೋನ್ಸ್ ಗೋಲು

66 ನೇ ನಿಮಿಷ ರೌಲ್ ಜಿಮೆನೆಸ್ ಗೋಲು

80,824
ಪ್ರೇಕ್ಷಕರು ಅಜ್ಟೆಕಾ ಕ್ರೀಡಾಂಗಣದಲ್ಲಿ ಹಾಜರಿ



- ರೌಲ್ ಜಿಮೆನೆಸ್‌ಗೆ ಇದು ವಿಶ್ವಕಪ್ ಇತಿಹಾಸದ ಮೊದಲ ಗೋಲು
- ಮೆಕ್ಸಿಕೋ ಪರ ಅತಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿ ಜಾರೆಡ್ ಬೊರ್ಗೆಟ್ಟಿಯೊಂದಿಗೆ ಜಂಟಿ 2ನೇ ಸ್ಥಾನ
- ನಾಯಕ ಜೇವಿಯರ್ ಚಿಚರಿಟೋ ಹೆರ್ನಾಂಡೆಸ್ ದಾಖಲೆಯಿಂದ ಕೇವಲ 6 ಗೋಲುಗಳ ಅಂತರ
- 2006ರ ಬಳಿಕ ವಿಶ್ವಕಪ್ ಪಂದ್ಯವೊಂದರಲ್ಲಿ ಗರಿಷ್ಠ ಕೆಂಪು ಕಾರ್ಡ್‌ಗಳ ದಾಖಲೆ ಸಮೀಪ



2-1
ಗೋಲ್‌ನಿಂದ ಜೆಕ್ ಗಣರಾಜ್ಯ ವಿರುದ್ಧ ದಕ್ಷಿಣ ಕೊರಿಯಾ ಜಯ



59 ನೇ ನಿಮಿಷ: ಲಾಡಿಸ್ಲಾವ್ ಕ್ರೇಜ್ಚಿ (ಜೆಕ್ ಗಣರಾಜ್ಯ)	67 ನೇ ನಿಮಿಷ: ಹ್ವಾಂಗ್ ಇನ್-ಬಿಯೊಮ್ (ದಕ್ಷಿಣ ಕೊರಿಯಾ)	80 ನೇ ನಿಮಿಷ ಓ ಹ್ಯೋನ್-ಗ್ಯು (ದಕ್ಷಿಣ ಕೊರಿಯಾ)

ಗುಡಲಹಾರಾ ಕ್ರೀಡಾಂಗಣದಲ್ಲಿ ಹಾಜರಾತಿ
44,985

ಕೊರಿಯಾ ಶುಭಾರಂಭ

ಶುಕ್ರವಾರ ಬೆಳಗ್ಗೆ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಗೆಲುವಿನೊಂದಿಗೆ ತನ್ನ ಅಭಿಯಾನ ಆರಂಭಿಸಿದೆ. ಗುಡಲಹಾರಾ ಕ್ರೀಡಾಂಗಣದಲ್ಲಿ ನಡೆದ ಎ' ಗುಂಪಿನ ಪಂದ್ಯದಲ್ಲಿ ಜೆಕ್ ಗಣರಾಜ್ಯವನ್ನು 2–1 ಗೋಲುಗಳಿಂದ ಮಣಿಸಿದೆ. ಮೊದಲಾರ್ಧದಲ್ಲಿ ಎರಡೂ ತಂಡಗಳು ನಿರೀಕ್ಷಿತ ಪ್ರದರ್ಶನ ನೀಡದ ಕಾರಣ ಪ್ರೇಕ್ಷಕರಿಂದ ಅಸಮಾಧಾನ ವ್ಯಕ್ತವಾಯಿತು. ಆದರೆ ಎರಡನೇ ಅರ್ಧದಲ್ಲಿ ಪಂದ್ಯ ರೋಚಕ ತಿರುವು ಪಡೆದುಕೊಂಡಿತು. 59ನೇ ನಿಮಿಷದಲ್ಲಿ ನಾಯಕ ಲಾಡಿಸ್ಲಾವ್ ಕ್ರೇಜ್ಚಿ ಹೆಡರ್ ಮೂಲಕ ಗೋಲು ಬಾರಿಸಿ ಜೆಕ್ ಗಣರಾಜ್ಯಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಕೊರಿಯಾ ಶೀಘ್ರವೇ ತಿರುಗೇಟು ನೀಡಿತು.

ಕಂಬ್ಯಾಕ್

67ನೇ ನಿಮಿಷದಲ್ಲಿ ಹ್ವಾಂಗ್ ಇನ್–ಬಿಯೊಮ್ ಇಬ್ಬರು ರಕ್ಷಣಾ ಆಟಗಾರರನ್ನು ಮಣಿಸಿ ಅದ್ಭುತ ಗೋಲು ಬಾರಿಸಿ ಸಮಬಲ ಸಾಧಿಸಿದರು. ನಂತರ 80ನೇ ನಿಮಿಷದಲ್ಲಿ ಬಲಭಾಗದಿಂದ ನೀಡಿದ ಅವರ ನಿಖರ ಪಾಸ್ ಅನ್ನು ಓ ಹ್ಯೋನ್–ಗ್ಯು ಗೋಲಾಗಿ ಪರಿವರ್ತಿಸಿ ದಕ್ಷಿಣ ಕೊರಿಯಾಗೆ ಗೆಲುವು ತಂದುಕೊಟ್ಟರು. ನಾಯಕ ಸನ್ ಹ್ಯೂಂಗ್–ಮಿನ್ ನೇತೃತ್ವದ ದಕ್ಷಿಣ ಕೊರಿಯಾ ಪಂದ್ಯದ ಬಹುತೇಕ ಸಮಯ ಬಾಲ್ ಮೇಲಿನ ಹಿಡಿತ ಕಾಯ್ದುಕೊಂಡು ಹೆಚ್ಚು ಆಕ್ರಮಣಕಾರಿ ಆಟವಾಡಿತು. ಆರಂಭದಲ್ಲೇ ಹಲವು ಅವಕಾಶಗಳು ಸಿಕ್ಕರೂ ಅವುಗಳನ್ನು ಗೋಲಾಗಿ ಪರಿವರ್ತಿಸಲು ವಿಫಲವಾಗಿತ್ತು.

- ದಕ್ಷಿಣ ಕೊರಿಯಾ ಫಿಫಾ ಶ್ರೇಯಾಂಕ 25
- ಜೆಕ್ ಗಣರಾಜ್ಯ ಫಿಫಾ ಶ್ರೇಯಾಂಕ 38
- 2006ರ ಬಳಿಕ ಜೆಕ್ ಗಣರಾಜ್ಯದ ಮೊದಲ ವಿಶ್ವಕಪ್ ಪಂದ್ಯ

ಉಪಾಂತ್ಯಕ್ಕೆ ಪಿ. ವಿ. ಸಿಂಧು

ಸಿಡ್ನಿ(ಆಸ್ಟ್ರೇಲಿಯಾ): ತೈವಾನ್‌ನ ಚೆನ್ ಸು ಯು ವಿರುದ್ಧದ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿರುವ ಅನುಭವಿ ಶಟ್ಲರ್ ಪಿ.ವಿ. ಸಿಂಧು ಪ್ರತಿಷ್ಠಿತ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಸೆಮಿಫೈನಲ್‌ಗೇರಿದ್ದಾರೆ.

ಬ್ಯಾಡ್ಮಿಂಟನ್ ಲೋಕ ಅದರಲ್ಲೂ ಟೂರ್‌ಗಳಲ್ಲಿ ಭಾರತೀಯರದ್ದೇ ಪಾರುಪತ್ಯ. ಹಿಂದಿನ ಟೂರ್ನಿಗಳಿಂದ ನೋಡುತ್ತಾ ಬಂದರೆ ಪ್ರತಿ ಕೂಟದಲ್ಲಿ ಒಬ್ಬರಾದರೂ ಭಾರತೀಯ ಶಟ್ಲರ್ ಮಿಂಚುತ್ತಾರೆ. ಈ ಬಾರಿ ಸಿಂಧು ಅವರದ್ದು. ನಾಕೌಟ್ ಪಂದ್ಯಾವಳಿಯ ಪ್ರತಿಯೊಂದು ಪಂದ್ಯದಲ್ಲೂ ಸಿಂಧು ಅಸಾಮಾನ್ಯ ಪ್ರದರ್ಶನದೊಂದಿಗೆ ಎದುರಾಳಿಗಳ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸುತ್ತಾ ಬಂದಿದ್ದಾರೆ. ಶುಕ್ರವಾರದಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು ತೈವಾನ್‌ನ ಚೆನ್ ಸು ಅವರನ್ನು ಎದುರಿಸಿದ್ದರು. ಮೊದಲನೇ ಸೆಟ್‌ನಿಂದ ಹಿಡಿದು ಗೆಲುವಿನ ನಾಗಾಲೋಟ ಬಾರಿಸುವವರೆಗೂ ಅವಳಿ ಒಲಿಂಪಿಕ್ಸ್ ವಿಜೇತೆ ಎದುರಾಳಿಗೆ ಅವಕಾಶವೇ ನೀಡಲಿಲ್ಲ.

ದೊಡ್ಡ ಮುನ್ನಡೆಯೊಂದಿಗೆ ಪಂದ್ಯವನ್ನಾರಂಭಿಸಿದ ಸಿಂಧು ನಿರಂತರ ಪಾಯಿಂಟ್‌ಗಳನ್ನು ಗಳಿಸುತ್ತಾ ಬಂದರು. ಸ್ಮ್ಯಾಷ್, ಪಾಯಿಂಟ್ ಮತ್ತು ಡ್ರಾಪ್‌ಗಳ ಮೂಲಕ ಮೊದಲನೇ ಸೆಟ್ ಅನ್ನು 21–6ರಿಂದ ಗೆದ್ದು ಆತ್ಮವಿಶ್ವಾಸ ಗೆದ್ದರು. ಎರಡನೇ ಸೆಟ್‌ನಲ್ಲಿ ಮತ್ತೆ ಅದೇ ಪ್ರಾಬಲ್ಯ ಮುಂದುವರಿಸುತ್ತಾ ಸಿಂಧು 21–9ರಿಂದ ಗೆದ್ದುಕೊಂಡರು. ಮುಂದಿನ ಪಂದ್ಯದಲ್ಲಿ ಅವರು ಅಕಾನೆ ಯಮಗುಚಿ ಅವರನ್ನು ಎದುರಿಸಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಭಾರತೀಯ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮ ಅವರನ್ನು ಅಕಾನೆ ಅವರು ಸೋಲಿಸಿದರು. ನಿರೀಕ್ಷಿತ ಪ್ರದರ್ಶನದೊಂದಿಗೆ ಕ್ವಾರ್ಟರ್ ಫೈನಲ್‌ಗೇರಿದ್ದ ಅವರು, ನೇರ ಸೆಟ್‌ಗಳಿಂದಲೇ ಸೋತರು. ತೀವ್ರ ಹೋರಾಟ ನಡೆಸಿದ್ದಾದರೂ ಮೊದಲನೇ ಸೆಟ್‌ನಲ್ಲಿ 21–14 ಮತ್ತು ಎರಡನೇ ಸೆಟ್‌ನಲ್ಲೂ 21–14ರಿಂದ ಸೋಲು ಹೊರ ನಡೆದರು.

- ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್
- ಚೆನ್ ವಿರುದ್ಧ ನೇರ ಸೆಟ್‌ಗಳ ಗೆಲುವು
- ತನ್ವಿ ಶರ್ಮಗೆ ಸೋಲು



ಅಫ್ಘಾನ್ ಬೇಟೆಗೆ ಭಾರತ ಸಿದ್ಧ

ಧರ್ಮಶಾಲಾ: ಬಹು ದಿನಗಳ ನಂತರ ಏಕದಿನ ಅಂಗಳಕ್ಕೆ ಭಾರತ ಇಳಿಯಲಿದೆ. ವಿರಾಟ್ ಕೊಹ್ಲಿ ಇಲ್ಲದಿದ್ದರೂ ರೋಹಿತ್ ಶರ್ಮ ಅವರ ಬ್ಯಾಟಿಂಗ್‌ಗಾಗಿ ಕಾತರದಿಂದ ಕಾದು ಕೂತಿರುವ ಸಮಸ್ತ ಭಾರತೀಯ ಕ್ರಿಕೆಟ್ ಅಭಿಮಾನಿಗಳು ಶನಿವಾರದಂದು ಅಫ್ಘಾನಿಸ್ತಾನ ಮತ್ತು ಭಾರತ ನಡುವೆ ನಡೆಯಲಿರುವ ಮೊದಲ ಏಕದಿನ ಪಂದ್ಯವನ್ನು ಕಣ್ತುಂಬಿಕೊಳ್ಳಲಿದ್ದಾರೆ.

ಟೆಸ್ಟ್ ಸೋತಿರುವ ಅಫ್ಘಾನಿಸ್ತಾನ ತಂಡವು ಧರ್ಮಶಾಲಾದ ಹಿಮಗಳ ಕೆಳಗಿರುವ ಕ್ರೀಡಾಂಗಣದಲ್ಲಿ ಭಾರತ ತಂಡವನ್ನು ಶನಿವಾರದಂದು ಎದುರಿಸಲಿದೆ. ಗೆಲ್ಲುವ ಪ್ರಯತ್ನಕ್ಕೆ ಕೈಹಾಕುವ ತಯಾರಿಗಳನ್ನು ಮಾಡಲಿದೆ. ಇತ್ತ ಶುಭಮನ್ ಗಿಲ್ ನಾಯಕತ್ವದಲ್ಲಿ ಕಣಕ್ಕಿಳಿಯಲಿರುವ ಭಾರತ ರೋಹಿತ್ ಶರ್ಮ ಅವರೊಂದಿಗೆ ಆಡಲಿದೆ.

- ಇಂದು ಮೊದಲ ಏಕದಿನ ಪಂದ್ಯ
- ರೋಹಿತ್ ಲಭ್ಯ

ಐಪಿಎಲ್ ಮುಗಿದ ನಂತರ ಭಾರತ ತಂಡದ ಆಟಗಾರರು ಇದೇ ಮೊದಲ ಬಾರಿಗೆ ನೀಲಿ ಜೆರ್ಸಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಟೆಸ್ಟ್ ಪಂದ್ಯವನ್ನು ಏಕಪಕ್ಷೀಯವಾಗಿ ಗೆದ್ದಿರುವ ಶುಭಮನ್ ಪಡೆಗೆ ಇದು ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ತಯಾರಿ ಭಾಗವಾಗಿರಲಿದೆ. ಈಗಿನಿಂದಲೇ ಶುರು ಮಾಡಿಕೊಂಡು ಉತ್ತಮ ಅಭ್ಯಾಸ ನಡೆಸುವ ನಿಟ್ಟಿನಲ್ಲಿ ಭಾರತ ಗಟ್ಟಿಯಾಗುತ್ತಿದೆ. ಒಂದೇ ಮಾದರಿಯಲ್ಲಿ ಉಳಿದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮ ಈ ಪಂದ್ಯಗಳಲ್ಲಿ ಆಡುವ ನಿರೀಕ್ಷೆಯಿತ್ತು. ಆದರೆ ವಿರಾಟ್ ಕೊಹ್ಲಿ ಗಾಯದಿಂದಾಗಿ ಪಂದ್ಯದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ರೋಹಿತ್ ಶರ್ಮ ಮಾತ್ರ ತಂಡದ ಭಾಗವಾಗಿರಲಿದ್ದಾರೆ.



ಪಂದ್ಯದ ವಿವರ

- ಯಾವಾಗ: ಶನಿವಾರ
- ಎಲ್ಲಿ: ಧರ್ಮಶಾಲಾ
- ಸಮಯ: ಮಧ್ಯಾಹ್ನ 1:30
- ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್ ಸ್ಟಾರ್

ಕ್ರಿಕೆಟ್‌ಗೆ ಕೇನ್ ವಿಲಿಯಮ್ಸನ್ ವಿದಾಯ

ದುಬೈ: ನ್ಯೂಜಿಲೆಂಡ್ ತಂಡದ ಮಾಜಿ ನಾಯಕ, ಪ್ರಬಲ ಬ್ಯಾಟರ್ ಕೇನ್ ವಿಲಿಯಮ್ಸನ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ಇಂಗ್ಲೆಂಡ್‌ನೊಂದಿಗೆ ನಡೆಯುತ್ತಿರುವ 3 ಟೆಸ್ಟ್ ಪಂದ್ಯಗಳ ಸರಣಿ ನಡುವಯೇ ಅವರು ದಿಢೀರ್ ನಿರ್ಧಾರ ಕೈಗೊಂಡಿದ್ದು, ತಕ್ಷಣದಿಂದಲೇ ಆಡಲಾರೆ ಎನ್ನುವ ಮೂಲಕ ತಮ್ಮ 16 ವರ್ಷದ ಕ್ರಿಕೆಟ್ ಪಯಣಕ್ಕೆ ತೆರೆ ಎಳೆದಿದ್ದಾರೆ. 2010ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಪದಾರ್ಪಣೆ ಮಾಡಿರುವ ಅವರು, ಬ್ಯಾಟಿಂಗ್‌ನಲ್ಲಿ ಮಿಂಚಿ ತಮ್ಮದೇ ದಂತಕಥೆ ಬರೆದಿದ್ದಾರೆ. ಈ ಬಗ್ಗೆ ಶುಕ್ರವಾರ ಘೋಷಿಸುತ್ತಾ ಕೇನ್, ನಾನು ನಿವೃತ್ತಿ ಬಗ್ಗೆ ಕಳೆದ ಹಲವು ದಿನಗಳಿಂದಲೂ ಯೋಚಿಸುತ್ತಿದ್ದೇನೆ. ಈಗ ಕಾಲ ಬಂದಿದೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನನ್ನ ದೇಶವನ್ನು ಪ್ರತಿನಿಧಿಸಿದ್ದು ನನ್ನ ಭಾಗ್ಯ ಮತ್ತು ಹೆಮ್ಮೆ. ಬೆಂಬಲಿಸಿದ ಎಲ್ಲರಿಗೂ ಧನ್ಯವಾದ ಎಂದು ತಮ್ಮ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಬರೆದುಕೊಂಡಿದ್ದಾರೆ.

ಕೇನ್ ಸಾಧನೆ: ಟೆಸ್ಟ್‌ನಲ್ಲಿ ಈಗಾಗಲೇ 9515 ರನ್ ಗಳಿಸಿರುವ ಅವರು, ನ್ಯೂಜಿಲೆಂಡ್ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. ಏಕದಿನದಲ್ಲಿ 7256 ರನ್‌ಗಳನ್ನು ಬಾರಿಸಿದ್ದು ಅಲ್ಲಿಯೂ ಈ ಸಾಧನೆ ಮಾಡಿದ ನಾಲ್ಕನೇ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. ನಾಯಕತ್ವ ವಿಚಾರಕ್ಕೆ ಬಂದರೆ ಕೇನ್ 40 ಟೆಸ್ಟ್ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ. ಅದರಲ್ಲಿ 22 ಪಂದ್ಯಗಳಲ್ಲಿ ನ್ಯೂಜಿಲೆಂಡ್ ಗೆದ್ದಿದೆ. 10 ಸೋಲು, 8 ಪಂದ್ಯಗಳು ಡ್ರಾಗೊಂಡಿವೆ. ಏಕದಿನ ಮತ್ತು ಟಿ20 ವಿಚಾರಕ್ಕೆ ಬಂದರೆ ಅವರು, 2016ರ ಟಿ20 ವಿಶ್ವಕಪ್, 2019ರ ಏಕದಿನ ಪಂದ್ಯಾವಳಿಯಲ್ಲಿ ತಮ್ಮ ತಂಡವನ್ನು ಫೈನಲ್‌ಗೇರಿಸಿದ್ದಲ್ಲದೆ ಕೂಟವನ್ನು ಗೆಲ್ಲುವ ಎಲ್ಲಾ ಪ್ರಯತ್ನಗಳನ್ನು ಮಾಡಿದರು.




ವಿರಾಟ್ ಸೇರಿದಂತೆ ಹಲವರಿಂದ ಶುಭಾಶಯ

ನಿವೃತ್ತಿ ಪಡೆದ ಕೇನ್ ವಿಲಿಯಮ್ಸನ್ ಅವರಿಗೆ ವಿರಾಟ್ ಕೊಹ್ಲಿ ಸೇರಿದಂತೆ ಹಾಲಿ–ಮಾಜಿ ಕ್ರಿಕೆಟಿಗರೆಲ್ಲರೂ ಶುಭಾಶಯ ತಿಳಿಸಿದ್ದಾರೆ. ಪೋಸ್ಟ್ ಒಂದನ್ನು ಮಾಡಿರುವ ಕೊಹ್ಲಿ, ಎದುರಾಳಿಯಿಂದ ಸ್ನೇಹದ ವರೆಗೆ ನಮ್ಮ ಬಾಂಧವ್ಯ ಬೆಳೆಯಿತು. ನೀವು ಮಾಡುವ ಬ್ಯಾಟಿಂಗ್ ನೋಡುವುದೇ ಉತ್ಸಾಹ. ಮೈದಾನದಲ್ಲಿ ಒಬ್ಬರಿಗೊಬ್ಬರನ್ನು ಎದುರಿಸುವ ಕ್ಷಣಗಳಿಂದ ಹಿಡಿದು ಆಟದ ಬಗ್ಗೆ ನಮಗಿರುವ ನೋಟದ ಬಗ್ಗೆ ಹಂಚಿಕೊಳ್ಳುವವರೆಗೂ ನಮ್ಮ ಒಡನಾಟ ಬೆಳೆದಿತ್ತು. ನೀವು ಮಾಡಿದ ಸಾಧನೆ ಸ್ಮರಣೀಯ ಎಂದು ಬರೆದುಕೊಂಡಿದ್ದಾರೆ.

ಪದಬಂಧ

6013

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಹನುಮನ ಆಗ್ರಹದಿಂದ ಸಿಕ್ಕ ಕೃಪೆ (4)
3.ಕದ ಒಳಗೊಂಡ ಹೂವಿನ ಪರಾಗ (4)
5.ಬಣ್ಣದ ಲೋಹದ ತಗಡು ಇದು (3)
6.ಬೆಟ್ಟದ ಕಡೆಗೆ ಎಸೆದ ಆಭರಣ (2)
8.ಶರ–ನಿಜ ಒಳಗೊಂಡ ಕತ್ತಲಿನೊಡೆಯ (4)
10.ಅತಿಯ ನಡುವೆ ಅಡಗಿದ ದುರ್ದೆಶೆ (4)
12.ಜಗದಗಲ ವ್ಯಾಪಿಸಿದ ನೀರು (2)
14.ಕನದ ನಡುವೆ ಬೆಸ್ತನಿದ್ದಾನೆ (3)
15.ಈ ತರಹದಲ್ಲಿ ತೋರಿದ ತನ್ಮಯತೆ (4)
16.ಗುಂಪಿನ ಒಡೆಯನಾಗಿ ವಿನಾಯಕ (4)

ಮೇಲಿನಿಂದ ಕೆಳಕ್ಕೆ
1.ಪಾಠವನ್ನು ಕಲಿಸುವ ಕ್ರಿಯೆ (4)
2.ಹತ ಒಳಗೊಂಡ ಬಾಲ್ಯ (4)
3.ಪ್ರಾಣಿ–ಪಕ್ಷಿಗಳಲ್ಲಿ ಎಳೆಯದು (2)
4.ಗಣಿತದಲ್ಲಿ ಹತ್ತನೆಯ ಒಂದು ಭಾಗ (4)
7.ಕೊಬ್ಬಿದ ಗಂಡುಕೋತಿಯಿದು (3)
9.ರಜ ಕಡೆಯಲ್ಲಿರುವ ತಾವರೆ (3)
10.ತಡೆಯಿಲ್ಲದೆ–ಎಡಬಿಡದೆ ಎಂಬರ್ಥದ ಶಬ್ದ (4)
11.ಕಲವನ್ನೊಳಗೊಂಡ ದೊಡ್ಡ ರಾಜ್ಯಸಭೆ (4)
13.ವಶ ಮಾಡಿಕೊಂಡದ್ದು ತುಂಬ ಸ್ವಲ್ಪ (4)
14.ನಡೆದ ಅಥವಾ ಕಲ್ಪಿತವಾದ ಸಂಗತಿ (2)

6012 ಉತ್ತರ

ಎಡದಿಂದ ಬಲಕ್ಕೆ:
1.ಜೀತ 2.ಕದನ 4.ಪಂಪ
6.ನಡೆಮಾಡ 8.ಗುಲಗಂಜಿ
12.ಮರಸುತ್ತು
14.ಹಸುತನ 15.ನೆಗೆ
16.ಹಡಗು 17.ಬಿಲ

ಮೇಲಿನಿಂದ ಕೆಳಕ್ಕೆ :
1.ಜೀವನದಿ 2.ಕರಂಡ
3.ನಲುಗು 5.ಪರಾಜಿತ
7.ಮಾತುಹಾರಿಸು
9.ಲಕಲಕಿಸು
10.ಜಮಖಾನೆ
11.ಘನಫಲ 13.ಹರಿತ್ತು
14.ಹರಗು

ಕಿರುಸುದ್ದಿ

ಭಾರತೀಯರಿಗೆ ಹರ್ಷ



• **ಮುಂಡರಗಿ:** ಭಾರತದ ರಾಜಕೀಯ ಇತಿಹಾಸದಲ್ಲಿ ಜೂನ್ 10 ಒಂದು ಸುವರ್ಣ ಅಕ್ಷರದಲ್ಲಿ ಬರೆಯುವಂತಹ ದಿನ. ಪ್ರಧಾನಿ ನರೇಂದ್ರ ಮೋದಿಯವರು ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನಿದ್ದ ಸತತವಾಗಿ ಸುದೀರ್ಘ ಅವಧಿಗೆ ದೇಶವನ್ನು ಮುನ್ನಡೆಸಿದ ಪ್ರಜಾಸತ್ತಾತ್ಮಕ ಪ್ರಧಾನಿ ಎಂಬ ದಾಖಲೆಯನ್ನು ದಾಟಿ ಮುನ್ನಡೆದಿದ್ದಾರೆ. ಈ ಮೈಲುಗಲ್ಲು ಭಾರತೀಯರಿಗೆ ಹರ್ಷ ತಂದಿದೆ ಎಂದು ಮುಂಡರಗಿ ಬಿಜೆಪಿ ಮಂಡಲದ ಅಧ್ಯಕ್ಷ ಶಿವಕುಮಾರಸ್ವಾಮಿ ಹಿರೇಮಠ ಹೇಳಿದರು. ಅವರು ಮುಂಡರಗಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅಂಬಾಭವಾನಿಗೆ ವಿಶೇಷ ಪೂಜೆ ಸಲ್ಲಿಸಿ ಮೋದಿಯವರು ಇನ್ನಷ್ಟು ವರ್ಷ ಪ್ರಧಾನಿ ಆಗಿರುವಂತೆ ಹರಸಬೇಕು ಎಂದು ಬೇಡಿಕೊಂಡರು. ಕರಬಸಪ್ಪ ಹಂಚಿನಾಳ, ಏಕನಾಥಗೌಡ ಪಾಟೀಲ, ಬಸವರಾಜ ಬನ್ನೂರ, ಪ್ರಶಾಂತ ಗುಡದಪ್ಪನವರ, ಪ್ರಭಾ ಉಳ್ಳಿ, ಪ್ರಭಾವತಿ ಹೊಸಳ್ಳಿ ಹಿರೇಮಠ, ಮಂಜುನಾಥ ಮುಧೋಳ, ಮೈಲಾರಪ್ಪ ಕಲಕೇರಿ, ಕೊಟ್ರೇಶ ಅಂಗಡಿ, ದೇವು ಹಡಪದ, ಸಿದ್ದು ದೇಸಾಯಿ, ಬುಟ್ಟು ಹೊಸಮನಿ, ಸುಭಾಸ ಗುಡಿಮನಿ, ರುದ್ರಗೌಡ ಪಾಟೀಲ ಇದ್ದರು.



ಲಕ್ಷ್ಮೇಶ್ವರ: ಪಟ್ಟಣದ ಶ್ರೀ ಶಂಕರ ಭಾರತಿ ಸಮುದಾಯ ಭವನದಲ್ಲಿ ಅಧಿಕ ಮಾಸದ ಪ್ರಯುಕ್ತ ವಿಪ್ರ ಮಹಿಳೆಯರಿಂದ ಹಾಗೂ ಶಾರದಾ ಭಜನಾ ಮಂಡಳಿಯವರಿಂದ ಭಜನಾ ಹಾಗೂ ಪೂಜಾ ಕಾರ್ಯಕ್ರಮ ನಡೆದವು.

ಗುರುವಂದನೆ ನಾಳೆ

• **ನರೇಗಲ್ಲ:** ಪ್ರತಿಯೊಬ್ಬ ವಿದ್ಯಾರ್ಥಿಗೆ ತನ್ನ ಜೀವನದ ಅಮೂಲ್ಯವಾದ ಜ್ಞಾನವನ್ನು ಮಾರ್ಗದರ್ಶನ ಮತ್ತು ಅಕ್ಷರ ಮುಖಾಂತರ ಕಲಿಸಿದ ಗುರುಗಳಿಗೆ ಕೃತಜ್ಞತೆ ಸಲ್ಲಿಸಲು ಜೂನ್ 14ರಂದು ಎಂಪಿಎಸ್ ಶಾಲಾ ಬಯಲಿನಲ್ಲಿ ಗುರುವಂದನೆ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾಪ್ರಸನ್ನ ಸಂಗನಾಳ ಹೇಳಿದರು. ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿ, 1988–89ರಿಂದ 1995–96ರವರೆಗೆ ಎಂಪಿಎಸ್ ಶಾಲೆಯಲ್ಲಿ ಅಭ್ಯಾಸ ಮಾಡಿದ ಎಲ್ಲ ವಿದ್ಯಾರ್ಥಿಗಳೂ ಸೇರಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಎಂದರು. ಶಿಕ್ಷಕರಾದ ಮುಳಗುಂದ ಮಾತನಾಡಿದರು. ಗುರುವಂದನೆ ಸ್ವೀಕರಿಸಲಿರುವ ನಿವೃತ್ತ ಶಿಕ್ಷಕ ಎ. ಎಸ್. ಘಟೇಳಿಯವರ ಮಾತನಾಡಿ, ಅಂದಿನ ನಮ್ಮ ಸಿಬ್ಬಂದಿಯಲ್ಲಿ ಸಮರ್ಪಣಾ ಮನೋಭಾವನೆ ಸೇವೆ ಇತ್ತು. ಈ ಸೇವೆಯನ್ನು ಗುರುತಿಸಿ ಅಂದಿನ ವಿದ್ಯಾರ್ಥಿಗಳು, ಇಂದಿನ ಸಮಾಜದ ಗಣ್ಯರು ಸೇರಿ ಸಲ್ಲಿಸುತ್ತಿರುವ ಗುರುವಂದನೆಯನ್ನು ಸ್ವೀಕರಿಸಲು ಸಂತೋಷವಾಗುತ್ತಿದೆ ಎಂದರು. ಚಂದ್ರಾಮ ಗ್ರಾಮಪುರೋಹಿತ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಡಿಡಿಪಿಐ ಆರ್. ಎಸ್. ಬುರುಡಿ ಉದ್ಘಾಟಿಸಲಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಎ. ಫಣಿಬಂದ ಅತಿಥಿಗಳಾಗಿದ್ದು, ನಿವೃತ್ತ ಡಿಡಿಪಿಐ ಸಂಜೀವ ಬಿಂಗೇರಿ, ನಿವೃತ್ತ ಶಿಕ್ಷಕರಾದ ವೀರಪ್ಪ ಸಂಗನಾಳ, ಕುಸುಮವ್ವ ಭೀಮನಗೌಡ್ರ, ಶರಣಬಸಪ್ಪ ಬೂದಿಹಾಳ, ಅಂದಾನಪ್ಪ ಅಣ್ಣಿಗೇರಿ, ಶಿಕ್ಷಕ ಎಂ.ಪಿ. ಬಸರಿಗಿಡದ, ನಿಂಗನಗೌಡ ಚಿಕ್ಕನಗೌಡ್ರ, ಬಸವನಗೌಡ ಗೌಡರ, ಸಿ.ಬಿ. ಹಿರೇಮಠ, ಗೀತಾ ಗುಳ್ಳರಿ, ಮಲ್ಲವ್ವ ಹೊಸೂರ ಗುರುಗಳು ಗುರುವಂದನೆ ಸ್ವೀಕರಿಸಲಿದ್ದಾರೆ. ಮೈಲಾರಪ್ಪ ಗೋಣಿ, ಶಿವಾನಂದ ಪಟ್ಟಣದ, ಉಮೇಶ ಪಾವಟೆ, ಶಿವಪ್ಪ ತಳವಾರ, ಪ್ರಸನ್ನ ಗಜೇಂದ್ರಗಡ, ಬಸವರಾಜ ಕುಷ್ಟಗಿ, ಮಹಾಬೂಬಸಾಬ ಮತ್ತೆತರರಿದ್ದರು.



ಮಾರುಕಟ್ಟೆ ಧಾರಣೆ

ಗದಗ	ಕ್ವಿಂಟಲ್
ಗೆಜ್ಜೆ ಶೇಂಗಾ	7500-7500
ಕಡಲೆ	2750-6065
ಹೆಸರು	1599-7521
ಜೋಳ	2324-4633
ಕುಸಬಿ	3803-5022
ಸೂರ್ಯಕಾಂತಿ	6812-6812
ತೊಗರಿ	4664-4664
ಗೋಧಿ	2224-3577
ಗೋವಿನಜೋಳ	1800-2100
ಬೆಲ್ಲ	5666-5666



ಗದಗ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ನಗರ ಮಂಡಲ ಪದಾಧಿಕಾರಿಗಳ ಸಭೆ ಜರುಗಿತು. ನಗರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಾತಿ ಅಕ್ಕಿ, ನಗರ ಮಂಡಲ ಅಧ್ಯಕ್ಷ ಸುರೇಶ ಮರಳಪ್ಪನವರ, ಪ್ರಧಾನ ಕಾರ್ಯದರ್ಶಿ ಶಂಕರ ಕಾಕಿ, ಮಂಜುನಾಥ ಶಾಂತಗೇರಿ, ಕವಿತಾ ಬಂಗಾರಿ, ಪವಿತ್ರಾ ಮುದಗಲ್ಲು, ಶಾಂತಾ ತಿಮ್ಮಾಪೂರ, ಪುಷ್ಪಾ ಪೂಜಾರ, ರೇಖಾ ಗದಗೆ, ಗೀತಾ ಅಣ್ಣಿಗೇರಿ, ನಿರ್ಮಲಾ ಬಳ್ಳಿ, ಭುವನೇಶ್ವರಿ ಹಿರೇಮಠ, ಸಂಕೇತಾ ತಿದ್ದಿಂಗ, ಮಂಗಳಾ ರಾಯಭಾಗಿ, ಸರೋಜಾ ಬಾರಕೇರ, ರಾಜೇಶ್ವರಿ ಜವಳಿ, ಶೈಲಜಾ ಜೋಸೆಫ್, ಜಯಶ್ರೀ ಕಮತರ ಇದ್ದರು.

ಹಿರಿಯ ನಾಗರಿಕರ ಮಾಸಾಶನ ಬಿಡುಗಡೆಗೊಳಿಸಿ

• **ಶಿರಹಟ್ಟಿ:** ಕಳೆದ ನಾಲ್ಕೈದು ತಿಂಗಳಿಂದ ಸಂಧ್ಯಾ ಸುರಕ್ಷಾ, ಇಂದಿರಾ ವಿಕಾಸ, ವಿಧವಾ, ಮನಸ್ವಿನಿ ಮಾಸಾಶನವನ್ನು ಸರ್ಕಾರ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿದ್ದು ಇದರಿಂದ ಬಡವರು ಜೀವನ ಸಾಗಿಸುವುದು ತುಂಬಾ ಕಷ್ಟಕರವಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ ಹಾದಿಮನಿ ಆರೋಪಿಸಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ವಿಧವಾ, ಮನಸ್ವಿನಿ ಮಾಸಾಶನ ಬಿಡುಗಡೆ ಮಾಡುವಂತೆ ಆಗ್ರಹಿಸಿ ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಮೂಲಕ ಸಿಎಂ ಡಿ.ಕೆ. ಶಿವಕುಮಾರ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ನಕಲಿ ಫಲಾನುಭವಿಗಳ ಮಾಸಾಶನ ರದ್ದು ಪಡಿಸುವ ಭರದಲ್ಲಿ ನಿಜವಾದ ಫಲಾನುಭವಿಗಳಿಗೆ ಮಾಸಾಶನ ನೀಡದೇ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡುತ್ತಿದೆ. ತ್ವರಿತವಾಗಿ ಸಮೀಕ್ಷೆ ನಡೆಸಿ, ದಾಖಲೆ ಪರಿಶೀಲನೆ ನಡೆಸಿ ನಕಲಿ ಫಲಾನುಭವಿಗಳ ವಿರುದ್ಧ ಹಾಗೂ ಅನಧಿಕೃತ ಮಂಜೂರು ಪತ್ರ ವಿತರಿಸಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಿ. ಅದನ್ನು ಬಿಟ್ಟು ಬಡವರ ಮಾಸಾಶನ ನೀಡದೇ ಸತಾಯಿಸುವುದು ಸರಿಯಲ್ಲ ಎಂದರು.

ಈ ವೇಳೆ ಕೃಷ್ಣ ಜಾಧವ, ನೀಲಪ್ಪ ತುಳಿ, ಅಡಿವೆಪ್ಪ ರಾಮಗಿರಿ, ನಿಂಗಪ್ಪ ಕುಳಗೇರಿ, ಹುಚ್ಚಪ್ಪ ಕಂಬಳಿ, ಮುಂಡಲಿಕ ಪರಬತ, ವಿನಾಯಕ ಹಾದಿಮನಿ, ಲಕ್ಷ್ಮವ್ವ ಹಾದಿಮನಿ, ಪಕ್ಕಣ ಹಮ್ಮಿಗಿ, ಶಿದ್ದಲಿಂಗಪ್ಪ ಗೊರವರ, ಈರಪ್ಪ ಚಿಕ್ಕತೋಟದ, ಇಮಾಮಸಾಬ ಭೈರಕದಾರ, ದೇವಕ್ಕ ಜೋಗೇರ, ಗಂಗಮ್ಮ ಬುಳ್ಳಣ್ಣವರ ಇದ್ದರು.



ಶಿರಹಟ್ಟಿ: ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ವಿಧವಾ, ಮನಶ್ವಿನಿ ಮಾಸಾಶನ ಬಿಡುಗಡೆ ಮಾಡುವಂತೆ ಆಗ್ರಹಿಸಿ ತಹಶೀಲ್ದಾರ್ ಕೆ. ರಾಘವೇಂದ್ರ, ರಾವ್ ಮೂಲಕ ಸಿಎಂ ಡಿ.ಕೆ. ಶಿವಕುಮಾರ ಅವರಿಗೆ ಮನವಿ ಸಲ್ಲಿಸಲಾಯಿತು.

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ | ಡಿಸಿ ಅಭಿಮತ

ಉತ್ತಮ ಮೌಲ್ಯ, ಶಿಕ್ಷಣ ಅಗತ್ಯ



• **ಗದಗ:** ಮಕ್ಕಳನ್ನು ಬಾಲ ಕಾರ್ಮಿಕರನ್ನಾಗದಂತೆ ತಡೆಯುವುದು ಪ್ರತಿಯೊಬ್ಬರ ಸಾಮಾಜಿಕ ಜವಾಬ್ದಾರಿಯಾಗಿದ್ದು, ಶಿಕ್ಷಣದಿಂದ ಯಾವುದೇ ಮಗು ವಂಚಿತವಾಗದಂತೆ ಎಲ್ಲರೂ ಕಾಳಜಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾಮಿಕ ಇಲಾಖೆ, ಜಿಲ್ಲಾ ಕಾರ್ಮಿಕ ನಿರ್ಮೂಲನ ಯೋಜನಾ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳು ಓದುವ ವಯಸ್ಸಿನಲ್ಲಿ ದಿಕ್ಕುತಪ್ಪಿದರೆ ಅದರ ದುಷ್ಪರಿಣಾಮಗಳನ್ನು ಸಮಾಜವು ದಿನನಿತ್ಯ ಕಾಣುತ್ತಿದೆ. ಮಕ್ಕಳಿಗೆ ಸರಿಯಾದ ಮಾರ್ಗದರ್ಶನ, ಶಿಕ್ಷಣ ಮತ್ತು ಉತ್ತಮ ಮೌಲ್ಯಗಳನ್ನು ನೀಡುವುದು ಅತ್ಯಂತ ಅಗತ್ಯವಾಗಿದೆ ಎಂದರು. ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಯದೇವಿ ಕವಲೂರು ಮಾತನಾಡಿ, ಯಾವುದೇ ಸ್ಥಳದಲ್ಲಿ ಬಾಲ ಕಾರ್ಮಿಕತೆ ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ 1098 , ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಶೇಷ ಮಕ್ಕಳ ಪೊಲೀಸ್ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಬಾಲ ನ್ಯಾಯ ಮಂಡಳಿಯ ಗಮನಕ್ಕೆ ತರಬೇಕು ಎಂದರು. ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಕಾಲೇಜು ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಚಿತ್ರಕಲೆ, ಭಾಷಣ, ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ.ನಂದಾ ಹಣಬರಹಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ರಾಧಾ ಮಣ್ಣೂರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಆರ್. ಎಸ್.ಬುರಡಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಆರ್., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಮೆಹಬೂಬ ಬೈ ತುಂಬರಮಟ್ಟಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಕವಲೂರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಆರ್.ಜಿ.ಕಲ್ಲೂರ, ಕಾರ್ಮಿಕ ನಿರೀಕ್ಷಕಿ ಸುಷ್ಮಾ , ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನಾ ಯೋಜನಾ ನಿರ್ದೇಶಕ ಸಂದೇಶ ಪಾಟೀಲ ಇತರರಿದ್ದರು. ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ ಸ್ವಾಗತಿಸಿದರು. ಮಲ್ಲಪ್ಪ ಹೊಸಳ್ಳಿ ನಿರೂಪಿಸಿ, ವಂದಿಸಿದರು.

ಕಾರ್ಮಿಕ ಪದ್ಧತಿ ನಿರ್ಮೂಲನೆ ಅವಶ್ಯ

• **ಮುಂಡರಗಿ:** ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿಯು ಮಕ್ಕಳನ್ನು ದೈಹಿಕವಾಗಿ, ನೈತಿಕವಾಗಿ, ಮಾನಸಿಕವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೆ ಒಳಪಡಿಸಿ ಅವರ ಶಿಕ್ಷಣ ಹಾಗೂ ಸರ್ವಾಂಗೀಣ ಪ್ರಗತಿಯ ಅವಕಾಶಗಳನ್ನು ತಡೆಗಟ್ಟುತ್ತವೆ ಎಂದು ಮುಂಡರಗಿ ದಿವಾಣಿ ನ್ಯಾಯಾಧೀಶ ಬಸವರಾಜ ಹೇಳಿದರು.

ಅವರು ಇಲ್ಲಿಯ ಸ್ವಾಮಿ ವಿವೇಕಾನಂದ ಪ್ರಾಥಮಿ ಮತ್ತು ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ಕಾರ್ಮಿಕ ಇಲಾಖೆ, ವಕೀಲರ ಸಂಘ ಮತ್ತು ಶಿಕ್ಷಣ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ಆಡಳಿತಾಧಿಕಾರಿ ಸಿ.ಎಸ್.ಅರಸನಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ದುಡಿಮೆ ಬೇಡ, ಶಿಕ್ಷಣ ಬೇಕು ಎಂಬುದನ್ನು ಎಲ್ಲರೂ ಅರಿಯಬೇಕು. ಬಾಲಕಾರ್ಮಿಕ ವಿರೋಧಿ ದಿನಾಚರಣೆಯ ತಿಳುವಳಿಕೆಯ ಕಾರ್ಯಕ್ರಮವನ್ನು ಪಾಲಕರಿಗೂ ನಡೆಸಬೇಕು ಎಂದರು.

ಉಪನ್ಯಾಸಕರಾಗಿ ಆಗಮಿಸಿದ್ದ ಹಿರಿಯ ನ್ಯಾಯವಾದಿ ಮಂಜುನಾಥ ಅರಳಿ ಮಾತನಾಡಿ, ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿದ ಮಾಲೀಕರಿಗೆ 6 ತಿಂಗಳಿಂದ 2 ವರ್ಷದವರೆಗೆ ಜೈಲು ಶಿಕ್ಷೆ ಅಥವಾ 20000 ರೂ.ದಿಂದ 50000 ರೂ. ದಂಡ ಅಥವಾ ಎರಡನ್ನೂ ವಿಧಿಸಲಾಗುವುದು ಎಂದರು. ಕಾರ್ಮಿಕ ಇಲಾಖೆಯ ಕಾರ್ಮಿಕ ನಿರೀಕ್ಷಕ ಭಾಗ್ಯವಂತ ಪತ್ತಾರ ಪ್ರತಿಜ್ಞಾವಿಧಿ ಬೋಧಿಸಿದರು. ವಕೀಲರಾದ ಪಿ.ಎಸ್.ಕುಲಕರ್ಣಿ, ಪರಮೇಶ ನಾಯಕ, ಬಸವರಾಜ ಕೊಟಗೊಂಡ, ವೀರಭದ್ರ ಶಿರಹಟ್ಟಿ, ವೆಂಕಟೇಶ ಸಂಕ್ಲಾಪೂರ, ಭೀಮರಾಯ ಹಾದಿಮನಿ ಇದ್ದರು. ಮುಖ್ಯೋಪಾಧ್ಯಾಯ ದೇವರಡ್ಡಿ ಇಮ್ರಾಪೂರ ಸ್ವಾಗತಿಸಿದರು. ಹಿರಿಯ ಶಿಕ್ಷಕ ಗುಡದಪ್ಪ ಲಿಂಗಶೆಟ್ಟರ ನಿರೂಪಿಸಿ, ವಂದಿಸಿದರು.



ವಿದ್ಯಾರ್ಥಿಗಳಿಗೆ ವಿದ್ಯಾರಂಭ ಕಾರ್ಯಕ್ರಮ

ಅಕ್ಷರಾಭ್ಯಾಸದಿಂದ ಭಾಷಾ ಸಾಮರ್ಥ್ಯ ಹೆಚ್ಚಳ: ಸ್ವಾತಿ



• **ಲಕ್ಷ್ಮೇಶ್ವರ:** ಇಲ್ಲಿನ ಎಸ್ ಟಿ ಪಿ ಎಂ ಬಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರಂಭ ಹಾಗೂ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಯಿತು. ಮೃತ್ಯುಂಜಯ ಹಿರೇಮಠ ಪೂಜಾ ಕಂಕರ್ಯ ನಡೆಸಿಕೊಟ್ಟರು.

ಮುಖ್ಯಸ್ಥೆ ಸ್ವಾತಿ ಪೈ ಮಾತನಾಡಿ, ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವುದರಿಂದ ಭಾಷಾ ಸಾಮರ್ಥ್ಯ ಹೆಚ್ಚಾಗುತ್ತದೆ. ಜ್ಞಾನದ ವಿಸ್ತರಣೆ, ಅರಿವಿನ ಸಾಮರ್ಥ್ಯ ವೃದ್ಧಿಯಾಗುತ್ತದೆ ಹಾಗೂ ಆತ್ಮ ವಿಶ್ವಾಸ ಹೆಚ್ಚುತ್ತದೆ. ನಮ್ಮ ಸಂಸ್ಕೃತಿ ತಿಳಿಸಿದಂತೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು.

ರೂಪಾ ನವಲೆ ಮಾತನಾಡಿ, ಶಾಲೆಗಳಲ್ಲಿ ಶಿಕ್ಷಣದ ಜೊತೆ ಸಂಸ್ಕಾರವನ್ನು ಕಲಿಸುವುದರಿಂದ ಮಕ್ಕಳಲ್ಲಿ ಉತ್ತಮ ಗುಣ ಬೆಳೆಯುತ್ತದೆ ಎಂದರು.

ಮುಖ್ಯಶಿಕ್ಷಕ ಪ್ರಭುಗೌಡ ಎಕ್ಕಿಕೊಪ್ಪ ಮಾತನಾಡಿ, ಇಂದಿನ ಕಾಲದ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ತಿಳಿಸಿಕೊಡುವುದು ಅತೀ ಅವಶ್ಯವಾಗಿದೆ ಎಂದರು.

ಅಕ್ಷರಾಭ್ಯಾಸವನ್ನು ಮೃತ್ಯುಂಜಯ ಹಿರೇಮಠ ಶಿಕ್ಷಕರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಲೀಲಾವತಿ ಬೆಳಗಟ್ಟಿ, ವೀಣಾ ಜಾಮನೂರ, ಪವಿತ್ರಾ ಕಾರಬಾರಿ, ಆಶಾ ಜಾಧವ್, ಸಿಮ್ರನ್ ನಡುಗೇರ, ಶಿವಯೋಗಿ ವಾಲಿ ಶೆಟ್ಟರ ಇದ್ದರು. ಕೀರ್ತಿ ಪಾಟೀಲ್ ಸ್ವಾಗತಿಸಿದರು. ಮಂಜುಳಾ ಪಾಟೀಲ ನಿರೂಪಿಸಿದರು. ವಿಜಯಲಕ್ಷ್ಮಿ ಮಹಾರಾಜಪೇಟ ವಂದಿಸಿದರು.

ಕುಡಿಯುವ ನೀರು ಸಮರ್ಪಕ ಪೂರೈಕೆಯಾಗಲಿ

• **ನರಗುಂದ:** ತಾಲೂಕಿನ ಹದಲಿ ಗ್ರಾಮ ಪಂಚಾಯಿತಿ ಕಚೇರಿಗೆ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಚಿನಗುಂಡಿ ಅವರು ಶುಕ್ರವಾರ ಭೇಟಿ ನೀಡಿ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಸೇವೆಗಳ ಕುರಿತು ಪರಿಶೀಲನೆ ನಡೆಸಿದರು. ಇದೇ ವೇಳೆ ನಗದು ಘೋಷಣೆ ರಜಿಸ್ಟರ್ ಹಾಗೂ ತೆರಿಗೆ ವಸೂಲಾತಿ ಮೊತ್ತವನ್ನು ಬ್ಯಾಂಕ್‌ಗೆ ಜಮಾ ಮಾಡಿರುವ ರೆಮಿಟೆನ್ಸ್ ರಜಿಸ್ಟರ್‌ಗಳನ್ನು ಪರಿಶೀಲಿಸಿ ಮಾಹಿತಿ ಪಡೆದರು.

ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿಲ್ಲ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ, ಇಒ ಅವರು ಗ್ರಾಮದಲ್ಲಿ ಸಂಚರಿಸಿ ಸ್ಥಳೀಯ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿದರು. ವಿವಿಧ ಓಣಿಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಗ್ರಾಮಸ್ಥರಿಂದ ಮಾಹಿತಿ ಸಂಗ್ರಹಿಸಿದರು. ಬಳಿಕ ಸ್ಥಳದಲ್ಲಿದ್ದ ಪಿಡಿಒಗೆ ವಾಟರ್ ಬೋರ್ಡ್ ಹಾಗೂ ಡಿಬಿಒಟಿ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸಿ, ಗ್ರಾಮಸ್ಥರಿಗೆ ನಿಗದಿತ ಸಮಯದಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ನರಗುಂದ ವಿಧಾನಸಭಾ ಶಾಸಕರು ಸಿ.ಸಿ.ಪಾಟೀಲ ಅವರ ನೇತೃತ್ವದಲ್ಲಿ ಜೂನ್ 1 ರಂದು ನಡೆದ ವಿಪತ್ತು ನಿರ್ವಹಣಾ ಸಮಿತಿ ಸಭೆಯಲ್ಲಿ ಹದಲಿ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚೆಯಾಗಿತ್ತು.

ಕಾರಣ ದಾಖಲಿಸಿ

ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಜರಾತಿ ಪುಸ್ತಕವನ್ನು ಪರಿಶೀಲಿಸಿದ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಚಿನಗುಂಡಿ ಅವರು, ಅನಧಿಕೃತವಾಗಿ ಗೈರಾಗುವ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಿಡಿಒಗೆ ಸೂಚನೆ ನೀಡಿದರು. ಕಚೇರಿ ಸಮಯದಲ್ಲಿ ಸಿಬ್ಬಂದಿ ಹೊರಗಡೆ ತೆರಳುವ ಸಂದರ್ಭದಲ್ಲಿ ಚಲನವಲನ ಪುಸ್ತಕದಲ್ಲಿ ಭೇಟಿ ಸ್ಥಳ ಹಾಗೂ ಕಾರಣವನ್ನು ಕಡ್ಡಾಯವಾಗಿ ದಾಖಲಿಸುವಂತೆ ತಿಳಿಸಿದರು.



ಎಚ್.ಕೆ.ಪಾಟೀಲಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ದೀಡ್ ನಮಸ್ಕಾರ

• **ಗದಗ:** ಶಾಸಕ ಎಚ್.ಕೆ.ಪಾಟೀಲರಿಗೆ ಎರಡನೇ ಹಂತದಲ್ಲಾದರೂ ಸಂಪುಟ ದರ್ಜೆ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಎಪಿಎಂಸಿ ಹಮಾಲರು, ಚಕ್ಕಡಿ ಸಂಘ ಹಾಗೂ ತಳಗಾಳು ಸಂಘದ ಸದಸ್ಯರು ನಗರದಲ್ಲಿ ಮೆರವಣಿಗೆ ಕೈಗೊಂಡು ದೀಡ್ ನಮಸ್ಕಾರ ಹಾಕಿ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ಎಪಿಎಂಸಿ ಪ್ರಾಂಗಣದ ಹಮಾಲರ ವಿಶ್ರಾಂತಿ ಗೃಹದ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬಳಿಕ ಗದಗ ಎಪಿಎಂಸಿ ಗೇಟ್‌ದಿಂದ ವೀರೇಶ್ವರ ಪುಣ್ಯಾಶ್ರಮದವರೆಗೆ ಸದಸ್ಯರು ದೀಡ್ ನಮಸ್ಕಾರ ಹಾಕುತ್ತಾ ಸಾಗಿದರು. ಕಮಲವ್ವ ಚಲವಾದಿ, ಕನಕವ್ವ ದಾಸರ, ಯಲ್ಲವ್ವ ಚಲವಾದಿ, ರಾಮಚಂದ್ರ ಹರಿಜನ, ಹನಮವ್ವ ತುಮ್ಮರಮಟ್ಟಿ, ಸುಮಾ ಆದೋನಿ, ಶೇಖವ್ವ ಸಂಕಣ್ಣವರ, ಸರೋಜವ್ವ ಚಲವಾದಿ, ಈರಣ್ಣ ಮುಧೋಳ, ಶಶಿಕಲಾ ಚಲವಾದಿ ದೀಡ್ ನಮಸ್ಕಾರ ಹಾಕಿ ಎಚ್.ಕೆ.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು. ಮೆರವಣಿಗೆಯ ನೇತೃತ್ವವನ್ನು ಕರ್ನಾಟಕ ರಾಜ್ಯ ಹಮಾಲರ ಒಕ್ಕೂಟದ ರಾಜ್ಯ ಅಧ್ಯಕ್ಷ ಅಯ್ಯಪ್ಪ ನಾಯ್ಕರ್, ಎಪಿಎಂಸಿ ಹಮಾಲರು ಹಾಗೂ ಚಕ್ಕಡಿ ಸಂಘದ ಅಧ್ಯಕ್ಷ ಆದಪ್ಪ ಮಾರೆಪ್ಪನವರ, ಉಪಾಧ್ಯಕ್ಷ ಮುಕ್ತುಮ್‌ಸಾಬ ನಾಗನೂರ, ಖಜಾಂಚಿ ಶಂಕ್ರಪ್ಪ ಯರಗುಡಿ, ಗೋವಿಂದಪ್ಪ ಮುಂಡರಗಿ, ಇಮಾಮಹುಸೇನ ರೋಣದ, ಶಿವು ಬಳ್ಳಾರಿ, ಶ್ರೀಕಾಂತ ವಹಿಸಿದ್ದರು.



ಫಲಕ ಪ್ರದರ್ಶನ

ಮೆರವಣಿಗೆಯಲ್ಲಿ ಹಲಗೆ ಬಾರಿಸಿ, ಘೋಷಣೆ ಕೂಗುತ್ತ ಹೆಜ್ಜೆ ಹಾಕಿದರು. ಬಡವರಿಗೆ, ಹಿಂದುಳಿದವರಿಗೆ, ಹಮಾಲರಿಗೆ, ಶ್ರಮಿಕರಿಗೆ ಸ್ಪಂದಿಸಿದ ನಾಡಿನ ಹಿರಿಯ, ಮುತ್ಸದ್ದಿ ರಾಜಕಾರಣಿ ಎಚ್.ಕೆ.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂಬ ಘೋಷಣೆಯುಳ್ಳ ಭಾವಚಿತ್ರದ ಫಲಕಗಳನ್ನು ಪ್ರದರ್ಶಿಸಲಾಯಿತು.

ಶಾಶಕ ಜಿಎಸ್‌ಪಾಗೆ ಸಚಿವ ಸ್ಥಾನ ನೀಡಲಿ

• **ಗಜೇಂದ್ರಗಡ:** ರೋಣ ಶಾಸಕ ಜಿ.ಎಸ್.ಪಾಟೀಲರು 40 ವರ್ಷಗಳಳು ಸುದೀರ್ಘವಾಗಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ರಾಜಕಾರಣ ಮಾಡುತ್ತಾ ಬಂದಿದ್ದಾರೆ. ಅವರಿಗೆ ಡಿ.ಕೆ.ಶಿವಕುಮಾರ ಸಂಪುಟದಲ್ಲಾದರೂ ಸಚಿವ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ನಗರದ ಪ್ರವಾಸಿ ಮಂದಿರದಲ್ಲಿ ರೋಣ ಹಾಗೂ ಗಜೇಂದ್ರಗಡ ತಾಲೂಕು ಘಟಕದಿಂದ ಪ್ರತಿಕಾಗೋಷ್ಠಿ ನಡೆಯಿತು.

ರೋಣ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಅನಿಲ ತೆಗ್ಗಿನಕೇರಿ ಮಾತನಾಡಿ, ಸರ್ಕಾರವು ನಮ್ಮ ಸಮಾಜದ ನಾಯಕ ಜಿ.ಎಸ್ .ಪಾಟೀಲರಿಗೆ ಸಚಿವ ಸ್ಥಾನ ನೀಡಿ ಉತ್ತರ ಕರ್ನಾಟಕಕ್ಕೆ ನ್ಯಾಯ ಒದಗಿಸಬೇಕಿದೆ. ಒಂದು ವೇಳೆ ಸಚಿವ ಸ್ಥಾನ ನೀಡದೆ ಇದ್ದಲ್ಲಿ ಮುಂದಿನ ಚುನಾವಣೆಯಲ್ಲಿ ಸಮಾಜದಿಂದ ರಾಜ್ಯಾದ್ಯಂತ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದರು.

ಗಜೇಂದ್ರಗಡ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಪ್ರಭು ಚವಡಿ ಮಾತನಾಡಿ, ಉತ್ತರ ಕರ್ನಾಟಕದಲ್ಲಿ ನಮ್ಮ ಸಮುದಾಯದಿಂದ 7 ಜನ ಆಯ್ಕೆಯಾಗಿದ್ದು, ಅದರಲ್ಲಿ ಪಕ್ಷಕ್ಕೆ ನಿಷ್ಠಾವಂತರಾಗಿ ಕಾರ್ಯನಿರ್ವಹಿಸಿದ ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನಮಾನ ನೀಡಬೇಕಿದೆ ಎಂದರು. ಬಸವರಾಜ ಶೀಲವಂತರ ಮಾತನಾಡಿ, ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ಕೊಡಲೇಬೇಕು. ಇಲ್ಲವಾದಲ್ಲಿ ಜೂ. 20ರಂದು ಗದಗನಲ್ಲಿ ಸಮಾಜದ ವತಿಯಿಂದ ಪ್ರತಿಭಟನೆ ಮಾಡಲಾಗುತ್ತದೆ ಎಂದರು. ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದ ಮಹಿಳಾ ಘಟಕದ ಅಧ್ಯಕ್ಷರಾದ ಮಂಜುಳಾ ರೇವಡಿ, ಚಂಬಣ್ಣ ಚವಡಿ, ಶರಣಪ್ಪ ರೇವಡಿ, ಎಮ್.ಎಸ್.ದಡೇಸೂರಮಠ, ಗುರುಸಿದ್ದಯ್ಯ ಸೂಗಿರಯ್ಯನಮಠ, ಚನ್ನವೀರಪ್ಪ ಚೋಳಿನ, ಬಸವರಾಜ ಮಾಳಗಿ, ಸುರೇಶ ಜಾಲಿಹಾಳ, ಅವಿನಾಶ ಮತ್ತಿಕಟ್ಟಿ, ಬಸವರಾಜ ಚನ್ನಿ, ಸಿದ್ದು ಗೊಂಗಡಶೆಟ್ಟಿಮಠ, ಅಮರಯ್ಯ ಗೌರಿಮಠ ಇದ್ದರು.



ಸಚಿವ ಸ್ಥಾನಕ್ಕಾಗಿ ಕ್ರಿಮಿನಾಶಕ ಸೇವಿಸಲು ಮುಂದಾದ ಜಿಎಸ್‌ಪಾ ಅಭಿಮಾನಿಗಳು

• **ರೋಣ:** ಶಾಸಕ ಜಿ.ಎಸ್.ಪಾಟೀಲರಿಗೆ ಈ ಬಾರಿ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಕಾರ್ಮಿಕ ಸಂಘಟನೆಯವರು ಹಮ್ಮಿಕೊಂಡಿದ್ದ ಹಕ್ಕೋತ್ತಾಯ ಹಾಗೂ ಪ್ರತಿಭಟನೆ ನೂರಾರು ಕಾರ್ಮಿಕರ ಸಮಾಗಮದಿಂದ ನಡೆಯಿತು.

ತಾಲೂಕು ಕಟ್ಟಡ ಹಾಗೂ ಕೂಲಿ ಕಾರ್ಮಿಕರ ಸಂಘಟನೆಯಿಂದ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕರೆ ನೀಡಲಾಗಿದ್ದ ಹಕ್ಕೋತ್ತಾಯ ಪ್ರತಿಭಟನೆಯಲ್ಲಿ ಮಠಾಧೀಶರುಗಳು ಮತ್ತು ದರ್ಗಾದ ಅಜ್ಜನವರು ಪಾಲ್ಗೊಂಡು ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಿದರು.

ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರು ಸಚಿವ ಸಂಪುಟದಲ್ಲಿ ಈ ಬಾರಿ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನಿಡಬೇಕು ಎಂದು ಒತ್ತಾಯಿಸಿದರು. ಅಲ್ಲದೇ ಸೂಡಿವೃತ್ತ, ಮುಲ್ಲಾನ ಭಾವಿ, ಪೋತರಾಜನ ಕಟ್ಟೆಯ ಬಳಿ ಮಾನವ ಸರಪಳಿ ನಿರ್ಮಿಸುವ ಮೂಲಕ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ವಿರುದ್ಧ ಆಕ್ರೋಶ ಹೊರಹಾಕುವ ಮೂಲಕ ಕೊಟ್ಟ ಮಾತಿನಂತೆ ಸಚಿವ ಸ್ಥಾನ ನಿಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಬರುವ ಚುನಾವಣೆಯಲ್ಲಿ ಮತದಾನ ಮಾಡದೆ ಹಿಂದಕ್ಕೆ ಸರಿಯಲಾಗುವುದು ಎಂದು ಕಾರ್ಮಿಕರು ಪಕ್ಷದ ವರಿಷ್ಠರಿಗೆ ಎಚ್ಚರಿಕೆ ಸಂದೇಶವನ್ನು ನೀಡಿದರು.


ಮರುಳ ಸಿದ್ದೇಶ್ವರ ಪುಣ್ಯಾಶ್ರಮದ ಶ್ರೀಗಳಾದ ಶಿವಶರಣ ಗದಿಗೆಪ್ಪಜ್ಜನವರು ಮಾತನಾಡಿ, ಶಾಸಕ ಜಿ.ಎಸ್.ಪಾಟೀಲರು ಎಲ್ಲ ಜನಾಂಗದವರನ್ನು ಅಪ್ಪಿಕೊಳ್ಳುವ ಹೃದಯವಂತ ನಾಯಕ. ಎಲ್ಲ ಜವಾಬ್ದಾರಿಗಳನ್ನು ಅವರು ಸಮರ್ಪಕವಾಗಿ ನಿಭಾಯಿಸಿದ್ದಾರೆ. ಪಕ್ಷದ ವರಿಷ್ಠರು ಶಾಸಕ ಜಿ.ಎಸ್ .ಪಾಟೀಲರ ಪ್ರಾಮಾಣಿಕ ಸೇವೆ ಗುರುತಿಸಿ ಅವರಿಗೆ ಸಚಿವ ಸ್ಥಾನ ನೀಡಬೇಕು.ಇಲ್ಲದಿದ್ದರೆ ನಾವೆಲ್ಲ ಶ್ರೀಗಳು ವಿಧಾನಸೌದ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಪಕ್ಷದ ವರಿಷ್ಠರಿಗೆ ಎಚ್ಚರಿಕೆ ನೀಡಿದರು.

ಶ್ರೀಗಳು ಹಾಗೂ ಪಕ್ಷದ ಕಾರ್ಯಕರ್ತರಿಂದ ಪೋತರಾಜ ಕಟ್ಟೆಯ ಬಳಿಯಿರುವ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಹಜರತ್ ಸುಲೇಮಾನ್ ಶಾವಲಿ ಅಜ್ಜನವರು, ಶಿವಮುನಿ ಶ್ರೀಗಳು,ಮರುಳ ಶಿದ್ದೇಶ್ವರ ಶ್ರೀಗಳು, ದಿವಾನ್ ಶರೀಪ್ ಶ್ರೀಗಳು, ಬಸವರಾಜ ಶರಣರು,ಹುಚ್ಚಯ್ಯ ಶ್ರೀಗಳು, ವಿಶ್ವನಾಥ ಶ್ರೀಗಳು, ಮುಖಂಡರಾದ ಗದಿಗೆಪ್ಪ ಕಿರೇಸೂರ, ಯೂಸುಪ್ ಇಟಗಿ, ಬಾವಾಸಾಬ ಬಟಗೇರಿ, ಆನಂದ ಚಂಗಳಿ, ದುರ್ಗಪ್ಪ ಹಿರೇಮನಿ, ಮಲೀಕ ಯಲಿಗಾರ, ಹನ್ಮಂತಪ್ಪ ತಳಕೇರಿ, ಅಸ್ಲಂ ಕೊಪ್ಪಳ, ಬಶೀರ ಕಟ್ಟಿಮನಿ, ಮೌನೇಶ ಹಾದಿಮನಿ, ಮಕ್ತುಂಸಾಬ ಮುಲ್ಲಾ, ಕೆ.ಕೆ. ಮುಲ್ಲಾ, ಸಂಜಯ ದೊಡ್ಡಮನಿ ಇದ್ದರು.



> ಶಾಸಕ ಜಿ.ಎಸ್.ಪಾಟೀಲ ಕಳೆದ 50 ವರ್ಷಗಳಿಂದ ಪಕ್ಷಕ್ಕೆ ಪ್ರಾಮಾಣಿಕವಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಸೇವೆಯನ್ನು ಪರಿಗಣಿಸಿ ಸಚಿವ ಸ್ಥಾನ ಕೊಡಬೇಕು. ಇದು ನಮ್ಮ ನ್ಯಾಯಯುತವಾದ ಬೇಡಿಕೆ. ಇದಕ್ಕೆ ತಪ್ಪಿದಲ್ಲಿ ಪ್ರಾಣತ್ಯಾಗಕ್ಕೂ ಸಿದ್ಧರಿದ್ದೇವೆ. ಮುಂದಿನ ಅನಾಹುತಕ್ಕೆ ಪಕ್ಷದ ವರಿಷ್ಠರೇ ಹೊಣೆ.
>
> ■ ವಿನಾಯಕ ಜಕ್ಕಣಗೌಡ್ರ

ಕ್ರಿಮಿನಾಶಕ ಸೇವನೆಗೆ ಯತ್ನ



- ಹಕ್ಕೋತ್ತಾಯ ಪ್ರತಿಭಟನೆ ಪೋತರಾಜನ ಕಟ್ಟೆ ತಲುಪುತ್ತಿದ್ದಂತೆ ಕ್ರಿಮಿನಾಶಕ ಸೇವಿಸಲು ಮುಂದಾದ ಶಾಸಕ ಜಿ.ಎಸ್.ಪಾಟೀಲರ ಅಭಿಮಾನಿಗಳಾದ ಪುರಸಭೆ ಮಾಜಿ ಸದಸ್ಯ ಸಂಗಪ್ಪ ಜಿಡ್ಡಿಬಾಗಿಲ, ಕಾರ್ಯಕರ್ತ ಶಾಭಾಜ್ ಗದಗಕರ್, ಪುರಸಭೆ ಮಾಜಿ ಸದಸ್ಯ ದಾವಲಸಾಬ ಬಾಡಿನ
- ಪಕ್ಷದ ಮುಖಂಡರುಗಳು ಅಭಿಮಾನಿಗಳಿಗೆ ತಿಳಿ ಹೇಳಿ ಕ್ರಿಮಿನಾಶ ವಶಕ್ಕೆ ಪಡೆದರು



ಕರ್ತವ್ಯ

ರೋಣ: ಶುಕ್ರವಾರ ರೋಣ ತಾಲೂಕು ಕಟ್ಟಡ ಮತ್ತು ಕೂಲಿ ಕಾರ್ಮಿಕರ ಸಂಘಟನೆ ವತಿಯಿಂದ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ನೂರಾರು ಸಂಖ್ಯೆಯ ಕಾರ್ಮಿಕರು ಹಕ್ಕೋತ್ತಾಯ ಹಾಗೂ ಪ್ರತಿಭಟನೆ ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ಮಹಿಳಾ ಪೊಲೀಸ್ ಪೇದೆಯೊಬ್ಬರು ತಮ್ಮ ಮಗುವನ್ನು ಎತ್ತಿಕೊಂಡು ಬಿರು ಬಿಸಿಲಿನ ಮಧ್ಯೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಿರುವುದು ನಾಗರಿಕ ಸಮಾಜದ ಪ್ರಸಂಶೆಗೆ ಕಾರಣವಾಯಿತು.

ಜಮೀರ್ ಅಹ್ಮದಗೆ ಸಚಿವ ಸ್ಥಾನ ನೀಡಲು ಒತ್ತಾಯ

• **ಶಿರಹಟ್ಟಿ:** ಅಭಿವೃದ್ಧಿ ಹರಿಕಾರ ಮತ್ತು ಮುಸ್ಲಿಂ ಸಮುದಾಯದ ಪ್ರಬಲ ನಾಯಕ ಬಿ.ಝಡ್. ಜಮೀರ್ ಅಹ್ಮದ ಅವರಿಗೆ ಸಿಎಂ ಡಿ.ಕೆ. ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಪ್ರಮುಖ ಖಾತೆ ನೀಡುವ ಮೂಲಕ ಸಚಿವ ಸ್ಥಾನ ಕಲ್ಪಿಸಬೇಕು ಎಂದು ಶಿರಹಟ್ಟಿ ತಾಲೂಕು ಮುಸ್ಲಿಂ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಲ್ಮಾನ್ ಕುಂದೂರು ಒತ್ತಾಯಿಸಿದರು.



ಅಭಿವೃದ್ಧಿ ಚಿಂತಕ, ಯುವಕರ ಕಣ್ಮಣಿ, ದೀನದಲಿತರ ಧ್ವನಿಯಾಗಿ ಕೆಲಸ ಮಾಡುತ್ತಿರುವ ಜಮೀರ್ ಅಹ್ಮದ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಅಂದಾಗ ದಮನಿತರ ಪರವಾಗಿ ಕೆಲಸ ಮಾಡಲು ಮತ್ತು ಪಕ್ಷದ ಬಲವರ್ಧನೆಗೆ ಸಹಕಾರಿಯಾಗುತ್ತದೆ. ಬಡವರ ಪರ ಗಟ್ಟಿ ಧ್ವನಿಯಲ್ಲಿ ಹೋರಾಟ ಮಾಡುವ ಮೂಲಕ ಜನ ಸೇವೆ ಮಾಡುತ್ತಿದ್ದಾರೆ. ಇಂತಹ ಜನ ನಾಯಕನಿಗೆ ಸಚಿವ ಸಂಪುಟದಲ್ಲಿ ಉನ್ನತ ಖಾತೆ ನೀಡಬೇಕು. ಇಲ್ಲದಿದ್ದರೆ ಮುಸ್ಲಿಂ ಸಮುದಾಯದಿಂದ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಸಗೊಬ್ಬರದ ಕೊರತೆಯಿಂದ ರೈತ ಕಂಗಾಲು

4 ಎಕರೆಗೆ 2 ಚೀಲ ಯೂರಿಯಾ!



ರೈತರ ಗೋಳು

• **ಕೂಡ್ಲಿಗಿ:** ತಾಲೂಕಿನ ಗುಡೆಕೋಟೆಯ ರಸ್ತೆಯಲ್ಲಿರುವ ನಮ್ಮ ಗ್ರೋಮೋರ್ ಅಂಗಡಿಯಲ್ಲಿ ಬೆಳಗಿಂದಲೇ ರೈತರು ವಿವಿಧ ಹಳ್ಳಿಗಳಿಂದ ಜಮಾಯಿಸಿ ರಸಗೊಬ್ಬರ ಖರೀದಿಗೆ ಮುಗಿಬಿದ್ದರು.

ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಬಿರುಸಿನಿಂದ ಸಾಗಿರುವ ಬೆನ್ನಲ್ಲೇ, ರಸಗೊಬ್ಬರದ ತೀವ್ರ ಅಭಾವ ರೈತರ ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ತಾಲೂಕಿನ ರೈತರು ಕೃಷಿ ಚಟುವಟಿಕೆಗಳಿಗೆ ಗೊಬ್ಬರಕ್ಕಾಗಿ ಪರದಾಡುವಂತಾಗಿದೆ.

4 ಎಕರೆ ಜಮೀನು ಹೊಂದಿರುವ ರೈತರಿಗೆ ಕೇವಲ ಎರಡು ಚೀಲ ಯೂರಿಯಾ ನೀಡುತ್ತಿರುವುದು ಕೃಷಿಕರ ಬೇಸರ ವ್ಯಕ್ತಪಡಿಸಿದರು.

ಬೆಳವಣಿಗೆಯ ಹಂತದಲ್ಲಿರುವ ಪೈರಿಗೆ ಯೂರಿಯಾದ ಅಗತ್ಯವಿದ್ದರೂ, ಮಾರುಕಟ್ಟೆಯಲ್ಲಿ ಗೊಬ್ಬರದ ಅಭಾವದಿಂದಾಗಿ ರೈತರು ಅತಂತ್ರ ಸ್ಥಿತಿಯಲ್ಲಿದ್ದಾರೆ.

ರೈತರಿಗೆ ಸರಿಯಾದ ಸಮಯಕ್ಕೆ ಯೂರಿಯಾ ಗೊಬ್ಬರ ಅಭಾವದಿಂದ ಶೇಂಗಾ ಮೆಕ್ಕೆಜೋಳ, ಇತರ ಬೆಳೆಗಳಿಗೂ ಅನಾನುಕೂಲಾಗಲಿದೆ ಇದರಿಂದ ಇಳುವರಿಯಲ್ಲಿ ಭಾರಿ ಕುಸಿತವಾಗುವ ಭೀತಿ ಎದುರಾಗಿದೆ.

4 ಎಕರೆಗೆ ಕನಿಷ್ಠ 7-10 ಚೀಲ ಯೂರಿಯಾ ಬೇಕಾಗಿದ್ದು, ಕೇವಲ 2 ಚೀಲದಲ್ಲಿ ಬೆಳೆ ಬೆಳೆಯುವುದು ಹೇಗೆ ಎಂಬ ಪ್ರಶ್ನೆ ರೈತರನ್ನು ಕಾಡುತ್ತಿದೆ. ಸಂಬಂಧಪಟ್ಟ ಕೃಷಿ ಇಲಾಖೆ ಖಾಸಗಿ ಮಳಿಗೆಯ ಕಡೆ ಗಮನಹರಿಸಿ, ರೈತರಿಗೆ ತೊಂದರೆ ಆಗದಂತೆ ಕ್ರಮವಹಿಸಿ ಎಂದು ರೈತರು ಮಾಹಿತಿ ನೀಡಿದರು.

ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ

9.35 ಲಕ್ಷ ಮೌಲ್ಯದ 1,539 ರಸಗೊಬ್ಬರ ಚೀಲ ಜಪ್ತಿ



• **ಬೀದರ್:** ನಿಗದಿತ ಬೆಲೆಗಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡುತ್ತಿದ್ದ ಹಾಗೂ ಪರವಾನಗಿಯಲ್ಲಿ ಅನುಮತಿ ಇಲ್ಲದ ರಸಗೊಬ್ಬರವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಜಿಲ್ಲೆಯ ಮನ್ನಳ್ಳಿ ಗ್ರಾಮದ ರಸಗೊಬ್ಬರ ಮಳಿಗೆಯೊಂದರ ಮೇಲೆ ಅಧಿಕಾರಿಗಳು ದಾಳಿ ನಡೆಸಿ 9.35 ಲಕ್ಷ ರೂ. ಮೌಲ್ಯದ 1,539 ರಸಗೊಬ್ಬರ ಚೀಲಗಳನ್ನು ಜಪ್ತಿ ಮಾಡಿದ್ದಾರೆ.

ಜಂಟಿ ಕೃಷಿ ನಿರ್ದೇಶಕಿ ದೇವಿಕಾ ಅವರ ನೇತೃತ್ವದ ತಂಡ ಮನ್ನಳ್ಳಿಯ ಮೇ.ವೆಂಕಟೇಶ್ವರ್ ಫರ್ಟಿಲೈಜರ್ಸ್ ಮಳಿಗೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಪರಿಶೀಲನೆ ವೇಳೆ ರೈತರಿಗೆ ರಸಗೊಬ್ಬರವನ್ನು ನಿಗದಿತ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿರುವುದು ಬೆಳಕಿಗೆ ಬಂದಿದೆ. ಅಲ್ಲದೆ, ಮಳಿಗೆಯ ಪರವಾನಗಿಯಲ್ಲಿ ಅನುಮತಿ ಇಲ್ಲದ ಕೆಲವು ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿರುವುದೂ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಸಗೊಬ್ಬರ ನಿಯಂತ್ರಣ ಆದೇಶದ ಉಲ್ಲಂಘನೆ ಹಿನ್ನೆಲೆಯಲ್ಲಿ ಮಳಿಗೆಯಲ್ಲಿದ್ದ ಒಟ್ಟು 1,539 ರಸಗೊಬ್ಬರ ಚೀಲಗಳನ್ನು ಜಪ್ತಿ ಮಾಡಲಾಗಿದ್ದು, ಅವುಗಳ ಅಂದಾಜು ಮೌಲ್ಯ 9.35 ಲಕ್ಷ ರೂ.ಆಗಿದೆ.

ರಸಗೊಬ್ಬರ ಪರಿಶೀಲನೆ ಸಮಯದಲ್ಲಿ ಜಂಟಿ ಕೃಷಿ ನಿರ್ದೇಶಕಿ ದೇವಿಕಾ, ಸಹಾಯಕ ಕೃಷಿ ನಿರ್ದೇಶಕ ಮಹೇಂದ್ರನಾಥ್ ವಡ್ಡಿ, ಸಹಾಯಕ ಕೃಷಿ ನಿರ್ದೇಶಕಿ ಆರತಿ ಪಾಟೀಲ್, ಮನ್ನಳ್ಳಿಯ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ವಿಜಯಕುಮಾರ್ ಉಪಸ್ಥಿತರಿದ್ದರು.

ಕಿರುಸುದ್ದಿ

'ಚುಟುಕು ತಪಸ್ವಿ' ಗೌರವ ಪ್ರಶಸ್ತಿಗೆ ಆಯ್ಕೆ



• **ಹುಬ್ಬಳ್ಳಿ:** ಧಾರ್ಮಿಕ ಕ್ಷೇತ್ರದ ಗಣ್ಯರಿಗೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ನೀಡುವ 'ಚುಟುಕು ತಪಸ್ವಿ' ಗೌರವ ಪ್ರಶಸ್ತಿಗೆ ಅಫಜಲಪುರ ಸಂಸ್ಥಾನ ಹಿರೇಮಠ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯ ಅವರಿಗೆ ಚುಟುಕು ಚೇತನ, ಕಲ್ಬುರ್ಗಿ ಶ್ರೀನಿವಾಸ ಸರಡಗಿ ಹಿರೇಮಠದ ಡಾ.ರೇವಣಸಿದ್ಧ ಶಿವಾಚಾರ್ಯ ಮತ್ತು ಬಸವ ಕಲ್ಯಾಣ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರಿಗೆ ಆಯ್ಕೆ ಮಾಡಲಾಯಿತು ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ. ಜುಲೈ 5ರಂದು ಶ್ರೀನಿವಾಸ ಸರಡಗಿ ಸಂಸ್ಥಾನ ಮಠದ ಸಭಾಂಗಣದಲ್ಲಿ ನಡೆಯುವ ರಾಜ್ಯಮಟ್ಟದ 14ನೇ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ತಿಳಿಸಿದ್ದಾರೆ.

ರಾಷ್ಟ್ರದ ಗಮನ ಸೆಳೆದ ಅಣ್ಣ-ತಂಗಿ!

• **ಮಹಾಲಿಂಗಪುರ:** ಸಮೀಪದ ಕೆಸರಗೊಪ್ಪ ಗ್ರಾಮದ ಶಿಕ್ಷಕ ಧರೆಪ್ಪ ಬ್ಯಾಕೋಡ ಅವರ ಪುತ್ರ ಪ್ರಜ್ವಲ್ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಸ್) ರಾಷ್ಟೀಯ ಶ್ರೇಷ್ಠತಾ ಕೇಂದ್ರ ಪಟಿಯಾಲಾ, ಪಂಜಾಬ್‌ಗೆ 400 ಮೀಟರ್ ಹರ್ಡಲ್ಸ್ ವಿಭಾಗದಲ್ಲಿ ಆಯ್ಕೆಯಾಗಿ ಗಮನ ಸೆಳೆದಿದ್ದಾರೆ.





ರಾಷ್ಟೀಯ ಶ್ರೇಷ್ಠತಾ ಕೇಂದ್ರಕ್ಕೆ ಪ್ರಜ್ವಲ್ ಆಯ್ಕೆ

ಇದಕ್ಕೂ ಮೊದಲು ಕಳೆದ ವರ್ಷ ಪ್ರಜ್ವಲ್‌ನ ಸಹೋದರಿ ಪೃಥ್ವಿ ಉತ್ತರ ಪ್ರದೇಶದ ಲಖನೌದಲ್ಲಿರುವ ತರಬೇತಿ ಕೇಂದ್ರಕ್ಕೆ ಆಯ್ಕೆಯಾಗಿದ್ದು, ಇದೀಗ ಪ್ರಜ್ವಲ್ ಕೂಡ ಆಯ್ಕೆಯಾಗುವ ಮೂಲಕ ನಮ್ಮ ಒಂದೇ ಕುಟುಂಬದ ಇಬ್ಬರು ಮಕ್ಕಳು ಭಾರತೀಯ ಕ್ರೀಡಾ ಪ್ರಾಧಿಕಾರದ ತರಬೇತಿ ಪಡೆಯುತ್ತಿದ್ದು, ರಾಷ್ಟ್ರದ ಗಮನ ಸೆಳೆದು ಕುಗ್ರಾಮ ಕೆಸರಗೊಪ್ಪ ಗ್ರಾಮದ ಹೆಸರು ರಾರಾಜಿಸುವಂತಾಗಿದೆ.

ಭಾರತೀಯ ಕ್ರೀಡಾ ಪ್ರಾಧಿಕಾರ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ ಅವರಿಗೆ ವಿಶ್ವಮಟ್ಟದ ತರಬೇತಿ ನೀಡಿ ಅಂತಾರಾಷ್ಟೀಯ ಮಟ್ಟದಲ್ಲಿ ಭಾರತದ ಕೀರ್ತಿಯನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ಅತಿ ಚಿಕ್ಕ 200 ಮೀಟರ್ ಟ್ರ್ಯಾಕ್ ಮೈದಾನದಲ್ಲಿ ಕಠಿಣ ಪರಿಶ್ರಮದಿಂದ ತರಬೇತಿ ಪಡೆದ ಪ್ರಜ್ವಲ್ ಇಂದು ರಾಷ್ಟೀಯ ಮಟ್ಟದ ತರಬೇತಿ ಕೇಂದ್ರಕ್ಕೆ ಆಯ್ಕೆಯಾಗಿದ್ದಾನೆ. ಪ್ರಸ್ತುತ ಮಾಲಿಂಗಪುರದ ಅಕ್ಷರ ವಿದ್ಯಾ ವಿಹಾರ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಭಾರತ ಕ್ರಿಕೆಟ್ ತಂಡದ ಮ್ಯಾನೇಜರ್ ಆಗಿ ಹುಬ್ಬಳ್ಳಿಯ ಅವಿನಾಶ್

• **ಹುಬ್ಬಳ್ಳಿ:** ಜೂನ್ 23ರಿಂದ ಜುಲೈ 21ರ ವರೆಗೆ ನಡೆಯಲಿರುವ ಭಾರತ ಕ್ರಿಕೆಟ್ ತಂಡದ ಐರ್ಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸದ ಸರಣಿಗೆ ತಂಡದ ಮ್ಯಾನೇಜರ್ (ವ್ಯವಸ್ಥಾಪಕ) ಆಗಿ ಕೆಎಸ್‌ಸಿಎ ಎಂಸಿ ಮೆಂಬರ್ ಅವಿನಾಶ್ ವೈದ್ಯ ನೇಮಕಗೊಂಡಿದ್ದಾರೆ. ಧಾರವಾಡ ವಲಯದ ಸಮಸ್ತ ಕ್ರಿಕೆಟ್ ಆಟಗಾರರು ಹಾಗೂ ಕ್ರೀಡಾಭಿಮಾನಿಗಳ ಹಾರೈಕೆ, ಪ್ರೀತಿಯಿಂದಲೇ ನನಗೆ ಈ ಗೌರವ ಸಿಕ್ಕಿದೆ ಎಂದು ಅವಿನಾಶ ವೈದ್ಯ ತಿಳಿಸಿದ್ದಾರೆ. ಮೂಲತಃ ಹುಬ್ಬಳ್ಳಿಯವರಾದ ಅವಿನಾಶ್ ವೈದ್ಯ ಅವರು ಕರ್ನಾಟಕ ರಣಜಿ ತಂಡದ ಯಶಸ್ವಿ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ ದೇಶಿ ಕ್ರಿಕೆಟ್‌ನಲ್ಲಿ ಗುರುತಿಸಿಕೊಂಡಿದ್ದರು. ಭಾರತ ಎ ತಂಡದ ಆಟಗಾರರಾಗಿ ನಿವೃತ್ತರಾದ ಬಳಿಕ ಐಪಿಎಲ್ ಅಂಗಳದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮ್ಯಾನೇಜರ್ ಆಗಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿದ್ದರು. ಆ ಬಳಿಕ ಪಂಜಾಬ್ ಕಿಂಗ್ಸ್ ಹಾಗೂ ಲಕ್ನೋ ಸೂಪರ್ ಜೈಂಟ್ಸ್ ತಂಡಗಳಲ್ಲೂ ಪ್ರಮುಖ ಆಡಳಿತಾತ್ಮಕ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿದ ಅಪಾರ ಅನುಭವ ಹೊಂದಿದ್ದಾರೆ.

ಲಕ್ಕುಂಡಿ ಐತಿಹಾಸಿಕ ಕ್ಷೇತ್ರಕ್ಕೆ

ಛತ್ತೀಸ್‌ಗಢ ಸಚಿವ ಗಜೇಂದ್ರ ಯಾದವ್ ಭೇಟಿ



• **ಗದಗ:** ಛತ್ತೀಸ್‌ಗಢ ರಾಜ್ಯದ ಶಾಲಾ ಶಿಕ್ಷಣ, ಗ್ರಾಮೋದ್ಯಮ, ಕಾನೂನು ಹಾಗೂ ಶಾಸನ ವ್ಯವಹಾರಗಳ ಸಚಿವ ಗಜೇಂದ್ರ ಯಾದವ್ ಜಿಲ್ಲೆಯ ಐತಿಹಾಸಿಕ ಲಕ್ಕುಂಡಿ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿನ ಪುರಾತನ ದೇವಾಲಯಗಳು ಹಾಗೂ ಪಾರಂಪರಿಕ ಸ್ಮಾರಕಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಲಕ್ಕುಂಡಿಯು ದೇಶದಲ್ಲೇ ವಿಶಿಷ್ಟವಾದ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವ ಹೊಂದಿರುವ ತಾಣವಾಗಿದ್ದು, ಭಗವಾನ್ ಮಹಾದೇವರ ವಿವಿಧ ಸ್ವರೂಪಗಳನ್ನು ಪ್ರತಿಬಿಂಬಿಸುವ ಅನೇಕ ದೇವಾಲಯಗಳು ಹಾಗೂ ಶಿಲ್ಪಕಲಾ ವೈಭವವನ್ನು ಹೊಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲಕ್ಕುಂಡಿಯಲ್ಲಿರುವ 11ನೇ ಹಾಗೂ 12ನೇ ಶತಮಾನಗಳ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸಂಪತ್ತನ್ನು ಪುರಾತತ್ವ ಇಲಾಖೆ ಸಂರಕ್ಷಿಸಿ ಉಳಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ಇಂತಹ ಅಪರೂಪದ ಪರಂಪರೆ ತಾಣಗಳು ದೇಶದಾದ್ಯಂತ ಹೆಚ್ಚಿನ ಪ್ರಚಾರ ಪಡೆಯಬೇಕಿದ್ದು, ಈ ಬಗ್ಗೆ ಕೇಂದ್ರ ಸರ್ಕಾರದ ಸಂಬಂಧಿತ ಸಚಿವರೊಂದಿಗೆ ಚರ್ಚಿಸಿ ಲಕ್ಕುಂಡಿಯ ಮಹತ್ವವನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಭೇಟಿಯ ಸಂದರ್ಭದಲ್ಲಿ ತಮ್ಮನ್ನು ಆತ್ಮೀಯವಾಗಿ ದೂರವಾಣಿಯಲ್ಲಿ ಸ್ವಾಗತಿಸಿದ ಮಾಜಿ ಸಚಿವ ಎಚ್.ಕೆ.ಪಾಟೀಲ, ಜಿಲ್ಲಾಡಳಿತ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ಜಿಲ್ಲೆಯ ಲಕ್ಕುಂಡಿಗೆ ಬಂದಿರುವುದು ನನ್ನ ಸೌಭಾಗ್ಯವಾಗಿದೆ. ಇದು ಒಂದು ಅದ್ಭುತ ನಗರವಾಗಿದ್ದು, ಇಲ್ಲಿ ಭಗವಾನ್ ಮಹಾದೇವರ ವಿವಿಧ ಸ್ವರೂಪಗಳು ಕಂಡುಬರುತ್ತವೆ. ನೂರಾರು ಸಂಖ್ಯೆಯಲ್ಲಿ ಶಿವಲಿಂಗಗಳು ಮತ್ತು ದೇವಾಲಯಗಳ ರೂಪದಲ್ಲಿ ಅವು ಇಲ್ಲಿ ಅವತರಿಸಿವೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್.ಎಸ್. ಬುರಡಿ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಶರಣ ಗೋಗೇರಿ, ತಹಶೀಲ್ದಾರ್ ಶ್ರೀನಿವಾಸ ಕುಲಕರ್ಣಿ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಮೊದಲಾದವರು ಉಪಸ್ಥಿತರಿದ್ದರು.

ಮಂತ್ರಿಗಿರಿ ಸಿಗುವ ವಿಶ್ವಾಸ: ಡಾ.ಅಜಯ್ ಸಿಂಗ್



• **ಕಲಬುರಗಿ:** ರಾಜ್ಯಸಭೆ ಹಾಗೂ ಮೇಲ್ಮನೆ ಚುನಾವಣೆಗಳ ಪ್ರಕ್ರಿಯೆ ಮುಗಿದ ಬಳಿಕ ಶೀಘ್ರವೇ ನಡೆಯಲಿರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ನನಗೆ ಸಚಿವ ಸಂಪುಟದಲ್ಲಿ ಮಂತ್ರಿಗಿರಿ ಸಿಗುವ ವಿಶ್ವಾಸವಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ.ಅಜಯ್ ಧರ್ಮಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 3 ಬಾರಿ ಶಾಸಕನಾಗಿ ಆಯ್ಕೆಯಾದ ನಾನು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದು, ಶೀಘ್ರದಲ್ಲೇ ನಡೆಯಲಿರುವ ಎರಡನೇ ಹಂತದ ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ತಮ್ಮ ಹೆಸರೂ ಸೇರಲಿದೆ ಎಂಬ ವಿಶ್ವಾಸವಿದೆ. ಬದುಕಿರುವವರೆಗೂ ಸಂಘರ್ಷ ಇದ್ದೇ ಇರುತ್ತದೆ. ಹೀಗಾಗಿ ಯಾವುದಕ್ಕೂ ಆತುರ ಪಡುವುದಿಲ್ಲ, ತಾಳ್ಮೆಯಿಂದ ಕಾಯುತ್ತೇನೆ. ತಡವಾದರೂ ಉತ್ತಮವಾದದ್ದೇ ಸಿಗಲಿದೆ ಎಂಬ ಆತ್ಮವಿಶ್ವಾಸ ನನಗಿದೆ ಎಂದು ಹಿಂದಿ ಶಾಯರಿ ಉಲ್ಲೇಖಿಸಿ ಹೇಳಿದರು.

ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿರುವ ನಾನು ಸಚಿವ ಸ್ಥಾನಕ್ಕಾಗಿ ಸುಮಾರು 14 ವರ್ಷಗಳಿಂದ ಕಾಯುತ್ತಿದ್ದೇನೆ. ಇನ್ನೂ ಕೆಲ ದಿನಗಳ ಕಾಲ ತಾಳ್ಮೆಯಿಂದ ನಿರೀಕ್ಷಿಸುತ್ತೇನೆ. ಪಕ್ಷದ ಹೈಕಮಾಂಡ್ ನನ್ನ ನಿಷ್ಠೆ ಮತ್ತು ಕಾರ್ಯಕ್ಷಮತೆ ಗುರುತಿಸಿದ್ದು, ಈ ಬಾರಿ ಸಚಿವ ಸ್ಥಾನ ನೀಡಲಿದೆ ಎಂಬ ವಿಶ್ವಾಸವಿದೆ. ಈಗ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸೇರಿದಂತೆ 13 ಜನ ಸಚಿವರಿದ್ದಾರೆ. ಇನ್ನೂ ಹಲವು ಸ್ಥಾನಗಳು ಖಾಲಿ ಇವೆ. ಅವುಗಳಲ್ಲಿ ನನಗೂ ಅವಕಾಶ ದೊರೆಯಲಿದೆ ಎಂದು ಹೇಳಿದರು.

ಈ ಹಿಂದೆಯೂ 2018ರಲ್ಲೂ, 2023ರಲ್ಲೂ ಹಾಗೂ ಸಿದ್ದರಾಮಯ್ಯ ಸರ್ಕಾರದ ಸಂಪುಟ ರಚನೆ ಸಂದರ್ಭದಲ್ಲಿಯೂ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೆ. ಈಗಲೂ ಕೂಡ ನಾನು ಸಚಿವ ಸ್ಥಾನದ ಆಕಾಂಕ್ಷಿಯೇ ಆಗಿದ್ದೇನೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ಕೆಕೆಆರ್‌ಡಿಬಿ ಅಧ್ಯಕ್ಷ, ಮುಖ್ಯ ಸಚೇತಕ ಹಾಗೂ ದೆಹಲಿಯ ವಿಶೇಷ ಪ್ರತಿನಿಧಿಯಾಗಿ ನಿರ್ವಹಿಸಿದ ಜವಾಬ್ದಾರಿಗಳನ್ನು ಪಕ್ಷದ ಹೈಕಮಾಂಡ್ ಸಮೀಪದಿಂದ ಗಮನಿಸಿದ್ದೇನೆ. ಆದ್ದರಿಂದ ಈ ಬಾರಿ ಸಚಿವ ಸ್ಥಾನ ದೊರೆಯುವ ವಿಶ್ವಾಸವಿದೆ ಎಂದು ಹೇಳಿದರು.

ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ಅನಿವಾರ್ಯ: ಬಸವರಾಜ ಕರಿಗಾರ

• **ಹುಬ್ಬಳ್ಳಿ:** ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಉತ್ತರ ಕರ್ನಾಟಕ ಅಭಿವೃದ್ಧಿ ವಿಚಾರದಲ್ಲಿ ಧೋರಣೆ ಅನುಸರಿಸುತ್ತಿವೆ. ಮುಂದೆಯಾದರೂ ಅಭಿವೃದ್ಧಿಗೆ ಆದ್ಯತೆ ನೀಡದಿದ್ದರೆ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯಕ್ಕಾಗಿ ಉಗ್ರ ಹೋರಾಟ ನಡೆಸುವುದು ಅನಿವಾರ್ಯ ಎಂದು ಉತ್ತರ ಕರ್ನಾಟಕ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಸವರಾಜ ಕರಿಗಾರ ಎಚ್ಚರಿಕೆ ನೀಡಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಮೀಸಲಿಡಲಾಗುತ್ತಿದ್ದು, ಬಿಡದಿಯಂತಹ ಸಂಪತ್ ಭರಿತ ಪ್ರದೇಶಗಳಲ್ಲಿ ಸಾವಿರಾರು ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆಗಳು ರೂಪುಗೊಳ್ಳುತ್ತಿವೆ ಎಂದರು.

ಆದರೆ, ಉತ್ತರ ಕರ್ನಾಟಕದಲ್ಲಿ ಕೈಗಾರಿಕೆ ಸ್ಥಾಪಿಸಲು ಸೂಕ್ತ ಭೂಮಿ, ಸಂಪನ್ಮೂಲ ಮತ್ತು ಅವಕಾಶಗಳಿದ್ದರೂ ಸರ್ಕಾರ ಯಾವುದೇ ಗಂಭೀರ ಪ್ರಯತ್ನ ಮಾಡುತ್ತಿಲ್ಲ, ಈ ಭಾಗದ ಜನಪ್ರತಿನಿಧಿಗಳು ಅಭಿವೃದ್ಧಿಗಾಗಿ ಒಗ್ಗಟ್ಟಿನ ಧ್ವನಿ ಎತ್ತಬೇಕಿತ್ತು ಎಂದು ತಿಳಿಸಿದರು. ರಾಜ್ಯದ ಆರ್ಥಿಕ, ಕೃಷಿ ಮತ್ತು ಕೈಗಾರಿಕಾ ಬೆಳವಣಿಗೆಗೆ ಉತ್ತರ ಕರ್ನಾಟಕ ಮಹತ್ವದ ಕೊಡುಗೆ ನೀಡುತ್ತಿದೆ. ಆದರೆ ಅಭಿವೃದ್ಧಿ ಯೋಜನೆಗಳು, ಕೈಗಾರಿಕೆಗಳು, ಸರ್ಕಾರಿ ಹೂಡಿಕೆಗಳು ಮತ್ತು ಉದ್ಯೋಗ ಸೃಷ್ಟಿ ವಿಚಾರದಲ್ಲಿ ಉತ್ತರ ಕರ್ನಾಟಕವನ್ನು ಭಾಗವನ್ನು ನಿರಂತರವಾಗಿ ನಿರ್ಲಕ್ಷಿಸಲಾಗುತ್ತಿದೆ. ಪರಿಣಾಮವಾಗಿ ಯುವಕರು ಉದ್ಯೋಗ ಅರಸಿ ದೂರದ ಬೆಂಗಳೂರು ಸೇರಿದಂತೆ ರಾಜ್ಯದ ಹೊರ ನಗರಗಳಲ್ಲಿ ಕಡಿಮೆ ವೇತನಕ್ಕೆ ವಲಸೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಉತ್ತರ ಕರ್ನಾಟಕ್ಕೆ ಸಂಬಂಧಿಸಿದ ವಿವಿಧ ಇಲಾಖೆಗಳ ಕಚೇರಿಗಳನ್ನು ತಕ್ಷಣವೇ ಬೆಳಗಾವಿಯ ಸುವರ್ಣಸೌಧಕ್ಕೆ ಸ್ಥಳಾಂತರಿಸಿ, ಅಲ್ಲಿಂದಲೇ ಆಡಳಿತ ನಡೆಸುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದ ಅವರು, ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ಮುಂದುವರಿಸಿದರೆ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯದ ಬೇಡಿಕೆಯನ್ನು ಜನಾಂದೋಲನವಾಗಿ ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಮಳಿಯಪ್ಪ ದಬಗಲ್ಲ, ರಾಜ್ಯ ಕೋಶಾಧ್ಯಕ್ಷ ಮಂಜುನಾಥ ಶೆಲ್ಲೆಣ್ಣನವರ, ಶ್ರೀಧರ್ ಅಮರಕೇಡ್ ಸೇರಿದಂತೆ ಸಂಘದ ಮುಖಂಡರು ಉಪಸ್ಥಿತರಿದ್ದರು.



ಮೇಲ್ಛಾವಣಿ ಕುಸಿತ | ಅಧಿಕಾರಿಗಳು, ಗಣ್ಯರಿಂದ ಆರೋಗ್ಯ ವಿಚಾರಣೆ

ಐವರು ವಿದ್ಯಾರ್ಥಿನಿಯರಿಗೆ ಗಾಯ

ಕಲಬುರಗಿ: ನಗರದ ಎಸ್ಪಿ ಕಚೇರಿ ಸಮೀಪದಲ್ಲಿರುವ ಸರ್ಕಾರಿ ಪದವಿಪೂರ್ವ ಬಾಲಕಿಯರ ಕಾಲೇಜಿನಲ್ಲಿ ತರಗತಿ ನಡೆಯುತ್ತಿದ್ದ ವೇಳೆ ಮೇಲ್ಛಾವಣಿಯ ಸಿಮೆಂಟ್ ಪದರು ಏಕಾಏಕಿ ಕುಸಿದು ಬಿದ್ದ ಪರಿಣಾಮ ಐವರು ವಿದ್ಯಾರ್ಥಿನಿಯರು ಗಾಯಗೊಂಡಿರುವ ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ.

ಕಾಲೇಜಿನ ಪ್ರಥಮ ಪಿಯುಸಿ ಕಾಮರ್ಸ್ ತರಗತಿ ನಡೆಯುತ್ತಿದ್ದ ವೇಳೆ ಈ ಅವಘಡ ಸಂಭವಿಸಿದ್ದು, ಆ ಸಮಯದಲ್ಲಿ ತರಗತಿಯಲ್ಲಿ 80ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪಾಠ ಆಲಿಸುತ್ತಿದ್ದರು. ಇದೇ ವೇಳೆ ಮೇಲ್ಛಾವಣಿಯ ಸಿಮೆಂಟ್ ಹೆಪ್ಪುಗಟ್ಟಿದ ಭಾಗಗಳು ವಿದ್ಯಾರ್ಥಿನಿಯರ ಮೇಲೆ ಬಿದ್ದ ಪರಿಣಾಮ ಸೃಷ್ಟಿ, ಸ್ನೇಹಾ, ಶೀತಲ್, ಪೂಜಾ ಹಾಗೂ ದಿವ್ಯಾ ಸೇರಿದಂತೆ ಐವರು ವಿದ್ಯಾರ್ಥಿನಿಯರು ಗಾಯಗೊಂಡಿದ್ದಾರೆ.



ಗಾಯಾಳು ವಿದ್ಯಾರ್ಥಿನಿಯರನ್ನು ತಕ್ಷಣ ನಗರದ ಟ್ರಾಮ್ ಕೇರ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಕೆಲ ವಿದ್ಯಾರ್ಥಿನಿಯರಿಗೆ ತಲೆ, ಬೆನ್ನು ಹಾಗೂ ಮೊಣಕೈ ಭಾಗಗಳಿಗೆ ಪೆಟ್ಟಾಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ. ಶಾಸಕ ಅಲ್ಲಮಪ್ರಭು ಪಾಟೀಲ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಇದಲ್ಲದೇ, ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ಪರಿಶೀಲಿಸಿದರು. ಸರ್ಕಾರಿ ಆಸ್ಪತ್ರೆಯಲ್ಲಿ ಸೂಕ್ತ ಗುಣಮಟ್ಟದ ಚಿಕಿತ್ಸೆ ಸಿಗದಿದ್ದರೆ, ತಕ್ಷಣವೇ ಎಚ್‌ಕೆಇ ಸಂಸ್ಥೆಯ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಚಿಕಿತ್ಸೆ ನೀಡುವಂತೆ ತಿಳಿಸಿದರು. ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟೆ, ಬಿಜೆಪಿ ಜಿಲ್ಲಾ ಅಧ್ಯಕ್ಷ ಅಶೋಕ್ ಬಗಲಿ ಹಾಗೂ ಸಾಯಿಬಣ್ಣ ತಳವಾರ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಲೇಜು ಘಟನಾ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ (ಎಡಿಸಿ) ರಾಯಪ್ಪ ಹುಣಸಗಿ ಭೇಟಿ ನೀಡಿ ಪರಿಶೀಲಿಸಿದರು.

> ಸರ್ಕಾರಿ ಕಾಲೇಜಿನ ಮೇಲ್ಛಾವಣಿ ಕುಸಿದು ವಿದ್ಯಾರ್ಥಿನಿಯರು ಗಾಯಗೊಂಡಿರುವುದು ಖಂಡನೀಯ. ಬಡ ಮಕ್ಕಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಇಡೀ ಕಟ್ಟಡ ಬಿರುಕು ಬಿಟ್ಟಿದ್ದು, ಪಿಡಬ್ಲ್ಯುಡಿ ಇಲಾಖೆ ತಕ್ಷಣವೇ ಸುರಕ್ಷತಾ ಪರಿಶೀಲನೆ ನಡೆಸಿ ದುರಸ್ತಿ ಮಾಡಬೇಕು. ಅಲ್ಲಿಯವರೆಗೆ ವಿದ್ಯಾರ್ಥಿನಿಯರಿಗೆ ಪರ್ಯಾಯ ಜಾಗದಲ್ಲಿ ವಿದ್ಯಾಭ್ಯಾಸಕ್ಕೆ ಕಲ್ಪಿಸಿಕೊಡಬೇಕು.
> ■ **ಶಶೀಲ್ ನಮೋಶಿ,** ವಿಧಾನ ಪರಿಷತ್ ಸದಸ್ಯ

ಕಳಪೆ ಕಾಮಗಾರಿ ತನಿಖೆಯಾಗಲಿ

ಈ ಕಾಲೇಜು ಕಟ್ಟಡವನ್ನು ನಿರ್ಮಿತಿ ಕೇಂದ್ರ ನಿರ್ಮಾಣ ಮಾಡಿತ್ತು. 2017ರಲ್ಲಿ ಅಂದಿನ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಇದಕ್ಕೆ ಅಡಿಗಲ್ಲು ನೆರವೇರಿಸಿದ್ದರು. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಸ್ವಂತ ತವರಲ್ಲೇ ಇಂತಹ ಕಳಪೆ ಹಾಗೂ ಜೀವಹಂತಕ ಕಾಮಗಾರಿ ನಡೆದಿರುವುದು ಕಾಮಗಾರಿಯ ಬಗ್ಗೆ ಪ್ರಶ್ನೆ ಎದ್ದಿದ್ದೆ. ಈ ದುರಂತದ ಬಗ್ಗೆ ಸರಕಾರ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸ್ಥಳಕ್ಕೆ ಭೇಟಿ ನೀಡಿದ ಬಿಜೆಪಿ ನಾಯಕರು ಆಗ್ರಹಿಸಿದರು.

ಜೂ.15ಕ್ಕೆ ಗೋವು-ಮಣ್ಣು-ಅಡಿಕೆ ವಿಶೇಷ ರೈತ ಸಂವಾದ

• **ಸಿದ್ದಾಪುರ:** ಮಣ್ಣಿನ ಸಂರಕ್ಷಣೆ, ಸುಸ್ಥಿರ ಕೃಷಿ ಹಾಗೂ ದೀರ್ಘಕಾಲೀನ ಕೃಷಿ ಉತ್ಪಾದಕತೆಯನ್ನು ಉತ್ತೇಜಿಸುವ ಉದ್ದೇಶದಿಂದ ಭಾರತ ಸರ್ಕಾರ ಆರಂಭಿಸಿರುವ ಖೇತ್ ಬಚಾವೋ ಅಭಿಯಾನದ ಆಶಯಗಳಿಗೆ ಅನುಗುಣವಾಗಿ ತಾಲೂಕಿನ ಭಾನಕುಳಿಯ ಗೋಸ್ವರ್ಗ ಸಂಶೋಧನಾ ಕೇಂದ್ರದಲ್ಲಿ ಜೂನ್ 15ರಂದು ಗೋವು-ಮಣ್ಣು-ಅಡಿಕೆ ವಿಶೇಷ ರೈತ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀರಾಮಚಂದ್ರಾಪುರ ಮಠದ ಸಂಶೋಧನಾ ಖಂಡ, ಕಾಮದುಘಾ ಟ್ರಸ್ಟ್, ಗೋಫಲ ಟ್ರಸ್ಟ್, ಗೋಸ್ವರ್ಗ, ಸಿದ್ದಾಪುರ ಹವ್ಯಕ ಮಂಡಲ ಹಾಗೂ ಸಿದ್ದಾಪುರದ ಕೃಷಿ ಇಲಾಖೆ, ಶಿರಸಿಯ ಕೃಷಿ ವಿಜ್ಞಾನ ಕೇಂದ್ರ ಮತ್ತು ಸಿದ್ದಾಪುರದ ತೋಟಗಾರಿಕಾ ಇಲಾಖೆ ಇವರುಗಳ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 3ಗಂಟೆಯವರೆಗೆ ನಡೆಯಲಿರುವ ಈ ಸಭೆಯಲ್ಲಿ ಕೃಷಿ ವಲಯದ ಪ್ರಮುಖರು ಹಾಗೂ ತಜ್ಞರು ಭಾಗವಹಿಸಿ ರೈತರಿಗೆ ಉಪಯುಕ್ತ ಮಾಹಿತಿ ನೀಡಲಿದ್ದಾರೆ. ಸಿದ್ದಾಪುರ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಸುಮಾ ಹಾಗೂ ಸಾಂಬಾರ ಮಂಡಳಿಯ ನಿರ್ದೇಶಕ ಪ್ರಸನ್ನ ಕೆರೆಕೈ ಅವರು ಉಪಸ್ಥಿತರಿರಲಿದ್ದಾರೆ. ಶಿರಸಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ರೂಪಾ ಪಾಟೀಲ್ ನಿರ್ವಹಣೆಯಲ್ಲಿ ಕಾರ್ಯಕ್ರಮ ಜರುಗಲಿದ್ದು, ಕೃಷಿ ರಂಗದ ವಿವಿಧ ತಜ್ಞರು ಪ್ರಮುಖ ವಿಷಯಗಳ ಕುರಿತು ರೈತರೊಂದಿಗೆ ಸಂವಾದ ನಡೆಸಲಿದ್ದಾರೆ.

ವಿಷಯ ತಜ್ಞರಾದ ಡಾ.ಶ್ವೇತಾಕುಮಾರಿ ಅವರು ಮಣ್ಣಿನ ಫಲವತ್ತತೆಗೆ ಪಂಚಗವ್ಯದ ಮಹತ್ವದ ಬಗ್ಗೆ ಹಾಗೂ ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಶಂಕರ ಹೆಗಡೆ ಅವರು ವಿವಿಧ ಗೊಬ್ಬರ ತಯಾರಿ ವಿಧಾನಗಳು ಕುರಿತು ರೈತರಿಗೆ ವಿಸ್ತಾರವಾಗಿ ಮಾರ್ಗದರ್ಶನ ನೀಡಲಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಡಿಕೆ ಬೆಳೆಗಾರರನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲು ತಜ್ಞರಾದ ಡಾ.ಅಮಿತ ಪೂಜಾರ ಅವರು ಜೀವಾಮೃತ ಹಾಗೂ ಕೀಟ ನಿಯಂತ್ರಕ ತಯಾರಿಯ ಬಗ್ಗೆ ಮಾಹಿತಿ ನೀಡಲಿದ್ದು, ತೋಟಗಾರಿಕಾ ವಿಜ್ಞಾನಿಗಳಾದ ಡಾ.ಹರೀಶ ಡಿ.ಕೆ. ಅವರು ಎಲೆ ಚುಕ್ಕಿ ರೋಗ ನಿಯಂತ್ರಣದ ಉಪಾಯಗಳನ್ನು ಹಂಚಿಕೊಳ್ಳಲಿದ್ದಾರೆ.

ಬೆಳೆಗಳ ರೋಗ ನಿಯಂತ್ರಣದಲ್ಲಿ ಗೋ ಆಧಾರಿತ ಕೃಷಿಯ ಪಾತ್ರ ವಿಷಯದ ಕುರಿತು ವಿಜ್ಞಾನಿಗಳಿಂದ ಮತ್ತು ತಜ್ಞರಿಂದ ವಿಶೇಷ ಉಪನ್ಯಾಸ ಹಾಗೂ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳು ನಡೆಯಲಿವೆ. ಗೋವು ಮತ್ತು ಮಣ್ಣಿನ ಪರಸ್ಪರ ಸಂಬಂಧ, ಸುಸ್ಥಿರ ಕೃಷಿಯಲ್ಲಿ ಗವ್ಯ ಉತ್ಪನ್ನಗಳ ಮಹತ್ವ ಹಾಗೂ ಸಾವಯುವ ಕೃಷಿ ಪದ್ಧತಿಗಳ ಕುರಿತು ರೈತರು ತಮ್ಮ ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು ಇಲ್ಲಿ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಈ ಅಪರೂಪದ ಕೃಷಿ ಚಿಂತನಾಗೋಷ್ಠಿಯಲ್ಲಿ ತಾಲೂಕಿನ ಹಾಗೂ ಸುತ್ತಮುತ್ತಲಿನ ಕೃಷಿಕರು, ಅಡಿಕೆ ಬೆಳೆಗಾರರು ಮತ್ತು ಕೃಷಿ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಆಯೋಜಕರು ವಿನಂತಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಸಕ್ತರು ಮೊ.9446656890 ಅಥವಾ 9972964495 ಸಂಪರ್ಕಿಸಬಹುದೆಂದು ಸಂಘಟಕರು ತಿಳಿಸಿದ್ದಾರೆ.

ಜೂ.15ರಂದು ರಕ್ತದಾನ ಜಾಗೃತಿಗಾಗಿ ನಡಿಗೆ

• **ಹುಬ್ಬಳ್ಳಿ:** ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ಶಾ ದಾಮಜಿ ಜಾದವಜಿ ಛೇಡಾ ಮೆಮೋರಿಯಲ್ ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ರಕ್ತದಾನ ಜಾಗೃತಿಗಾಗಿ ನಡಿಗೆ ಕಾರ್ಯಕ್ರಮವನ್ನು ನಗರದ ನೀಲಿಜಿನ್ ರಸ್ತೆಯ ಡಿ.ಜೆ.ಕಟ್ಟಡದಲ್ಲಿ ಜೂ.15ರಂದು ಬೆಳಗ್ಗೆ 8 ಗಂಟೆಗೆ ಆಯೋಜಿಸಲಾಗಿದೆ ಎಂದು ರಕ್ತ ಕೇಂದ್ರದ ಮುಖ್ಯಸ್ಥ ದತ್ತಮೂರ್ತಿ ಕುಲಕರ್ಣಿ ತಿಳಿಸಿದರು.



ಶುಕ್ರವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ಜಾಗೃತಿಗಾಗಿ ನಡಿಗೆ ನಡೆಯಲಿದ್ದು, ರಕ್ತ ಕೇಂದ್ರದಿಂದ ನೀಲಿಜಿನ್ ರಸ್ತೆ, ಕೋರ್ಟ್ ಸರ್ಕಲ್ ರಸ್ತೆ, ಸಂಗೊಳ್ಳಿ ರಾಯಣ್ಣ ವೃತ್ತದಿಂದ ದಾಜಿಬಾನಪೇಟೆ ರಸ್ತೆ, ಎಸ್.ಟಿ.ಭಂಡಾರಿ ರಸ್ತೆಯಿಂದ ಮೂರುಸಾವಿರ ಮಠದಿಂದ ಮರಳಿ ರಕ್ತಕೇಂದ್ರಕ್ಕೆ ತಲುಪಲಿದೆ ಎಂದರು.

ರಕ್ತದಾನ ಜಾಗೃತಿ ಅಂಗವಾಗಿ ವಾಕಥಾನ್, ರಕ್ತದಾನಿಗಳಿಗೆ ಸನ್ಮಾನ, ಜಾಗೃತಿ ಕಾರ್ಯಕ್ರಮ ಹಾಗೂ ವಿಶೇಷ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ದೇವರಹುಬ್ಬಳ್ಳಿಯ ಸಿದ್ಧಾರೂಢಮಠದ ಶ್ರೀ ಸಿದ್ಧ ಶಿವಯೋಗಿಗಳು ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿರೋಧ ಪಕ್ಷದ ಉಪನಾಯಕ ಹಾಗೂ ಶಾಸಕ ಅರವಿಂದ ಬೆಲ್ಲದ, ಶಾಸಕ ಮಹೇಶ ಟೆಂಗಿನಕಾಯಿ, ಎಂಎಲ್‌ಸಿ ಪ್ರದೀಪ್ ಶೆಟ್ಟರ್, ಸ್ವರ್ಣ ಸಮೂಹ ಸಂಸ್ಥೆಗಳ ಮುಖ್ಯಸ್ಥ ಡಾ.ವಿ.ಎಸ್.ವಿ ಪ್ರಸಾದ್, ಗಣ್ಯರಾದ ಗೋವಿಂದ ಜೋಶಿ, ನಂದಕುಮಾರ ಎಚ್.ಎನ್, ಪ್ರದೀಪ ರಾಯ್ಕರ್, ಶಿವಲಿಂಗಯ್ಯ ಶಿವಯೋಗಿಮಠ, ಬಸವರಾಜ ಆಸಂಗಿ, ವೀರೇಂದ್ರ ಛೇಡಾ, ನೀಲಿಮಾ ಕೊಟ್ಟಣ, ಅಜಯ ಮುದುಗಲ್ ಕೃಷ್ಣಪ್ಪ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದರು.

ರಕ್ತದಾನವು ಜೀವದಾನಕ್ಕೆ ಸಮಾನವಾದದ್ದು ಹೆರಿಗೆ, ಅಪಘಾತ, ಶಸ್ತ್ರಚಿಕಿತ್ಸೆಗಳ, ಥಲೆಸ್ಸಿಮಿಯಾ, ಕ್ಯಾನ್ಸರ್ ಹಾಗೂ ತುರ್ತು ಚಿಕಿತ್ಸೆಗಳ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಇದೆ. ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನ ಮಾಡಬೇಕು. ನಾನು ಕೂಡ 95ನೇ ಬಾರಿ ರಕ್ತದಾನ ಮಾಡುತ್ತಿದ್ದೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರವಿ ನಾಯಕ್, ವಿನೋದ ಪಟ್ವಾ, ಕಿರಣ ಗಡ, ಶ್ರೀಧರ ಜೋಶಿ, ಡಾ.ಸಂಗೊಳ್ಳಿ ಎಸ್.ಎಸ್ ಇದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಜೂ.15ಕ್ಕೆ ನುಡಿನಮನ

ಬನವಾಸಿ: ಇತ್ತೀಚೆಗೆ ನಿಧನರಾದ ಇಲ್ಲಿಯ ಜಯಂತಿ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಿವಯೋಗಿ ಉಳ್ಳಾಗಡ್ಡಿ ಅವರ ನುಡಿನಮನ ಕಾರ್ಯಕ್ರಮ ಜೂ.15ರಂದು ಬೆಳಗ್ಗೆ 10.30ಕ್ಕೆ ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗಣೇಶ ಸಣ್ಣಲಿಂಗಣ್ಣನವರ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಗಣ್ಯರು, ಬಂಧುಗಳು, ಸ್ನೇಹಿತರು, ಹಿತೈಷಿಗಳು, ಸಾರ್ವಜನಿಕರು ಭಾಗವಹಿಸಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ



ಮುಂಡಗೋಡ: ಪೊಲೀಸ್ ಠಾಣೆಯಲ್ಲಿ ಪಟ್ಟಣದ ಮೌಲಾನಾ ಆಜಾದ ಮಾದರಿ ಶಾಲೆಯ ಮಕ್ಕಳ ಸಮ್ಮುಖದಲ್ಲಿ ತೆರೆದ ಮನೆ ಕಾರ್ಯಕ್ರಮ ಶುಕ್ರವಾರ ನಡೆಯಿತು. ಸಿಪಿಐ ರಮೇಶ ಹಾನಾಪುರ, ಪಿಎಸ್‌ಐ ಮಂಜುನಾಥ ಗೌಡರ, ಮಹಿಳಾ ಪೊಲೀಸ್ ಸಿಬ್ಬಂದಿ ರೇಖಾ ಹುಲ್ಲೆನ್ನವರ ಮತ್ತು ಮಂಗಳಾ ಲಮಾಣಿ ಅವರು ಶಾಲಾ ಮಕ್ಕಳಿಗೆ ಠಾಣೆಯಲ್ಲಿ ದಿನ ನಿತ್ಯ ನಡೆಯುವ ಕಾರ್ಯ ಚಟುವಟಿಕೆಗಳ ಬಗ್ಗೆ ಜನಸ್ನೇಹಿ ಪೊಲೀಸ ಠಾಣೆಯ ಪರಿಕಲ್ಪನೆ ಬಗ್ಗೆ ಮನವರಿಕೆ ಮಾಡಿ ಠಾಣೆಯಲ್ಲಿ ಯಾವ ರೀತಿ ಕೆಲಸ ನಿರ್ವಹಿಸಲಾಗುತ್ತದೆ ಎಂದು ತಿಳಿಸಿದರು. ಠಾಣೆಯ ಆವರಣದ ಕಾಂಪೌಂಡ್ ಮೇಲೆ ಬಿಡಿಸಿರುವ ಭಾವ ಚಿತ್ರಗಳನ್ನು ತೋರಿಸಿ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಅಲ್ಲದೆ ಸಂಚಾರಿ ನಿಯಮ ಪಾಲಿಸುವಂತೆ ಹಾಗೂ ಅಪ್ರಾಪ್ತ ವಯಸ್ಕರು ವಾಹನ ಚಲಾಹಿಸುವುದು ಕಾನೂನು ಬಾಹಿರ ಇದರಿಂದ ಆಗುವ ಕಾನೂನು ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಿದರು.

ತಹಶೀಲ್ದಾರರಾಗಿ ಕರಾಂಡೆ ಅಧಿಕಾರ ಸ್ವೀಕಾರ

ಭಟ್ಕಳ: ಇಲ್ಲಿನ ತಹಶೀಲ್ದಾರರಾಗಿದ್ದ ನಾಗೇಂದ್ರ ಕೋಳಶೆಟ್ಟಿ ಅವರು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಹೊನ್ನಾವರ ತಹಶೀಲ್ದಾರ ಪ್ರವೀಣ ಕರಾಂಡೆ ಅವರು ಗುರುವಾರ ಭಟ್ಕಳದ ಪ್ರಭಾರ ತಹಶೀಲ್ದಾರರಾಗಿ ಅಧಿಕಾರವಹಿಸಿಕೊಂಡರು. ಅಧಿಕಾರ ಸ್ವೀಕರಿಸಿದ ಬಳಿಕ ಕಚೇರಿಯಲ್ಲಿ ಸರಳ ಸ್ವಾಗತ ಕಾರ್ಯಕ್ರಮ ನಡೆಯಿತು.



ಈ ವೇಳೆ ಉಪತಹಶೀಲ್ದಾರರು, ಶಿರಸ್ತೇದಾರರು ಹಾಗೂ ವಿವಿಧ ವಿಭಾಗಗಳ ಸಿಬ್ಬಂದಿ ನೂತನ ಪ್ರಭಾರ ತಹಶೀಲ್ದಾರರನ್ನು ಬರಮಾಡಿಕೊಂಡರು. ಕಚೇರಿಯ ಆಡಳಿತಾತ್ಮಕ ಕಾರ್ಯಗಳ ಕುರಿತು ಅಧಿಕಾರಿಗಳು ಅವರಿಗೆ ಮಾಹಿತಿ ನೀಡಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	68900
ಬಿಳಿಗೋಟು	23088	35899
ಕೆಂಪುಗೋಟು	23099	34399
ಬೆಟ್ಟೆ	41600	49299
ರಾಶಿ	50299	53100
ಚಾಲಿ	44599	48699
ಬಿ.ಕಾಳುಮೆಣಸು	81111	81111

ಯಲ್ಲಾಪುರ	ಕನಿಷ್ಠ	ಗರಿಷ್ಠ
ಆಪಿ	54179	60006
ರಾಶಿ	48899	53889
ಬೆಟ್ಟೆ	37099	48199
ಕೆಂಪುಗೋಟು	18612	36999
ಬಿಳಿಗೋಟು	18812	35972
ಚಾಲಿ	37369	48599
ಕೋಕಾ	16000	34969
ಕಾಳುಮೆಣಸು	57815	68000



ಭಟ್ಕಳ: ಇಲ್ಲಿಯ ವಡೇರ ಮಠದಲ್ಲಿ ಅಧಿಕ ಮಾಸದ ಅಂಗವಾಗಿ ಏಕಾದಶಿಯಂದು ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಪರಮಪೂಜ್ಯ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಸಮಾಜ ಬಾಂಧವರಿಗೆ ತಪ್ತ ಮುದ್ರಾಧಾರಣೆ ಮಾಡಿಸಿದರು.

ಪರ್ತಗಾಳಿ ಶ್ರೀಗಳಿಂದ ತಪ್ತ ಮುದ್ರಾಧಾರಣೆ

ಭಟ್ಕಳ: ಇಲ್ಲಿಯ ವಡೇರ ಮಠದಲ್ಲಿ ಅಧಿಕ ಮಾಸದ ಅಂಗವಾಗಿ ಏಕಾದಶಿಯಂದು ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಪರಮಪೂಜ್ಯ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಸಮಾಜ ಬಾಂಧವರಿಗೆ ತಪ್ತ ಮುದ್ರಾಧಾರಣೆ ಮಾಡಿಸಿದರು.

ವೈಷ್ಣವ ಸಂಪ್ರದಾಯದಲ್ಲಿ ವಿಶೇಷ ಮಹತ್ವ ಹೊಂದಿರುವ ತಪ್ತ ಮುದ್ರಾಧಾರಣೆಯಲ್ಲಿ ಶಂಖ ಹಾಗೂ ಚಕ್ರದ ಚಿಹ್ನೆಗಳನ್ನು ಅಗ್ನಿಯಲ್ಲಿ ತಪ್ತಗೊಳಿಸಿ ಧಾರಣೆ ಮಾಡಿಸಲಾಗುತ್ತದೆ. ಇದು ಶ್ರೀಮನ್ನಾರಾಯಣನಿಗೆ ಸಂಪೂರ್ಣ ಶರಣಾಗತಿಯ ಸಂಕೇತವಾಗಿದ್ದು, ವೈಷ್ಣವ ಧರ್ಮದ ಆಚರಣೆಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ತಪ್ತ ಮುದ್ರಾಧಾರಣೆಯಿಂದ ದೇಹ ಮತ್ತು ಮನಸ್ಸಿನ ಶುದ್ಧೀಕರಣವಾಗುವುದರ ಜೊತೆಗೆ ಭಗವಂತನ ಮೇಲಿನ ಭಕ್ತಿ ಮತ್ತಷ್ಟು ಗಟ್ಟಿಯಾಗುತ್ತದೆ ಎಂಬ ನಂಬಿಕೆ ಇದೆ. ಮಹಿಳೆಯರಿಗೆ ಕೈಗಳಲ್ಲಿ ಶಂಖ ಚಕ್ರ, ಉಪನಯನವಾದ ಪುರುಷರಿಗೆ 3 ಚಕ್ರ, 2 ಶಂಖ ಧಾರಣೆ ಮಾಡಿಸಲಾಗುತ್ತದೆ. ಬಾಲಕ, ಬಾಲಕಿಯರಿಗೆ ಚಕ್ರವನ್ನು ಹಾಕಲಾಗುತ್ತದೆ. ಮುದ್ರಾಧಾರಣೆಯಿಂದ ರೋಗ ನಿರೋಧಕ ಶಕ್ತಿಯೂ ಹೆಚ್ಚುತ್ತದೆ, ಮಳೆಗಾಲದಲ್ಲಿ ಬಾಧಿಸುವ ಎಲ್ಲಾ ಬಗೆಯ ಚರ್ಮ ವ್ಯಾಧಿಗಳಿಗೆ ಈ ಲೋಹಮುದ್ರೆಯಿಂದ ಪರಿಹಾರ ಕಾಣಬಹುದು ಅನ್ನೋದು ಭಕ್ತರ ನಂಬಿಕೆಯಾಗಿದೆ. ಅಧಿಕ ಮಾಸದ ಪುಣ್ಯಕಾಲದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಉಡುಪಿ ಹಾಗೂ ಉತ್ತರ ಕನ್ನಡದಿಂದ ನೂರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ತಪ್ತ ಮುದ್ರಾಧಾರಣೆ ಸ್ವೀಕರಿಸಿದರು.



ಮುಂಡಗೋಡ: ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿಯಲ್ಲಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಲಾಯಿತು. ತಾಲೂಕಿನ ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ ವಿರೋಧಿ ಪದ್ಧತಿಯ ಕುರಿತು ಪ್ರಮಾಣ ವಚನಸ್ವೀಕರಿಸಲಾಯಿತು. ಸಿಡಿಪಿಒ ಸಂಜೀವ ಸದಲಗಿ, ಮೇಲ್ವಿಚಾರಕಿಯರು, ಅಂಗನವಾಡಿ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಬೇಡ್ತಿ–ವರದಾ ನದಿ ತಿರುವು ಯೋಜನೆಗೆ ತೀವ್ರ ವಿರೋಧ

ಜೂನ್ 15ರಂದು ಬೃಹತ್ ಪತ್ರ ಚಳವಳಿ

ಶಿರಸಿ: ಬೇಡ್ತಿ-ವರದಾ ನದಿ ತಿರುವು ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಬಿಡದ ಹಿನ್ನೆಲೆಯಲ್ಲಿ ಯೋಜನೆ ವಿರೋಧಿಸಿ ಜೂನ್ 15ರಂದು ಬೆಳಗ್ಗೆ 10.30ಕ್ಕೆ ನಗರದ ಸಹಾಯಕ ಆಯುಕ್ತರ ಕಚೇರಿಯಲ್ಲಿ ಬೃಹತ್ ಪತ್ರ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಅಘನಾಶಿನಿ-ಬೇಡ್ತಿ ಕೊಳ್ಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ತಿಳಿಸಿದ್ದಾರೆ.

ನಗರದ ಯೋಗ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಡಿ.ಕೆ.ಶಿವಕುಮಾರ ಅವರು ಈ ಯೋಜನೆ ಫಲಪ್ರದವಲ್ಲ ಎಂದಿದ್ದರೂ, ಇತ್ತೀಚೆಗೆ ದೆಹಲಿಯ ನೀತಿ ಆಯೋಗದ ಸಭೆಯಲ್ಲಿ ಬೇಡ್ತಿ-ವರದಾ ನದಿ ಜೋಡಣೆ ಪ್ರಸ್ತಾಪ ಸಲ್ಲಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಡಿಪಿಆರ್‌ಗೆ ತಡೆ ನೀಡುವಂತೆ ಒತ್ತಾಯಿಸಿ ತೀವ್ರ ಹೋರಾಟ ಅನಿವಾರ್ಯವಾಗಿದೆ. ತಿಂಗಳ ಕೊನೆಯಲ್ಲಿ ಸಮಿತಿಯ ನಿಯೋಗವು ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಡಿಪಿಆರ್ ಹಿಂತೆಗೆದುಕೊಳ್ಳಲು ವಿನಂತಿಸಲಿದೆ ಹಾಗೂ ನದಿ ತೀರದಲ್ಲಿ ವೃಕ್ಷಾರೋಪಣ ಮುಂದುವರಿಯಲಿದೆ ಎಂದರು. ಪತ್ರ ಚಳವಳಿ ಸಂಚಾಲಕ ವಿಶ್ವನಾಥ ಹೆಗಡೆ ಶಿಗೇಹಳ್ಳಿ ಮಾತನಾಡಿ, ಈಗಾಗಲೇ 10 ಸಾವಿರ ಪತ್ರಗಳನ್ನು ವಿತರಿಸಲಾಗಿದ್ದು, ಜೂ.15ರಂದು 2 ಸಾವಿರ ಜನರ ಸಮ್ಮುಖದಲ್ಲಿ ಸಹಾಯಕ ಆಯುಕ್ತರ ಮೂಲಕ ಮುಖ್ಯಮಂತ್ರಿಗೆ ಪತ್ರ ಸಲ್ಲಿಸಲಾಗುವುದು ಎಂದರು.

ಸುರೇಶ ಹೆಗಡೆ ಹಕ್ಕಿಮನೆ, ಸಮಿತಿಯ ಪ್ರಮುಖರಾದ ಜಿ.ಆರ್.ಹೆಗಡೆ ಬೆಳ್ಳೆಕೇರಿ, ರತ್ನಾಕರ ಬಾಡಲಕೊಪ್ಪ, ಮಧುಮತಿ ಹೆಗಡೆ ಹಾಗೂ ವಿ.ಎಂ.ಭಟ್ಟ ಉಪಸ್ಥಿತರಿದ್ದರು.



> ಕೊಳ್ಳದ ತೀರವನ್ನು ಅವಲಂಬಿಸಿರುವ ಟಿ.ಎಸ್.ಎಸ್‌ನ 50 ಸಾವಿರ ಹಾಗೂ ಇತರ 60 ಸಾವಿರ ಸೇರಿ ಒಟ್ಟು 1 ಲಕ್ಷಕ್ಕೂ ಅಧಿಕ ಕುಟುಂಬಗಳ ಸಂರಕ್ಷಣೆ ಅಗತ್ಯವಾಗಿದ್ದು, ಸಂಸ್ಥೆಯಿಂದಲೂ ಪ್ರತ್ಯೇಕ ಪತ್ರ ಸಲ್ಲಿಸಲಾಗುವುದು.
>
> ■ ಗೋಪಾಲಕೃಷ್ಣ ವೈದ್ಯ, ಸಮಿತಿ ಉಪಾಧ್ಯಕ್ಷ ಹಾಗೂ ಟಿಎಸ್‌ಎಸ್ ಅಧ್ಯಕ್ಷ

ಶಾಲೆ ಮೇಲ್ದರ್ಜೆಗೇರಿಸಲು ಒತ್ತಾಯ

ಅಂಕೋಲಾ: ತಾಲೂಕಿನ ಅಚವೆ ಗ್ರಾಪಂ ವ್ಯಾಪ್ತಿಯ ಚನಗಾರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿಸಿ ಮಕ್ಕಳಿಗೆ ಮುಂದಿನ ಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಬೇಕು ಎಂದು ಶಾಲಾಭಿವೃದ್ಧಿ ಸಮಿತಿಯ ವತಿಯಿಂದ ಜಿಪಂ ಮಾಜಿ ಸದಸ್ಯ ಜಿ.ಎಂ.ಶೆಟ್ಟಿ ಅವರ ನೇತೃತ್ವದಲ್ಲಿ ಶಾಸಕ ಸತೀಶ ಸೈಲ್ ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಮನವಿಗೆ ತಕ್ಷಣ ಸ್ಪಂದಿಸಿದ ಶಾಸಕ ಸತೀಶ ಸೈಲ್ ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿ ವಿ.ರಶ್ಮಿ ಅವರನ್ನು ಸಂಪರ್ಕಿಸಿ ಚನಗಾರ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿ ಮೇಲ್ದರ್ಜೆಗೆ ಏರಿಸುವಂತೆ ಸೂಚಿಸಿದರು.

ಚನಗಾರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ಐದನೇ ತರಗತಿಯವರೆಗೆ ಮಾತ್ರ ಓದಲು ಅವಕಾಶಗಳಿದ್ದು ಪ್ರಾಥಮಿಕ ಹಂತದ ಆರು ಮತ್ತು ಏಳನೇ ತರಗತಿಗೆ ದೂರದ ಶಾಲೆಗಳಿಗೆ ಹೋಗಬೇಕಾದ ಅನಿವಾರ್ಯತೆ ಇದೆ. ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿಸಿ ಮಕ್ಕಳಿಗೆ ಮುಂದಿನ ತರಗತಿಗಳ ಶಿಕ್ಷಣ ಸೌಲಭ್ಯ ಒದಗಿಸುವಂತೆ ಪೋಷಕರು, ಶಾಲಾಭಿವೃದ್ಧಿ ಸಮಿತಿ ವತಿಯಿಂದ ಶಾಸಕರಿಗೆ ಮನವಿ ಸಲ್ಲಿಸಿದರು.

ಜನರ ಮನವಿಗೆ ಸ್ಪಂದಿಸಿದ ಶಾಸಕ ಸತೀಶ ಸೈಲ್ ಬೆಂಗಳೂರಿನ ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿ ರಶ್ಮಿ ಅವರನ್ನು ಸಂಪರ್ಕಿಸಿ ಈ ಕುರಿತಂತೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದು ಅವರಿಂದ ಸಕಾರಾತ್ಮಕ ಸ್ಪಂದನೆ ದೊರಕಿರುವುದು ಮಕ್ಕಳ ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.

ಜಿಪಂ ಮಾಜಿ ಸದಸ್ಯ ಜಿ.ಎಂ. ಶೆಟ್ಟಿ, ಪ್ರಮುಖರುಗಳಾದ ನಂದಾ ಶಿರೋಡ್ಕರ್, ಲತಾ ಹೆಗಡೆ, ರೇಖಾ ಗೌಡ, ಗಿರಿಜಾ ಗೌಡ, ಶಾಂತಿ ಹಳ್ಳೇರ್, ದೇವಕಿ ಹಳ್ಳೇರ್, ಪಾರ್ವತಿ ಗೌಡ, ಮಮತಾ ಗೌಡ, ನಾಗಯ್ಯ ಶೇರುಗಾರ್, ಸುರೇಶ ಹಳ್ಳೇರ್ ಸೇರಿದಂತೆ ಚನಗಾರ ಸುತ್ತ ಮುತ್ತಲಿನ ಗ್ರಾಮಸ್ಥರು ಇದ್ದರು.





ಹೊನ್ನಾವರ: ಕಾರವಾರ ಪ್ರಿನ್ಸಿಪಲ್ ಜೆ.ಎಮ್ ಎಫ್.ಸಿ ನ್ಯಾಯಾಲಯಕ್ಕೆ ವರ್ಗಾವಣೆ ಆದ ಪ್ರಯುಕ್ತ ತಾಲೂಕಾ ವಕೀಲರ ಸಂಘ ಏರ್ಪಡಿಸಿದ ಕಾರ್ಯಕ್ರಮದಲ್ಲಿಜೆಎಮ್‌ಎಫ್‌ಸಿ ನ್ಯಾಯಾಧೀಶ ಅನಿಲ ಸಿಕ್ವೇರಾ ಅವರನ್ನು ಸನ್ಮಾನಿಸಲಾಯಿತು. ಪ್ರಿನ್ಸಿಪಲ್ ನ್ಯಾಯಾಧೀಶ ಈರಣ್ಣ ಹುಣಸಿಕಟ್ಟೆ, ವಕೀಲರ ಸಂಘದ ಸದಸ್ಯರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಸಿ ನೆಟ್ಟು ಪೋಷಿಸಿ: ಶಿವಾನಂದ ಕಳವೆ

ಶಿರಸಿ: ಜನರ ಮನಸ್ಥಿತಿ, ಅರಣ್ಯ ಪರಿಸ್ಥಿತಿ ಅರ್ಥಮಾಡಿಕೊಂಡು ಹವಾಮಾನ ಬದಲಾವಣೆ ಗಮನಿಸಿ ಈ ಕಾಲ ಘಟ್ಟದಲ್ಲಿ ಅರಣ್ಯ ಸಂರಕ್ಷಣೆ, ಅಭಿವೃದ್ಧಿ ಸಾಗಬೇಕು. ಕರ್ನಾಟಕದ ಮುಂದಿನ 35 ವರ್ಷಗಳ ಅರಣ್ಯ ಭವಿಷ್ಯ ಅರಣ್ಯ ಇಲಾಖೆಯ ಸಿಬ್ಬಂದಿಗಳ ಕಾರ್ಯತತ್ಪರತೆ ಮೇಲೆ ನಿಂತಿದೆ. ಎಂಥ ನೆಡುತೋಪು ಮಾಡ್ತಿರೋ ಗೊತ್ತಿಲ್ಲ, ಪ್ರತೀ ವರ್ಷ ಪ್ರತಿಯೊಬ್ಬರೂ ಈ ವನ್ಯ ಸಂಕುಲ, ಭೂಮಿ ಪ್ರೀತಿಗೆ ವೈಯಕ್ತಿಕವಾಗಿ 365 ಹಣ್ಣು ಹಂಪಲು ಸಸಿ ನೆಟ್ಟು ಪೋಷಿಸುವ ಸಂಕಲ್ಪ ಮಾಡಬೇಕೆಂದು ಕೃಷಿ ಪರಿಸರ ಬರಹಗಾರ ಶಿವಾನಂದ ಕಳವೆ ಹೇಳಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಕಳವೆ ಕಾನ್ಮನೆ ನಿಸರ್ಗ ಜ್ಞಾನ ಕೇಂದ್ರದಲ್ಲಿ ಶುಕ್ರವಾರ ಚಕ್ರ ಅರಣ್ಯ ತರಬೇತಿ ಕೇಂದ್ರದ ನೂತನ ವನಪಾಲಕರಿಗೆ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಕಳವೆ ಮಾತನಾಡಿದರು.

ಮುಂಬೈ ಸಸ್ಯಗಾರ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಗಿಬ್ಸನ್ ರನ್ನು ಮುಂಬೈ ಸಂಸ್ಥಾನದ ಅರಣ್ಯ ಇಲಾಖೆ ಮುಖ್ಯಸ್ಥರನ್ನಾಗಿ ಮಾಡುವ ಮೂಲಕ ಭಾರತದಲ್ಲಿ ಪ್ರತ್ಯೇಕ ಅರಣ್ಯ ಇಲಾಖೆ 1847ರಲ್ಲಿ ಆರಂಭವಾಯಿತು. ಹಲವು ಬ್ರಿಟಿಷ್ ಅಧಿಕಾರಿಗಳು ತೋರಿದ ದೂರದರ್ಶಿತ್ವ ಪರಿಣಾಮ ಅರಣ್ಯ ಕಾರ್ಯ ಯೋಜನೆ ಮೂಲಕ ನಿರ್ವಹಣೆಯ ವೈಜ್ಞಾನಿಕ ದಾರಿ ತೆರೆದುಕೊಂಡಿತು.

ಕಳವೆ ಗ್ರಾಮಸ್ಥರ ಹಾಗೂ ಅರಣ್ಯ ಇಲಾಖೆಯ ಪ್ರಯತ್ನ ಫಲವಾಗಿ ಇಲ್ಲಿನ ಸೊಪ್ಪಿನ ಬೆಟ್ಟ ಹಾಗೂ ಸಾವಿರಾರು ಎಕರೆ ಅರಣ್ಯಪ್ರದೇಶ ಸಮೃದ್ಧವಾಗಿದೆ. ಕಳೆದ 30 ವರ್ಷಗಳ ಸೆಟಲೈಟ್ ಚಿತ್ರಗಳು ಇಲ್ಲಿನ ಪರಿಸರ ಬದಲಾವಣೆಗೆ ಸಾಕ್ಷಿಯಾಗಿವೆ. ಕಳೆದ 20 ವರ್ಷಗಳಿಂದ ಇಲ್ಲಿನ ಬೆಟ್ಟ ಮಾದರಿ ದರ್ಶನಕ್ಕೆ ವನಪಾಲಕ, ವನರಕ್ಷಕ ಸಿಬ್ಬಂದಿ ತರಬೇತಿ ಸಮಯದ ಕ್ಷೇತ್ರ ಭೇಟಿಗೆ ಬರುತ್ತಿದ್ದಾರೆ ಎಂದರು.

ಅರಣ್ಯ ಇಲಾಖೆ ತರಬೇತಿ ಕೇಂದ್ರದ ವಲಯ ಅರಣ್ಯಾಧಿಕಾರಿಗಳಾದ ನರೇಶ್ ಎಂ ವಿ, ಹನುಮಂತರಾಯ, ಉಪ ವಲಯ ಅರಣ್ಯಾಧಿಕಾರಿ ಮಂಜುನಾಥ ಇದ್ದರು. ಒಟ್ಟೂ 52 ವಾನಪಾಲಕರು ಭಾಗವಹಿಸಿದ್ದರು.



ಜೂ.17ರಿಂದ ಉಚಿತ ಯೋಗ ತರಬೇತಿ ಶಿಬಿರ

ಅಂಕೋಲಾ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಪತಂಜಲಿ ಯೋಗ ಸಮಿತಿ ಅಂಕೋಲಾ, ಭಾರತ ಸ್ವಾಭಿಮಾನ ಟ್ರಸ್ಟ್, ಮಹಿಳಾ ಪತಂಜಲಿ ಸಮಿತಿ, ಯುವ ಭಾರತ,ಕಿಸಾನ ಸೇವಾ ಸಮಿತಿ ಹಾಗೂ ಲಯನ್ಸ್ ಕ್ಲಬ್ ಸಹಯೋಗದಲ್ಲಿ ಜೂನ್ 17 ರಿಂದ 21ರ ವರೆಗೆ ಪ್ರತಿದಿನ ಬೆಳಗ್ಗೆ 5.30 ರಿಂದ 7 ಗಂಟೆ ವರೆಗೆ ಪಟ್ಟಣದ ಅಂಕೋಲಾ ಅರ್ಬನ್ ಬ್ಯಾಂಕ್ ಸಭಾಭವನದಲ್ಲಿ ಉಚಿತ ಯೋಗ ತರಬೇತಿ ಶಿಬಿರ ಆಯೋಜಿಸಲಾಗಿದ್ದು ಸಾರ್ವಜನಿಕರು ಪ್ರಯೋಜನ ಪಡೆಯುವಂತೆ ಯೋಗ ಗುರು ಪತಂಜಲಿ ಯೋಗ ಸಮಿತಿಯ ಪ್ರಭಾರಿ ವಿನಾಯಕ ಗುಡಿಗಾರ ಹೇಳಿದರು.

ಪಟ್ಟಣದ ಮಹಾಗಣಪತಿ ಸಭಾಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಜೂನ್ 21ರಂದು ನಡೆಯುವ ಯೋಗ ದಿನಾಚರಣೆಯ ಅಂಗವಾಗಿ ಪ್ರತಿವರ್ಷ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬರಲಾಗುತ್ತಿದ್ದು 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಜೂನ್ 17 ರಂದು ಬೆಳಗ್ಗೆ 10.30 ಕ್ಕೆ ಪ್ರೌಢ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಜಾಗತಿಕ ಶಾಂತಿಗಾಗಿ ಯೋಗ ಎನ್ನುವ ವಿಷಯದ ಕುರಿತಂತು ಭಾಷಣ ಸ್ಪರ್ಧೆ ನಡೆಯಲಿದೆ.



ಜೂನ್ 18ರಂದು ಬೆಳಗ್ಗೆ 10.30 ಗಂಟೆಗೆ ಸಾರ್ವಜನಿಕರಿಗಾಗಿ ಯೋಗ ಆಸನ ಸ್ಪರ್ಧೆ ನಡೆಯಲಿದ್ದು ಜೂನ್ 21ರಂದು ಸಂಜೆ 4 ಗಂಟೆಯಿಂದ ಸ್ವಾತಂತ್ರ್ಯ ಸಂಗ್ರಾಮ ಭವನದಲ್ಲಿ ಯೋಗ ನೃತ್ಯ ಸ್ಪರ್ಧೆ ನಡೆಯಲಿದೆ ಎಲ್ಲ ಸ್ಪರ್ಧೆಗಳ ಸ್ಪರ್ಧಾಳುಗಳು ಜೂನ್ 16 ರ ಒಳಗಡೆ ಸಂಪರ್ಕಿಸಿ ಹೆಸರನ್ನು ನೋಂದಾಯಿಸಬೇಕು ಎಂದು ತಿಳಿಸಿದರು.ಭಾರತ ಸ್ವಾಭಿಮಾನ ಟ್ರಸ್ಟಿನ ತಾಲೂಕು ಪ್ರಭಾರಿ ಡಾ.ವಿಜಯದೀಪ,ಸಾಮಾಜಿಕ ಜಾಲತಾಣ ಪ್ರಭಾರಿ ಸ್ಮಿತಾ ರಾಯಚೂರು,ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ ಯೋಗ ತರಬೇತಿಯ ಮಹತ್ವ ತಿಳಿಸಿದರು.ಪ್ರಮುಖರುಗಳಾದ ರಾಧಿಕಾ ಆಚಾರಿ, ಸತೀಶ ನಾಯ್ಕ, ಅಭಯ ಮರಬಳ್ಳಿ, ಎಚ್.ಕೆ.ನಾಯ್ಕ, ನಿರುಪಮಾ ಶ್ಯಾಮಸುಂದರ ಉಪಸ್ಥಿತರಿದ್ದರು.

ಆರೋಗ್ಯ ಕುರಿತು ಮಾಹಿತಿ ಕಾರ್ಯಕ್ರಮ

ಬನವಾಸಿ: ಬಾಯಿ ಆರೋಗ್ಯವಾಗಿದ್ದರೆ ಹಲವು ರೋಗಗಳಿಂದ ಮುಕ್ತರಾಗಬಹುದು. ಬಾಯಿ ಸೋಂಕು, ಅನೇಕ ರೋಗಗಳನ್ನು ಕಂಡು ಹಿಡಿಯುವುದಕ್ಕೆ ಸುಳಿವನ್ನು ನೀಡುತ್ತದೆ. ಆದ್ದರಿಂದ ಬಾಯಿಯ ನೈರ್ಮಲ್ಯದ ಕಡೆ ಹೆಚ್ಚು ಗಮನ ನೀಡಬೇಕು ಎಂದು ಬನವಾಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಬಸವರಾಜ್ ಅಕ್ಕಿವಳ್ಳಿ ಹೇಳಿದರು.

ಅವರು ಸಮೀಪದ ಅಜ್ಜರಣಿ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಶ್ರೀಗಂಧ ಮಹಿಳಾ ಜ್ಞಾನ ವಿಕಾಸ ಕೇಂದ್ರದಿಂದ ಹಮ್ಮಿಕೊಂಡ ಆರೋಗ್ಯದ ಕುರಿತು ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಾಯಿ ಮತ್ತು ಹಲ್ಲಿನ ಸ್ವಚ್ಛತೆಯ ಬಗ್ಗೆ ಮಾಹಿತಿ ನೀಡುತ್ತ ಬಾಯಿ ಅಥವಾ ಹಲ್ಲುಗಳಿಗೂ ದೇಹದ ಇತರೆ ಅಂಗಗಳಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಸಾಮಾನ್ಯ ಜನರಲ್ಲಿರುವ ನಂಬಿಕೆಯಾಗಿದೆ. ಆದರೆ, ಬಾಯಿ ಅನೇಕ ದೈಹಿಕ ಸಮಸ್ಯೆಗಳ ಕೈಗನ್ನಡಿ. ಬಾಯಿಯ ಸ್ವಚ್ಛತೆಯ ಕೊರತೆಯಿಂದ ಗರ್ಭಿಣಿಯರಲ್ಲಿ ಕಡಿಮೆ ತೂಕದ ಮಗುವಿನ ಜನನ, ಅವಧಿಗೆ ಮುನ್ನ ಪ್ರಸವ ಮುಂತಾದ ಸಂಕೀರ್ಣತೆಗಳನ್ನು ಎದುರಿಸಬೇಕಾಗುತ್ತದೆ. ಹಲ್ಲುಗಳ ಸ್ವಚ್ಛತೆಯ ಕೊರತೆಯಿಂದ ಹಲ್ಲಿನ ಮೇಲೆ ನೆಲೆಸಿರುವ ಆಹಾರದ ಮೇಲೆ ಲಾಲಾರಸದಲ್ಲಿನ ಕ್ಯಾಲ್ಸಿಯಂ ಹಾಗೂ ಇತರೆ ಖನಿಜಾಂಶಗಳು ಸೇರಿಕೊಂಡು



ಗಟ್ಟಿಯಾಗಿ ಕೀಟು ಅಥವಾ ಕ್ಯಾಲ್ ಕುಲಸ್‌ಗೆ ಕಾರಣವಾಗುತ್ತದೆ. ದೀರ್ಘಕಾಲ ಈ ಪ್ರಕ್ರಿಯೆ ಮುಂದುವರಿದಲ್ಲಿ ವಸಡಿನ ಉರಿಯೂತ, ರಕ್ತಸ್ರಾವ, ಕೀವು ತುಂಬಿಕೊಂಡು ವಸಡಿನ ಆರೋಗ್ಯದಲ್ಲಿ ವ್ಯತ್ಯಯವಾಗುತ್ತದೆ. ವಸಡಿನ ತೀವ್ರತರವಾದ ಸೋಂಕಿನ ಸಮಯದಲ್ಲಿ ಸೂಕ್ಷ್ಮ ಜೀವಿಗಳು ನೇರವಾಗಿ ರಕ್ತದ ಮೂಲಕ ಹೃದಯದ ರಕ್ತನಾಳಗಳ ಒಳಭಾಗದಲ್ಲಿ ಅಥೆರೋಮ ಸೃಷ್ಟಿಯಾಗಲು ಕಾರಣವಾಗಬಹುದು ಎಂದರು. ಮಹಿಳಾ ಜ್ಞಾನವಿಕಾಸ ಕೇಂದ್ರದ ತಾಲ್ಲೂಕು ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ ಮಾತನಾಡಿದರು. ಮಹಿಳಾ ಜ್ಞಾನವಿಕಾಸ ಕೇಂದ್ರದ ಸದಸ್ಯೆ ನೀಲಾಮ್ಮ ಅಧ್ಯಕ್ಷತೆವಹಿಸಿದ್ದರು. ಸೇವಾ ಪ್ರತಿನಿಧಿ ವೀಣಾ, ಶ್ರೀಗಂಧ ಮಹಿಳಾ ಜ್ಞಾನವಿಕಾಸ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

ದೇಶಪಾಂಡೆಗೆ ಸಚಿವ ಸ್ಥಾನ ನೀಡಿ : ಬ್ಲಾಕ್ ಕಾಂಗ್ರೆಸ್

ಹಳಿಯಾಳ : ರಾಜ್ಯದ ಅತಿ ಹಿರಿಯ ರಾಜಕಾರಣಿ, ಆರ್ ವಿ ದೇಶಪಾಂಡೆಯವರಿಗೆ ಸಚಿವ ಸ್ಥಾನ ಕೊಡಲೇ ಬೇಕೆಂದು ಹಳಿಯಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಾ ಪಾಟೀಲ್ ಒತ್ತಾಯಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ,ಹಲವಾರು ಹೆಜ್ಜೆಗುರುತುಗಳನ್ನು ಕರ್ನಾಟಕದ ರಾಜಕಾರಣದಲ್ಲಿ ಮೂಡಿಸಿರುವ ಹಿರಿಯ ಶಾಸಕ ಆರ್ ವಿ ದೇಶಪಾಂಡೆಯವರನ್ನು ಕಡೆಗಣಿಸುವುದು ಪಕ್ಷದ ಬೆಳವಣಿಗೆಯಲ್ಲಿ ಒಳ್ಳೆಯದಲ್ಲ, ಕೊಟ್ಟ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿದ ಕೀರ್ತಿ ಹಾಗೂ ಬಿಜೆಪಿ ಆಡಳಿತದಲ್ಲೇ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ವಿರೋಧ ಪಕ್ಷದಲ್ಲಿದ್ದು ಗಳಿಸಿದ ಹೆಮ್ಮೆಯೂ ನಮಗಿದೆ ಎಂದು ಕಾಂಗ್ರೆಸ್ ನ ವಕ್ತಾರರಾದ ಉಮೇಶ ಬೋಳಶೆಟ್ಟಿ ಹೇಳಿದರು.

ಮುಖ್ಯಮಂತ್ರಿಯಾಗಿ ಡಿ ಕೆ ಶಿವಕುಮಾರ ಅಧಿಕಾರ ಸ್ವೀಕಾರದ ದಿನ ಯಾವುದೇ ರೀತಿಯ ಸಂತೋಷ ಸಡಗರ ಕ್ಷೇತ್ರದಾದ್ಯಂತ ಕಾಣದಿರಲು ಕಾರಣ ಕೇಳಿದಾಗ ಉತ್ತರಿಸಿದ ಕೃಷ್ಣಾ ಪಾಟೀಲರು ತಮ್ಮ ಕ್ಷೇತ್ರದ ಹಿರಿಯ ಶಾಸಕರು ಮೊದಲ ಹಂತದಲ್ಲೇ ಇರದ ಕಾರಣ



ಬೇಸರವಾಗಿ ಕ್ಷೇತ್ರದ ಎಲ್ಲಾ ಕಾರ್ಯಕರ್ತರು ಸಂಭ್ರಮಾಚರಣೆಗೆ ಇಳಿಯದೇ ಮೌನ ಪ್ರತಿಭಟನೆ ಮಾಡಿದ್ದೇವೆ. ಎರಡನೇ ಹಂತದಲ್ಲಿ ಸಚಿವ ಸ್ಥಾನ ಸಿಗಲಿದೆ.

ಒಂದು ವೇಳೆ ಇರದಿದ್ದಲ್ಲಿ ಮೂರು ಬ್ಲಾಕ್ ನ ಕಾರ್ಯಕರ್ತರು ಹೈಕಮಾಂಡಿಗೆ ಪತ್ರ ಬರೆದು ನಮ್ಮ ಅಸಮಾಧಾನ ತೋರ್ಪಡಿಸಲಿದ್ದೇವೆ ಎಂದು ಉತ್ತರಿಸಿದರು.

ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ನ ಅಧ್ಯಕ್ಷ ರವಿ ತೋರಣಗಟ್ಟಿ ,ಸತ್ಯಜೀತ್ ಗಿರಿ, ಬಿಡಿ ಚೌಗಲೆ, ಅನಿಲ ಚವ್ಹಾಣ, ಅಜರುದ್ದೀನ್ ಬಸರಿಕಟ್ಟಿ, ಮಾಲಾ ಬ್ರಗಾಂಜ, ಸಂಜು ಮಿಶ್ಯಾಳಿ, ವಿಷ್ಣು ಮಿಶ್ಯಾಳಿ, ಸಂತೋಷ ರೇಣಕೆ, ಪ್ರಕಾಶ ಫಾಕ್ರೆ, ಹಳಿಯಾಳಕರ, ಸುವರ್ಣ ಮಾದಾರ, ಯಾಸ್ಮಿನ್ ಮಕಾನದಾರ, ಅಣ್ಣಪ್ಪ ವಡ್ಡರ, ರವಿ ವಡ್ಡರ, ಮಾಣಿಕರಾಜ, ದೇಮಾನಿ ಸಿರೋಜಿ,ದುಸಗಿಕರ್, ಲಕ್ಷ್ಮಿ ವಡ್ಡರ ಮತ್ತಿತರರು ಇದ್ದರು.

ಮರಾಠಾ ಶಾಸಕರಿಬ್ಬರಿಗೆ ಸಚಿವ ಸ್ಥಾನ : ಶ್ರೀಗಳ ಮನವಿ

ಹಳಿಯಾಳ: ವಿಜಯಪುರದಲ್ಲಿ ನಿರ್ಮಾಣ ಹಂತದಲ್ಲಿರುವ ಮರಾಠ ಸಭಾಭವನದಲ್ಲಿ, ಜೂನ್ 7 ರಂದು ಆಯೋಜನೆಗೊಂಡಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಹಾಗೂ ಜಿಲ್ಲಾ ಸಮಾವೇಶದಲ್ಲಿ ದಿವ್ಯ ಸಾನಿಧ್ಯ ವಹಿಸಿಕೊಂಡು ಮಾತನಾಡಿದ ಭವಾನಿ ಪೀಠದ ಜಗದ್ಗುರುಗಳಾದ ಶ್ರೀ ಮಂಜುನಾಥ ಭಾರತೀ ಸ್ವಾಮೀಜಿ, ವೇದಿಕೆ ಮೇಲೆ ಉಪಸ್ಥಿತರಿದ್ದ ಸಚಿವರಾದ ಎಂ.ಬಿ.ಪಾಟೀಲ ಹಾಗೂ ಶಾಸಕರಾದ ಶಿವಾನಂದ ಪಾಟೀಲ ಅವರ ಮೂಲಕ ಸರ್ಕಾರಕ್ಕೆ ಮರಾಠ ಸಮಾಜದ ಇಬ್ಬರೂ ಶಾಸಕರನ್ನು ಮಂತ್ರಿ ಮಾಡುವಂತೆ ವಿನಂತಿಸಿಕೊಂಡರು.

ಕರ್ನಾಟಕದ ಸುಮಾರು 40 ವಿಧಾನಸಭಾ ಕ್ಷೇತ್ರಗಳಲ್ಲಿ ಮರಾಠ ಸಮಾಜದವರ ಸಂಖ್ಯಾ ಬಲ ಜಾಸ್ತಿಯಿದೆ, ಈ ಎಲ್ಲಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗಾಗಿ ಸಮಾಜ ಸಹಕರಿಸಿದೆ. ಮರಾಠ ಸಮಾಜದಿಂದ ಕಾಂಗ್ರೆಸ್ ಪಕ್ಷದಲ್ಲಿ ಸಂತೋಷ ಲಾಡ್ ಮತ್ತು ಶ್ರೀನಿವಾಸ



ಮಾನೆ ಶಾಸಕರಿದ್ದಾರೆ. ಅವರಿಬ್ಬರಿಗೂ ಸಚಿವ ಸ್ಥಾನ ನೀಡಿ ಸಮಾಜಕ್ಕೆ ಗೌರವ ನೀಡಬೇಕಾಗಿ ಹೇಳಿದರು. ವಿಜಯಪುರ ಭಾಗದಲ್ಲಿ ಎಂ.ಬಿ.ಪಾಟೀಲರು, ಶಿವಾನಂದ ಪಾಟೀಲರು ನಮ್ಮ ಸಮಾಜದ ಜೊತೆಗೆ ನಿಂತಿದ್ದಾರೆ, ಅದನ್ನು ನಾವು ಸ್ಮರಿಸಿಕೊಳ್ಳುತ್ತೇವೆ. ಕರ್ನಾಟಕದ ಅನೇಕ ಭಾಗದಿಂದ ಸಮಾಜದ ಹಿರಿಯರು ಯುವಕರು ನನಗೆ ಮನವಿ ಮಾಡುತ್ತಿದ್ದಾರೆ. ಹೀಗಾಗಿ ಸಮಾಜದ ಆಶಯಕ್ಕೆ, ಆಡಳಿತದಲ್ಲಿರುವ ಕಾಂಗ್ರೆಸ್ ಸರ್ಕಾರ ಸ್ಪಂದಿಸಬೇಕು ಎಂದು ಮನವಿ ಮಾಡಿಕೊಂಡರು.

ಸಚಿವರಾದ ಎಂ.ಬಿ.ಪಾಟೀಲ ಅವರು ಮಾತನಾಡಿ ಸ್ವಾಮೀಜಿ ಅವರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದರು.

ಶಿಸ್ತು, ಪರಿಶ್ರಮ ಅಳವಡಿಸಿಕೊಳ್ಳಿ

ಯಲ್ಲಾಪುರ: ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಜೀವನದಲ್ಲಿ ಶಿಸ್ತು, ಪರಿಶ್ರಮ ಹಾಗೂ ಗುರಿನಿಷ್ಠೆಯನ್ನು ಅಳವಡಿಸಿಕೊಂಡು ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡಬೇಕೆಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು. ಅವರು ಶುಕ್ರವಾರ ಸಂಜೆ

ಪಟ್ಟಣದ ಟಿ.ಎಂ.ಎಸ್. ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಲಾದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಶೇ 100 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅಭಿಮಾನ ಹಾಗೂ ಆಸಕ್ತಿ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿರುವ ಇಂತಹ ಕಾರ್ಯಕ್ರಮಗಳು ಶ್ಲಾಘನೀಯವಾಗಿದ್ದು, ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹ ನೀಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.ಈ ಸಂದರ್ಭದಲ್ಲಿ ಕನ್ನಡ ವಿಷಯದಲ್ಲಿ ವಿಶೇಷ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿದರು.ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ಎನ್.ವಾಸರೆ, ಕ್ಷೇತ್ರ ಶಿಕ್ಷಣಾಧಿಕಾರಿ ರೇಖಾ ನಾಯ್ಕ, ಕಸಾಪ ಪದಾಧಿಕಾರಿಗಳು, ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಇತರರು ಇದ್ದರು.





ಹೊನ್ನಾವರ: ತಾಲೂಕಿನ ಚಿಕ್ಕನಕೋಡ ಗ್ರಾಪಂ ಗ್ರಂಥಾಲಯದಲ್ಲಿ ಸತತ 32 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಗ್ರಂಥಪಾಲಕ ಮಂಜುನಾಥ ನಾಯ್ಕ ಅವರನ್ನು ತಾಲೂಕು ಗ್ರಂಥಪಾಲಕರ ಸಂಘಟನೆಯ ವತಿಯಿಂದ ಶುಕ್ರರವಾರ ಸನ್ಮಾನಿಸಿ ಬೀಳ್ಕೊಡಲಾಯಿತು. ತಾಲೂಕು ಯೋಜನಾ ಅಧಿಕಾರಿ ಲತಾ ನಾಯ್ಕ, ಗ್ರಂಥಪಾಲಕರ ಸಂಘಟನೆಯ ಜಿಲ್ಲಾಧ್ಯಕ್ಷ ಜಿ.ಕೆ.ಗೌಡ, ತಾಲೂಕು ಅಧ್ಯಕ್ಷ ರಾಜೇಶ ನಾಯ್ಕ, ಉಪಾಧ್ಯಕ್ಷೆ ಅಮೃತಾ ನಾಯ್ಕ, ಕಾರ್ಯದರ್ಶಿ ಸಂಧ್ಯಾ ಹೆಗಡೆ, ನಾಗರಾಜ ಶೆಟ್ಟಿ ಇದ್ದರು.



ಹಾನಗಲ್ಲ: ಅಕ್ಕಿಆಲೂರಿನ ಸಿ.ಜಿ.ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಶಾಸಕ ಶ್ರೀನಿವಾಸ ಮಾನೆ ಮಾತನಾಡಿದರು.

ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಿ

ಹಾವೇರಿ: ಪರಿಸರ ಸಂರಕ್ಷಣೆ ಎಂದರೆ, ಪರಿಸರ, ಜೀವವೈವಿಧ್ಯತೆ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವುದಾಗಿದೆ. ಎಲ್ಲರೂ ಪರಿಸರ ಸಂರಕ್ಷಣೆ ಮಾಡಬೇಕು ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ. ಹೇಳಿದರು.

ಮೋಟೆಬೆನ್ನೂರಿನ ಪೇಸ್ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾವೇರಿ ಪ್ರಾದೇಶಿಕ ಕಚೇರಿ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅರಣ್ಯೀಕರಣ ಹಾಗೂ ಸರೋವರ ಪುನರುಜ್ಜೀವನ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಾಲಿನ್ಯ ತಡೆಗಟ್ಟಿ ಪರಿಸರ ಸಮತೋಲನ ಕಾಪಾಡಿಕೊಳ್ಳುವ ಮೂಲಕ ಶುದ್ಧ ಗಾಳಿ, ನೀರು ಮತ್ತು ಮಣ್ಣನ್ನು ಮುಂದಿನ ಪೀಳಿಗೆಗೆ ಉಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಇಲ್ಲಿ 64 ಸಸಿಗಳನ್ನು ನೆಡಲಾಗುತ್ತಿದೆ, ಇದು ಎಲ್ಲರಿಗೂ ಮಾದರಿಯಾಗಬೇಕು ಹಾಗೂ ಎಲ್ಲರೂ ಮನೆಗಳ ಆವರಣದಲ್ಲಿ ಸಸಿ ನೆಡಬೇಕು ಎಂದು ಸಲಹೆ ನೀಡಿದರು. ಮೋಟೆಬೆನ್ನೂರು ಪೇಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಉದಯ ಮಂಜುನಾಥ ಅಡೆಮನಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡ್ರ, ಪರಿಸರ ಅಧಿಕಾರಿ ಡಾ.ಎಚ್. ಲಕ್ಷ್ಮೀಕಾಂತ ಇತರರು ಉಪಸ್ಥಿತರಿದ್ದರು.



ಹಾವೇರಿ: ಮೋಟೆಬೆನ್ನೂರು ಪೇಸ್ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾವೇರಿ ಪ್ರಾದೇಶಿಕ ಕಚೇರಿ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅರಣ್ಯೀಕರಣ ಹಾಗೂ ಸರೋವರ ಪುನರುಜ್ಜೀವನ ಅರಿವು ಕಾರ್ಯಕ್ರಮ ನಡೆಯಿತು.

ಕಿರುಸುದ್ದಿ

ಶಿಸ್ತು, ಪರಿಶ್ರಮ ಜವಾಬ್ದಾರಿ ಮೈಗೂಡಿಸಿಕೊಳ್ಳಿ

ಹಾನಗಲ್ಲ: ಕಾಲೇಜು ಜೀವನ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಹಂತವಾಗಿದ್ದು, ಈ ಸಮಯದಲ್ಲಿ ಶಿಸ್ತು, ಪರಿಶ್ರಮ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು. ತಾಲೂಕಿನ ಅಕ್ಕಿಆಲೂರಿನ ಸಿ.ಜಿ.ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮಲ್ಲಿನ ಪ್ರತಿಭೆ ಗುರುತಿಸಿಕೊಂಡು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕಿದೆ. ಸರ್ಕಾರ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದ್ದು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಿದೆ. ಶಿಕ್ಷಣದ ಜೊತೆಗೆ ಸಾಂಸ್ಕೃತಿಕ, ಕ್ರೀಡಾ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿಯೂ ಸಹ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಿದೆ ಎಂದು ಹೇಳಿದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಜಿ.ನಂದ್ಯಾಲ ಮಾತನಾಡಿದರು. ಕರ್ನಾಟಕ ಹಾಲು ಉತ್ಪಾದಕ ಮಹಾಮಂಡಳಿ ನಿರ್ದೇಶಕ ಚಂದ್ರಪ್ಪ ಜಾಲಗಾರ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಕಾಲೇಜು ಅಭಿವೃದ್ಧಿ ಸಲಹಾ ಸಮಿತಿ ಸದಸ್ಯರಾದ ಗುತ್ತೆಪ್ಪ ಸೈದಣ್ಣನವರ, ಉಡುಚಪ್ಪ ಕರಬಣ್ಣನವರ, ಸಾಂಸ್ಕೃತಿಕ ವಿಭಾಗದ ಸಂಚಾಲಕಿ ಭವ್ಯಶ್ರೀ, ಉಪನ್ಯಾಸಕರಾದ ಪ್ರವೀಣ ಎಸ್., ಅಸ್ಮತ್‌ಬಿ, ಮಲ್ಲನಗೌಡ ಕುಲಕರ್ಣಿ, ಸಂತೋಷ ಗೊಂಗಡಿ, ಡಾ.ಕೃಷ್ಣಮೂರ್ತಿ ಆರ್., ಗಂಗಾಧರ ಪಿ.ಆರ್., ಶಿವರಾಜ ಹೂಗಾರ, ಅವಿನೇಶ, ರಮ್ಯಾ ನಾಯ್ಕ, ಡಾ.ಶಿವಪ್ಪ ಎನ್., ಸವಿತಾ ಎನ್. ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಹಾನಗಲ್ಲ: ತಾಲೂಕಿನ ಬೆಳಗಾಲಪೇಟ 33 ಕೆವಿ ವಿವಿ ಕೇಂದ್ರಕ್ಕೆ ಸಂಬಂಧಿಸಿದಂತೆ 11 ಕೆವಿ ಮಾರ್ಗಗಳ ನಿರ್ವಹಣಾ ಕಾಮಗಾರಿ ಇರುವುದರಿಂದ ಜೂನ್ 13ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಆಡೂರ, ಮಾರನಬೀಡ,, ಮಾಸನಕಟ್ಟಿ, ಕಂಚಿನೆಗಳೂರ, ಕಾಡಶೆಟ್ಟಿಹಳ್ಳಿ, ಗುಂಡೂರ, ಬೆಳಗಾಲಪೇಟ ಮತ್ತು ವಳಗೇರಿ ಮಾರ್ಗದಿಂದ ವಿದ್ಯುತ್ ವಿತರಣೆಯಾಗುವ ಎಲ್ಲ ಹಳ್ಳಿಗಳಿಗೆ ವಿದ್ಯುತ್ ವ್ಯತ್ಯಯ ಆಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಹಾನಗಲ್ಲ ಹೆಸ್ಕಾಂ ಎಇಇ ಮರಿಗೌಡ ಅವರು ಪ್ರಕಟಣೆಗೆ ತಿಳಿಸಿದ್ದಾರೆ.

ನುಡಿನಮನ ಕಾರ್ಯಕ್ರಮ ಇಂದು

ಹಾವೇರಿ: ತಾಲೂಕಿನ ಕೊರಡೂರ ಗ್ರಾಮದ ಶ್ರೀ ಗ್ರಾಮದೇವತೆ ಸಭಾಭವನದಲ್ಲಿ ಜೂ.13ರಂದು ಬೆಳಗ್ಗೆ 10.30ಕ್ಕೆ ಆದರ್ಶ ಪ್ರಾಧ್ಯಾಪಕ ದಿ.ಪ್ರೊ. ಗುರುರಾಜ ಕಲಕೋಟಿ ಅವರಿಗೆ ನುಡಿನಮನ ಕಾರ್ಯಕ್ರಮ ನಡೆಯಲಿದೆ. ಹೊಸರಿತ್ತಿ ಗುದ್ದಲಿಸ್ವಾಮಿ ಮಠದ ಗುದ್ದಲಿ ಶಿವಯೋಗೀಶ್ವರ ಸ್ವಾಮೀಜಿ, ನೆಗಳೂರ ಸಂಸ್ಥಾನ ಹಿರೇಮಠದ ಗುರುಶಾಂತೇಶ್ವರ ಸ್ವಾಮೀಜಿ, ಲಿಂಗನಾಯಕನಹಳ್ಳಿ ಚನ್ನವೀರ ಸ್ವಾಮೀಜಿ, ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ, ಹತ್ತಿಮತ್ತೂರ ನಿಜಗುಣ ಶಿವಯೋಗಿಗಳು, ಗುಡ್ಡದಆನ್ವೇರಿಯ ಶಿವಯೋಗೀಶ್ವರ ಸ್ವಾಮೀಜಿ, ಗುತ್ತಲ ಕಲ್ಮಠದ ಗುರುಸಿದ್ದೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ, ವಿಶ್ರಾಂತ ಪ್ರಾಂಶುಪಾಲ ಎಸ್.ಎಫ್. ವಿಶೋಟಿ, ಉದ್ಯಮಿ ರಾಜು ವಾಲಿಶೆಟ್ಟರ, ಹೊಸರಿತ್ತಿ ನಿವೃತ್ತ ಪ್ರಾಚಾರ್ಯ ಎಚ್. ಆರ್ ಯಡಹಳ್ಳಿ, ಜಿಪಂ ಮಾಜಿ ಸದಸ್ಯ ಸಿದ್ದರಾಜ ಕಲಕೋಟಿ, ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜ ಬಾಳೆಹೊಸೂರ, ಅಲ್ಲಾವುದ್ದೀನ್ ಜಂಗಿ, ವಿಜಯ ಗುರುರಾಜ ಕಲಕೋಟಿ, ಬಸವರಾಜ ಕನವಳ್ಳಿ, ಸಂಗಣ್ಣ ಆರಳಿ, ಬಸವರಾಜ ಮರಳಿಹಳ್ಳಿ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಸಾವು

ಹಾವೇರಿ: ಮನೆಯ ಎದುರು ಕೂತಿದ್ದ ವ್ಯಕ್ತಿಯೊಬ್ಬರು ಇದ್ದಕ್ಕಿದ್ದಂತೆ ಅಸ್ವಸ್ಥಗೊಂಡು ಸಾವನ್ನಪ್ಪಿರುವ ಘಟನೆ ರಾಣೇಬೆನ್ನೂರು ತಾಲೂಕು ಬೆನಕನಕೊಂಡ ಗ್ರಾಮದಲ್ಲಿ ನಡೆದಿದೆ. ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲೂಕು ದುಗ್ಗವತ್ತಿ ಗ್ರಾಮದ ನಿಜಗುಣಾಚಾರಿ ವೀರಭದ್ರಾಚಾರಿ ಕಮ್ಮಾರ (35) ಮೃತಪಟ್ಟವರು. ಇವರು ಬಿಎಂಟಿಸಿ ಚಾಲಕರಾಗಿದ್ದು, ಬೆನಕನಕೊಂಡ ಗ್ರಾಮದಲ್ಲಿರುವ ತನ್ನ ತಂಗಿ ಮನೆಗೆ ಬಂದಿದ್ದಾಗ ಘಟನೆ ನಡೆದಿದೆ. ಮನೆ ಎದುರು ಕುರ್ಚಿ ಹಾಕಿಕೊಂಡು ಕೂತಿದ್ದಾಗ ಒಮ್ಮೇಲೆ ಓರೆಯಾಗಿ ಕುಳಿತುಕೊಂಡು ಅಸ್ವಸ್ಥಗೊಂಡಿದ್ದಾರೆ. ಕೂಡಲೇ ಚಿಕಿತ್ಸೆಗೆಂದು ತಾಲೂಕಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ಖಚಿತ ಪಡಿಸಿದ್ದಾರೆ. ಇವರು ಜಾಂಡಿಸ್ ಕಾಯಿಲೆಯಿಂದಲೋ ಅಥವಾ ಬೇರೆ ಯಾವುದಾದರೂ ಕಾಯಿಲೆಯಿಂದ ಮೃತಪಟ್ಟಿದ್ದಾರೆ ಎಂದು ಮೃತರ ಪತ್ನಿ ಕವಿತಾ ಕಮ್ಮಾರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಲಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ | ನ್ಯಾ. ಶ್ರೀಶೈಲಜಾ ಸಲಹೆ

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶ್ರಮಿಸಿ

ಹಾವೇರಿ: ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೊಡಗಿಸಿಕೊಳ್ಳುವುದು ಅಪರಾಧ. ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲರೂ ಶ್ರಮಿಸೋಣ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ. ಹೇಳಿದರು.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಶುಕ್ರವಾರ ಜಿಲ್ಲಾ ನ್ಯಾಯಾಂಗ, ಜಿಲ್ಲಾ ಆಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಸಹಯೋಗದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಬಾಲಕಾರ್ಮಿಕ ನಿಷೇಧ ಕಾಯ್ದೆ ಕುರಿತು ವಿದ್ಯಾರ್ಥಿ ಹಂತದಲ್ಲೇ ತಿಳಿದುಕೊಳ್ಳಬೇಕು ಹಾಗೂ ಇತರರಿಗೂ ತಿಳುವಳಿಕೆ ನೀಡಬೇಕು. ಜಿಲ್ಲೆಯಲ್ಲಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಬಾಲ್ಯವಿವಾಹ ನಿಷೇಧ, ಪೋಕ್ಸೋ ಕಾಯ್ದೆ ಸೇರಿದಂತೆ ವಿವಿಧ ಕಾಯ್ದೆಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರೂ ಸಹ ಬಾಲ್ಯ ವಿವಾಹ, ಬಾಲಗರ್ಭಿಣಿಯರು ಹಾಗೂ ಪೋಕ್ಸೋ ಪ್ರಕರಣಗಳು ಜಿಲ್ಲೆಯಲ್ಲಿ ಕಂಡುಬರುತ್ತಿರುವುದು ವಿಷಾದಕರ. ನಿಮ್ಮ ಸುತ್ತ ಬಾಲಕಾರ್ಮಿಕರು ಕಂಡಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಅಥವಾ 112ಗೆ ಕರೆಮಾಡಿ ಮಾಹಿತಿ ನೀಡಿ, ಮಕ್ಕಳು ಬಾಲ್ಯದಲ್ಲಿ ಶಿಕ್ಷಣ ಪಡೆದು ದೇಶದ ಉತ್ತಮ ಪ್ರಜೆಯಾಗಬೇಕು. ವಿದ್ಯಾರ್ಥಿಗಳು ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು. ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.



> ಮಕ್ಕಳು ಬಾಲ್ಯಾವಸ್ಥೆಯಲ್ಲಿ ತಮ್ಮ ಹಕ್ಕುಗಳನ್ನು ಪಡೆಯುವ ಜೊತೆಗೆ ಶಿಕ್ಷಣವಂತರಾಗಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ಪೋಷಕರು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳಿಸದೇ ಶಾಲೆಗೆ ದಾಖಲಿಸುವ ಮೂಲಕ ಅವರಿಗೆ ಉಜ್ವಲ ಭವಿಷ್ಯ ಕಟ್ಟಿಕೊಡಬೇಕು.
> ■ ಲಕ್ಷ್ಮಣ ಶಿರಕೋಳ, ಎಎಸ್ಪಿ

ಎಎಸ್ಪಿ ಲಕ್ಷ್ಮಣ ಶಿರಕೋಳ ಮಾತನಾಡಿ, ಕೆಲ ಮಕ್ಕಳು ಬಡತನ, ಅನಕ್ಷರತೆ ಹಾಗೂ ತಬ್ಬಲಿ (ತಂದೆ-ತಾಯಿ ಇಲ್ಲದ) ಹೀಗೆ ಹಲವಾರು ಕಾರಣಗಳಿಂದ ದುಡಿಯಲು ಹೋಗುವುದರಿಂದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಚಿಂದಿ ಆಯುವುದು, ಹೋಟೆಲ್, ತರಕಾರಿ ಮಾರಾಟ ಹೀಗೆ ಹಲವು ಕೆಲಸಗಳನ್ನು ಮಾಡುತ್ತಾರೆ. ಇಂಥ ಮಕ್ಕಳು ಕಂಡುಬಂದರೇ ಕೂಡಲೇ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಬಂದು ಮಕ್ಕಳನ್ನು ರಕ್ಷಿಸುತ್ತಾರೆ ಎಂದರು.

> ▸▸ ನಿಮ್ಮ ಸುತ್ತ ಬಾಲಕಾರ್ಮಿಕರು ಕಂಡಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಅಥವಾ 112ಗೆ ಕರೆಮಾಡಿ

ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡ್ರ ಮಾತನಾಡಿ, ಮಕ್ಕಳು ಮೊಬೈಲ್‌ನಿಂದ ದೂರವಿರಬೇಕು. ಓದಿನ ಕಡೆಗೆ ಹೆಚ್ಚಿನ ಗಮನ ನೀಡಬೇಕು. ಬಾಲ ಕಾರ್ಮಿಕರು ಮಾದಕದ್ರವ್ಯಗಳ ವ್ಯಸನಿಗಳಾಗುತ್ತಿದ್ದಾರೆ. ಬಾಲ ಕಾರ್ಮಿಕರ ತಡೆಗೆ ಎಲ್ಲರೂ ಕೈಜೋಡಿಸೋಣ ಎಂದು ಹೇಳಿದರು.

ಸರ್.ಎಂ. ವಿಶ್ವೇಶ್ವರಯ್ಯ ಶಾಲೆಯ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ ಮಾತನಾಡಿದರು. ಉಪ ಕಾನೂನು ನೆರವು ಅಭಿರಕ್ಷಕ ಎಂ.ಸಿ. ಭರಮಣ್ಣನವರ ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಕುರಿತು ಹಾಗೂ ಮುತ್ತುರಾಜ ಮಾದರ ಬಾಲಕಾರ್ಮಿಕ ಪದ್ಧತಿಯ ಕಾರ್ಯ ವಿಧಾನ ಕುರಿತು ಉಪನ್ಯಾಸ ನೀಡಿದರು. ಜಿಲ್ಲಾ ಕಾರ್ಮಿಕ ಅಧಿಕಾರಿ ತರನ್ನುಮ ಬೆಂಗಾಲಿ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಖಿಡಿಪಿಐ ಮೋಹನ ದಂಡಿನ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ, ಬಿಇಒ ಶ್ರೀನಿವಾಸ ಬಿ. ಇತರರಿದ್ದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಒತ್ತು

ಬ್ಯಾಡಗಿ: ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಆರೋಗ್ಯ ಸೇವೆ ಲಭ್ಯವಾದರೆ ಜನರು ನಗರ ಪ್ರದೇಶಗಳಿಗೆ ಅಲೆಯುವುದು ತಪ್ಪುತ್ತದೆ. ಆದ್ದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಸ್ಥಾಪನೆಗೆಒತ್ತುನೀಡಲಾಗುವುದು ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕಿನ ತಡಸ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮತ್ತು ತಾಪಂ, ತಡಸ ಗ್ರಾಪಂ ವತಿಯಿಂದ ಆಯೋಜಿಸಲಾಗಿದ್ದ 45 ಲಕ್ಷ ರೂ. ಅನುದಾನದ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ಶುಕ್ರವಾರ ಭೂಮಿಪೂಜೆ ಹಾಗೂ ಗ್ರಾಮ ದೇವತೆ ದೇವಸ್ಥಾನದ ನೂತನ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ತಡಸ ಗ್ರಾಪಂ ಭಾಗಗಳಲ್ಲಿ ಹಲವಾರು ಸಣ್ಣ ಗ್ರಾಮಗಳಿದ್ದು, ಕೂಲಿ ಕಾರ್ಮಿಕರು, ಬಡವರೇ ಅಧಿಕ ವಾಸವಿದ್ದಾರೆ. ಸಣ್ಣಪುಟ್ಟ ಅನಾರೋಗ್ಯ ಸಮಸ್ಯೆಗಳಿಗೂ ಇಲ್ಲಿನ ಜನರು ಪಟ್ಟಣಗಳಿಗೆ ಹೋಗುವುದನ್ನು ತಪ್ಪಿಸಲು ಇಲ್ಲಿ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಆಯ್ಕೆ ಮಾಡಿದ್ದು, ಸುಸಜ್ಜಿತ ಕಟ್ಟಡ ಶೀಘ್ರ ನಿರ್ಮಾಣವಾಗಲಿದೆ ಎಂದು ತಿಳಿಸಿದರು.

ಗ್ರಾಮಗಳಲ್ಲಿ ದೇವಸ್ಥಾನದ ಅಭಿವೃದ್ಧಿ ಸಂಕೇತವಾಗಿದೆ ಪ್ರತಿ ಗ್ರಾಮಗಳಲ್ಲಿ ದೇವಸ್ಥಾನಕ್ಕೆ ಹೆಚ್ಚಿನ ಅನುದಾನ ನೀಡಲಾಗುತ್ತಿದೆ. ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಯನ್ನು ನೀಡುವುದರ ಜೊತೆಗೆ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಗ್ರಾಮಸ್ಥರ ಬೇಡಿಕೆಯಂತೆ ತಡಸ ಗ್ರಾಪಂ ನೂತನ ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು ಮತ್ತು ಗಂಗಾಪರಮೇಶ್ವರಿ ದೇವಸ್ಥಾನಕ್ಕೆ 5 ಲಕ್ಷ ರೂ.ಹಾಗೂ ಗ್ರಾಮದೇವತೆ ದೇವಸ್ಥಾನಕ್ಕೆ ಈಗಾಗಲೇ ತಾವು 50 ಲಕ್ಷ ಬೇಡಿಕೆ ಇಟ್ಟಿದ್ದು ತಮ್ಮ ಕೈಯಲಿ ಆದಷ್ಟು ನೀಡುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಅಧ್ಯಕ್ಷ ದಾನಪ್ಪ ಚೂರಿ, ಗ್ಯಾರಂಟಿ ಅಧ್ಯಕ್ಷ ಶಂಬನಗೌಡ ಪಾಟೀಲ್, ರುದ್ರಪ್ಪ ಹೊಂಕಣದ, ಜಿಲ್ಲಾ ಗ್ಯಾರಂಟಿ ಸದಸ್ಯ ಕೇಶವ್ ಕಿತ್ತೂರ್, ಗ್ರಾಪಂ ಅಧ್ಯಕ್ಷ ದಿಲೀಪ್ ಕುಮಾರ್ ಮೇಗಳಮನಿ, ಚಂದ್ರಪ್ಪ ದೊಡ್ಡನಿ ಹೊನ್ನಪ್ಪ ಸಣ್ಣಬಾರ್ಕಿ, ಹನುಮಂತಪ್ಪ ಸಣ್ಣ ಬಾರ್ಕಿ, ಸಿದ್ದನಗೌಡ ಬೇಗೂರ್, ತೀರಕನಗೌಡ ಪಾಟೀಲ್, ಬೀರನಗೌಡ ಪಾಟೀಲ್ ಹಾಗೂ ಗುತ್ತಿಗೆದಾರರು ಗ್ರಾಪಂ ಪಿಡಿಒ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳು ಸಂಶೋಧನೆಗಳಲ್ಲಿ ತೊಡಗಿಕೊಳ್ಳಲಿ

ಹಾವೇರಿ: ತೋಟಗಾರಿಕಾ ಕಾಲೇಜಿನ ವಿದ್ಯಾರ್ಥಿಗಳು ಹೊಸ ಹೊಸ ಆವಿಷ್ಕಾರಗಳು, ಸ್ಟಾರ್ಟ್‌ಅಪ್‌ಗಳು ಮತ್ತು ತಂತ್ರಜ್ಞಾನ ಅಭಿವೃದ್ಧಿ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ತಿಳಿಸಿದರು.

ದೇವಿಹೊಸೂರಿನಲ್ಲಿರುವ ದಾನವೀರ ಸಿರಸಂಗಿ ಶ್ರೀ ಲಿಂಗರಾಜ ದೇಸಾಯಿ ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಮಹಾವಿದ್ಯಾಲಯ ಮತ್ತು ವಿದ್ಯಾರ್ಥಿ ವಸತಿ ನಿಲಯಗಳ 10ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿಅವರುಮಾತನಾಡಿ, ದೇವಿಹೊಸೂರಿನ ತೋಟಗಾರಿಕಾ ಮಹಾವಿದ್ಯಾಲಯವು ಅತಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದೆ. ಆಹಾರ ತಂತ್ರಜ್ಞಾನ ಪದವಿ ಪಡೆದ ವಿದ್ಯಾರ್ಥಿಗಳಿಗೆ ಆಹಾರ ಸಂಸ್ಕರಣಾ ವಿಭಾಗದಲ್ಲಿ ವಿಶ್ವಮಟ್ಟದ ಅವಕಾಶಗಳಿವೆ. ವಿದ್ಯಾರ್ಥಿಗಳು ಪದವಿ ಪಡೆದು ಉತ್ತಮ ಸಾಧನೆಗೈಯಬೇಕು ಎಂದು ತಿಳಿಸಿದರು.

ಹಾವೇರಿ ವಿಶ್ವ ವಿದ್ಯಾಲಯದ ಕುಲಪತಿ ಡಾ. ಸುರೇಶ ಜಂಗಮಶೆಟ್ಟಿ ಮಾತನಾಡಿ, ಕೃಷಿ ಎಂಜಿನಿಯರಿಂಗ್ ಹಾಗೂ ಆಹಾರ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೊಸ ಅವಿಷ್ಕಾರಗಳ ಅಗತ್ಯವಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಮೂಲಕ ಕೃಷಿ ಹಾಗೂ ಆಹಾರ ಸಂಸ್ಕರಣಾ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆವಹಿಸಿದ್ದಮಹಾವಿದ್ಯಾಲಯದಡೀನ್ ಡಾ.ಲಕ್ಷ್ಮಣ ಕೂಕನೂರ ಮಾತನಾಡಿ, ಪ್ರಚಲಿತ ಸವಾಲುಗಳನ್ನು ಎದುರಿಸಿ ವಿದ್ಯಾರ್ಥಿಗಳು ಆಹಾರ ತಂತ್ರಜ್ಞಾನದಲ್ಲಿರುವ ಕಠಿಣ ಪರಿಶ್ರಮದೊಂದಿಗೆ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ತಿಳಿಸಿದರು. ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕಿ ಡಾ. ಶೋಭಾ ವಾರ್ಷಿಕ ವರದಿ ಮಂಡಿಸಿದರು. ಸಹಾಯಕ ಪ್ರಾಧ್ಯಾಪಕಿ ಅನ್ನಪೂರ್ಣಾ ನೀರಲಗಿ ವಸತಿನಿಲಯಗಳ ವರದಿ ಜತೆಗೆ ವಿದ್ಯಾರ್ಥಿಗಳ ಶೈಕ್ಷಣಿಕ, ಕ್ರೀಡಾ ಹಾಗೂ ವಸತಿನಿಲಯಗಳ ಸೌಲಭ್ಯ, ಸಾಂಸ್ಕೃತಿಕ ಸಾಧನೆ ಕುರಿತು ವಿವರಿಸಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ಗಣ್ಯರು ವಿತರಿಸಿದರು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ನೃತ್ಯ, ಸಂಗೀತ, ನಾಟಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ವೇಳೆ ಸಹ ಪ್ರಾಧ್ಯಾಪಕಿ ಡಾ.ವೀಣಾ ಸ್ವಾಗತಿಸಿದರು. ಡಾ.ಶ್ರೀನಿವಾಸ ಜಿ. ವಂದನಾರ್ಪಣೆ ಮಾಡಿದರು. ಕಾಲೇಜಿನ ಎಲ್ಲ ಬೋಧಕ, ಬೋಧಕೇತರದ ಸಿಬ್ಬಂದಿ, ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.



ಭೂ ಗ್ಯಾರಂಟಿ ಯೋಜನೆಯ ಲಾಭ ಪಡೆದುಕೊಳ್ಳಿ

ಬ್ಯಾಡಗಿ: ತಾಲೂಕಿನ ಜನತೆ ಭೂ ಗ್ಯಾರಂಟಿ ಯೋಜನೆಯ ಲಾಭ ಪಡೆದುಕೊಂಡು ಮನೆಯೊಡೆಯರಾಗುವಂತೆ ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ಶುಕ್ರವಾರ ಅವರು ತಾಲೂಕಿನ ಛತ್ರ ಗ್ರಾಮದಲ್ಲಿ ಭೂ ಗ್ಯಾರಂಟಿ ಯೋಜನೆಯಡಿ ಬನ್ನಿ ಹಟ್ಟಿ, ಬಿಸಲಹಳ್ಳಿ, ಕಲ್ಲೇ ದೇವರ ಹಾಗೂ ಬುಡಪನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳಿಗೆ ವಸತಿ ಹಕ್ಕು ಪತ್ರ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದಶಕಗಳಿಂದ ಕಂದಾಯ ವ್ಯಾಪ್ತಿಗೆ ಬಾರದ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಅದರಲ್ಲಿನ ಕುಟುಂಬಗಳಿಗೆ ಉಳುವವನೇ ಭೂಮಿಯ ಒಡೆಯ ಮಾದರಿಯಲ್ಲಿ ವಾಸಿಸುವವನೇ ಮನೆಯ ಒಡೆಯ ಎಂದು ಹಕ್ಕುಪತ್ರಗಳನ್ನು ವಿತರಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈಗಾಗಲೇ ತಾಲೂಕಿನ ಅನೇಕ ಗ್ರಾಮಗಳಲ್ಲಿಯ ವಸತಿ ರಹಿತ ಫಲಾನುಭವಿಗಳಿಗೆ ಭೂ ಗ್ಯಾರಂಟಿ ಯೋಜನೆಯಡಿ 1500 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ. ಇಂದು 400 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ.

ನಮ್ಮ ಗ್ಯಾರಂಟಿ ಯೋಜನೆಗಳು ಎಲ್ಲಾ ಸಮುದಾಯಗಳನ್ನು ತಾರತಮ್ಯವಿಲ್ಲದೆ ಉನ್ನತೀಕರಿಸುತ್ತವೆ ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಅವರನ್ನು ಬಲಪಡಿಸುತ್ತವೆ ಎಂದು ಹೇಳಿದರು. ತಾಲೂಕು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ದಾನಪ್ಪ ಚೂರಿ ಮಾತನಾಡಿದರು. ತಾಪಂಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿ.ವಿ.ಹಿರೇಮಠ, ನಾಗಣ್ಣ ಆನ್ವೇರಿ, ನ್ಯಾಯವಾದಿ ಬಿ.ಎಂ.ಗೌರಾಪುರ ಮಾತನಾಡಿದರು. ವೇದಿಕೆಯಲ್ಲಿ ತಾಲೂಕಾ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಶಂಭನಗೌಡ ಪಾಟೀಲ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲಕ್ಷ್ಮಿ ಜಿಂಗಾಡೆ, ತಹಶೀಲ್ದಾರ ಚಂದ್ರಶೇಖರ ನಾಯ್ಕ, ಧುರೀಣರಾದ ಚನ್ನಬಸಪ್ಪ ಹುಲ್ಲತ್ತಿ, ರಮೇಶ ಕೋಟಿಯವರ, ಸುರೇಶ ಯಮನಕ್ಕನವರ, ಬಸವರಾಜ ಬೆಳಕೇರಿ ಸೇರಿದಂತೆ ಇತರರಿದ್ದರು.



ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ಶಾಸಕ ಮಾನೆ

ಹಾನಗಲ್ಲ: ಅಮೃತ 2.0 ಯೋಜನೆಯಡಿ ನಗರಕ್ಕೆ 24★7 ಕುಡಿಯುವ ನೀರು ಪೂರೈಸುವ ಕಾಮಗಾರಿ ತ್ವರಿತಗೊಳಿಸಿ ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಶಾಸಕ ಶ್ರೀನಿವಾಸ ಮಾನೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ನಗರ ಕುಡಿಯುವ ನೀರು ಸರಬರಾಜು ಹಾಗೂ ನೈರ್ಮಲ್ಯ ಮಂಡಳಿ ಮತ್ತು ಪುರಸಭೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು ಮಳಗಿ ಧರ್ಮಾ ಜಲಾಶಯದಿಂದ ಪೈಪ್‌ಲೈನ್ ಮೂಲಕ ನೀರು ತರುವ ಮಹತ್ವಾಕಾಂಕ್ಷೆಯ ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಮಾನೆ, ಕುಂಟುನೆಪ ಹೇಳದೇ ಕಾಮಗಾರಿ ಚುರುಕುಗೊಳಿಸುವಂತೆ ಸೂಚಿಸಿದರು.



ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ನಗರದಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳ ಪ್ರಗತಿಯ ವಿವರ ಪಡೆದ ಶ್ರೀನಿವಾಸ ಮಾನೆ, ಕಾಮಗಾರಿ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಸಲ್ಲದು. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು. ಕೆಲವೆಡೆ ಸಿಡಿ ನಿರ್ಮಾಣಕ್ಕೆ ಸಾರ್ವಜನಿಕರಿಂದ ಬೇಡಿಕೆ ಬಂದಿದ್ದು, ಪರಿಶೀಲಿಸಿ ಸೂಕ್ತ ಕ್ರಮಕ್ಕೆ ಸೂಚಿಸಿದರು.

ತಂತ್ರಾಂಶದ ದೋಷದಿಂದ ಕೆಲವರು ಇಸ್ವತ್ತು ಪಡೆಯಲು ವಿಳಂಬವಾಗುತ್ತಿದೆ. ದೋಷ ನಿವಾರಿಸಿಕೊಂಡು ಸಾರ್ವಜನಿಕರಿಗೆ ತೊಂದರೆ ಆಗದಂತೆ ಅಗತ್ಯ ಕ್ರಮ ಜರುಗಿಸುವಂತೆ ಸೂಚಿಸಿದರು. ಕರ್ನಾಟಕ ನಗರ ಕುಡಿಯುವ ನೀರು ಸರಬರಾಜು ಹಾಗೂ ನೈರ್ಮಲ್ಯ ಮಂಡಳಿಎಇಇ ಆರ್.ಕೆ.ಉಮೇಶ, ಅಭಿಯಂತರ ಆತೀಕ್, ಪುರಸಭೆ ಮುಖ್ಯಾಧಿಕಾರಿ ವೈ.ಕೆ.ಜಗದೀಶ, ಅಭಿಯಂತರ ನಾಗರಾಜ ಮಿರ್ಜಿ ಇದ್ದರು.

ಶಾಂತರಾಜುರವರಿಗೆ ಸನ್ಮಾನ



ರಟ್ಟೀಹಳ್ಳಿ: ನಮ್ಮ ಸರ್ಕಾರಿ ಪ್ರೌಢ ಶಾಲೆಯಲ್ಲಿ ಅಭ್ಯಾಸ ಮಾಡಿದ ಯಾವುದೇ ವಿದ್ಯಾರ್ಥಿ ಅಥವಾ ವಿಧ್ಯಾರ್ಥಿನಿಯಾಗಲಿ, ಯಾವುದೇ ಕ್ಷೇತ್ರದಲ್ಲಿ ಆಗಲಿ ಅತ್ಯಂತ ಸಣ್ಣ ಕೆಲಸದಿಂದ ಹಿಡಿದು ಉನ್ನತ ಹುದ್ದೆ ಹೊಂದಿರುವವರಾಗಿರಲಿ ಇವರನ್ನು ಪ್ರತಿ ತಿಂಗಳ ನಿಗದಿತ ಒಂದು ದಿನ ನಮ್ಮ ಶಾಲೆಗೆ ಆಹ್ವಾನಿಸುವುದು, ತದನಂತರ ಇವರಿಂದ ಈಗಿನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿಸುವುದು ಹಾಗೂ ಜೀವನದ ಏಳು ಬೀಳುಗಳ ಅನುಭವವನ್ನು ಹೇಳಿಸುವುದು. ಇದೊಂದು ನೂತನ ಕಾರ್ಯಕ್ರಮವಾಗಿದ್ದು ಪ್ರಸ್ತುತ ಶಾಂತರಾಜು ಉಕ್ಕಡಗಾತ್ರಿ ಏಕ ವ್ಯಕ್ತಿಯಾಗಿ ರೈತರ ಅಭಿವೃದ್ಧಿಗಾಗಿ ಬೈಕ್ ಮೂಲಕ 15 ರಾಜ್ಯಗಳು, ಚಾರ್ ಧಾಮ್‌ಗಳನ್ನು 12000 ಕಿ.ಮೀ ಸಂಚರಿಸಿ ಜಾಗೃತಿ ಮೂಡಿಸಿರುವುದು ಶ್ಲಾಘನೀಯವಾಗಿದೆ ಎಂದು ಮುಖ್ಯೋಪಾಧ್ಯ ಮಹೇಶ ಕೆರೂರು ಹೇಳಿದರು. ರಟ್ಟೀಹಳ್ಳಿ ತಾಲೂಕಿನ ಕಡೂರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ತಿಂಗಳ ತಿರುಳು ಕಾರ್ಯಕ್ರಮದಲ್ಲಿ ಶಾಂತರಾಜು ಉಕ್ಕಡಗಾತ್ರಿ ಇವರಿಗೆ ಸನ್ಮಾನ ನೆರವೇರಿಸಿ ಮಾತನಾಡಿದರು. ಶಾಲಾ ಸಮಿತಿಯ ಸದಸ್ಯರಾದ ಪ್ರಭಾಕರ ದೇವರ ಬಸಪ್ಪನವರ, ಚಂದ್ರಪ್ಪ ತುಮ್ಮಿನಕಟ್ಟಿ, ಹನುಮಂತಪ್ಪ ಓಲೇಕಾರ, ಶಂಕರಗೌಡ ಲಕ್ಕನಗೌಡ್ರ, ಕರೇಗೌಡ ಹಳ್ಳೇರ, ಶಿಕ್ಷಕರಾದ ಬಿ.ಡಿ.ಪಾಟೀಲ, ಚಂದ್ರಪ್ಪ ಬತ್ತೇರ, ರಾಮಚಂದ್ರಪ್ಪ ಕಬ್ಬಾರಣ್ಣನವರ, ಅಂಜಲಿ ಸಾವುಕಾರ, ಸಂಗೀತಾ ಚನ್ನಗೌಡ್ರ, ಶ್ರೀಕಾಂತ ಮಾಳಗಿ, ಅಫ್ಜಲ ಜಮಖಾನಿ ಉಪಸ್ಥಿತರಿದ್ದರು.

ನಾಳೆ ರಾಜ್ಯಮಟ್ಟದ ಬೃಹತ್ ಸಮ್ಮೇಳನ

ಹಾವೇರಿ: ನಗರದ ರಜನಿ ಕನ್ವೆನ್ಷನ್ ಹಾಲ್‌ನಲ್ಲಿ ಜೂ.14ರಂದು ರಾಜ್ಯಮಟ್ಟದ ಮೌಲಾನಾಗಳ ಧಾರ್ಮಿಕ ಮತ್ತು ಸಾಮಾಜಿಕ ಸೇವೆಗಳ ಕುರಿತು ಬೃಹತ್ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಉಲಮಾ ಸೊಸೈಟಿ ಕಾರ್ಯದರ್ಶಿ ಹಜರತ್‌ಅಲಿ ಸುಳ್ಳಳ್ಳಿ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೂ.14ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ನಗರದ ರಜನಿ ಸಭಾಂಗಣದಲ್ಲಿ ಬೃಹತ್ ಸಮ್ಮೇಳನ ಜರುಗಲಿದೆ. ಈ ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ವಕ್ಫಮಂಡಳಿಯ ಅಧ್ಯಕ್ಷ, ಕಲುಬುರಗಿಯ ಹಜರತ್ ಖ್ವಾಜಾ ಬಂದೇನವಾಜಾ ದರ್ಗಾದ ಉಲಮಾ/ಧರ್ಮಗುರು ಸೈಯದ್ ಮೊಹಮ್ಮದ ಅಲಿ ಅಲ್‌ಹುಸೇನಿ ಸಜ್ಜಾದಾ ನಶೀನ್, ವಿಧಾನ ಪರಿಷತ್ ಮುಖ್ಯಸಚೇತಕ ಸಲೀಂ ಅಹ್ಮದ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಅದೇ ರೀತಿ ಜಿಲ್ಲೆಯ ಆರೂ ವಿಧಾನಸಭಾ ಕ್ಷೇತ್ರಗಳ ಶಾಸಕರು, ಜಿಲ್ಲೆಯ ವಿವಿಧ ಉಲಮಾಗಳು, ಎಲ್ಲ ಅಂಜುಮನ್-ಎ-ಇಸ್ಲಾಂ ಕಮೀಟಿ ಮುಖ್ಯಸ್ಥರು, ಪದಾಧಿಕಾರಿಗಳು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೊಸೈಟಿ ಅಧ್ಯಕ್ಷ ಹಜರತ್ ಸೈಯದ್ ಮೈನುದ್ದೀನ್ ಸರಖಾಜಿ, ಉಪಾಧ್ಯಕ್ಷ ಮೌಲಾನಾ ಅಬ್ದುಲ್ ಅಲೀಮ್‌ಸಾಬ್, ಸದಸ್ಯರಾದ ಸೈಯದ್ ದಾದಾಪೀರ್, ಮೌಲಾನಾ ಇಬ್ರಾಹಿಂಸಾಬ್, ಸಾಕಮುಲ್ಲಾ, ಜಾಫರ್‌ರಜಾ, ಮಹ್ಮದ್ ರಿಜ್ವಾನ್, ಗುಲಾಮ್ ಮುಸ್ತಫಾ, ಇನಾಯತ್‌ಉಲ್ಲಾ, ರಹಮತ್‌ರಜಾ, ಜಹಿಮುದ್ದೀನ, ಹಾವೇರಿ ಅಂಜುಮನ್ ಕಮೀಟಿ ಸದಸ್ಯ ಜಮೀರ್ ಅಹ್ಮದ್ ಜಿಗರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಹಳೆಗನ್ನಡ ಕಾವ್ಯಗಳು ಎಲ್ಲ ಭಾಷೆಗಳಿಗೆ ಅನುವಾದವಾಗಲಿ

ಹಾವೇರಿ: ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಹಳಗನ್ನಡ ಕಾವ್ಯಗಳು ಜಗತ್ತಿನ ಬೇರೆ ಭಾಷೆಗಳಿಗೆ ಅನುವಾದಗೊಂಡು ವ್ಯಾಪಕವಾಗಿ ಮುಟ್ಟುವಂತಾಗಬೇಕು. ಇದು ಕಷ್ಟ ಮತ್ತು ಸವಾಲಿನ ಕೆಲಸ. ಹಳಗನ್ನಡದ ಓದು ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಹಿರಿಯ ವಿದ್ವಾಂಸರು ತಮ್ಮ ಜ್ಞಾನವನ್ನು ಹೊಸ ಪೀಳಿಗೆಯಲ್ಲಿ ಹಂಚಿಕೊಳ್ಳಬೇಕು. ಕನ್ನಡದ ನಿಜಸತ್ವಕುಂದಬಾರದು ಎಂದು ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ ಹೇಳಿದರು.

ಧಾರವಾಡ ವಿದ್ಯಾವರ್ಧಕ ಸಂಘದ ಸಾಹಿತ್ಯ ಮತ್ತು ಅನುಭಾವ ಮಂಟಪ, ಹಾವೇರಿ ವಿಶ್ವವಿದ್ಯಾಲಯ ಸಂಯುಕ್ತವಾಗಿ ಏರ್ಪಡಿಸಿದ್ದ ಹಳಗನ್ನಡ ಕಾವ್ಯಗಳ ಓದು ಮತ್ತು ವಿಶ್ಲೇಷಣೆ ಎಂಬ ಒಂದು ದಿನದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ್ ಹಲಗತ್ತಿ ಮಾತನಾಡಿದರು. ಕಾರ್ಯಕ್ರಮದ ಸಂಯೋಜಕರಾದ ಎಸ್.ಆರ್. ಹಿರೇಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ನಂತರ ನಡೆದ ವಿಚಾರ ಸಂಕಿರಣದಲ್ಲಿ ಧಾರವಾಡದ ಹಿರಿಯ ಸಾಹಿತಿ ಡಾ.ವೈ.ಎಂ. ಭಜಂತ್ರಿ ಅವರು ರನ್ನ ಕವಿಯ ಕಾವ್ಯಗಳಲ್ಲಿ ಸಮಕಾಲೀನತೆ ವಿಷಯ ಕುರಿತು ವಿಚಾರ ಮಂಡನೆ ಮಾಡಿದರು. ರನ್ನ ಗದಾಯುದ್ಧ ಇಂದಿಗೂ ಯುದ್ಧ ವಿರೋಧಿ ನೀತಿಗೆ ಮಾದರಿಯಾಗಿದೆ. ಇಲ್ಲಿಯ ಶೌರ್ಯ ಮತ್ತು ಸಾಹಸಗಳು ಅತ್ಯಂತ ಪ್ರಭಾವೀ ಕಾವ್ಯ. ಇದೊಂದು ಕನ್ನಡದ ಮೇರು ಕೃತಿ ಎಂದು ಅಭಿಪ್ರಾಯಪಟ್ಟರು.



ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮಾನವೀಯ ಮೌಲ್ಯಗಳು ಎಂಬ ವಿಷಯ ಕುರಿತು ಡಾ.ಪ್ರವೀಣ ಎಚ್. ಉಪನ್ಯಾಸವನ್ನು ನೀಡಿದರು.

ಅಧ್ಯಕ್ಷತೆಯನ್ನು ಅಕ್ಕಿಆಲೂರ ಸಿ.ಜೆ. ಬೆಲ್ಲದ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಉಪನ್ಯಾಸಕ ಡಾ. ಕೃಷ್ಣಮೂರ್ತಿ ಆರ್., ವಹಿಸಿದ್ದರು. ವೇದಿಕೆಯಲ್ಲಿ ವಿದ್ಯಾವರ್ಧಕ ಸಂಘದ ಸಾಹಿತ್ಯ ಮತ್ತು ಅನುಭಾವ ಮಂಟಪದ ಸಂಚಾಲಕ ಡಾ. ಜಿನದತ್ತ ಹಡಗಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ, ಸಲಹಾ ಸಮಿತಿ ಸದಸ್ಯ ಡಾ.ಪಿ.ಟಿ. ಲಕ್ಕಣ್ಣನವರ ಇದ್ದರು. ಸಮಾರಂಭದಲ್ಲಿ ಡಾ.ಸತೀಶ ಕುಲಕರ್ಣಿ, ಕಲಾವಿದ ಕರಿಯಪ್ಪ ಹಂಚಿನಮನಿ, ಚಂದ್ರಶೇಖರ ಮಾಳಗಿ, ಸಂಯೋಜಕ ಎಸ್.ಆರ್. ಹಿರೇಮಠ ಪಾಲ್ಗೊಂಡಿದ್ದರು.

ದಿವ್ಯಾ ಕುಲಕರ್ಣಿ ಸ್ವಾಗತಿಸಿದರು. ಸೋಮಣ್ಣ ಡಂಬರಮತ್ತೂರ ಪರಿಚಯಿಸಿದರು. ವಾಣಿ ಆಗಡಿ ಮತ್ತು ಚೈತ್ರಾ ಹುಳಕೆಲ್ಲಪ್ಪನವರ ನಿರ್ವಹಿಸಿದರು. ಸುಮಾ ಜಿಗಳಿಕೊಪ್ಪ ವಂದಿಸಿದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಐಗಳಿ: ಸ್ಥಳೀಯ 110/11 ಕೆ.ವ್ಹಿ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಬೇಕಾಗಿರುವದರಿಂದ ಜೂ.13ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ ಐಗಳಿ ವಿ.ವಿ ಕೇಂದ್ರ ದಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ರೂರಲ್ ಹಾಗೂ ಎನ್.ಜೆ.ವಾಯ್ ಮಾರ್ಗಗಳಾದ : ಅಡಹಳ್ಳಿ, ಅಡಹಳಟ್ಟಿ, ದೇಸಾರಟ್ಟಿ, ಬಾಡಗಿ, ಝುಂಜರವಾಡ ಡಬ್ಲ್ಯೂ.ಎಸ್, ಬನ್ನೂರ, ಅರಟಾಳ, ತೆಲಸಂಗ, ಐಗಳಿ ಐಪಿ, ಕಕಮರಿ, ರಾಮತೀರ್ಥ, ಐಗಳಿ ಎನ್.ಜೆ.ವಾಯ್, ಕೋಹಳ್ಳಿ ಕೆರೆ, ಯಲಿಹಡಲಗಿ, ಕೋಹಳ್ಳಿ, ತೆಲಸಂಗ ಎನ್.ಜೆ.ವಾಯ್, ಯಕ್ಕಂಚಿ ಎನ್.ಜೆ.ವಾಯ್, ಕೇಸ್ಕರ ದಡ್ಡಿ, ಬಾಡಗಿ ಎನ್.ಜೆ.ವಾಯ್ , ಹಾಲಳ್ಳಿ ಆಯ್.ಪಿ, ಕೋಹಳ್ಳೀ ಜಾಕ್ವೆಲ್, ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಗ್ರಾಹಕರು ಸಹಕರಿಸಬೇಕೆಂದು ಹಿರಿಯ ಹೆಸ್ಕಾಂ ಅಧಿಕಾರಿ ಜಿ.ವ್ಹಿ. ಸಂಪನ್ನವರ ತಿಳಿಸಿದ್ದಾರೆ.

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಇಂದು

ಚನ್ನಮ್ಮನ ಕಿತ್ತೂರು. ಪಟ್ಟಣದ 110 ಕೆವಿ ಉಪಕೇಂದ್ರದಲ್ಲಿ 1 ತ್ರೈ ಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವದರಿಂದ ಜೂ. 13 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಕಾರಣ ಕಿತ್ತೂರ ಹೆಸ್ಕಾಂ ಉಪವಿಭಾಗದ ವ್ಯಾಪ್ತಿಗೆ ಒಳಪಡುವ ಕಿತ್ತೂರು ಪಟ್ಟಣ ಪಂಚಾಯತ ವ್ಯಾಪ್ತಿ ಸೇರಿದಂತೆ ಕೈಗಾರಿಕಾ ಪ್ರದೇಶ, ಸಾಗರ, ಲಿಂಗದಳ್ಳಿ, ಗಿರಿಯಾಲ, ಹುಲಿಕಟ್ಟಿ, ದೇಮಟ್ಟಿ, ಜಮಳೂರ, ಹೊನ್ನಾಪೂರ, ಮರಿಗೇರಿ, ಅಂಬಡಗಟ್ಟಿ, ಅವರಾದಿ, ಬೈಲೂರ, ದೇಗಾಂವ, ಹಿರೇನಂದಿಹಳ್ಳಿ, ಕುಲವಳ್ಳಿ, ಕಲಭಾಂವಿ, ನಿಚ್ಚಣಕಿ, ತಿಗಡೊಳ್ಳಿ, ಉಗರಖೋಡ ಪಂಚಾಯತ ವ್ಯಾಪ್ತಿಗಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಗ್ರಾಹಕರಿಗೆ ಹಾಗೂ ನೀರಾವರಿ ಪಂಪ ಸೆಟ್ ಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಗ್ರಾಹಕರು ಸಹಕರಿಸಬೇಕೆಂದು ಕಿತ್ತೂರ ಹೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶಿಷ್ಟಚೇತನರಿಗೆ ನಿರಾಮಯ ಯೋಜನೆ

ಬೆಳಗಾವಿ: ಕೇಂದ್ರ ಸರ್ಕಾರದ ಯೋಜನೆಯಾದ ನ್ಯಾಷನಲ್ ಟ್ರಸ್ಟ್ ಆ್ಯಕ್ಟ್-1999 ರಡಿ 4 ಬಗೆಯ ವಿಶಿಷ್ಟಚೇತನರಿಗೆ (ಬುದ್ಧಿಮಾಂದ್ಯ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲರು) ನಿರಾಮಯ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯನ್ವಯ ರಾಜ್ಯದಲ್ಲಿ ಬಡತನರೇಖೆಗಿಂತ ಕೆಳಗಿರುವ ಕುಟುಂಬದ ಈ 4 ಬಗೆಯ ವಿಶಿಷ್ಟಚೇತನ ವ್ಯಕ್ತಿಗಳಿಗೆ ಒಂದು ಬಾರಿಗೆ ವಾರ್ಷಿಕ ವಿಮಾ ಕಂತು ರೂ. 250/- ಗಳನ್ನು ಇಲಾಖೆಯ ವತಿಯಿಂದ ಪಾವತಿಸಿದಲ್ಲಿ ಪ್ರತಿ ವರ್ಷ ಸದರಿ ವಿಕಲಚೇತನರು ಚಿಕಿತ್ಸೆಗಾಗಿ ಭರಿಸಿದ ವೆಚ್ಚಗಳಿಗೆ ಸಂಬಂಧಿಸಿದಂತೆ ಗರಿಷ್ಠ ರೂ. 1 ಲಕ್ಷಗಳ ವರೆಗೆ ಮರು ಪಾವತಿ ಪಡೆಯಲು ಅವಕಾಶವಿರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಈ ಮೇಲೆ ತಿಳಿಸಿರುವಂತೆ, ವಿಶಿಷ್ಟಚೇತನರ ಪಾಲಕರು - ಪೋಷಕರು ಸದರಿ ಯೋಜನೆಯಡಿ ಅರ್ಜಿ ಸಲ್ಲಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿಗೆ ಅಥವಾ ತಮ್ಮ ತಾಲೂಕಿನ ವ್ಯಾಪ್ತಿಯ ಎಂಆರ್ ಡಬ್ಲ್ಯೂ/ವಿ.ಆರ್.ಡಬ್ಲ್ಯೂ/ ಯು.ಆರ್.ಡಬ್ಲ್ಯೂ. ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳಮುಖಿಯರಿಗೆ ಉಚಿತ ಕಾನೂನು ಸೇವೆಗಳ ಕ್ಲಿನಿಕ್

ಬೆಳಗಾವಿ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಹ್ಯೂಮ್ಯಾನಿಟಿ ಫೌಂಡೇಷನ್ ಬೆಳಗಾವಿ ಸಹಯೋಗದೊಂದಿಗೆ ಬೆಳಗಾವಿಯ ಶಿವಾಜಿನಗರದಲ್ಲಿರುವ ಹ್ಯೂಮ್ಯಾನಿಟಿ ಫೌಂಡೇಷನ್ ಕಚೇರಿಯಲ್ಲಿ ಮಂಗಳಮುಖಿಯರಿಗೆ ಉಚಿತ ಕಾನೂನು ಸೇವೆಗಳ ಕ್ಲಿನಿಕ್ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಜರುಗಿತು. ಬೆಳಗಾವಿಯ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಕೆ.ಎನ್. ಶಿವಕುಮಾರ ಮಂಗಳಮುಖಿಯರಿಗೆ ಕಾನೂನು ನೆರವು ಕುರಿತು ಉಪನ್ಯಾಸ ನೀಡಿದರು.

ಬೆಳಗಾವಿಯ ಹ್ಯೂಮ್ಯಾನಿಟಿ ಫೌಂಡೇಷನ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಾನಾಜಿ ಸಾವಂತರವರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಹಾಯಕ ಕಾನೂನು ನೆರವು ಅಭಿಕ್ಷಕರು ಸುಜಾತಾ ಗೌಂಡಾಡಕರ್ ರವರು ಮಾತನಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ವಕೀಲರಾದ ಪ್ರತಿಮಾ ಜೋಶಿ ಹಾಗೂ ರೂಪಾ ಭಜಂತ್ರಿ ಹಾಗೂ ಪ್ರೊಫೆಸರ್ ಐಹೊಳೆ, ಡಿ.ಐ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ ಹಾಗೂ ಇತರ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಬೆಳಗಾವಿ : ಹಲವು ವರ್ಷಗಳಿಂದ ರೂ.100ರ ಛಾಪಾ ಕಾಗದದ ಮೇಲೆ ಖರೀದಿಸಲ್ಪಟ್ಟ 20X40 ಹಾಗೂ 30X40 ಅಳತೆಯ ನಿವೇಶನಗಳಿಗೆ ಮಾನ್ಯತೆ ದೊರಕದೆ ಸಂಕಷ್ಟ ಅನುಭವಿಸುತ್ತಿದ್ದ ಬಡ, ಮಧ್ಯಮ ಹಾಗೂ ಸಾಮಾನ್ಯ ವರ್ಗದ ಜನರಿಗೆ ರಾಜ್ಯ ಸರ್ಕಾರದ ಇತ್ತೀಚಿನ ನಿರ್ಧಾರದಿಂದ ದೊಡ್ಡ ಮಟ್ಟದ ನೆಮ್ಮದಿ ದೊರೆತಿದೆ ಎಂದು ಉತ್ತರ ರಕರ್ನಾಟಕ ಅಂಜುಮನ್ ವಿ-ಇಸ್ಲಾಮ್ ಸಂಘವು ಅಭಿನಂದನೆ ಸಲ್ಲಿಸಿತು. ಈ ವೇಳೆ ಹಮೀದ್ ಕೊಪ್ಪದ, ಅಬ್ದುಲ್ ವಾಹಿದ ಅತ್ತಾರ, ಸಲೀಮ್ ಸೇರಿದಂತೆ ಹಲವು ಮುಸ್ಲೀಂ ಮುಖಂಡರು ಪಾಲ್ಗೊಂಡಿದ್ದರು.

ತಜ್ಞ ವೈದ್ಯಾಧಿಕಾರಿಗಳ ಹುದ್ದೆ: ನೇರ ಸಂದರ್ಶನ

ಬೆಳಗಾವಿ : ಬೆಳಗಾವಿ ಜಿಲ್ಲೆಯ ಆರೋಗ್ಯ ಇಲಾಖೆ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲೆಯ ತಾಲ್ಲೂಕಾ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯಾಧಿಕಾರಿಗಳ ಹಾಗೂ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ 14 ಹುದ್ದೆಗಳು ಖಾಲಿ ಇರುತ್ತವೆ.

ಆಸಕ್ತ ಎಂ.ಡಿ/ಎಂ.ಎಸ್/ ಡಿಪ್ಲೋಮಾ ವಿದ್ಯಾರ್ಹತೆ ಮತ್ತು ಆಯಾ ಹುದ್ದೆಗೆ ತಜ್ಞತೆ ಹೊಂದಿದ ಹಾಗೂ ಎಂ.ಬಿ.ಬಿ.ಎಸ್ ವಿದ್ಯಾರ್ಹತೆ ಹೊಂದಿ ಕರ್ನಾಟಕ ಮೆಡಿಕಲ್ ಕೌನ್ಸಿಲ್ನಲ್ಲಿ ನೋಂದಣಿ ಹೊಂದಿದ ಅಭ್ಯರ್ಥಿಗಳು

ನೇರ ಸಂದರ್ಶನಕ್ಕೆ ಬೆಳಗಾವಿ ಜಿಲ್ಲಾ ಆರೋಗ್ಯ ಮತ್ತು ಕು. ಕ ಇಲಾಖೆಯ ಕಚೇರಿ ಅಥವಾ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯಲ್ಲಿ ಎಲ್ಲ ಮೂಲ ದಾಖಲಾತಿಗಳೊಂದಿಗೆ ಕಚೇರಿ ವೇಳೆಯಲ್ಲಿ ಹಾಜರಾಗಬಹುದು. ಹುದ್ದೆ ಭರ್ತಿಯಾಗುವವರೆಗೆ ಸಂದರ್ಶನ ಪ್ರಕ್ರಿಯೇ ನಿರಂತರವಾಗಿರುತ್ತದೆ.

ಮಾರ್ಗಸೂಚಿಯಂತೆ ಆಯ್ಕೆಯಾದ ತಜ್ಞ ವೈದ್ಯಾಧಿಕಾರಿಗಳಿಗೆ ಮಾಸಿಕ ರೂ.1,10,000 ಹಾಗೂ ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳಿಗೆ ರೂ.60,000 ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಅಥವಾ ಬೆಳಗಾವಿ ಆರ್.ಸಿ.ಹೆಚ್ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೇಸರಗಿ: ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಮತ್ತು ಗ್ರಾಮೀಣ ಭಾಗದ ಜೀವನೋಪಾಯವನ್ನು ಸುಧಾರಿಸುವ ಜಂಟಿ ಉದ್ದೇಶದೊಂದಿಗೆ ಐಸಿಎಆರ್-ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಮತ್ತು ಕೃಷಿ ಇಲಾಖೆಯ ಸಹಯೋಗದಲ್ಲಿ ಬೆಳಗಾವಿ ಜಿಲ್ಲೆಯ ಮುತ್ನಾಳ ಗ್ರಾಮದಲ್ಲಿ ಖೇತಿ ಬಚಾವೋ ಅಭಿಯಾನ (ಕೃಷಿ ಉಳಿಸಿ ಅಭಿಯಾನ) ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಿತು.

ಅಕ್ರಮ ಮಣ್ಣು ಗಣಿಗಾರಿಕೆ | ಕಣ್ಮುಚ್ಚಿ ಕುಳಿತ ಅಧಿಕಾರಿಗಳು

ಚಿನ್ನದಂತ ಮಣ್ಣಿಗೆ ಕನ್ನ!



ವಿದ್ಯಾರ್ಥಿಗಳಿಗೆ ತೊಂದರೆ

ಸವದತ್ತಿ ತಾಲೂಕಿನ ಗೊರವನಕೊಳ್ಳ ಉಗರಗೊಳ್ಳ ಹಿರೇಕುಂಬಿ ಚಿಕ್ಕುಂಬಿ ಗ್ರಾಮಗಳ ಹತ್ತಿರವಿರುವ ಗುಡ್ಡಗಳಲ್ಲೂ ಮಣ್ಣು ಗಣಿಗಾರಿಕೆ ಎಗ್ಗಿಲ್ಲದೇ ಸಾಗಿದೆ. ಹಗಲು ಹೊತ್ತಿನಲ್ಲಿಯೇ ಇಲ್ಲಿ ಜೆಸಿಬಿ ಮೂಲಕ ಮಣ್ಣು ಅಗೆದು ಟಿಪ್ಪರ್ ಗಳ ಮೂಲಕ ಸಾಗಿಸಲಾಗುತ್ತಿದೆ. ಐಟಿಐ ಕಾಲೇಜ್, ಆದರ್ಶ ಶಾಲೆಗೆ ವಿದ್ಯಾರ್ಥಿಗಳು ತೆರಳಲು ಈ ಚಿಕ್ಕ ರಸ್ತೆ ಒಂದೇ ಮಾರ್ಗವಾಗಿದೆ. ಇದೀಗ ಇಲ್ಲಿ ಟಿಪ್ಪರ್ ಗಳ ಹಾವಳಿ ಹೆಚ್ಚಾಗಿದ್ದು, ಶಾಲಾ ಸಮಯದಲ್ಲಿ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿದೆ.

> ತಾಲೂಕಿನಲ್ಲಿ ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ನಾವು ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಈ ಕುರಿತು ನಮ್ಮ ಗ್ರಾಮ ಆಡಳಿತ ಅಧಿಕಾರಿಗಳಿಗೆ ಹಾಗೂ ಗ್ರಾಮ ಸಹಾಯಕರಿಗೆ ತಾಲೂಕಿನಲ್ಲಿ ಎಲ್ಲಿಯೂ ಅಕ್ರಮ ಗಡಿಗಾರಿಕೆಯ ನಡೆಯದಂತೆ ನೋಡಿಕೊಳ್ಳ ಬೇಕು ಎಂದು ತಿಳಿಸಿದ್ದೇವೆ.
> ■ ಮಲ್ಲಿಕಾರ್ಜುನ್ ಹೆಗ್ಗಣ್ಣವರ್, ತಹಶೀಲ್ದಾರ್

ದಿಗಂತ ವಿಶೇಷ

▸ ಗಿರೀಶಪ್ರಸಾದ ವೇ. ರೇವಡಿ

ಸವದತ್ತಿ: ನಗರದ ಸುತ್ತ ಮುತ್ತಲಿನ ಗುಡ್ಡದ ಪರಿಸರ ಪ್ರದೇಶದಲ್ಲಿ ನಡೆಯುವ ಅಕ್ರಮ ಗಣಿಗಾರಿಕೆ ವಿರುದ್ಧ ತಾಲೂಕಾಡಳಿತದ ದಾಳಿಗಳು ನಿತ್ಯ ನಡೆಯುತ್ತಿದ್ದರೂ ಲೂಟಿಕೋರರ ವಿರುದ್ಧ ಮಾತ್ರ ಕ್ರಮವಾಗುತ್ತಿಲ್ಲ.

ಪತ್ರಿಕಾ ಪ್ರಕಟಣೆಗಳು ಬರುತ್ತಿವೆ. ಗಣಿಗಾರಿಕೆಗೆ ಬಳಸುವ ವಾಹನಗಳು ವಶಪಡಿಸಿಕೊಳ್ಳದೆ ಬಿಡುಗಡೆ ಕೂಡ ಆಗುತ್ತಿವೆ ಎನ್ನಲಾಗಿದೆ.

ಸಮೀಪದ ಯಡ್ರಾಂವಿ ರಸ್ತೆಯ ಕೆಎಚ್ ಬಿ ಕಾಲೋನಿ ಹತ್ತಿರ ಗುಡ್ಡದ ವಾರಿಯಲ್ಲಿ ಅಕ್ರಮ ಮಣ್ಣು ಗಣಿಗಾರಿಕೆ ಎಗ್ಗಿಲ್ಲದೆ ನಡೆದಿದೆ. ತಾಲೂಕು ಆಡಳಿತ ಇದನ್ನು ತಡೆಯುವಲ್ಲಿ ವಿಫಲವಾಗಿದ್ದು, ಅನುಮಾನಕ್ಕೆ ಎಡಿಮಾಡಿ ಕೊಟ್ಟಿದೆ.

ಸಂಬಂಧಪಟ್ಟ ಇಲಾಖೆಯವರಿಗೆ ಇಲ್ಲಿ ನಡೆಯುತ್ತಿರುವ ಗಣಿಗಾರಿಕೆ ಬಗ್ಗೆ ಗೊತ್ತಿದ್ದರೂ ಕೂಡ ಸುಮ್ಮನಿರುರುವುದರಿಂದ ಸಾರ್ವಜನಿಕರು ಇಲಾಖೆ ಅಧಿಕಾರಿಗಳ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಹಗಲು-ರಾತ್ರಿ ಇಲ್ಲಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಹಿಟಾಚಿ ಮತ್ತು ಜೆಸಿಬಿ, ಟಿಪ್ಪರ್ ಗಳದ್ದೇ ದರ್ಬಾರ್ ಹೆಚ್ಚಾಗಿದೆ.

ನಿರಂತರವಾಗಿ ಗರಸು ಮಣ್ಣು ಬಗೆಯಲಾಗುತ್ತಿದ್ದು, ರಸ್ತೆ ಮೂಲಕ ನವಲಗುಂದ ಮತ್ತು ನರಗುಂದ ತಾಲೂಕುಗಳಿಗೂ ಕೂಡ ಇಲ್ಲಿನ ಮಣ್ಣನ್ನೇ ಸಾಗಿಸಲಾಗುತ್ತಿದೆ.

ಪ್ರಭಾವಿಗಳ ಹೆಸರು ಹೇಳಿ ಇಲ್ಲಿ ಅಕ್ರಮವಾಗಿ ಮಣ್ಣು ಅಗೆಯಲಾಗುತ್ತಿದೆ ಎನ್ನಲಾಗುತ್ತಿದೆ. ಅತ್ಯಧಿಕ ಪ್ರಮಾಣದಲ್ಲಿ ಅಕ್ರಮ ಮಣ್ಣು ಸಾಗಿಸಲಾಗುತ್ತಿದ್ದರೂ ಅಧಿಕಾರಿಗಳು ಕಂಡು ಕಾಣದಂತೆ ಜಾಣಮೌನ ವಹಿಸಿದ್ದಾರೆ.

ಅಧಿಕ ಭಾರ ವಾಹನಗಳು ಸಾಗುತ್ತಿರುವುದರಿಂದ ರಸ್ತೆಗಳು ನಲುಗಿ ಹೋಗಿವೆ. ಅನೇಕ ಕಡೆ ಗುಂಡಿಗಳು ಬಿದ್ದು ಸಂಚಾರಕ್ಕೆ ಅಡಚಣೆಯಾಗಿದೆ ಎಂದು ವಾಹನ ಸವಾರರೂ ಆಕ್ರೋಶ ಹೊರಹಾಕುತ್ತಿದ್ದಾರೆ.

ತರಬೇತಿ ಕೌಶಲ್ಯ ವೃತ್ತಿಜೀವನದಲ್ಲಿ ಅಳವಡಿಸಿಕೊಳ್ಳಿ

ರಾಮದುರ್ಗ: ತರಬೇತಿ ಅವಧಿಯಲ್ಲಿ ಕರಗತ ಮಾಡಿಕೊಂಡ ಕೌಶಲ್ಯಗಳನ್ನು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡು ಪ್ರಾಮಾಣಿವಾಗಿ ಶ್ರದ್ಧೆಯಿಂದ ಕಾರ್ಯಚಟುವಟಿಕೆ ಮಾಡಿದರೆ ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಸಾಧ್ಯ ವಿದೆ ಎಂದು ಕೆನರಾ ಬ್ಯಾಂಕಿನ ಹಿರಿಯ ಪ್ರಬಂಧಕ ಅಜಿತ್ ರಾಜನ್ನವರ ಹೇಳಿದರು.

ಪಟ್ಟಣದ ಕರ್ನಾಟಕ ಬಂಜಾರಾ ರೂರಲ್ ಡೆವೆಲಪಮೆಂಟ ಸೊಸೈಟಿಯಲ್ಲಿ ಕೆ-ಬರ್ಡ್ಸ್ ಸಂಸ್ಥೆ ಹಮ್ಮಿಕೊಂಡ ಜವಳಿ ವಲಯದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಡಿ ಟೇಲರಿಂಗ್‌ನಲ್ಲಿ ತರಬೇತಿ ಪಡೆದ ಫಲಾನುಭವಿಗಳಿಗೆ ಕಿಟ್ ಹಾಗೂ ಪ್ರಮಾಣ ಪತ್ರ ವಿತರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.ಸ್ವ ಉದ್ಯೋಗ ಕೈಕೊಳ್ಳಲು ಬ್ಯಾಂಕಿನಿಂದ ಮುದ್ರಾ ಯೋಜನೆಯಲ್ಲಿ ಸಾಲ ಸೌಲಭ್ಯಗಳಿದ್ದು, ಶಿಶು ಹಂತದ ಸಾಲ 50 ಸಾವಿರ, ಕಿಶೋರ ಹಂತದ ಸಾಲ 5 ಲಕ್ಷ ಹಾಗೂ ತರುಣ ಹಂತದ ಸಾಲ 10 ಲಕ್ಷದ ವರೆಗೆ ನೀಡಲಾಗುತ್ತಿದೆ. ಅಗತ್ಯ ಇದ್ದರೂ ಮದ್ರಾ ಸಾಲ ಪಡೆದುಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕೆಂದು ತಿಳಿಸಿದರು.

ಧಾರವಾಡದ ಕರಕುಶಲ ಇಲಾಖೆಯ ಸಹಾಯಕ ನಿರ್ದೇಶಕ ಕಿರಣ್ ವಿ.ಎನ್ ಮುಖ್ಯ ಅತಿಥಿಯಾಗಿ ಮಾತನಾಡಿ, ಜವಳಿ ಇಲಾಖೆಯಿಂದ ಸ್ವ ಉದ್ಯೋಗ ತರಬೇತಿ ನೀಡಲಾಗುತ್ತಿದೆ. ಮುದ್ರಾ ಯೋಜನೆಯಿಂದ 50 ಸಾವಿರ ಸಾಲ ಪಡೆದುಕೊಂಡರೆ 10 ಸಾವಿರ ಸಬ್ಸಿಡಿ ಲಭಿಸುತ್ತದೆ. ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಅಮೂಲ್ಯ ಆರ್ಥಿಕ ಸಾಕ್ಷರತಾ ಕೇಂದ್ರದ ಸಮಾಲೋಚಕ ಮಲ್ಲಿಕಾರ್ಜುನರಡ್ಡಿ ಗೊಂದಿ ಅವರು ಕೇಂದ್ರ ಸರಕಾರ ಸಾಮಾಜಿಕ ಸುರಕ್ಷಾ ವಿಮಾ ಯೋಜನೆಗಳ ಹಾಗೂ ಕೆನರಾ ಬ್ಯಾಂಕಿನ ಕಾನ್ಸರ್ ಕೇರ್ ಏಂಜಿಲ್ ಖಾತೆಯ ಬಗ್ಗೆ ಮಾಹಿತಿ ನೀಡಿದರು.

ಪಿ.ಎಸ್.ಐ ಸವಿತಾ ಮುನ್ಯಾಳ ಅವರು ಮಹಿಳಾ ಸಬಲೀಕರಣ ಬಗ್ಗೆ ಮಾತನಾಡಿದರು. ಕೆ.ಬರ್ಡ್ಸ್ ಸಂಸ್ಥೆಯ ಅಧ್ಯಕ್ಷ ಕಾಂತೇಶ ರಾಠೋಡ ಅಧ್ಯಕ್ಷತೆ ವಹಿಸಿ ಸಂಸ್ಥೆಯ ವರದಿ ಮಂಡಿಸಿದರು. ಕೆನರಾ ಬ್ಯಾಂಕ ಕೃಷಿ ಅಭಿವೃದ್ಧಿ ಅಧಿಕಾರಿ ಕಾಶಿನಾಥ ಬುತಾಳೆ, ಕರಕುಶಲ ಇಲಾಖೆಯ ಅಧಿಕಾರಿ ಶಶಾಂಕ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.ಮಂಜುಳಾ ಬೆಟಗೇರಿ ಸ್ವಾಗತಿಸಿದರು. ರಕ್ಷಿತಾ ಬೆಣ್ಣಿ ನಿರೂಪಿಸಿದರು. ಕವಿತಾ ರಾಠೋಡ ವಂದಿಸಿದರು.



▸▸ ಟೇಲರಿಂಗ್ ತರಬೇತಿ ಪೂರೈಸಿದ ಫಲಾನುಭವಿಗಳಿಗೆ ಕಿಟ್ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು.

ಅವಧಿ ಮುಗಿದ ಮಾಲೀಕರಿಗೆ ನೋಟಿಸ್

▸▸ ಲೀಸ್ ಅವಧಿ ಮುಗಿದ ಪಾಲಿಕೆ ಆಸ್ತಿಗಳ ಕುರಿತ ಸಭೆ

▸▸ ಮೇಯರ್ ಸೂಚನೆ

ಬೆಳಗಾವಿ : ಲೀಸ್ ಅವಧಿ ಮುಗಿದ ಮಹಾನಗರ ಪಾಲಿಕೆ ಆಸ್ತಿಗಳ ಕುರಿತು ಮೇಯರ್ ಪ್ರೀತಿ ಕಾಮಕರ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಸಭೆಯಲ್ಲಿ ಉಪಮೇಯರ್ ಹಣಮಂತ ಕೊಂಗಾಲಿಯವರು ಮಾತನಾಡಿ ಅವಧಿ ಮುಗಿದಿದ್ದರೂ ಬಾಡಿಗೆದಾರರು ಆಸ್ತಿಗಳನ್ನು ಉಪಯೋಗಿಸುತ್ತಿರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ ಈ ಕುರಿತು ಪಾಲಿಕೆ ಕಠಿಣ ಕ್ರಮ ಕೈಗೊಳ್ಳುವ ಅಗತ್ಯ ವಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕಂದಾಯ ವಿಭಾಗದ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ ಅವರು, ಲೀಸ್ ಅವಧಿ ಮುಗಿದ ಆಸ್ತಿಗಳ ಕುರಿತು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೇಯರ್ ಪ್ರೀತಿ ಕಾಮಕರ ಅವರು, ಲೀಸ್ ಅವಧಿ ಮುಗಿದ ಆಸ್ತಿಗಳ ಮಾಲೀಕರಿಗೆ ನೋಟಿಸ್ ನೀಡಿ ಮುಗಿದ ಅವಧಿಯ ಬಾಡಿಗೆ ಮತ್ತು ದಂಡವನ್ನು ಪಡೆದುಕೊಳ್ಳಬೇಕು. ಅಲ್ಲದೆ ಪಾಲಿಕೆಗೆ ಮರಳಿ ಪಡೆದು ಪ್ರಸ್ತುತ ಬಾಡಿಗೆ ದರವನ್ನು ಮರು ನಿಗದಿ ಪಡಿಸಿ ಅರ್ಹ ಬಾಡಿಗೆದಾರಿಗೆ ನೀಡಬೇಕು. ಈ ಕುರಿತು ನಿಯಮಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಮೇಯರ್ ಸೂಚಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದತೆರಿಗೆ, ಹಣಕಾಸು ಹಾಗೂ ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ, ರೇಖಾ ಹೂಗಾರ,ನಗರಸೇವಕರಾದ ರವಿ ಧೋತ್ರೆ, ಆನಂದ ಚೌಹಾಣ್, ರಾಜಶೇಖರ್ ಡೋಣಿ, ನಿತಿನ್ ಜಾಧವ್, ಶ್ರೀಶೈಲ್ ಕಾಂಬಳೆ, ಅವರು ವಿವಿಧ ಸಲಹೆ ಸೂಚನೆಗಳನ್ನು ನೀಡಿದರು.



ಎನ್‌ಎಮ್‌ಎಮ್‌ಎಸ್ ಪರೀಕ್ಷೆ | ಉತ್ತಮ ಅಂಕ

ಸರ್ಕಾರಿ ಶಾಲೆಯ 6 ವಿದ್ಯಾರ್ಥಿಗಳ ಸಾಧನೆ

ಗೋಕಾಕ: ಕೇಂದ್ರ ಸರಕಾರವು ನೀಡುವ ವಿದ್ಯಾರ್ಥಿ ವೇತನದ ಎನ್‌ಎಮ್‌ಎಮ್‌ಎಸ್ ಪರೀಕ್ಷೆಯಲ್ಲಿ ಗೋಕಾಕ ತಾಲೂಕಿನ ಬೆಟಗೇರಿ ವಿವಿಡಿ ಸರಕಾರಿ ಪ್ರೌಢ ಶಾಲೆಯ 6 ಜನ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆದು ಉತ್ತೀರ್ಣರಾಗಿ ಶಿಷ್ಯವೇತನ ಪಡೆಯಲು ಅರ್ಹತೆಗೆ ಪಾತ್ರರಾಗಿದ್ದಾರೆ.

2025-26ನೇ ಸಾಲಿನಲ್ಲಿ ನಡೆದ ಎನ್‌ಎಮ್‌ಎಮ್‌ಎಸ್ ಪರೀಕ್ಷೆಯಲ್ಲಿ ಸ್ಥಳೀಯ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಾದ ಸ್ವಾತಿ ಪಾಟೀಲ(107)ಅಂಕ, ಮಹಾದೇವಿಕೋಣಿ(102) ಅಂಕ, ಪಲ್ಲವಿ ಪಾಟೀಲ(101)ಅಂಕ, ಅನುಶ್ರೀ ಐದುಡ್ಡಿ(89) ಅಂಕ, ಶಾಜಿಯಾ ಮಿರ್ಜಾನಾಯ್ಕ (86)ಅಂಕ, ಕಾವೇರಿ ಯರಕನ್ನವರ(84)ಅಂಕ ಪಡೆದು ಉತ್ತೀರ್ಣರಾಗಿ ಶಿಷ್ಯವೇತನ ಪಡೆಯಲು



ಅರ್ಹತೆ ಪಡೆದುಕೊಂಡಿದ್ದಾರೆ. ಈ ಬಾರಿ ಶಾಲೆಯ 6 ಜನ ವಿದ್ಯಾರ್ಥಿನಿಯರು ಮೇಲುಗೈ ಸಾಧಿಸಿದ್ದಾರೆ. ವಿವಿಡಿ ಸರಕಾರಿ ಪ್ರೌಢ ಶಾಲೆಯ 21 ಜನ ವಿದ್ಯಾರ್ಥಿಗಳು ಪಾಸಾಗಿ ಶಿಷ್ಯ ವೇತನಕ್ಕೆ ಅರ್ಹರಾಗಿ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದ್ದು ಇತಿಹಾಸದ ಸಂಗತಿ. ಬೆಟಗೇರಿ ವಿವಿಡಿ ಸರಕಾರಿ ಪ್ರೌಢ ಶಾಲೆಯ 8ನೇ ತರಗತಿಯ ಹಲವಾರು ಜನ ವಿದ್ಯಾರ್ಥಿಗಳು ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ಸ್ಕಾಲರ್ಶಿಪ್ ಎಕ್ಸಾಮ್‌ನಲ್ಲಿ ಪ್ರತಿ ವರ್ಷ ಉತ್ತೀರ್ಣರಾಗಿ ಶಿಷ್ಯವೇತನ ಪಡೆಯಲು ಅರ್ಹರಾಗುತ್ತಿರುವ ಸಂಗತಿಯು ಸ್ಥಳೀಯ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ಹಾಗೂ ಬೆಟಗೇರಿ ಗ್ರಾಮದ ಘನತೆ ಮತ್ತು ಗೌರವ ಹೆಚ್ಚಿಸಿದೆ.

ಇಲ್ಲಿಯ ವಿವಿಡಿ ಸರಕಾರಿ ಪ್ರೌಢ ಶಾಲೆಯ 8ನೇ ತರಗತಿ ವಿದ್ಯಾರ್ಥಿಗಳು ಎನ್‌ಎಮ್‌ಎಮ್‌ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಿಷ್ಯ ವೇತನ ಪಡೆಯಲು ಅರ್ಹರಾದ ವಿದ್ಯಾರ್ಥಿಗಳ ಸಾಧನೆಗೆ ಹಾಗೂ ಪರೀಕ್ಷೆಯಲ್ಲಿ ಪಾಸಾಗುವಂತೆ ಮಾರ್ಗದರ್ಶನ ನೀಡಿದ ಶಾಲೆಯ ಗುರು ಬಳಗಕ್ಕೆ ಶಾಲೆಯ ಎಸ್‌ಡಿಎಮ್‌ಸಿ ಅಧ್ಯಕ್ಷ ರಾಮಣ್ಣ ನೀಲಣ್ಣವರ ಹಾಗೂ ಸದಸ್ಯರು, ಸ್ಥಳೀಯ ಶಿಕ್ಷಣ ಪ್ರೇಮಿಗಳು ಮೆಚ್ಚುಗೆ ವ್ಯಕ್ತಪಡಿಸಿ ಸಾಧನೆ ಶ್ಲಾಘಿಸಿದ್ದಾರೆ.

2.52 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ

ಬೈಲಹೊಂಗಲ, ಜೂ.11: ಬೈಲಹೊಂಗಲ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ ಶಾಸಕ ಮಹಾಂತೇಶ ಕೌಜಲಗಿ ಅವರು 2.52 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುರುವಾರ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಮಹಾಂತೇಶ ಕೌಜಲಗಿ, ಈ ಯೋಜನೆಯಡಿ ಪಾದಚಾರಿ ಮಾರ್ಗ ನಿರ್ಮಾಣ, ಚರಂಡಿ ಅಭಿವೃದ್ಧಿ, ಹಿರಿಯ ನಾಗರಿಕರಿಗಾಗಿ ಶೆಡ್ ನಿರ್ಮಾಣ, ಉದ್ಯಾನ ಅಭಿವೃದ್ಧಿ ಹಾಗೂ ಬೀದಿ ದೀಪಗಳ ಅಳವಡಿಕೆ ಸೇರಿದಂತೆ ಹಲವು ಜನೋಪಯೋಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಳು ಪೂರ್ಣಗೊಂಡ ಬಳಿಕ ಸಾರ್ವಜನಿಕರಿಗೆ ಉತ್ತಮ ಮೂಲಸೌಕರ್ಯ ಸೌಲಭ್ಯಗಳು ದೊರೆಯಲಿದ್ದು, ಪಟ್ಟಣದ ಸೌಂದರ್ಯ ಮತ್ತು ಸ್ವಚ್ಛತೆ ಹೆಚ್ಚಳವಾಗಲಿದೆ , ನಮ್ಮ ಬೈಲಹೊಂಗಲವನ್ನು ಇನ್ನಷ್ಟು ಸುಂದರ, ಸ್ವಚ್ಛ ಹಾಗೂ ಸುಸಜ್ಜಿತ ನಗರವನ್ನಾಗಿಸುವ ಸಂಕಲ್ಪದೊಂದಿಗೆ ಅಭಿವೃದ್ಧಿ ಕಾರ್ಯಗಳನ್ನು ನಿರಂತರವಾಗಿ ಮುಂದುವರಿಸಲಾಗುತ್ತಿದೆ. ಜನರ ಅಗತ್ಯಗಳಿಗೆ ಸ್ಪಂದಿಸುವ ರೀತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ನಗರಸಭೆಯ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ, ನಗರಸಭೆಯ ಸಿಬ್ಬಂದಿ ವರ್ಗದವರು, ಪಟ್ಟಣದ ಗುರುಹಿರಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಜಿಲ್ಲಾಧ್ಯಕ್ಷರಾಗಿ ಡಾ.ನಾಗರಾಜ ಆಯ್ಕೆ



ಬೆಳಗಾವಿ: ಜಿಲ್ಲೆಯ ಶಿವಬಸವ ನಗರದಲ್ಲಿರುವ ಪ್ರಭುದೇವ ಪದವಿಪೂರ್ವ ಮಹಾ ವಿದ್ಯಾಲಯದಲ್ಲಿ ಗುರುವಾರ ಮಹಾಮಂಡಳದ ಪದವಿಪೂರ್ವ ಕಾಲೇಜುಗಳ ಜಿಲ್ಲಾ ಪದಾಧಿಕಾರಿಗಳ ಸಭೆ ನಡೆಯಿತು.

ಈ ಸಭೆಯಲ್ಲಿ ಸಂಘಟನೆಯ ಜಿಲ್ಲಾ ಅಧ್ಯಕ್ಷರಾಗಿ ಡಾ. ನಾಗರಾಜ ಮರೆಣ್ಣವರ ಅವರನ್ನು ನೂತನವಾಗಿ ಆಯ್ಕೆ ಮಾಡಲಾಯಿತು. ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಡಾ. ನಾಗರಾಜ ಮರೆಣ್ಣವರ ಅವರನ್ನು ಸಭೆಯಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪದವಿಪೂರ್ವ ಮಹಾ ವಿದ್ಯಾಲಯಗಳ ಎಲ್ಲ ನೌಕರರ ಹಿತಾಸಕ್ತಿಗಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರು. ಜೊತೆಗೆ ಸಂಘದ ಎಲ್ಲ ಸದಸ್ಯರ ಸಹಕಾರದೊಂದಿಗೆ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸಲು ಶ್ರಮಿಸುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಅನುದಾನಿತ ಶಾಲಾ-ಕಾಲೇಜುಗಳ ನೌಕರ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ಹಳಿಂಗಳಿ ಉಪಸ್ಥಿತರಿದ್ದರು.

ಸಂಜಯ್ ಚಿಗರಿ, ಸುರೇಶ್ ಚೌಗುಲಾ, ದಯಾನಂದ ಮಗದುಮ್, ಮನೋಹರ್ ಉಳ್ಳಾಗಡ್ಡಿ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು. ಎನ್. ಬಿ. ಶಿರಸ್ಯಾಡ, ಆರ್. ಜಿ. ಮಠ ಉಪಾಧ್ಯಕ್ಷರಾಗಿ, ಶ್ರೀಕಾಂತ ಶಾನವಾಡ ಕಾರ್ಯದರ್ಶಿಯಾಗಿ, ವೈ. ಎಂ. ಪಾಟೀಲ ಖಜಾಂಚಿಯಾಗಿ, ಕೆ. ಶಾಮಪ್ರಸಾದ ಸಂಘಟನಾ ಕಾರ್ಯದರ್ಶಿಯಾಗಿ ಹಾಗೂ ಕೆ. ಬಿ. ಮೇಳೇದ ಕಾನೂನು ಸಲಹೆಗಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಡಾ. ನಾಗರಾಜ್ ಮರೆಣ್ಣವರ, ಪ್ರಭು ಶಿವನಾಯಕರ ಹಾಗೂ ಬಿ. ಎಸ್. ಬುಳ್ಳಾರ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಸುಪ್ರೀಂ ಕೋರ್ಟ್ ವಕಾಲತ್ತು ಕುರಿತು ವಿಶೇಷ ಉಪನ್ಯಾಸ

ವೃತ್ತಿಪರ ಕೌಶಲ್ಯ ಬೆಳೆಸಿಕೊಳ್ಳಿ

ಬೆಳಗಾವಿ: ಕರ್ನಾಟಕ ಲಾ ಸೊಸೈಟಿಯ ರಾಜಾ ಲಖಮಗೌಡ ಕಾನೂನು ಕಾಲೇಜು ತನ್ನ ಇಂಟರ್ನಲ್ ಕ್ವಾಲಿಟಿ ಅಶ್ಯೂರನ್ಸ್ ಸೆಲ್ ಮತ್ತು ಇಂಟರ್‌ಶಿಪ್ ಮತ್ತು ಪ್ಲೇಸ್ಮೆಂಟ್ ಸೆಲ್ ಮೂಲಕ ಅಪೆಕ್ಸ್‌ನಲ್ಲಿ ವಕಾಲತ್ತು: ಸುಪ್ರೀಂ ಕೋರ್ಟ್‌ನಲ್ಲಿ ವೃತ್ತಿ ಜೀವನವನ್ನು ರೂಪಿಸುವುದು ಎಂಬ ಶೀರ್ಷಿಕೆಯಡಿ ವಿಶೇಷ ಉಪನ್ಯಾಸವನ್ನು ಆಯೋಜಿಸಿತ್ತು.



ಕಾರ್ಯಕ್ರಮದಲ್ಲಿ ನವದೆಹಲಿಯ ಸುಪ್ರೀಂ ಕೋರ್ಟ್ ನ ಅಡ್ವೋಕೇಟ್ ಚಾರುದತ್ತ ಮಹೀಂದ್ರಕರ ಅವರನ್ನು ಸಂಪನ್ಮೂಲ ವ್ಯಕ್ತಿಯನ್ನಾಗಿ ಆಹ್ವಾನಿಸಲಾಗಿತ್ತು. ಸುಪ್ರೀಂ ಕೋರ್ಟ್ ಮುಂದೆ ವಿಷಯಗಳನ್ನು ದಾಖಲಿಸುವ ವಿಧಾನವನ್ನು ಮತ್ತು ವಕೀಲಿವೃತ್ತಿಯಲ್ಲಿ ಪರಿಣಿತಿಯನ್ನು ಗಳಿಸಲು ಬೇಕಾಗುವ ವೃತ್ತಿಪರ ಕೌಶಲ್ಯಗಳನ್ನು ಚಾರುದತ್ತ ಮಹೀಂದ್ರಕರ ವಿವರಿಸಿದರು.

ಕಾನೂನು ಸಂಶೋಧನೆ, ಪ್ರಬಂಧ ರಚನೆ, ನೈತಿಕತೆ, ಆತ್ಮಶಕ್ತಿ ಮತ್ತು ನಿರಂತರ ಅಧ್ಯಯನದ ಮಹತ್ವದ ಮೇಲೆ ಒತ್ತಿ ಹೇಳಿದರು. ಸುಪ್ರೀಂ ಕೋರ್ಟ್ ಎದುರು ತಮ್ಮ ಅಭ್ಯಾಸದ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳು ಸಮರ್ಪಣೆಯಿಂದ ತಮ್ಮ ಗುರಿಗಳನ್ನು ಸಾಧಿಸುವಂತೆ ಪ್ರೋತ್ಸಾಹಿಸಿದರು.

ಪ್ರಭಾರ ಪ್ರಾಚಾರ್ಯ ಡಾ. ಡಿ. ಪ್ರಸನ್ನಕುಮಾರ, ಕಾಲೇಜಿನ ಆಡಳಿತಮಂಡಳಿ ಚೇರ್ಮನ್ ಆರ್. ಎಸ್. ಮುತಾಲಿಕ್ ಅವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಕಾರ್ಯಕ್ರಮ ನಡೆಯಿತು. ಡಾ. ಸಮೀನಾ ಉಪಸ್ಥಿತರಿದ್ದರು. ಈ ಕಾರ್ಯಕ್ರಮ ಪ್ರೊ. ಅಶ್ವಿನಿ ಪರಬ್ ಹಾಗೂ ಪ್ರೊ. ಜ್ಯೋತಿ ಕುಲಕರ್ಣಿ ಅವರ ಸಂಯೋಜನೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಪಾಲಿಕೆಯ ಪಿಐಡಿ ಇನ್ಮುಂದೆ ಕಾಗದರಹಿತ

ಬೆಳಗಾವಿ : ಮಹಾನಗರ ಪಾಲಿಕೆ ಕಂದಾಯ ಶಾಖೆಯ ದಾಖಲೆಗಳ ಕಾರ್ಯ ಚಟುವಟಿಕೆಗಳು ಇನ್ನು ಮುಂದೆ ಕಾಗದ ರಹಿತವಾಗಲಿವೆ ಎಂದು ಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ ಹೇಳಿದರು.

ಪಾಲಿಕೆಯ ಕಂದಾಯ ಶಾಖೆಯ ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮೇಯರ್, ಉಪಮೇಯರ್, ನಗರ ಸೇವಕರು ಹಾಗೂ ಆಯುಕ್ತರ ಸಹಕಾರದಿಂದ ಪಾಲಿಕೆಯ ಕಂದಾಯ ವಾರ್ಡ್ ಗಳು ಈಗಾಗಲೇ ಚುನಾವಣಾ ವಾರ್ಡ್ ಗಳಾಗಿ ಪರಿವರ್ತನೆಯಾಗಿವೆ. ಈ ಮೊದಲಿದ್ದ ಕಂದಾಯ ಶಾಖೆಯ ಸಿಬ್ಬಂದಿಯನ್ನು ಚುನಾವಣಾ ವಾರ್ಡುಗಳಿಗೆ ಮರುನಿಯುಕ್ತಿ ಮಾಡಿ ಕಾರ್ಯಗಳ ಹಂಚಿಕೆ ಮಾಡಲಾಗಿದೆ. ಇನ್ನು ಮುಂದೆ ಚುನಾವಣಾ ವಾರ್ಡ್ ಗಳ ತೆರಿಗೆ, ಪಿಐಡಿ,ಮ್ಯೂಟೇಶನ್ ಮುಂತಾದವು ಕಾಗದರಹಿತವಾಗಿ ಆನ್ ಲೈನ್ ಮೂಲಕ ನಡೆಯಲಿವೆ. ಈ ಹಿನ್ನೆಲೆಯಲ್ಲಿ ಎಲ್ಲ ವಲಯ ಆಯುಕ್ತರು, ಕಂದಾಯ ಅಧಿಕಾರಿಗಳು, ಕರ ವಸೂಲಿಗಾರರು ಮುಂತಾದ ಸಿಬ್ಬಂದಿಗೆ ಪ್ರಾತ್ಯಕ್ಷಿಕೆ ಸಹಿತ ತಾಂತ್ರಿಕ ತರಬೇತಿ ನೀಡಿ ಸಜ್ಜುಗೊಳಿಸಲಾಗುತ್ತಿದೆ ಎಂದು ಹೇಳಿದರು. ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ ಟಿ. ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು. ಪಾಲಿಕೆಯ ಕಂದಾಯ ಶಾಖೆಯ ಎಲ್ಲಾ ಹಂತದ ಸಿಬ್ಬಂದಿ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.



ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ: ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ಫಲಾನುಭವಿ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಎಲ್ಲ ವರ್ಗದ ತೋಟಗಾರಿಕೆ ಬೆಳೆ ಬೆಳೆಯುವ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಉತ್ಪನ್ನಗಳ ಶೇಖರಣೆ ಮತ್ತು ಸಾಗಾಣಿಕೆಗೆ ಅನುಕೂಲವಾಗುವಂತೆ ಇಲಾಖೆಯಿಂದ ಅನುಮೋದಿತ ಮಾರಾಟಗಾರರಿಂದ ಪ್ಲಾಸ್ಟಿಕ್ ಕ್ರೇಟ್ಸ್ ಖರಿಧಿಸಲು ಸಹಾಯಧನ ನೀಡಲಾಗುವುದು, ಕ್ಷೇತ್ರ ಮಟ್ಟದಲ್ಲಿ ತೋಟಗಾರಿಕೆ ಉತ್ಪನ್ನಗಳ ವಿಂಗಡಣೆ, ಪ್ಯಾಕಿಂಗ್ ಮತ್ತು ಸಂಗ್ರಹಣೆ ಮಾಡಲು ಪಾರ್ಮಗೇಟ್ ಗಳನ್ನು ನಿರ್ಮಿಸಲು ಸಹಾಯಧನ ನೀಡಲಾಗುವುದು,ಅದೇ ರೀತಿಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಲಘು ಪೋಷಕಾಂಶಗಳನ್ನು ನೀಡಲು ಇಲಾಖೆಯಿಂದ ಶೇಕಡಾ 100ರಷ್ಟು ಸಹಾಯಧನದಲ್ಲಿ ಲಘು ಪೋಷಕಾಂಶಗಳ ಮಿಶ್ರಣವನ್ನು ವಿತರಿಸಲಾಗುವುದು ಹಾಗೂ ರಾಜ್ಯ ವಲಯದ ಜೇನು ಸಾಕಾಣಿಕೆ ಯೋಜನೆಯಡಿ ಶೇಕಡಾ 75 ರಷ್ಟು ಸಹಾಯಧನದಡಿ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬವನ್ನು ನೀಡಲಾಗುವುದು.ತಾಲೂಕಿಗೆ ನಿಗಧಿಪಡಿಸಿದ ಗುರಿ ಮತ್ತು ಅನುದಾನ ಲಭ್ಯವಿರುವವರೆಗೆ ಅರ್ಜಿಗಳನ್ನು ಸ್ವೀಕರಿಸಿ ಅರ್ಹತೆ ಹಾಗೂ ಜೇಷ್ಠತಾ ಆದಾರದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಅಗತ್ಯ ದಾಖಲಾತಿಗಳೊಂದಿಗೆ 30 ಜೂನ್ ರೊಳಗೆ ಅರ್ಜಿ ಸಲ್ಲಿಸಬಹುದು.ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತೋಟಗಾರಿಕೆ ಇಲಾಖೆಯ ಹೋಬಳಿ ಮಟ್ಟದ ಅಧಿಕಾರಿಗಳನ್ನು ಅಥವಾ ತಾಲ್ಲೂಕು ತೋಟಗಾರಿಕೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ರಾಯಬಾಗ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರೋಶಿ ಗ್ರಾಮದಲ್ಲಿ ಮನೆ ಬೀಗ ಮುರಿದು ಕಳ್ಳತನ



ಚಿಕ್ಕೋಡಿ: ತಾಲೂಕಿನ ಕರೋಶಿ ಗ್ರಾಮದಲ್ಲಿ ರಾಜು ಬಡಿಗೇರ ಅವರ ಮನೆಯ ಬೀಗ ಮುರಿದು 30 ಗ್ರಾಂ ಚಿನ್ನಾಭರಣ, 2 ಸಾವಿರ ನಗದು ಹಾಗೂ ಇನ್ನಿತರೆ ವಸ್ತುಗಳನ್ನು ಕಳ್ಳತನ ಮಾಡಿದ ಘಟನೆ ನಡೆದಿದೆ. ರಾಜು ಬಡಿಗೇರ ಅವರು ಊರಿಗೆ ಹೋಗಿದ್ದಾಗ ಕಳ್ಳರು ಮನೆಯ ಬೀಗ ಮುರಿದು ಕಳ್ಳತನ ಮಾಡಿದ್ದಾರೆ. ಮನೆಯ ಮಾಲೀಕರು ಊರಿನಿಂದ ಮರಳಿ ಬಂದಾಗ ಗುರುವಾರ ಘಟನೆ ಬೆಳಕಿಗೆ ಬಂದಿದ್ದು, ಘಟನಾ ಸ್ಥಳಕ್ಕೆ ಚಿಕ್ಕೋಡಿ ಪಿಎಸ್ಐ ಬಸಗೌಡ ನೇರ್ಲಿ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸತ್ಸಂಗ ಸಭೆ ನಾಳೆ



ಹಾರೂಗೇರಿ: ಪಟ್ಟಣದ ಜನತಾ ಸಹಕಾರ ಬ್ಯಾಂಕಿನ ಸಭಾಭವನದಲ್ಲಿ ಜೂ.14ರಂದು ಬೆಳಿಗ್ಗೆ 11 ಗಂಟೆಗೆ ಮಾತೋಶ್ರೀ ಲಿಂ ಮಲ್ಲವ್ವಾ ರಾಮಪ್ಪ ಗುಡಸಿ ಅವರ 2ನೇಯ ಪುಣ್ಯಸ್ಮರಣೆ ನಿಮಿತ್ತ ಮಾಸಿಕ ಸತ್ಸಂಗ ಸಭೆ ಹಾಗೂ ದ್ವಿತೀಯ ಶರಣೋತ್ಸವ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ 101 ಹಣ್ಣಿನ ಸಸಿಗಳನ್ನು ವಿತರಿಸಲಾಗುವುದು.ಈ ಶರಣೋತ್ಸವದಲ್ಲಿ ವಿಶ್ವ ವಿಖ್ಯಾತ ಪ್ರವಚನ ಪಟುಗಳಾದ ಶೇಗುಣಸಿ ವಿರಕ್ತ ಮಠದ ಡಾ.ಮಹಾಂತ ಪ್ರಭು ಮಹಾಸ್ವಾಮಿಗಳಿಂದ ಪ್ರವಚನ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ ಇಂಚಗೇರಿ ಸಂಪ್ರದಾಯದ ಪ್ರದೀಪ ಘಂಟಿ ಮಹಾರಾಜರು ಮಾತೃದೇವೋಭವ ವಿಷಯದ ಮೇಲೆ ಪ್ರವಚನ ನೀಡುವರು. ಶರಣ ಐ.ಆರ್. ಮಠಪತಿ ಅವರಿಂದ ಅನುಭಾವ ,ಶರಣೆ ಅನುಸೂಯಾ ಮುಳವಾಡ ಅವರ ಉಪಸ್ಥಿತಿ ಹಾಗೂ ನಿವೃತ್ತರಾದ ಆರ್. ಟಿ. ಮಾಳಿ, ಡಿ.ಎಸ್. ಡಿಗ್ರಜ್ ಅವರಿಗೆ ಸತ್ಕಾರ ನಡೆಯಲಿದೆ ಎಂದು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಡಾ. ಚಂದ್ರಶೇಖರ ಗುಡಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಇಸ್ಮಾಯಿಲ್ ಬಾಗವಾನ



ಕುಡಚಿ: ಪಟ್ಟಣದ ಮಿಲನ ಹೊಟೇಲ್ ಮಾಲೀಕ ಸರಳ ಸಜ್ಜನಿಕೆ ವ್ಯಕ್ತಿ ಇಸ್ಮಾಯಿಲ್ ಅಹ್ಮದ್ ಬಾಗವಾನ (35) ನಿಧನರಾಗಿದ್ದಾರೆ. ಮೃತರು ತಾಯಿ, ಎರಡು ಜನ ಮಕ್ಕಳು, ಅಣ್ಣ ನೂರಹ್ಮದ ಬಾಗವಾನ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಗೋಕಾಕ: ಲೋಕೋಪಯೋಗಿ ಇಲಾಖೆಯಿಂದ 2.50ಕೋಟಿ ರೂಗಳ ವೆಚ್ಚದಲ್ಲಿ ಗೋಕಾಕ, ಕಡಬಗಟ್ಟಿ ರಸ್ತೆ ನವೀಕರಣ ಕಾಮಗಾರಿಗೆ ಯುವ ಧುರೀಣ ಅಮರನಾಥ ಜಾರಕಿಹೊಳಿ ಶುಕ್ರವಾರದಂದು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರಾಮಚಂದ್ರ, ಅವಕಾಡೆ, ಶಾಸಕರ ಆಪ್ತಸಹಾಯಕ ಸುರೇಶ ಸನದಿ, ಗುತ್ತಿಗೇದಾರ ಕಿರಣ ಗೋಣಿ, ಜನಪ್ರತಿನಿಧಿಗಳು, ಮುಖಂಡರು ಸೇರಿದಂತೆ ಅನೇಕರು ಇದ್ದರು.

160 ಜನ ಅಗ್ನಿವೀರರಿಗೆ ಸನ್ಮಾನ

ಯರಗಟ್ಟಿ: ಪಟ್ಟಣದ ಎಸ್ ಜಿ ಕೆ ಡಿಫೆನ್ಸ್ ಅಕಾಡೆಮಿಯಿಂದ 160 ಅಗ್ನಿವೀರ ಆಯ್ಕೆಯಾಗಿದ ಯುವಕರನ್ನು ಶುಕ್ರವಾರ ಅಕಾಡೆಮಿಯಿಂದ ಜೈ ಜೈವಾನ್ ಜೈ ಕಿಸಾನ್ ವಿವಿಧೋದ್ದೇಶದ ಸಹಕಾರಿ ಸಂಘದಲ್ಲಿ ಸನ್ಮಾನಿಸಲಾಯಿತು. ಮಾಜಿ ಸೈನಿಕ ಕುಮಾರ ಹಿರೇಮಠ ಮಾತನಾಡಿ, ಕೇಂದ್ರ ಸರ್ಕಾರ ದೇಶಪ್ರೇಮವನ್ನು ಬಿಂಬಿಸುವ ಮತ್ತು ಯುವಕರನ್ನು ಉತ್ತೇಜಿಸುವ ಅತ್ಯುತ್ತಮ ಯೋಜನೆ ಅಗ್ನಿವೀರು ಕಾರ್ಯಕ್ರಮವಾಗಿದೆ.ಸ್ಥಳೀಯ ಯುವಕರ ಸಾಧನೆಯನ್ನು ಗುರುತಿಸಿ ಗೌರವಿಸುವುದು, ಅವರಿಗೆ ಸಮಾಜದಲ್ಲಿ ಸಿಗುವ ಮನ್ನಣೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.ಎಸ್ ಬಿ ಫೌಂಡೇಶನ್ ಅಧ್ಯಕ್ಷ ಸುರೇಶ ಭಜಂತ್ರಿ, ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದ್ದು, ಸದೃಢ, ಪ್ರಗತಿಪರ ಮತ್ತು ಸ್ವಾವಲಂಬಿ ಭಾರತ ನಿರ್ಮಾಣದಲ್ಲಿ ಯುವಕರ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ಅವರ ನವೀನ ಚಿಂತನೆ, ಅಪಾರ ಶಕ್ತಿ ಮತ್ತು ದೇಶಭಕ್ತಿಯು ದೇಶದ ಸರ್ವತೋಮುಖ ಅಭಿವೃದ್ಧಿಗೆ ಬುನಾದಿಯಾಗಿದೆ ಎಂದು ಹೇಳಿದರು.ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಯುವ ಮುಖಂಡ ಸತೀಶ ತಡಸಲೂರ, ಜಿ.ರತ್ನಾಕರ ಶೆಟ್ಟಿ, ಮಾಜಿ ಸೈನಿಕರಾದ ರಾಜೇಶ ಕೊಜಾರ, ಮಹಾಂತೇಶ ಚನ್ನಮೇತ್ರಿ, ಎಸ್ ಜಿ ಕೆ ಅಕಾಡೆಮಿಯ ಕೊಚ್ ಕೊಟ್ರೇಶ ಎಚ್, ರಫೀಕ ಡಿಕೆ, ಚಿಂದಬರ ಕಟ್ಟಿಮನಿ, ಫಾರುಕ್ ಅತ್ತಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಯರಗಟ್ಟಿ: ಪಟ್ಟಣದ ಎಸ್ ಜಿ ಕೆ ಡಿಫೆನ್ಸ್ ಅಕಾಡೆಮಿಯಿಂದ 160 ಅಗ್ನಿವೀರ ಆಯ್ಕೆಯಾಗಿದ ಯುವಕರನ್ನು ಶುಕ್ರವಾರ ಅಕಾಡೆಮಿಯಿಂದ ಜೈ ಜೈವಾನ್ ಜೈ ಕಿಸಾನ್ ವಿವಿಧೋದ್ದೇಶದ ಸಹಕಾರಿ ಸಂಘದಲ್ಲಿ ಸನ್ಮಾನಿಸಲಾಯಿತು. ಮಾಜಿ ಸೈನಿಕ ಕುಮಾರ ಹಿರೇಮಠ, ಸುರೇಶ ಭಜಂತ್ರಿ, ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಯುವ ಮುಖಂಡ ಸತೀಶ ತಡಸಲೂರ, ಜಿ.ರತ್ನಾಕರ ಶೆಟ್ಟಿ ಸೇರಿದಂತೆ ಇತರರು ಇದ್ದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲ ಇಲಾಖೆಗಳ ಸಮನ್ವಯ ಅಗತ್ಯ

ಬೆಳಗಾವಿ : ಬಾಲಕಾರ್ಮಿಕ ಪದ್ಧತಿ ಕಾಯ್ದೆಯು ಜಾರಿಗೆ ಬಂದು ಸುಮಾರು ನಲವತ್ತು ವರ್ಷಗಳಾಗಳಾದರೂ ಬಾಲಕಾರ್ಮಿಕ ಪದ್ಧತಿ ಇನ್ನೂ ಜೀವಂತವಾಗಿದ್ದು, ಇಂತಹ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಸಂಬಂಧಪಟ್ಟ ಎಲ್ಲ ಇಲಾಖೆಗಳ ಸಮನ್ವಯದ ಅಗತ್ಯವಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಎನ್. ಶಿವಕುಮಾರ ತಿಳಿಸಿದರು.

ಶುಕ್ರವಾರ ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿಆಯೋಜಿಸಲಾಗಿದ್ದ 'ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿಯಲ್ಲಿ ಸಿಲುಕುವ ಬಹುತೇಕರು ಬಡ ಕುಟುಂಬಗಳ ಮಕ್ಕಳಾಗಿದ್ದು ಅಧಿಕಾರಿಗಳು ಕೇವಲ ಪ್ರಕರಣ ದಾಖಲಿಸದೇ, ಅಂತಹ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವ ಕಾರ್ಯಕ್ಕೆ ಮುಂದಾಗಬೇಕು. ಯಾವುದೇ ಒಂದು ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ವಿವಿಧ ಇಲಾಖೆಗಳ ಸಹಕಾರ ಅತ್ಯಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಶಿಕ್ಷಣಾರ್ಥಿ ಐಎಎಸ್ ಅಧಿಕಾರಿ ರೋಹಿತ್ ಸಿಂಗ್ ಮಾತನಾಡಿ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು. ಅಧಿಕಾರಿಗಳು ಕೇವಲ ಕಾನೂನು ಜಾರಿಗೆ ಸೀಮಿತವಾಗದೆ, ಬಾಲಕಾರ್ಮಿಕ ಪದ್ಧತಿಯನ್ನು ಬಲವಾಗಿ ವಿರೋಧಿಸಿ, ಆ ಜಾಲದಿಂದ ಮುಕ್ತರಾದ ಮಕ್ಕಳಿಗೆ ಸೂಕ್ತ ಪುನರ್ವಸತಿ ಕಲ್ಪಿಸಿ ಅವರು ಮತ್ತೆ ಶಿಕ್ಷಣದ ಮುಖ್ಯವಾಹಿನಿಗೆ ಬರುವಂತೆ ಸಹಕರಿಸಬೇಕು ಎಂದು ತಿಳಿಸಿದರು.



> ಯಾವ ಕುಟುಂಬಗಳಲ್ಲಿ ಮಕ್ಕಳ ರಕ್ಷಣೆ ಸಾಧ್ಯವಿಲ್ಲವೋ ಅಥವಾ ಶಿಕ್ಷಣ ನೀಡಲು ಆರ್ಥಿಕವಾಗಿ ಅಸಹಾಯಕರಾಗಿದ್ದಾರೋ, ಅಂತಹ ಮಕ್ಕಳನ್ನು ಹಾಗೂ ಅನಾಥರನ್ನು ಮಕ್ಕಳ ಕಲ್ಯಾಣ ಸಮಿತಿ ಮೂಲಕ ರಕ್ಷಿಸುವ ಕಾರ್ಯ ನಡೆಯುತ್ತಿದೆ.
> ■ ನಾಗೇಶ ಡಿ. ಜಿ., ಬೆಳಗಾವಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ

ಬೆಳಗಾವಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರಾದ ನಾಗೇಶ ಡಿ. ಜಿ. ಮಾತನಾಡಿ, ಪ್ರತಿವರ್ಷ ಜೂನ್ 12 ರಂದು ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಒಂದೊಂದು ವಿಶಿಷ್ಟ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತದೆ. ಜಗತ್ತಿನಲ್ಲಿ ತಮ್ಮ ಮಕ್ಕಳು ಚೆನ್ನಾಗಿ ಓದಿ, ನೌಕರಿ ಹಿಡಿದು, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಗಳಿಸಬೇಕು. ಇನ್ನೊಬ್ಬರ ಮನೆಯಲ್ಲೋ ಅಥವಾ ಅಪಾಯಕಾರಿ ಕೆಲಸಗಳಲ್ಲೋ ತೊಡಗಬಾರದು ಎಂಬ ಆಸೆ ಪ್ರತಿಯೊಬ್ಬ ತಂದೆ-ತಾಯಿಗೂ ಇರುತ್ತದೆ. ಆದರೆ ಬಡತನದ ಬೇಗೆಯಿಂದಾಗಿ ಬಡ ಕುಟುಂಬಗಳಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ ಎಂದು ವಿವರಿಸಿದರು.

ಸ್ಪಂದನ ಸಂಸ್ಥೆಯ ನಿರ್ದೇಶಕಿ , ಕಾರ್ಮಿಕ ಅಧಿಕಾರಿ ಮಲ್ಲಿಕಾರ್ಜುನ ಎಸ್. ಜೋಗೂರ ಮಾತನಾಡಿದರು. ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ಮಹಿಳಾ ಪೊಲೀಸ್ ಠಾಣೆ ನಿರೀಕ್ಷಕರಾದ ನಿರ್ಮಲ ಪಾಟೀಲ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ ಅಧಿಕಾರಿ ಈಶ್ವರ ಗಡಾದಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಚೇತನ ಕುಮಾರ, ಸಹಾಯಕ ಕಾರ್ಮಿಕ ಆಯುಕ್ತ ಕೆ. ಪಿ ನಾಗರಾಜ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ರಾಜೇಶ ಜಾದವ , ಸಂಜೀವ ಬೋಸ್ಲೆ, ರಾಜೇಶ ಅಸ್ನೋಟಿಕರ, ರಮೇಶ ಕೆಸರೂರು, ಬಾಲ ಕಾರ್ಮಿಕ ಯೋಜನಾ ಸಂಘದ ಯೋಜನಾ ನಿರ್ದೇಶಕಿ ಜ್ಯೋತಿ ಕಾಂತೆ ಉಪಸ್ಥಿತರಿದ್ದರು.

ಶ್ರೀ ಧರ್ಮಸ್ಥಳ ಸಂಸ್ಥೆಯ ಕಾರ್ಯ ಶ್ಲಾಘನೀಯ

ಸುರೇಬಾನ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮದಲ್ಲಿನ ಬಡತನ ನಿವಾರಣೆ ಹಾಗೂ ಮಕ್ಕಳ ಶಿಕ್ಷಣ, ನಿರುದ್ಯೋಗ ನಿವಾರಣೆ ಮಾಡುವುದರಲ್ಲಿ ಸಂಘದ ಕಾರ್ಯ ಶ್ಲಾಘನೀಯ ಎಂದು ಪತ್ರಕರ್ತರಾದಎಸ್.ಆರ್.ಗುರುಬಸಣ್ಣವರ ಹರ್ಷವ್ಯಕ್ತಪಡಿಸಿದರು.

ಅವರು ಸಮೀಪದ ಶಿವಪೇಠ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ. ಟ್ರಸ್ಟ್) ರಾಮದುರ್ಗ ತಾಲೂಕು ವತಿಯಿಂದ ಶಿವಪೇಠ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಬೀದಿ ನಾಟಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ತಮಟೆ ಬಾರಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮದಲ್ಲಿ ಸ್ವಚ್ಚತೆ, ಶೌಚಾಲಯ ನಿರ್ಮಾಣ, ಬಹಿರ್ದೆಸೆ ಮುಕ್ತ ಗ್ರಾಮ ನಿರ್ಮಾಣ, ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನಶೈಲಿ ಹಾಗೂ ಸಂಘಗಳ ಸಮರ್ಪಕ ನಿರ್ವಹಣೆ ಕುರಿತು ಅರಿವು ಮೂಡಿಸಲಾಯಿತು.

ಬೀದಿನಾಟಕವುಗ್ರಾಮಸ್ಥರಗಮನಸೆಳೆದು ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿತು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜನಜಾಗೃತಿ ವೇದಿಕೆಯ ನಿಕಟ ಪೂರ್ವ ಅಧ್ಯಕ್ಷರಾದ ಅಶೋಕ ಕುಲಗೋಡ, ಸುರೇಬಾನ ಪೊಲೀಸ್ ಠಾಣೆಯ ಎಎಸ್ಐ ವಿಠ್ಠಲ ಮಳಲಿ, ಜನಜಾಗೃತಿ ವೇದಿಕೆಯ ಸದಸ್ಯರಾದ ದಯಾನಂದ ಶಿರೂರ, ಬಿ.ಆಯ್.ಬೀಳಗಿ, ಶಿವಾನಂದ ಆಲೂರ ಗ್ರಾಮದ ಹಿರಿಯರು, ಸಂಘದ ಸದಸ್ಯರು, ಯುವಕರು ಹಾಗೂ ಹಿರಿಯ ನಾಗರಿಕರು ಭಾಗವಹಿಸಿ ಜನಜಾಗೃತಿ ಸಂದೇಶಗಳನ್ನು ಸ್ವೀಕರಿಸಿದರು.

ಕಲಾ ತಂಡದ ಅಧ್ಯಕ್ಷರಾದ ಮಲ್ಲಪ್ಪ ಮುಳಗುಂದ ಕಲಾತಂಡದವರು ಬೀದಿ ನಾಟಕ ಪ್ರದರ್ಶನ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಬ್ಬಂದಿ,ಮೇಲ್ವಿಚಾರಕರು ಲೀನಾ ಪರ್ನಾಂಡಿಸ್, ಜ್ಞಾನ ವಿಕಾಸ ಸಮನ್ವಯಧಿಕಾರಿ ಶೋಭಾ, ಸೇವಾ ಪ್ರತಿನಿಧಿ ಶೋಭಾ ಒಕ್ಕೂಟದ ಪದಾಧಿಕಾರಿಗಳು, ದೇವಸ್ಥಾನದ ಸಮಿತಿ ಅಧ್ಯಕ್ಷರು ಸದಸ್ಯರು ಹಾಗೂ ಗ್ರಾಮದ ಗಣ್ಯರು ಉಪಸ್ಥಿತರಿದ್ದರು. ರಾಮದುರ್ಗ ಯೋಜನಾಧಿಕಾರಿಗಳಾದ ಸಚಿನ ಸ್ವಾಗತಿಸಿದರು. ಗಿರಿಜಾ ಗಾಳಿ ವಂದಿಸಿದರು.



ಗುಣಾತ್ಮಕ ಶಿಕ್ಷಣದೊಂದಿಗೆ ಸಂಸ್ಕಾರ ಸಿಗಲಿ

ರಾಮದುರ್ಗ: ಕುಟುಂಬದಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವಲ್ಲಿ ತಾಯಂದಿರ ಪಾತ್ರ ಮಹತ್ವದ್ದಾಗಿದ್ದು, ಗುಣಾತ್ಮಕ ಶಿಕ್ಷಣಕ್ಕೆ ಉತ್ತಮ ಸಂಸ್ಕಾರ ದೊರೆತರೆ ಮಕ್ಕಳ ಭವಿಷ್ಯ ಉಜ್ವಲವಾಗುವುದು ಎಂದು ಕರ್ನಾಟಕ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ರೂಡಗಿ ಹೇಳಿದರು.

ಶುಕ್ರವಾರ ಪಟ್ಟಣದ ಬಸವ ಗಾರ್ಡನ್ ದಲ್ಲಿ ಬಣಜಿಗ ಸಮಾಜದ ತಾಲೂಕಾ ಘಟಕ ಆಯೋಜಿಸಿದ್ದ ಎಸ್ಎಸ್ಎಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಬಸವಶ್ರೀ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬಣಜಿಗ ಸಮಾಜದ ಸಂಘಟನೆ ಮತ್ತೊಂದು ಸಮಾಜದೊಂದಿಗೆ ಸಂಘರ್ಷಕ್ಕಾಗಿ ಅಲ್ಲ ಎಲ್ಲ ಸಮಾಜದ ಜನರೊಂದಿಗೆ ಸೌಹಾರ್ದ ಜೀವನಕ್ಕಾಗಿ ಎಂದು ತಿಳಿಸಿದರು.

ರಾಜ್ಯ ಸಂಘವು ರಾಜ್ಯದಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವಿದ್ಯಾನಿಧಿ ಸ್ಥಾಪನೆಯ ಯೋಜನೆ ಜಾರಿಗೆ ಯೋಜನೆ ಹಾಕಿಕೊಂಡಿದೆ ಶೀಘ್ರದಲ್ಲಿ ರಾಜ್ಯಾದ್ಯಂತ ಬಡ ವಿದ್ಯಾರ್ಥಿಗಳಗೆ ಅಗತ್ಯ ನೆರವು ಯೋಜನೆ ಮಾಡಲಾಗುವುದು ಎಂದು ಹೇಳಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಖ್ಯಾತ ಹಿಂದುಸ್ತಾನಿ ಗಾಯಕ ಡಾ. ಮೃತ್ಯುಂಜಯ ಶೆಟ್ಟರ, ವಿರಕ್ತಮಠ ಟ್ರಷ್ಟ್ ಅಧ್ಯಕ್ಷ ಪ್ರದೀಪಕುಮಾರ ಪಟ್ಟಣ, ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ ಮಾತನಾಡಿದರು.

ತಾಲೂಕು ಘಟಕದ ಅಧ್ಯಕ್ಷ ಶಶಿಧರ ಮಾಳವಾಡ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರದಲ್ಲಿ ಬಣಜಿಗ ಸಮಾಜದ ಜಿಲ್ಲಾ ಅಧ್ಯಕ್ಷ ಗಿರೀಶ ಉದೋಶಿ, ಗೌರವಾಧ್ಯಕ್ಷ ಹಂಪಣ್ಣವರ, ತಾಲೂಕಾ ಮಹಿಳಾ ಘಟಕದ ಅಧ್ಯಕ್ಷೆ ಪ್ರಭಾ ಪುಠಾಣಿ, ಯುವ ಘಟಕದ ಅಧ್ಯಕ್ಷ ಸಂಜಯ ಆರಿಬೆಂಚಿ, ತಾಲೂಕಾ ಪ್ರಧಾನ ಕಾರ್ಯದರ್ಶಿ ಈರಣ್ಣ ಬುಡ್ಡಾಗೋಳ ವೇದಿಕೆಯಲ್ಲಿದ್ದರು.

ಉಪಾಧ್ಯಕ್ಷ ಶಿವಯೋಗಿ ಚಿಕ್ಕೋಡಿ ಸ್ವಾಗತಿಸಿದರು, ಪ್ರೋ. ಎಸ್. ಎಂ. ಸಕ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರೇಣುಕಾ ಬಂತಿ ನಿರೂಪಿಸಿದರು. ಉಮೇಶ ಗೋಲನ್ನವರ ವಂದಿಸಿದರು.



ಹಿರೇಕೋಡಿಯಲ್ಲಿ ಜಾಗೃತಿ ಜಾಥಾಕ್ಕೆ ಚಾಲನೆ

ಚಿಕ್ಕೋಡಿ: ತಾಲೂಕಿನ ಹಿರೇಕೋಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಚಿಕ್ಕೋಡಿಯ ಉನ್ನತಿ ಸ್ವಯಂ ಸೇವಾ ಸಂಸ್ಥೆ ಸಹಯೋಗದಲ್ಲಿ ಗುರುವಾರ ಹಮ್ಮಿಕೊಂಡ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಹಾಜರಾತಿ ಹೆಚ್ಚಳ' ಕುರಿತು ಜಾಗೃತಿ ಜಾಥಾಕ್ಕೆ ಶಾಲೆಯ ಮುಖ್ಯ ಶಿಕ್ಷಕ ಗಂಗಾಧರ ಕಾಂಬಳೆ ಚಾಲನೆ ನೀಡಿದರು.

ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳು, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದ ಜಾಥಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಬಾ ಬಾಲೆ ಶಾಲೆಗೆ..ಮರಳಿ ಬಾ ಶಾಲೆಗೆ, ಕೂಲಿಯಿಂದ ಶಾಲೆಗೆ, ಮಕ್ಕಳನ್ನು ಶಾಲೆಗೆ ಕಳುಹಿಸಿ, ಸರ್ಕಾರಿ ಶಾಲೆ ಉಳಿಸಿ ಸೇರಿದಂತೆ ವಿವಿಧ ಘೋಷಣೆಗಳನ್ನು ಕೂಗಿ ಜಾಗೃತಿ ಮಾಡಲಾಯಿತು.

ಈ ಸಂದರ್ಭದಲ್ಲಿ ಶಾಲೆಗೆ ಹಾಜರಾಗದೆ ಮನೆಯಲ್ಲಿಯೇ ಉಳಿದ ಮಕ್ಕಳನ್ನು ಶಾಲೆಗೆ ಕರೆತರಲಾಯಿತು.



ಸರ್ಕಾರಿ ಶಾಲೆಯಲ್ಲಿ ಮಕ್ಕಳ ಹಾಜರಾತಿ ಹೆಚ್ಚಳ

ಈ ಸಂದರ್ಭದಲ್ಲಿ ಹಿರೇಕೋಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ಸಾತವೀರ ಕಟ್ಟಿ, ಕಾಮು ಗುದಿಮನಿ, ನಾಗಭೂಷಣ ಪೂಜಾರಿ, ಉನ್ನತಿ ಸ್ವಯಂಸೇವಾ ಸಂಸ್ಥೆಯ ವಿಮಲಾ ಚಿನಕೇಕರ, ಕುಮಾರ ಬಾಂಗೆ, ಗಾಯತ್ರಿ ಪಾಚಂಗಿ, ಪ್ರೀತಿ ಕಾಂಬಳೆ, ಲಕ್ಷ್ಮೀ ಹುಕ್ಕೇರಿ ಇತರರು ಇದ್ದರು.

ಪರಿಸರ ನೀಡಿದ ಕೊಡುಗೆ ಸದುಪಯೋಗಪಡೆಸಿಕೊಳ್ಳಿ: ಹಿಪ್ಪರಗಿ

ಮೂಡಲಗಿ : ಭೂಮಿಯ ಮೇಲೆ ಪರಿಸರ ಹಲವು ನೈಸರ್ಗಿಕ ಕೊಡುಗೆ ನೀಡಿದೆ ಇದನ್ನು ನಾವೆಲ್ಲ ಸಂರಕ್ಷಣೆ ಮಾಡುವುದರೊಂದಿಗೆ ಸದುಪಯೋಗ ಪಡೆದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಗೋಕಾಕ್ ವಲಯ ಅರಣ್ಯ ಇಲಾಖೆ ಅಧಿಕಾರಿ ಹಿಪ್ಪರಗಿ ಹೇಳಿದರು.

ಅವರು ಕಲ್ಲೋಳಿಯ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಜರುಗಿದ ವಿಶ್ವ ಪರಿಸರ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಇನ್ನೋರ್ವ ಅತಿಥಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಧಿಕಾರಿ ಹರೀಶಕುಮಾರ್ ಬಿ ಜಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ವಿವಿಧ ಯೋಜನೆಗಳ ಮಾಹಿತಿ ನೀಡಿದರು ,

ಕಾರ್ಯಕ್ರಮ ಉದ್ಘಾಟಿಸಿದ ಸಂಸ್ಥೆಯ ಚೇರ್ಮನ್ ರಮೇಶ ಬೆಳಕೂಡ ಅವರು ಅತಿಥಿಗಳನ್ನ ಶಾಲು ಹೊದಿಸಿ ಕಾಣಿಕೆ ನೀಡಿ ಸನ್ಮಾನಿಸಿದರು,

ಪರಿಸರ ದಿನಾಚರಣೆ ಪ್ರಯುಕ್ತ ಸುತ್ತಲಿನ ಹೈಸ್ಕೂಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರಗೆ ಕ್ವಿಜ್ ಕಾರ್ಯಕ್ರಮ ನಡೆಸಲಾಗಿತ್ತು ವಿಜೇತ ವಿದ್ಯಾರ್ಥಿ/ ವಿದ್ಯಾರ್ಥಿನಿಯರಗೆ ಪ್ರಮಾಣ ಪತ್ರ, ಸಂಸ್ಥೆ ಮೆಡಲ್ ಗಿಫ್ಟ್ ನೀಡಿ ಸನ್ಮಾನಿಸಲಾಯಿತು,

ಸಂಸ್ಥೆಯ ಕಾರ್ಯದರ್ಶಿ ಡಾ ಭೋಜರಾಜ್ ಬೆಳಕೂಡ ಮಾತನಾಡಿ, ನಿಸರ್ಗ ನಮಗಾಗಿ ಔಷಧಿ ರೂಪದಲ್ಲಿ ಗಿಡ ಮರ ಬಳ್ಳಿ ನೀಡಿದೆ ಇವುಗಳ ಸಂವರಕ್ಷಣೆ ಅವಶ್ಯ ಎಂದು ಹೇಳಿದರು. ಆರ್ ಎಫ್ ಓ ಪಾಕನಟ್ಟಿ, ಹಿಪ್ಪೋಕ್ಯಾಂಪಸ್ ಪ್ರಾಚಾರ್ಯ ರಮೀಜಾ ಅಣ್ಣಿಗೇರಿ, ಪ ಪೂ ಮಹಾವಿದ್ಯಾಲಯದ ಪ್ರಾಚಾರ್ಯ ವಿ.ಜಿ. ಕಟ್ಟಿಮನಿ ಅವರು ಉಪಸ್ಥಿತರಿದ್ದರು. ಸಂಸ್ಥೆಯ ಆವರಣದಲ್ಲಿ ಸುಮಾರು ಐವತ್ತು ಗಿಡಗಳನ್ನು ನೆಡುವ ಮೂಲಕ ವಿದ್ಯಾರ್ಥಿಗಳಿಗೆ ದತ್ತು ನೀಡಿದರು,

ಆರಂಭದಲ್ಲಿ ಪ್ರಸ್ತಾವಿಕವಾಗಿ ಆಡಳಿತಾಧಿಕಾರಿ ಪ್ರಕಾಶ್ ಗರಗಟ್ಟಿ ಅವರು ಪರಿಸರ ದಿನಾಚರಣೆ ಮಹತ್ವ ತಿಳಿಸಿದರು.ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಸಂಗಮೇಶ ಹೂಗಾರ ಸ್ವಾಗತಿಸಿ, ಮುಖ್ಯ ಶಿಕ್ಷಕ ರಮೇಶ ಹೆಬ್ಬಾಳ ಕಾರ್ಯ ನಿರ್ವಹಿಸಿ, ಕೊನೆಯಲ್ಲಿ ಎನ್ ಎಸ್ ಎಸ್ ಯೋಜನಾ ಅಧಿಕಾರಿ ಎಲ್ ಆರ್ ಕುಮರೇಶಿಸರ್ ವಂದಿಸಿದರು.



ನೂತನ ಪುರಸಭಾಧ್ಯಕ್ಷರಿಂದ ಸ್ವಚ್ಛತಾ ಅಭಿಯಾನ

ಜಿಡ್ಡುಗಟ್ಟಿದ ಹಾರೂಗೇರಿ ಪಟ್ಟಣಕ್ಕೆ ಹೊಸ ಸ್ಪರ್ಷ

ಹಾರೂಗೇರಿ: ಜಿಲ್ಲೆಯ ಪ್ರಮುಖ ಪಟ್ಟಣವಾದ ಹಾರೂಗೇರಿ ಪಟ್ಟಣ ಪಂಚಾಯತ್ ಗೆ ನೂತನ ಪುರಸಭಾಧ್ಯಕ್ಷರಾಗಿರುವ ದಾನೇಶ್ವರ ಧರ್ಮಟ್ಟಿಯವರು ಪಟ್ಟಣದ ಸ್ವಚ್ಚತೆಗೆ ಮೊದಲ ಆದ್ಯತೆ ನೀಡಿ ಸ್ವತ: ಸ್ವಚ್ಚತಾ ಕಾರ್ಯದಲ್ಲಿ ತೊಡಗಿಕೊಳ್ಳುವ ಮೂಲಕ ಸ್ವಚ್ಚ ಪರಿಸರ ನಿರ್ಮಿಸಲು ಮುಂದಾಗಿದ್ದಾರೆ.

ಇವರ ಈ ನಡೆ ಈಗ ಸಾರ್ವಜನಿಕ ಪ್ರಶಂಸೆಗೆ ಕಾರಣವಾಗಿದೆ. ಪ್ರತಿ ವಾರ್ಡ್ ಗಳಿಗೆ ಪೌರಕಾರ್ಮಿಕರೊಂದಿಗೆ ಸ್ವತ: ತಾವೇ ತೆರಳಿ ,ಕಸ ವಿಲೇವಾರಿ, ಚರಂಡಿಗಳ ಸ್ವಚ್ಚತೆ, ಕೆರೆ ಸ್ವಚ್ಚತೆ ಕಾರ್ಯ,ಶಿಸ್ತು ಬದ್ಧ ಆಡಳಿತಕ್ಕೆ ಮುನ್ನುಡಿ ಹಾಡಿದ್ದಾರೆ. ರಿಪೇರಿಗೆ ಬಂದಿರುವ ಕಸ ವಾಹನಗಳನ್ನು, ಟ್ರ್ಯಾಕ್ಟರ್ ಗಳನ್ನ ಸರಿಪಡಿಸಿದ್ದಲ್ಲದೆ, ಫಾಗಿಂಗ್ ಮಷೀನ್, ಜಟ್ ಮಷೀನ್ ಇಂತಹ ಹಲವಾರು ಮಷಿನ್‌ಗಳ ಮರು ರಿಪೇರಿ ಹಾಗೂ ಸರಿಪಡಿಸುವಿಕೆಯ ಕಾರ್ಯ ಇವರಿಂದಾಗಿದೆ.

ಹಲವಾರು ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಬೀದಿ ದೀಪಗಳ ರಿಪೇರಿ ಹಾಗೂ ನೂತನವಾಗಿ ಪಟ್ಟಣದ ಸುರಕ್ಷತೆಯ ಅನುಕೂಲಕ್ಕಾಗಿ ಅಂದಾಜು 25 ಲಕ್ಷ ರೂ.ಗಳ ಕ್ಯಾಮೆರಾಗಳನ್ನು ಅಳವಡಿಸಲು ಟೆಂಡರ್ ಕರೆಯಲಾಗಿದೆ.

ಪ್ರಸಿದ್ಧ ಧರ್ಮಟ್ಟಿ ಮನೆತನದವರಾದ ಇವರು ಜಿಡ್ಡುಗಟ್ಟಿದ ವ್ಯವಸ್ಥೆಗೆ ಹೊಸ ಚೈತನ್ಯ ತುಂಬುತ್ತಿದ್ದು ಪೌರ ಕಾರ್ಮಿಕರೊಂದಿಗೆ ಬೆರೆತು ಗಲ್ಲಿ ಗಲ್ಲಿಗಳಲ್ಲಿಯ ಚರಂಡಿಗಳನ್ನು ಮುಂದೆ ನಿಂತು ಜವಾಬ್ದಾರಿಯುತವಾಗಿ ನಿರ್ವಹಿಸಿ,ಸ್ವಚ ಭಾರತದ ಕನಸಿಗೆ ಶಕ್ತಿ ತುಂಬುತ್ತಿದ್ದಾರೆ.



> ಪೌರಕಾರ್ಮಿಕರಷ್ಟೇ ಸ್ವಚ್ಛ ಮಾಡುವ ಜವಾಬ್ದಾರಿ ವಹಿಸುವುದಲ್ಲದೆ, ಪಟ್ಟಣದ ನಾಗರಿಕರು ಕೂಡ ಸ್ವಚ್ಛತೆಯ ಬಗ್ಗೆ ಗಮನ ಹರಿಸಬೇಕು. ಎಲ್ಲಿ ಬೇಕಾದಲ್ಲಿ ಕಸ ಚೆಲ್ಲುವುದನ್ನು ನಿಲ್ಲಿಸಬೇಕು. ಕಸದ ವಾಹನಗಳು ಬಂದಾಗ ಅವುಗಳಲ್ಲಿಯೇ ಕಸ ಚೆಲ್ಲಬೇಕು. ಸ್ವಚ್ಛತೆ ನಮ್ಮೆಲ್ಲರ ಆದ್ಯ ಕರ್ತವ್ಯ.
> ■ ದಾನೇಶ್ವರ ಧರ್ಮಟ್ಟಿ ,ಪುರಸಭೆ ಅಧ್ಯಕ್ಷರು

> ನಮ್ಮೂರಿನ ಬಹಳಷ್ಟು ಜನರ ಆಸೆಯಂತೆ ಧರ್ಮಟ್ಟಿ ಮನೆತನದವರು ಒಮ್ಮೆ ಅಧ್ಯಕ್ಷರಾಗಿದ್ದು ಸಂತಸವಾಗಿದೆ. ಅಲ್ಲದೆ ಈ ಅಧ್ಯಕ್ಷರು ಪಟ್ಟಣದ ಸ್ವಚ್ಛತೆಯ ಬಗ್ಗೆ ವಹಿಸಿದ ಕಾಳಜಿ ನಮಗೆಲ್ಲರಿಗೂ ಆದರ್ಶಮಯವಾಗಿದೆ.
> ■ ಕಾಂತು ಬಾಡಗಿ, ಸದಸ್ಯರು, ಪುರಸಭೆ

ಪ್ರಚೋದನಕಾರಿ ಪೋಸ್ಟ್, ವಿಡಿಯೋಗಳಿಗೆ ಕಠಿಣ ಕ್ರಮ: ಎಸ್ಪಿ ಎಚ್ಚರಿಕೆ

ಸಾಮಾಜಿಕ ಜಾಲತಾಣಗಳ ಮೇಲೆ ಹದ್ದಿನ ಕಣ್ಣು

ಬೆಳಗಾವಿ : ಸಮಾಜದಲ್ಲಿ ಶಾಂತಿ ಕದಡುವ ಪ್ರಚೋದನಕಾರಿ ಪೋಸ್ಟ್‌ಗಳು ಹಾಗೂ ರೌಡಿ ಶೀಟರ್‌ಗಳ ಚಟುವಟಿಕೆಗಳ ಮೇಲೆ ನಿಗಾ ಇಡಲು ಬೆಳಗಾವಿ ಜಿಲ್ಲಾ ಪೊಲೀಸ್ ಇಲಾಖೆ ವಿಶೇಷ ಸೈಬರ್ ಸೆಲ್ ಕಾರ್ಯಾರಂಭ ಮಾಡಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಅಶಾಂತಿ ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಇಲಾಖೆ ಸಜ್ಜಾಗಿದೆ ಎಂದು ಎಸ್ಪಿ ಕೆ. ರಾಮರಾಜನ್ ತಿಳಿಸಿದ್ದಾರೆ.

ಫೇಸ್‌ಬುಕ್, ಇನ್ಸ್ಟಾಗ್ರಾಂ, ವಾಟ್ಸಾಪ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವಪ್ರಚೋದನಕಾರಿಪೋಸ್ಟ್‌ಗಳು,ದ್ವೇಷ ಭಾಷಣಗಳು ಹಾಗೂ ರೌಡಿ ಶೀಟರ್‌ಗಳು ಬೆದರಿಕೆ, ಡೈಲಾಗ್‌ಗಳು ಮತ್ತು ಮಾರಕಾಸ್ತ್ರಗಳೊಂದಿಗೆ ಕಾಣಿಸಿಕೊಳ್ಳುವ ವಿಡಿಯೋಗಳ ಮೇಲೆ ಸೈಬರ್ ಸೆಲ್ ನಿಗಾ ಇಡುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಕೆಲವರು ಸಾಮಾಜಿಕ ಜಾಲತಾಣಗಳನ್ನು ದುರುಪಯೋಗಪಡಿಸಿಕೊಂಡು ಜಾತಿ-ಧರ್ಮದ ಹೆಸರಿನಲ್ಲಿ ಪ್ರಚೋದನೆ ಮೂಡಿಸುವ ಸಂದೇಶಗಳು, ಸಮಾಜದ ಶಾಂತಿ ಕದಡುವ ಪೋಸ್ಟ್‌ಗಳು ಹಾಗೂ ತಮ್ಮ ಪ್ರಭಾವ ಪ್ರದರ್ಶಿಸುವ ವಿಡಿಯೋಗಳನ್ನು ಹರಿಬಿಡುತ್ತಿರುವುದು ಪೊಲೀಸ್ ಇಲಾಖೆಯ ಗಮನಕ್ಕೆ ಬಂದಿದೆ.



ಇದರಿಂದಾಗಿ ಬೆಳಗಾವಿ ಜಿಲ್ಲಾ ಪೊಲೀಸ್ ಇಲಾಖೆ ತಾಂತ್ರಿಕ ನಿಗಾವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುವ ಪ್ರತಿಯೊಂದು ಅನುಮಾನಾಸ್ಪದ ಪೋಸ್ಟ್, ಸ್ಟೇಟಸ್ ಹಾಗೂ ವಿಡಿಯೋಗಳ ಮೇಲೆ ಹದ್ದಿನ ಕಣ್ಣಿಟ್ಟಿದೆ. ಸಮಾಜದಲ್ಲಿ ಭಯದ ವಾತಾವರಣ ನಿರ್ಮಿಸುವ ಅಥವಾ ಯುವಕರನ್ನು ತಪ್ಪು ದಾರಿಗೆಳೆಯುವಂತಹ ವಿಷಯಗಳನ್ನು ಹಂಚಿಕೊಳ್ಳುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಕೆ.ರಾಮರಾಜನ್ ಅವರು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಕೈಗೊಂಡಿರುವ ಈ ಕ್ರಮಕ್ಕೆ ಸಾರ್ವಜನಿಕರು ಸಹಕಾರ ನೀಡುವಂತೆ ಪೊಲೀಸ್ ಇಲಾಖೆಯು ಸಾರ್ಜಜನಿಕರಲ್ಲಿ ಮನವಿ ಮಾಡಿಕೊಂಡಿದೆ.

> **24ಗಂಟೆಯೂ ನಿಗಾ**
> ಸೈಬರ್ ಸೆಲ್ ತಂಡವು 24 ಗಂಟೆಗಳ ಕಾಲ ಸಾಮಾಜಿಕ ಜಾಲತಾಣಗಳ ಚಟುವಟಿಕೆಗಳ ಮೇಲೆ ನಿಗಾ ಇಡುತ್ತಿದ್ದು, ಸಾರ್ವಜನಿಕರಿಂದಲೂ ಮಾಹಿತಿ ಸಂಗ್ರಹಿಸುತ್ತಿದೆ. ಸುಳ್ಳು ಸುದ್ದಿ, ದ್ವೇಷ ಹರಡುವ ಸಂದೇಶಗಳು ಅಥವಾ ಪ್ರಚೋದನಕಾರಿ ವಿಷಯಗಳನ್ನು ಫಾರ್ವರ್ಡ್ ಮಾಡುವವರನ್ನೂ ಕಾನೂನಿನ ವ್ಯಾಪ್ತಿಗೆ ತಂದು ಕ್ರಮ ಜರುಗಿಸಲಾಗುವುದು ಎಂದು ಎಸ್ಪಿ ಹೇಳಿದರು.

ಕಿರುಸುದ್ದಿ

ಹಕ್ಕುಪತ್ರ, ಇ-ಸ್ವತ್ತು ವಿತರಣೆ ಇಂದು

ಬಾಗಲಕೋಟೆ: ಬಾಗಲಕೋಟೆಯ ಯುನಿಟ್-1 ಮತ್ತು 2ರಲ್ಲಿ ಅರ್ಹ ಸಂತ್ರಸ್ತರಿಗೆ ಹಕ್ಕುಪತ್ರ ವಿತರಣೆ ಹಾಗೂ ಸ್ವಜನವಾದ ಇ-ಸ್ವತ್ತು ಉತಾರಗಳನ್ನು ವಿತರಿಸುವ ಕಾರ್ಯಕ್ರಮ ಜೂ.13ರಂದು ಮಧ್ಯಾಹ್ನ 12 ಗಂಟೆಗೆ ಬಿಟಿಡಿಎ ಅಧ್ಯಕ್ಷರ ಕಚೇರಿ ಆವರಣದಲ್ಲಿ ನಡೆಯಲಿದೆ. ಹಕ್ಕುಪತ್ರಗಳನ್ನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಹಾಗೂ ಬಾಗಲಕೋಟೆ ಶಾಸಕ ಉಮೇಶ ಮೇಟಿ ಅವರು ವಿತರಣೆ ಮಾಡಲಿದ್ದಾರೆ ಎಂದು ಬಿಟಿಡಿಎ ಮುಖ್ಯ ಅಭಿಯಂತರರು ತಿಳಿಸಿದ್ದಾರೆ.

ಪ್ರಶಸ್ತಿ ಖುಷಿ ತಂದಿದೆ: ಥೋರತ



ಗಲಗಲಿ: ಪಿ.ಬಿ.ಧುತ್ತರಗಿ (ಸುಳಿಭಾವಿ) ಟ್ರಸ್ಟ್ ವತಿಯಿಂದ ನೀಡುವ ರಂಗ ಗೌರವ ಪ್ರಶಸ್ತಿಗೆ ನಾನು ಆಯ್ಕೆಯಾಗಿದ್ದು, ನನಗೆ ಖುಷಿ ತರಿಸಿದೆಯೆಂದು ಸ್ಥಳೀಯ ಹಿರಿಯರಂಗ ನಟ ಹಾಗೂ ನಿರ್ದೇಶಕ ಅರುಣ ಕೃಷ್ಣಾಜಿ ಥೋರತ ಹರ್ಷ ವ್ಯಕ್ತಪಡಿಸಿದ್ದಾರೆ. ಅವರು ಮಾಧ್ಯಮದವರಿಗೆ ಹೇಳಿಕೆ ನೀಡಿ, ಕಳೆದ 55 ವರ್ಷಗಳಿಂದ ನಾನು ರಂಗಭೂಮಿಯ ಸೇವೆಯಲ್ಲಿ ತೊಡಗಿದ್ದು ನನ್ನ ಸೇವೆಯನ್ನು ಗಮನಿಸಿ ಟ್ರಸ್ಟ್ ನವರು ಈ ಪ್ರಶಸ್ತಿ ನೀಡಿದ್ದು ನನಗೆ ಸಂತಸ ತಂದಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋಡಿ ಹರಿದ ತುಳಸಿಗೇರಿ ಕೆರೆಗೆ ಪೂಜೆ



ಕಲಾದಗಿ: ಜೂ.8, 9ರಂದು ಎರಡು ದಿನಗಳವರೆಗೆ ಸುರಿದ ಭಾರಿ ಮಳೆಗೆ ಸಮೀಪದ ತುಳಸಿಗೇರಿಯ ಕೆರೆ ತುಂಬಿ ಕೋಡಿ ಹರಿಯುತ್ತಿದ್ದು, ನೋಡುಗರ ಕಣ್ಣನ ಸೆಳೆಯುವ ಪ್ರಕೃತಿ ಸೌಂದರ್ಯ ಇಲ್ಲಿ ಆಕರ್ಷಣೀಯವಾಗಿದೆ. ಪ್ರಸಕ್ತ ವರ್ಷ ಕಳೆದೆರಡು ದಿನಗಳವರೆಗೆ ಸುರಿದ ಮಳೆಗೆ ಇದೇ ಮೊದಲ ಬಾರಿಗೆ ಅದೂ ಎರಡೇ ದಿನದಲ್ಲಿ ಖಾಲಿ ಖಾಲಿ ಆಗಿದ್ದ ಈ ಬೃಹತ್ ಕೆರೆ ಮೇಲ್ಭಾಗದಲ್ಲಿ ಬಿದ್ದ ಮಳೆಗೆ ತುಂಬಿ ತುಳುಕುತ್ತಿದ್ದು, ಬುಧವಾರ ಗ್ರಾಮದ ಮಾರುತೇಶ್ವರ ದೇವಸ್ಥಾನದ ಪೂಜಾರರು ಕೆರೆಗೆ ಪೂಜೆ ಸಲ್ಲಿಸಿದರು.

ಪ್ರತಿ ವರ್ಷ ಕೆರೆ ತುಂಬಿ ಕೋಡಿ ಹರಿದಾಗಲೆಲ್ಲಾ ಅದರ ನೀರು ಮಾರುತೇಶ್ವರ ದೇವಸ್ಥಾನದ ಹೊರ ಆವರಣದ ಹಾಗೂ ಯಾತ್ರಿ ನಿವಾಸದ ಆವರಣ ಆವರಿಸಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ತೊಂದರೆ ಆಗುತ್ತಿತ್ತು. ಆದರೆ ಈ ಬಾರಿ ದೇವಸ್ಥಾನದ ಸಮೀಪದ ಹೊಲದಲ್ಲಿ ಕೆರೆಯ ನೀರು ಬಂದಿದೆಯೆ ಹೊರತು ಇನ್ನೂ ದೇವಸ್ಥಾನದ ಆವರಣದಲ್ಲಿ ಪ್ರವೇಶಿಸದೆ ಸರಾಗವಾಗಿ ನೀರುಹರಿಯಲು ಇದ್ದಕ್ಕಿದ್ದ ನಿರ್ಮಿಸಿದ ಕಾಲುವೆಯ ಮೂಲಕ ಹೋರಹೋಗುತ್ತಿರುವುದು ಸಮಾಧಾನ ತರಿಸಿದೆ.

ವಿದ್ಯುತ್ ವ್ಯತ್ಯಯ: ದಿನಾಂಕ ವಿಸ್ತರಣೆ

ರಬಕವಿ-ಬನಹಟ್ಟಿ: ತ್ರೈಮಾಸಿಕ ನಿರ್ವಹಣೆ ಕಾರಣ ಬನಹಟ್ಟಿಯ 110 ಕೆವಿ ವಿದ್ಯುತ್ ಕೇಂದ್ರದಿಂದ 11ಕೆವಿ ವಿದ್ಯುತ್ ಮಾರ್ಗಗಳಲ್ಲಿ ಕಾರ್ಯ ನಿರ್ವಹಣೆಯಿಂದ ಬನಹಟ್ಟಿಯ ಆಶೋಕ ಕಾಲೋನಿ, ನೂಲಿನ ಗಿರಣಿ, ಕೆಹೆಚ್‌ಡಿಸಿ, ಸಾಯಿ ನಗರ, ಪಟ್ಟಣದ ಕೆಲ ಭಾಗ, ಯಲ್ಲಟ್ಟಿ ಅಸ್ಕಿ, ಆಸಂಗಿ ಗ್ರಾಮಗಳಲ್ಲಿ ನಿನ್ನೆ ಶುಕ್ರವಾರ ಬದಲಾಗಿ ಜೂ.17ರಂದು ಬುಧವಾರ ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ವಿದ್ಯುತ್ ವ್ಯತ್ಯಯ ವಿಸ್ತರಣೆಯಾದೆಯೆಂದು ಹೆಸ್ಕಾಂ ಅಧಿಕಾರಿ ದಯಾನಂದ ಮುಳ್ಳೂರ ತಿಳಿಸಿದ್ದಾರೆ.

ನಿಧನ ಸುದ್ದಿ

ಗಿರಿಜಾ ಹಿರೇಮಠ



ಬೀಳಗಿ: ತಾಲೂಕಿನ ತೋಳಮಟ್ಟಿ ಗ್ರಾಮದ ಗಿರಿಜಾ ಶಿವಯ್ಯ ಹಿರೇಮಠ(39) ನಿಧನ ಹೊಂದಿದರು. ಮೃತರಿಗೆ ವಾರಿ ಮಲ್ಲಿಕಾರ್ಜುನ ದೇವಸ್ಥಾನದ ಅರ್ಚಕ ಮಲ್ಲಿಕಾರ್ಜುನ ಶಿವಯ್ಯ ಹಿರೇಮಠ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವಿದೆ.



ಬಾದಾಮಿ: ಪಟ್ಟಣದ ಪ್ರಸಿದ್ಧ ಛಾಯಾಗ್ರಾಹಕ ರಾಜೇಸಾಬ್ ಪೀರಜಾದೆ ಅವರಿಗೆ ಶುಕ್ರವಾರ ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್ ತ್ರಿಪುರ ವಾಸಿನಿ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಫೋಟೋ ಟುಡೇ ಎಕ್ಸಿಬಿಷನ್ ಕಾರ್ಯಕ್ರಮದಲ್ಲಿ ಕರ್ನಾಟಕ ಫೋಟೋಗ್ರಾಫರ್ ಮತ್ತು ವಿಡಿಯೋ ಗ್ರಾಫರ್ ಅಸೋಸಿಯೇಷನ್ ಕೇಂದ್ರದ ರಾಜ್ಯಾಧ್ಯಕ್ಷ ಎಂ.ದೇವನಗಿರಿ ಅವರು ಕರ್ನಾಟಕ ಛಾಯಾ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಜಮಖಂಡಿಯಲ್ಲಿ ಜನಸಂಪರ್ಕ ಸಭೆ

ಬಾಗಲಕೋಟೆ: ಜಮಖಂಡಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಬಿ.ನಂದಗಾವಿ ಅವರ ನೇತೃತ್ವದಲ್ಲಿ ಬುಧವಾರ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ 13 ಅರ್ಜಿಗಳು ಸ್ವೀಕರಿಸಲಾಯಿತು. ಜನಸಂಪರ್ಕ ಸಭೆಯಲ್ಲಿ ಜಮಖಂಡಿ ತಾಲೂಕು ಮಟ್ಟದ ವಿವಿಧ ಇಲಾಖೆಯ 40 ಜನ ಅಧಿಕಾರಿಗಳು ಸೇರಿದಂತೆ ಲೋಕಾಯುಕ್ತ ಠಾಣೆಯ ಪೊಲೀಸ್ ಉಪಾಧೀಕ್ಷಕ ಸುರೇಶರೆಡ್ಡಿ ಎಂ.ಎಸ್., ಪೊಲೀಸ್ ನಿರೀಕ್ಷಕ ಎಂ.ಬಿ.ಬಿರಾದಾರ, ಎಸ್.ಆರ್.ಪೀರಾಳ ಹಾಜರಿದ್ದು ಬಂದ ದೂರು ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಿ ಹಿಂಬರಹ ಇಲ್ಲವೇ ಮಾಹಿತಿ ನೀಡುವಂತೆ ಸೂಚಿಸಲಾಯಿತು. ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಗಳ ಬಗ್ಗೆ ವಿಚಾರಿಸಿ ಸಾರ್ವಜನಿಕರ ಕುಂದುಕೊರತೆ ಅದ್ದತೆಯ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲು ಮತ್ತು ಸಾರ್ವಜನಿಕ ಸಲ್ಲಿಸಿದ ಅರ್ಜಿಗಳನ್ನು ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿ ಸಂಬಂಧಿಸಿದವರಿಗೆ ಸ್ವೀಕೃತಿ ನೀಡಲು ಹಾಗೂ ಸದರಿ ವಿಷಯಗಳನ್ನು ವಿನಾಕಾರಣ ಬಾಕಿ ಇಟ್ಟುಕೊಳ್ಳದೇ ನಿಯಮಾನುಸಾರ ಕ್ರಮ ಜರುಗಿಸಲು ತಿಳಿಸಲಾಯಿತು. ಒಂದು ವೇಳೆ ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಡದಿದ್ದಲ್ಲಿ ಸೂಕ್ತ ಮಾಹಿತಿಯೊಂದಿಗೆ ಕೂಡಲೇ ಹಿಂಬರಹ ನೀಡಲು ಸೂಚಿಸಲಾಯಿತು. ಶಾಲೆ, ಕಾಲೇಜು ಹಾಗೂ ವಸತಿ ನಿಲಯಗಳ ಆವರಣದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿ ಅಪಾಯಕಾರಿ ರೀತಿಯಲ್ಲಿರುವ ವಿದ್ಯುತ್ ಕಂಬ ಪರಿವರ್ತಕ ಹಾಗೂ ಇತರೆ ಇಲೆಕ್ಟ್ರಿಕ್ ಸಾಧನಗಳನ್ನು ತುರ್ತಾಗಿ ಸ್ಥಳಾಂತರ ಮಾಡಲು ಹೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಸಾರ್ವಜನಿಕ ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದರ ಜೊತೆಗೆ ಬಯಲು ಮುಕ್ತ ಶೌಚಾಲಯ ಆಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.



ಬಾಗಲಕೋಟೆ: ಜಮಖಂಡಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಬಿ.ನಂದಗಾವಿ ಅವರ ನೇತೃತ್ವದಲ್ಲಿ ಬುಧವಾರ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ 13 ಅರ್ಜಿಗಳು ಸ್ವೀಕರಿಸಲಾಯಿತು.

ಪೊಲೀಸ್ ಇಲಾಖೆ ವಿಶೇಷ ಕಾರ್ಯಾಚರಣೆ | 350ಕ್ಕೂ ಹೆಚ್ಚು ಬೈಕ್ ವಶ

ದಂಡದ ಭಯಕ್ಕೆ ನಂಬರ್ ಪ್ಲೇಟ್ ಮಾಯ!

ಜಗದೀಶ ಎಂ.ಗಾಣಿಗೇರ

ದಿಗಂತ ವಿಶೇಷ

ಬಾಗಲಕೋಟೆ: ದ್ವಿಚಕ್ರ ವಾಹನ ಚಾಲನೆ ಮಾಡುವಸಂದರ್ಭದಲ್ಲಿಹೆಲ್ಮೆಟ್ ಇಲ್ಲದಿರುವುದು, ಟ್ರಿಪಲ್ ರೈಡಿಂಗ್ ಮತ್ತು ಬೈಕ್ ಸವಾರಿ ಮಾಡುವಾಗ ಮೊಬೈಲ್ ಬಳಸುವ ಸಂದರ್ಭದಲ್ಲಿ ನಿಯಮ ಉಲ್ಲಂಘನೆ ಮಾಡುವವರ ಮನೆಗೆ ನೇರವಾಗಿ ಹಾಗೂ ಮೊಬೈಲ್ ನಂಬರಗಳಿಗೆ ದಂಡದ ಪಾವತಿ ಬರುವ ಕಾರಣದಿಂದ ಹೆದರಿರುವ ಬೈಕ್ ಸವಾರರು ನಂಬರ ಪ್ಲೇಟ್ ಗಳನ್ನು ಕಿತ್ತು ಬೈಕ್ ಚಾಲನೆ ಮಾಡುವವರ ಮೇಲೆ ಈಗ ಪೊಲೀಸ್ ಇಲಾಖೆ ಹದ್ದಿನ ಕಣ್ಣು ಇಟ್ಟು ಕಾರ್ಯಾಚರಣೆ ಶುರುವಿಟ್ಟುಕೊಂಡಿದೆ.

ನಂಬರ್ ಪ್ಲೇಟ್‌ಗಳನ್ನು ಕಿತ್ತುಕೊಂಡು ಬೈಕ್ ಚಾಲನೆ ಮಾಡುವವರನ್ನು ಗುರುತಿಸುವ ಮೂಲಕ ಅಂತಹವರ ಬೈಕ್‌ಗಳನ್ನು ಸಹ ವಶಕ್ಕೆ ಪಡೆಯುವ ಕೆಲಸವನ್ನು ಪೊಲೀಸ್ ಇಲಾಖೆ ಚುರುಕಿನಿಂದ ಮಾಡುತ್ತಿದೆ. ನಾಲ್ಕೈದು ದಿನಗಳಲ್ಲಿ 350ಕ್ಕೂ ಹೆಚ್ಚು ಬೈಕ್‌ಗಳನ್ನು ಪೊಲೀಸರು ಹಿಡಿದು ಮಾಲೀಕರಿಗೆ ದಂಡ ಹಾಕಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಅವರ ಮಾರ್ಗದರ್ಶನದಲ್ಲಿ ಬಾಗಲಕೋಟೆ ಡಿವೈಎಸ್‌ಪಿ ಗಜಾನನ ಸುತಾರ ಅವರ ನೇತೃತ್ವದಲ್ಲಿ ನಂಬರ ಪ್ಲೇಟ್‌ಗಳು ಇಲ್ಲದ ವಾಹನಗಳನ್ನು ಹಿಡಿಯುವ ಕಾರ್ಯಾಚರಣೆ ಈಗ ಬಾಗಲಕೋಟೆ, ನವನಗರ, ವಿದ್ಯಾಗಿರಿಯಲ್ಲಿ ಜೋರಾಗಿ ನಡೆಯುತ್ತಿದೆ.

ಬಾಗಲಕೋಟೆ, ನವನಗರ, ವಿದ್ಯಾಗಿರಿಯ ಪ್ರಮುಖ ವೃತ್ತಗಳಲ್ಲಿ ರಸ್ತೆ ನಿಯಮಗಳನ್ನು ಪ್ರತಿಯೊಬ್ಬ ಬೈಕ್ ಮತ್ತು ವಾಹನ ಚಾಲಕರು ಪಾಲಿಸಬೇಕು ಎಂಬ ಹಿತದೃಷ್ಟಿಯಿಂದ ನಗರದ 22 ಸ್ಥಳಗಳಲ್ಲಿ ಈಗಾಗಲೇ ಎಎನ್‌ಪಿಆರ್ ಕ್ಯಾಮರಾಗಳನ್ನು ಪೊಲೀಸ್ ಇಲಾಖೆ ಅಳವಡಿಸಿದ್ದರಿಂದ ನಗರದಲ್ಲಿ ಬೈಕ್ ಸವಾರರು ಹೆಲ್ಮೆಟ್ ಹಾಕುವವರ ಸಂಖ್ಯೆಯೂ ಜಾಸ್ತಿಯಾಗಿದೆ. ಕೆಲವೊಂದು ಕಿಡಿಗೇಡಿಗಳಿಗೆ ಕ್ಯಾಮರಾ ಭಯದಿಂದ ತಮ್ಮ ಬೈಕ್‌ಗಳ ನಂಬರ್ ಪ್ಲೇಟ್‌ಗಳನ್ನೆ ಕಿತ್ತು ಹಾಕಿ ಚಾಲನೆ ಮಾಡುತ್ತಿದ್ದಾರೆ. ಇಂತಹವರ ಸಂಖ್ಯೆ ಜಾಸ್ತಿಯಾಗಿದ್ದರಿಂದ ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡು ವಿಶೇಷ ಕಾರ್ಯಾಚರಣೆ ಮಾಡುತ್ತಿದೆ. ಯುವಕರೇ ಹೆಚ್ಚು ನಂಬರ ಪ್ಲೇಟ್ ಕಿತ್ತು ವಾಹನ ಓಡಿಸುವವರ ಸಂಖ್ಯೆ ಹೆಚ್ಚಾಗಿದ್ದು, ಬೈಕ್ ವಶಕ್ಕೆ ಪಡೆದು ದಂಡ ಹಾಕುತ್ತಿದ್ದಾರೆ.



ನಂಬರ್ ಪ್ಲೇಟ್ ಕಿತ್ತು ಬೈಕ್ ಚಾಲನೆ ಅಪರಾಧ



ನವನಗರ, ಹಳೆ ಬಾಗಲಕೋಟೆ ಸೇರಿದಂತೆ ವಿವಿಧ ಕಡೆ ನಂಬರ್ ಪ್ಲೇಟ್ ಇಲ್ಲದೇ ಬೈಕ್ ಚಲಾವಣೆ ಮಾಡುತ್ತಿರುವವರ ಸಂಖ್ಯೆ ಜಾಸ್ತಿಯಾಗಿದೆ. ಇದೊಂದು ಅಪರಾಧ ಪ್ರಕರಣ ಎಂದು ಡಿವೈಎಸ್‌ಪಿ ಗಜಾನನ ಸುತಾರ ಪತ್ರಿಕೆಗೆ ತಿಳಿಸಿದರು. ನಗರದಲ್ಲಿ ಅಪಘಾತಗಳ ಸಂಖ್ಯೆ ಕಡಿಮೆಯಾಗಬೇಕು, ರಸ್ತೆ ಸಂಚಾರ ಸುರಕ್ಷಿತವಾಗಿರಬೇಕು, ರಸ್ತೆ ನಿಯಮಗಳನ್ನು ಪ್ರತಿಯೊಬ್ಬರು ಪಾಲಿಸಬೇಕು ಎಂಬ ಉದ್ದೇಶದಿಂದ ನಗರದಲ್ಲಿ ಅಲ್ಲಲ್ಲಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಆದರೆ ಕೆಲವೊಂದು ಕಿಡಿಗೇಡಿಗಳು ತಮ್ಮ ಬೈಕುಗಳ ನಂಬರ ಪ್ಲೇಟ್ ಕಿತ್ತು ಚಾಲನೆ ಮಾಡುವುದು ತಪ್ಪು ಅದೊಂದು ಅಪರಾಧ ಪ್ರಕರಣವಾಗಲಿದೆ. ನಂಬರ ಪ್ಲೇಟ್ ಕಿತ್ತ 350ಕ್ಕೂ ಹೆಚ್ಚು ಬೈಕುಗಳನ್ನು ವಶಕ್ಕೆ ಪಡೆದು ದಂಡ ಹಾಕಲಾಗಿದೆ ಎಂದರು. ಅಧಿಕೃತ ನಂಬರ ಪ್ಲೇಟ್‌ಗಳನ್ನು ಅಧಿಕೃತ ಶೈಲಿಯಲ್ಲಿ ಬಳಸಿಕೊಳ್ಳಬೇಕು. ಬಾಗಲಕೋಟೆಯ ರಸ್ತೆಗಳನ್ನು ಇನ್ನಷ್ಟು ಸುರಕ್ಷಿತವಾಗಿಡಲು ಇಲಾಖೆಯೊಂದಿಗೆ ಸಾರ್ವಜನಿಕರು ಕೈಜೋಡಿಸಬೇಕು ಎಂದು ಹೇಳಿದ್ದಾರೆ.

ವಿಶ್ವದ ಗಮನ ಸೆಳೆದ ಮೋದಿ ಆಡಳಿತ

ಮಹಾಲಿಂಗಪುರ: ನರೇಂದ್ರ ಮೋದಿಯವರು ಪ್ರಧಾನಿಯಾಗಿ ದಾಖಲೆ ಬರೆದ ಪ್ರಯುಕ್ತ ಸ್ಥಳೀಯ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶಾಸಕ ಸಿದ್ದು ಸವದಿ ಮತ್ತು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ ಅವರ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಯಿತು.

ಶಾಸಕ ಸಿದ್ದು ಸವದಿ ಮಾತನಾಡಿ, ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ದೇಶದಲ್ಲಿ ಜಾರಿಗೆ ತರಲಾದ ಜನಪರ ಯೋಜನೆಗಳನ್ನು ಸ್ಮರಿಸಿದರು. ಮೇಕ್ ಇನ್ ಇಂಡಿಯಾ, ಮುದ್ರಾ ಯೋಜನೆ, ಫಸಲ್ ಬಿಮಾ ಯೋಜನೆ ಮತ್ತು ಕಿಸಾನ್ ಸಮ್ಮಾನ್ ಯೋಜನೆಯಂತಹ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳು ದೇಶದ ಆರ್ಥಿಕತೆಯನ್ನು ಬಲಪಡಿಸಿವೆ ಎಂದರು.

ದೇಶ ಸೇವೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದೀರ್ಘಕಾಲದ ನಿಸ್ವಾರ್ಥ ಸೇವೆ ಮತ್ತು ಅವರ ಅಭಿವೃದ್ಧಿ ಪರ ಆಡಳಿತ ಬೆಂಬಲಿಸಿ, ನಗರದ ಅಕ್ಷಯ್ ಜಲ್ಲಿ ನೇತೃತ್ವದ 30ಕ್ಕೂ ಹೆಚ್ಚು ಯುವಕರು ಬಿಜೆಪಿ ಪಕ್ಷಕ್ಕೆ ಅಧಿಕೃತವಾಗಿ ನಗರದ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ಸೇರ್ಪಡೆಗೊಂಡರು.

ಬಿಜೆಪಿ ಶಾಸಕ ಸಿದ್ದು ಸವದಿ ಮತ್ತು ಪಿಕೆಪಿಎಸ್ ಅಧ್ಯಕ್ಷ ಬಸನಗೌಡ ಪಾಟೀಲ ಅವರ ಸಾರಥ್ಯದಲ್ಲಿ ನಡೆದ ಈ ಸೇರ್ಪಡೆ ಕಾರ್ಯಕ್ರಮವು ಪಕ್ಷದ ಸಂಘಟನೆಗೆ ಹೆಚ್ಚಿನ ಬಲ ತುಂಬಿದೆ.ಹೊಸದಾಗಿ ಸೇರ್ಪಡೆಯಾದ ಯುವಕರನ್ನು ಸ್ವಾಗತಿಸಿ ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಯುವಜನತೆಯ ಪಾತ್ರ ಬಹಳ ದೊಡ್ಡದು. ಮೋದಿ ಅವರ ಆಶಯದಂತೆ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಯುವಕರು ದುಡಿಯಬೇಕೆಂದು ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಸುರೇಶ ಅಕ್ಕಿವಾಟ ಕರೆ ನೀಡಿದರು.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹಾಲಿಂಗಪ್ಪ ಕುಳ್ಳೊಳ್ಳಿ,ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಲಕ್ಕಪ್ಪ ಪಾಟೀಲ, ಶೇಖರ ಅಂಗಡಿ, ಸಿದ್ದುಗೌಡ ಪಾಟೀಲ, ಮಹಾಲಿಂಗಪ್ಪ ಲಾತೂರ, ಡಾ.ಅಶೋಕ ದಿನ್ನಿಮನಿ,ಪ್ರಕಾಶ ಜೇರಗಾಳ, ಜಿ.ಎಸ್ .ಗೊಂಬಿ, ಈರಪ್ಪ ಚುರುಮುರಿ, ಮಲ್ಲಪ್ಪ ದಲಾಲ, ಭೀಮಸಿ ಗೌಂಡಿ, ಶಿವಲಿಂಗ ಘಂಟಿ, ವೀರೇಶ ಮುಂಡಗನೂರ, ಶಿವಬಸು ಗೌಂಡಿ, ರಾಜು ತಾಳಿಕೋಟಿ, ವಿಷ್ಣುಗೌಡ ಪಾಟೀಲ, ಹನಮಂತ ಜಮಾದಾರ, ಚೆನ್ನಪ್ಪ ಪಟ್ಟಣಶೆಟ್ಟಿ, ಹರೀಶ ನಾಯಕ, ವಿಜಯ ಸಬಕಾಳೆ, ಮಹೇಶ ಜಿಡ್ಡಿಮನಿ, ಶಿವನಗೌಡ ಪಾಟೀಲ, ಶೇಖರ ಮಗದುಮ, ತಿಪ್ಪಣ್ಣ ಬಂಡಿವಡ್ಡರ, ಮಹಾಂತೇಶ ಪಾತ್ರೋಟ, ಮಹಾಲಿಂಗ ಬುದ್ನಿ, ನಾಗಲಿಂಗ ಬಡಿಗೇರ, ಸೇರಿದಂತೆ ಕಾರ್ಯಕರ್ತರು ಭಾಗವಹಿಸಿದ್ದರು.



ಉಮಾಶ್ರೀಗೆ ಸಚಿವ ಸ್ಥಾನ ನೀಡಲು ಒತ್ತಾಯ


ತೇರದಾಳ: ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರು ತೇರದಾಳ ಮತ ಕ್ಷೇತ್ರದಲ್ಲಿ ಕಲ್ಲೊಳ್ಳಿ ಏತ ನೀರಾವರಿ, ಮಹಿಶವಾಡಗಿ ಸೇತುವೆ, ಢವಳೇಶ್ವರ ಸೇತುವೆ, ಬನಹಟ್ಟಿ ಸ್ಪಿನ್ನಿಂಗ ಮಿಲ್ ಸಮಸ್ಯೆ, ತೇರದಾಳದಲ್ಲಿಯೇ ಸುಮಾರು 27 ಸಮಾಜಕ್ಕೆ ಸಮುದಾಯ ಭವನಕ್ಕಾಗಿ ಅನುದಾನ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿ ಜನತೆಯ ಮೆಚ್ಚುಗೆ ಗಳಿಸಿದ್ದಾರೆ. ರಾಜಕೀಯದಲ್ಲಿ ತುಂಬಾ ಅನುಭವಿ ಹೊಂದಿದ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ತೇರದಾಳ ತಾಲೂಕು ಗ್ಯಾರಂಟಿ ಅಧ್ಯಕ್ಷ ನೇಮಣ್ಣ ಸಾವಂತನವರ ಹೇಳಿದರು.

ತೇರದಾಳ ಐಬಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮತಕ್ಷೇತ್ರದ ಕಾಂಗ್ರೆಸ್ ಮುಖಂಡರು ಉಮಾಶ್ರೀಯರಿಗೆ ಸಚಿವ ಸ್ಥಾನ ನೀಡಬೇಕೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಒತ್ತಾಯಿಸಿದರು.

ಮುಖಂಡ ಪಿ.ಎಸ್.ಮಾಸ್ತಿ ಮಾತನಾಡಿ, ಉಮಾಶ್ರೀ ಅವರು ಎಲ್ಲ ವರ್ಗದ ರೈತರಿಗೆ ಹಾಗೂ ದೀನದಲಿತರ ಬರಡು ಜಮೀನುಗಳೀಗೆ ನೀರಿನ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಮತಕ್ಷೇತ್ರದಾದ್ಯಂತ ಸೂರಿಲ್ಲದ ಬಡವರಿಗಾಗಿ ಸುಮಾರು ಹನ್ನೆರಡು ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟು ಸಾಕಷ್ಟು ಜನಪರ ಕೆಲಸ ಮಾಡಿದ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು. ಶಿವಪ್ಪ ಖವಾಸಿ ಮಾತನಾಡಿ, ರಾಜ್ಯದಲ್ಲಿ ಸಾಕಷ್ಟು ನೇಕಾರರು ಅತ್ಯಂತ ದಯನೀಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ನೇಕಾರರ ಎಲ್ಲಾ ನೋವುಗಳನ್ನು ಅರಿತುಕೊಂಡಿರುವ ಉಮಾಶ್ರೀಯವರಿಗೆ ಸಚಿವ ಸ್ಥಾನ ಕೊಟ್ಟರೆ ಇಡೀ ರಾಜ್ಯದ ನೇಕಾರರಿಗೆ ಪುನರ್ಜನ್ಮ ಕೊಟ್ಟಂತಾಗುತ್ತದೆ. ತೇರದಾಳ ಮತಕ್ಷೇತ್ರದ ಅಭಿವೃದ್ಧಿಗಾಗಿ ಸುಮಾರು ಸಾವಿರ ಕೋಟಿ ಅನುದಾನ ತಂದು ಕೆಲಸ ಮಾಡಿಸಿದ್ದು ಇತಿಹಾಸವಾಗಿದೆ ಎಂದರು.

ರಾಜೇಂದ್ರ ಬಢ್ನವರಮಾತನಾಡಿ, ಮೂರು ಇಲಾಖೆಯ ಹೊಣೆ ಅತ್ಯಂತ ಚಾಣಾಕ್ಷತನದಿಂದ ನಿಭಾಯಿಸಿ ಸಿದ್ಧರಾಮಯ್ಯನವರಿಂದ ಮೆಚ್ಚುಗೆ ಪಡೆದರಲ್ಲದೆ ಇವರ ಜನಪರಸೇವೆಗಾಗಿ ರಾಷ್ಟ್ರಪತಿಗಳ ಪ್ರಶಸ್ತಿ ದೊರಕಿಸಿಕೊಂಡಿದ್ದಾರೆ. ಕಾರಣ ಇಂತಹ ಸಮರ್ಥ ನಾಯಕರಿಗೆ ಸರ್ಕಾರದಲ್ಲಿ ಅವಕಾಶ ಕಲ್ಪಿಸಿದಲ್ಲಿ ಸರ್ಕಾರದ ಘನತೆ ಇನ್ನಷ್ಟ ಹೆಚ್ಚುತ್ತದೆ ಎಂದರು.

ರಾಜು ನಂದೆಪ್ಪನವರ, ವಿಶ್ವನಾಥ ಹಿರೇಮಠ, ಮಾಶೂಮ ಇನಾಮದಾರ, ಅಶೋಕ ಉಳ್ಳಾಗಡ್ಡಿ ಮಾತನಾಡಿದರು. ರಾಜು ಕುಲಕರ್ಣಿ, ಈರಪ್ಪ ಮಳ್ಳನ್ನವರ, ರಾಜು ಹೊಸಮನಿ, ದಾನಪ್ಪ ಕರೋಲಿ, ದಯಾನಂದ ಕಾಳೆ,ಶಿವಲಿಂಗ ದಳವಾಯಿ, ರವಿ ಗುಮ್ಮನ್ನವರ, ನಿಲಕಂಠ ಮುತ್ತೂರ, ಚಂದ್ರಶೇಖರ ನಿಲಜಗಿ, ಮೀರಾ ಸನದಿ, ನಸೀಮ ಮೋಕಾಶಿ, ಬಸವರಾಜ ಗುಡ್ಡೊಡಗಿ, ಬಸು ತೇಲಿ, ಮಹಿಬೂಬ ಜಮಾದಾರ, ಗೋಪಾಲ ಮಾಂಗ, ರಾಹುಲ ಕಲಾಲ ಸೇರಿದಂತೆ ಕಾರ್ಯಕರ್ತರು ಇದ್ದರು.



ಗೆಲುವಿನ ಹಿಂದೆ ನಿರಂತರ ಪರಿಶ್ರಮವಿರಲಿ: ಡಾ.ಕಡಪಟ್ಟಿ

ಹುನಗುಂದ: ಗೆಲುವು ಎಂಬುದು ರಾತ್ರೋರಾತ್ರಿ ಸಿಗುವ ವಸ್ತುವಲ್ಲ, ಅದು ನಿರಂತರ ಪರಿಶ್ರಮದಿಂದ ಬರುವಂತದಾಗಿದೆ ಎಂದು ವಿಜಯಮಹಾಂತೇಶ ವಿದ್ಯಾವರ್ಧಕ ಸಂಘ ಗೌರವ ಕಾರ್ಯದರ್ಶಿ ಡಾ.ಮಹಾಂತೇಶ ಎಸ್.ಕಡಪಟ್ಟಿ ಹೇಳಿದರು.

ಪಟ್ಟಣದ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಆಯೋಜಿಸಿದ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ವಿವಿಧ ಪ್ರೌಢಶಾಲೆಯಲ್ಲಿ 2025-26ನೇ ಸಾಲಿನ ಎಸ್‌ಎಸ್ ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡಾ 90ಕ್ಕಿಂತ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಶಸ್ಸಿನ ಹಿಂದೆ ಕೇವಲ ವಿದ್ಯಾರ್ಥಿಗಳ ಶ್ರಮ ಮಾತ್ರವಲ್ಲ ಅವರಿಗೆ ಅಕ್ಷರ ದಾಸೋಹ ನೀಡಿದ ಶಿಕ್ಷಕರ ಮಾರ್ಗದರ್ಶನ, ಬೆನ್ನೆಲುಬಾಗಿ ನಿಂತು ಪ್ರೋತ್ಸಾಹ ನೀಡಿದ ಪಾಲಕರ ತ್ಯಾಗವೂ ಅಡಗಿದೆ ಎಂದರು.

ಗುರುಸಿದ್ದ ಪಟ್ಟದಾರ್ಯ ಶ್ರೀಗಳು ಮಾತನಾಡಿ, ಜೀವನದಲ್ಲಿ ಬರುವ ಕಷ್ಟ-ಸೋಲುಗಳಿಗೆ ಎಂದಿಗೂ ಹೆದರಬೇಡಿ. ಕಲ್ಲು ಉಳಿಯೇಟು ತಿಂದರೇನೆ ಶಿಲೆಯಾಗಲು ಸಾಧ್ಯ ಹಾಗಾಗಿ ಜೀವನದಲ್ಲಿ ಬರುವ ಏರಿಳಿತಗಳನ್ನು ಧೈರ್ಯದಿಂದ ಎದುರಿಸಿ ಮಾನವೀಯತೆಯುಳ್ಳ ಒಳ್ಳೆಯ ಮನುಷ್ಯರಾಗಿ ಬಾಳಿ ನಾಡಿನ ಅತ್ಯುನ್ನತ ಸ್ಥಾನಮಾನ ಪಡೆದುಕೊಳ್ಳುವಂತವರಾಗಬೇಕೆಂದರು.



40 ವಿದ್ಯಾರ್ಥಿಗಳನ್ನು ಹಾಗೂ 100ಕ್ಕೆ 100 ಫಲಿತಾಂಶ ಪಡೆದ ತುಂಬ ಗ್ರಾಮದ ಗುರುಸಿದ್ದೇಶ್ವರ ಪ್ರೌಢಶಾಲೆ, ಹುನಗುಂದ ವಿ.ಮ.ಕನ್ನಡ ಕಾನ್ವೆಂಟ್ ಮಾದರಿ ಪ್ರೌಢಶಾಲೆ, ವಿ.ಮ.ಆಂಗ್ಲ ಮಾಧ್ಯಮ ಪ್ರೌಢಶಾಲೆ, ಐಹೊಳೆ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರನ್ನು ಮತ್ತು ಶಿಕ್ಷಕರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಸಂಘದ ನಿರ್ದೇಶಕರಾದ ಬಿ.ಎಸ್.ಕೆಂದೂರ, ಎಂ.ಎಸ್.ಮಠ, ಆರ್. ಎಸ್.ಬ್ಯಾಳಿ, ನಿರ್ದೇಶಕ ವಿ.ಪಿ.ಬಳೂಟಗಿ, ಜಗದೀಶ ಜ್ಯೋತಿ, ಶಿಕ್ಷಕ ಪಿ.ಎಂ.ಅಕ್ಕಿ ಉಪಸ್ಥಿತರಿದ್ದರು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ: ಪ್ರತಿಭಟನೆ

ಅಮೀನಗಡ: ಸಮೀಪದ ಸೂಳೆಬಾವಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ 3, 4 ತಿಂಗಳುಗಳಿಂದ ಕಾಯಂ ವೈದ್ಯಾಧಿಕಾರಿಗಳು ಇಲ್ಲದೆ ಇರುವುದನ್ನು ಖಂಡಿಸಿ ಹಾಗೂ ಸಿಬ್ಬಂದಿಗಳ ಬೇಜವಾಬ್ದಾರಿತನದ ವಿರುದ್ಧ ಶುಕ್ರವಾರ ಗ್ರಾಮಸ್ಥರು ಆಸ್ಪತ್ರೆ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು.

ಕಳೆದ ಕೆಲವು ತಿಂಗಳುಗಳಿಂದ ವೈದ್ಯರಿಲ್ಲದೆ ಈ ಭಾಗದ ಬಡ ರೋಗಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿರುವ ಕಿರಿಯ ಶುಶ್ರೂಷಕರು ಮತ್ತು ದಾದಿಯರು ರೋಗಿಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ, ಸಕಾಲಕ್ಕೆ ಚಿಕಿತ್ಸೆ ನೀಡದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಾಲೂಕು ಆರೋಗ್ಯ ಅಧಿಕಾರಿಗಳು ಗ್ರಾಮಸ್ಥರ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸದಿದ್ದಾಗ ಸಿಟ್ಟಿಗೆದ್ದ ಪ್ರತಿಭಟನಾಕಾರರು ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. ಸ್ಥಳಕ್ಕೆ ಜಿಲ್ಲಾ ಆರೋಗ್ಯ ಅಧಿಕಾರಿಗಳೇ ಬರಬೇಕೆಂದು ಪಟ್ಟು ಹಿಡಿದರು.

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಜಿಲ್ಲಾ ಆರೋಗ್ಯ ಅಧಿಕಾರಿ ಮಂಜುನಾಥ ಪ್ರತಿಭಟನಾಕಾರರ ಅಹವಾಲು ಆಲಿಸಿದರು. ರೋಗಿಗಳೊಂದಿಗೆ ದುರ್ವರ್ತನೆ ತೋರುವ ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಲಿಖಿತ ಭರವಸೆ ನೀಡಿದರು. ಅಧಿಕಾರಿಯ ಖಡಕ್ ಭರವಸೆಯ ಮೇರೆಗೆ ಗ್ರಾಮಸ್ಥರು ಪ್ರತಿಭಟನೆ ತಾತ್ಕಾಲಿಕವಾಗಿ ಹಿಂತೆಗೆದುಕೊಂಡರು. ಭರವಸೆಯಂತೆ ವಾರದೊಳಗೆ ವೈದ್ಯರನ್ನು ನೇಮಿಸದಿದ್ದರೆ ಮತ್ತು ಸಿಬ್ಬಂದಿಗಳ ವರ್ತನೆ ಸುಧಾರಿಸದಿದ್ದರೆ ಮುಂದಿನ ದಿನಗಳಲ್ಲಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಮುಖಂಡರಾದ ನಾಗೇಶ ಗಂಜಿಹಾಳ, ಶ್ರೀನಿರಂಜನ, ರಮೇಶ ಕೋಟಿಕಲ್ಲ, ಮೈಬೂಬ ಕಂದಗಲ್ ಸೇರಿದಂತೆ ಸಾರ್ವಜನಿಕರು ಪಾಲ್ಗೊಂಡಿದ್ದರು. ಈ ವೇಳೆ ಅಮೀನಗಡ ಪಿಎಸ್‌ಐ ಹಾಗೂ ಪೊಲೀಸ್ ಸಿಬ್ಬಂದಿ ಬಿಗಿ ಬಂದೋಬಸ್ತ ಮಾಡಿ ಕ್ರಮ ವಹಿಸಿದ್ದರು.



ಸಂಗೊಂದಿ ಗ್ರಾಮಕ್ಕೆ ಬಸ್ ಸೌಲಭ್ಯ



ಬಾಗಲಕೋಟೆ: ಹಲವು ವರ್ಷಗಳಿಂದ ಸಾರ್ವಜನಿಕ ಸಾರಿಗೆ ಸೌಲಭ್ಯದ ಕೊರತೆ ಎದುರಿಸುತ್ತಿದ್ದ ಸಂಗೊಂದಿ ಗ್ರಾಮಕ್ಕೆ ಸುಮಾರು 40 ವರ್ಷಗಳ ಬಳಿಕ ಬಸ್ ಸೌಲಭ್ಯ ದೊರೆತಿದ್ದು, ಗ್ರಾಮಸ್ಥರಲ್ಲಿ ಹರ್ಷ ವ್ಯಕ್ತವಾಗಿದೆ.

ಗ್ರಾಮದ ಜನರ ಬಹುಕಾಲದ ಬೇಡಿಕೆಗೆ ಸ್ಪಂದಿಸಿದ ಶಾಸಕ ಉಮೇಶ್ ಮೇಟಿ ಅವರ ಪ್ರಯತ್ನದಿಂದ ಬಸ್ ಸಂಚಾರ ಆರಂಭಗೊಂಡಿದ್ದು, ಇದರಿಂದ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ಸಾರ್ವಜನಿಕರ ಸಂಚಾರಕ್ಕೆ ಅನುಕೂಲವಾಗಿದೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಹೊಸ ಚೈತನ್ಯ ದೊರೆತಂತಾಗಿದೆ.

ಸಂಗೊಂದಿ ಗ್ರಾಮದ ಹಿರಿಯರು, ಯುವಕರು ಹಾಗೂ ಸಾರ್ವಜನಿಕರು ಶಾಸಕ ಉಮೇಶ್ ಮೇಟಿ ಅವರನ್ನು ಅಭಿನಂದಿಸಿ ಕೃತಜ್ಞತೆ ಸಲ್ಲಿಸಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿರುವ ಶಾಸಕರ ಕಾರ್ಯವನ್ನು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುತ್ತಿರುವ ಶಾಸಕ ಉಮೇಶ ಮೇಟಿ ಅವರು ಜನರ ಅಗತ್ಯಗಳಿಗೆ ಸ್ಪಂದಿಸುವ ಮೂಲಕ ಮತ್ತೊಂದು ಜನಪರ ಕಾರ್ಯಕ್ಕೆ ಸಾಕ್ಷಿಯಾಗಿದ್ದಾರೆ ಎಂದು ಗ್ರಾಮಸ್ಥರು ಅಭಿಪ್ರಾಯಪಟ್ಟರು.

ಕೃತಿಗಳ ಅವಲೋಕನ ಕಾರ್ಯಕ್ರಮ ನಾಳೆ

ಗುಳೇದಗುಡ್ಡ: ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್‌ನ ತಾಲೂಕು ಘಟಕದ ವತಿಯಿಂದ ಕೃತಿಗಳ ಅವಲೋಕನ ಕಾರ್ಯಕ್ರಮ ಜೂ.14ರಂದು ಬೆಳಗ್ಗೆ 10.30ಗಂಟೆಗೆ ಪಟ್ಟಣದ ಬೆನಕನಾಳ ಅವರ ಓದು ಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ತಾಲೂಕು ಅಧ್ಯಕ್ಷ, ಸಾಹಿತಿ ಡಾ.ವಿ.ಎ.ಬೆನಕನಾಳ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಾಹಿತ್ಯವನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಪುಸ್ತಕಗಳ ಅವಲೋಕನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ನೋವುಂಡು ನಲಿದವರು ಸಂಪಾದಿತ ಕೃತಿಯನ್ನು ಬಾಗಲಕೋಟೆಯ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ರಮೇಶ ಯಾನಮಶೆಟ್ಟಿ ಅವಲೋಕಿಸುವರು.

ಡಾ.ವಿ.ಎ.ಬೆನಕನಾಳ ಅವರು ರಚಿಸಿದ ರಾಷ್ಟ್ರನೇತಾರ ಅಟಲ್ ಬಿಹಾರಿ ವಾಜಪೇಯಿ ಕೃತಿಯನ್ನು ಬಾದಾಮಿಯ ಸರಕಾರಿ ಪದವಿ ಕಾಲೇಜಿನ ಸಹಕಾಯಕ ಪ್ರಾಧ್ಯಾಪಕ ಪ್ರೊ. ಚಂದ್ರಶೇಖರ ಹೆಗಡೆ ಅವಲೋಕಿಸುವರು. ವಿಶ್ರಾಂತ ಪ್ರಾಧ್ಯಾಪಕ ಡಾ. ರಾಜಶೇಖರ ಬಸುಪಟ್ಟದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಶ್ರೀಕೃಷ್ಣ ಯೋಗಾಶ್ರಮದ ಗುರೂಜಿ ಬಸವರಾಜ ಹಡಗಲಿ, ರಂಗಪ್ಪ ಶೇಬಿನಕಟ್ಟಿ ಉಪಸ್ಥಿತರಿರುವರು ಎಂದು ತಿಳಿಸಿದರು.

ಡಾ.ರಾಜಶೇಖರ ಬಸುಪಟ್ಟದ, ಸಂಗಣ್ಣ ಚಿಕ್ಕಾಡಿ, ಪ್ರೊ.ಚಂದ್ರಶೇಖರ ಹೆಗಡೆ, ಡಾ.ಬಸವರಾಜ ಚವಡಿ, ಎಂ.ಓ.ಸುರಪುರ ಇದ್ದರು.



28 ಬ್ಯಾಟರಿ ಕಳ್ಳತನ: ಬಂಧನ



ಬಾಗಲಕೋಟೆ: ಅಮರಾಜ ಕಂಪನಿಯ ಬ್ಯಾಟರಿಗಳನ್ನು ಕಳ್ಳತನ ಮಾಡಿದ್ದ ನಾಲ್ಕು ಜನ ಆರೋಪಿಗಳನ್ನು ಪೊಲೀಸರು ಬಂಧಿಸಿ 8,76,000 ಮೌಲ್ಯದ ಬ್ಯಾಟರಿ ಹಾಗೂ ಒಂದು ಕಾರನ್ನು ವಶಕ್ಕೆ ಪಡೆಯಲಾಗಿದೆ.

ಅಮರಾಜ ಬ್ಯಾಟರಿಯನ್ನು ಕಳ್ಳತನ ಮಾಡಿದ ಆರೋಪಿಗಳನ್ನು ಹುನಗುಂದ ತಾಲ್ಲೂಕಿನ ಗಂಜಿಹಾಳದ ಶಿವಪುತ್ರಪ್ಪ ಸಂಗನಬಸಪ್ಪ ಡೋಣಿ(26), ವಿರೇಶ ಅಂದಾನೇಪ್ಪ ರೇವಡಿ(26), ಗ್ಯಾನಪ್ಪ ಪರಸಪ್ಪ ಚಿಮ್ಮಲಗಿ (26), ಕಲ್ಲಪ್ಪ ಮಹಾಂತೇಶ ಲೋಕೂರ(29) ಗುರುತಿಸಲಾಗಿದೆ. ಕಳ್ಳತನವಾದ 476000 ರೂ. ಮೌಲ್ಯದ 28 ಅಮರಾಜ ಕಂಪನಿಯ ಬ್ಯಾಟರಿ, ಕಿಮ್ಮತ್ತಿನ ಮಾಲುಗಳು ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಸ್ವಿಪ್ಟ್ ಡಿಜೈರ್ ಕಾರ ನಂಬರ: ಕೆಎ-38 ಎ-2204 ವಾಹನ ಮೌಲ್ಯದ 400000 ರೂ. ಹೀಗೆ ಒಟ್ಟು 876000/ರೂ. ಮೌಲ್ಯದ ಜಪ್ತಿ ಮಾಡಲಾಗಿದೆ. ಆರೋಪಿಗಳನ್ನು ಪತ್ತೆ ಹಚ್ಚಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ಜಗದೀಶ್, ಡಿವೈಎಸ್‌ಪಿ ಗಜಾನನ ಸುತಾರ ಮಾರ್ಗದರ್ಶನದಲ್ಲಿ ಹಾಗೂ ಸಿಪಿಐ ಆರ್.ಎಸ್.ಬಿರಾದಾರ, ಎಎಸ್‌ಐ ಪಿ.ಎಂ. ಮಾವಿನಹಳ್ಳಿ ಎಸ್.ಎಂ.ಉಕ್ಕಲಿ ನೇತೃತ್ವದಲ್ಲಿ ನಡೆದ ತನಿಖೆಯಲ್ಲಿ ಹೊಸೂರ ಕ್ರಾಸ್ ಬಳಿ ವಾಹನ ತಪಾಸಣೆ ಮಾಡುವ ಸಂದರ್ಭದಲ್ಲಿ ಆರೋಪಿಗಳು ಅಮರಾಜ ಬ್ಯಾಟರಿ ಕಳ್ಳತನ ಮಾಡಿರುವ ಕುರಿತು ಪತ್ತೆಯಾಗಿದೆ.

ಬಾರ್ ಮಾಲೀಕರಿಗೆ ಕಾನೂನು ಅರಿವು

ಬೀಳಗಿ: 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಿಗೆ ಮದ್ಯ ಮಾರಾಟ ಮಾಡುವುದು, ಪೂರೈಸುವುದು ಅಥವಾ ಸೇವಿಸುವುದಕ್ಕೆ ಅವಕಾಶ ಕಲ್ಪಿಸುವುದು ನಿಷೇಧಿತವಾಗಿದೆ ಎಂದು ಬೀಳಗಿ ಪೊಲೀಸ್ ಠಾಣೆಯ ಪೊಲೀಸ್ ವೃತ್ತ ನಿರೀಕ್ಷಕ ಹನಮಂತ ಸಣಮನಿ ಹೇಳಿದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಅಪ್ರಾಪ್ತ ವಯಸ್ಕರ ಮದ್ಯಪಾನ ತಡೆಗೆ ಸಂಬಂಧಿಸಿದ ಕಾನೂನು ಬದ್ಧ ನಿಯಮಗಳ ಪಾಲನೆ ಮಾಡುವ ಕುರಿತು ಠಾಣಾ ವ್ಯಾಪ್ತಿಯ ಬಾರಗಳ ವೈನ್ ಶಾಪಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರು, ಮ್ಯಾನೇಜರಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ನಿರ್ದೇಶನದಂತೆ ಅಪ್ರಾಪ್ತ ವಯಸ್ಕರಲ್ಲಿ ಮದ್ಯಪಾನ ಪ್ರವೃತ್ತಿಯನ್ನು ತಡೆಗಟ್ಟಲು ಕಡ್ಡಾಯ ವಯಸ್ಸು ಪರಿಶೀಲನೆ ಮಾಡಬೇಕು. ವಯಸ್ಸಿನ ಪುರಾವೆ ನೋಡಬೇಕು. ಗುರುತಿನ ಚೀಟಿ ಇಲ್ಲದಿದ್ದರೆ ಒಳಗಡೆ ಪ್ರವೇಶವಿಲ್ಲ ಮತ್ತು ಮದ್ಯ ಪೂರೈಕೆ ಮಾಡುವಂತಿಲ್ಲವೆಂದು ತಿಳಿಸಿದರು. 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ನಿಷೇಧಿಸಿದೆ. ವಯಸ್ಸು ಪರಿಶೀಲನೆ ದಾಖಲಾತಿಗಳ ನಿರ್ವಹಣೆ ಮಾಡಬೇಕು. ಅನುಸರಣೆ ಮಾಡಬೇಕು. ಪರಿಶೀಲನೆ ಮತ್ತು ಅನುಸರಣೆ, ಸೂಚನಾ ಫಲಕಗಳ ಪ್ರದರ್ಶನ, ನಿರ್ವಹಣೆಯ ಹೊಣೆಗಾರಿಕೆಯ ಬಗ್ಗೆ ಕಟ್ಟುನಿಟ್ಟಿನ ಸೂಚನೆ ನೀಡಿ, ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ವನಿ

ಕಿರುಸುದ್ದಿ

ಸನ್ಮಾನ ಕಾರ್ಯಕ್ರಮ ನಾಳೆ

• **ಮುದ್ದೇಬಿಹಾಳ:** ತಾಲೂಕಿನ ಉಮ್ಮಿದ್ ಫೌಂಡೇಶನ್ ವತಿಯಿಂದ ಪ್ರಸಕ್ತ ಸಾಲಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭ ಜೂ.14ರಂದು ಭಾನುವಾರ ಸಂಜೆ 5.30ಕ್ಕೆ ಮೆಹಬೂಬ್ ಮಸೀದ್ ಶಾದಿ ಮಹಲ್ ಸಭಾಂಗಣದಲ್ಲಿ ನಡೆಯುವುದು. ವಿಜಾಪುರದ ಮೌಲಾನಾ ನಿಸಾರ್ ಅಹ್ಮದ್ ಖಾಸಿಮಿ, ಜಮಾಯತ್ ಉಲೆಮಾ ಹಿಂದ, ಖಾರಿ ಇಸಾಕ್ ಮಾಗಿ ದಿವ್ಯ ಸಾನ್ನಿಧ್ಯ ವಹಿಸುವರು. ಡಾ.ಎ.ಎಂ ಮುಲ್ಲಾ ಅಧ್ಯಕ್ಷತೆ, ಮುಖ್ಯ ಅತಿಥಿಗಳಾಗಿ ಅಬ್ದುಲ್ ಗಫೂರ್ ಮಾಕಾಂದಾರ್, ಸಾಹಿತಿ, ವಾಣಿಜ್ಯ ತೆರಿಗೆ ಅಧಿಕಾರಿ ಬುರಾಣ ರುದ್ರವಾಡಿ, ಸಿಪಿಐ ಮೊಹಮ್ಮದ್ ಪಸಿಯುದ್ದೀನ್ ಸೇರಿದಂತೆ ಮಾಜಿ ಪುರಸಭಾ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಲಾಡ್ಲೆಮಶಾಕ್ ನಾಯ್ಕೋಡಿ, ಹುಸೇನ್ ನಾಯ್ಕೋಡಿ, ಪಿ.ಎ.ಬಾಳೆಕಾಯಿ ಭಾಗವಹಿಸುವರು ಎಂದು ಸಂಚಾಲಕರು ತಿಳಿಸಿದ್ದಾರೆ.

ತಾಲೂಕಾಧ್ಯಕ್ಷರಾಗಿ ಸಿದ್ಧಲಿಂಗ ಕಿಣಗಿ ಆಯ್ಕೆ

• **ಸಿಂದಗಿ:** ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಸಿಂದಗಿ ತಾಲೂಕು ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಸಿಂದಗಿ ತಾಲೂಕಾಧ್ಯಕ್ಷರನ್ನಾಗಿ ಎಚ್.ಜಿ.ಪಪೂ ಕಾಲೇಜಿನ ಶಿಕ್ಷಣಶಾಸ್ತ್ರ ಉಪನ್ಯಾಸಕ ಸಿದ್ಧಲಿಂಗ ಕಿಣಗಿ, ಕಾರ್ಯಾಧ್ಯಕ್ಷನ್ನಾಗಿ ಆರ್.ಡಿ.ಪಾಟೀಲ ಪಪೂ ಕಾಲೇಜಿನ ಡಾ.ಶರಣಬಸವ ಜೋಗುರ, ಸರಕಾರಿ ಪಪೂ ಕಾಲೇಜಿನ ಶಶಿಧರ ಅವಟಿ, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎಂಯಾಳಗಿ ಕಾರ್ಯದರ್ಶಿಯಾಗಿ ಮಹಾಂತಯ್ಯ ಮಠ, ಸಹ ಕಾರ್ಯದರ್ಶಿಯಾಗಿ ಅಂಜುಮನ ಪಪೂ ಕಾಲೇಜಿನ ಎ.ಬಿ.ಕುಚಲ, ಖಜಾಂಚಿಯಾಗಿ ಎಚ್.ಜಿ ಪಪೂ ಕಾಲೇಜಿನ ಶಾಂತು ಬಿರಾದಾರ, ಸದಸ್ಯ ಕಾರ್ಯದರ್ಶಿಯಾಗಿ ಆರ್.ಡಿ.ಪಾಟೀಲ ಪಪೂ ಕಾಲೇಜಿನ ಎನ್.ಬಿ.ಪೂಜಾರಿ, ಸಂಚಾಲಕರಾಗಿ ಎಚ್.ಜಿ ಪಪೂ ಕಾಲೇಜಿನ ದೈಹಿಕ ಉಪನ್ಯಾಸಕ ಸತೀಶ ಬಸರಕೋಡ ಅವರನ್ನು ಒಳಗೊಂಡು ಉಪನ್ಯಾಸಕರನ್ನು ಆಯ್ಕೆ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷರು ತಿಳಿಸಿದ್ದಾರೆ.



ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಲು ಆಗ್ರಹ

• **ದೇವರಹಿಪ್ಪರಗಿ/ವಿಜಯಪುರ:** ಬಂಜಾರ ಸಮಾಜದ ಹಾಗೂ ಹಾವೇರಿ ವಿಧಾನ ಸಭಾ ಕ್ಷೇತ್ರದ ಶಾಸಕ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಈ ಮೂಲಕ ಬಂಜಾರ ಸಮಾಜಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಬಂಜಾರ ಸಮಾಜದ ಯುವ ಮುಖಂಡ ಹಾಗೂ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸದಸ್ಯರಾದ ಕುಮಾರ ರಾಠೋಡ ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಮಾಡಿದರು. ಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಂಜಾರ ಸಮಾಜ ಎಂದಿಗೂ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತಾ ಬಂದಿದ್ದು, ಸಮಾಜದ ಏಕೈಕ ಶಾಸಕ ರುದ್ರಪ್ಪ ಅವರಿಗೆ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು, ಶಾಸಕರಾಗಿ ಉತ್ತಮ ಕೆಲಸ ಮಾಡಿರುವ ಅವರು ಜನಪರ ಯೋಜನೆಗಳನ್ನು ಜಾರಿಗೆ ತಂದು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಸಚಿವ ಸ್ಥಾನ ನೀಡಬೇಕೆಂದು ಅವರು ಒತ್ತಾಯಿಸಿದರು. ಬಂಜಾರ ಸಮಾಜದ ಕಾರ್ಯಕರ್ತರು ಉಪಸ್ಥಿತರಿದ್ದರು.



ಕೋ.ಚನ್ನಬಸಪ್ಪ ರಾಜ್ಯ ದತ್ತಿ ಪ್ರಶಸ್ತಿಗೆ ರೂಪಾ ಆಯ್ಕೆ

• **ವಿಜಯಪುರ:** ಕೋ.ಚನ್ನಬಸಪ್ಪನವರ-2026ರ ರಾಜ್ಯಮಟ್ಟದ ದತ್ತಿ ಪ್ರಶಸ್ತಿಗೆ ಗ್ರಾಮೀಣ ಭಾಗದ ಕವಯಿತ್ರಿ, ಲೇಖಕಿ ರೂಪಾ ರಜಪೂತ ಆಯ್ಕೆಯಾಗಿದ್ದಾರೆ. ಕೋ.ಚನ್ನಬಸಪ್ಪ ರಾಜ್ಯ ದತ್ತಿ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕಸಾಪ ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ, ಶಿಲ್ಪಾ ಭಸ್ಮೆ ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ, ಮಹಾದೇವಿ ತೆಲಗಿ ಇದ್ದು, ಲೇಖಕಿ ರೂಪಾ ರಜಪೂತ ಅವರನ್ನು ಆಯ್ಕೆ ಮಾಡಿದ್ದು, ಜೂ.14ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ರಾಜ್ಯಮಟ್ಟದ ದತ್ತಿ ನಿಧಿ ಪ್ರಶಸ್ತಿ ಕಾರ್ಯಕ್ರಮ ಜರುಗಲಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ ವಾಲಿಕಾರ ತಿಳಿಸಿದ್ದಾರೆ.





ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಶುಕ್ರವಾರ ಗುರು ಬಾಬಾಸಾಹೇಬ್ ಅಜರೇಕರ ಹರಿಮಂದಿರದಲ್ಲಿ ಅಧಿಕ ಮಾಸ ನಿಮಿತ್ತ ಪಾರಾಯಣ, ಸಂತ ಜ್ಞಾನೇಶ್ವರ ಮಹಾರಾಜರ ಪಾರಾಯಣ ಸಂತರ ಭಕ್ತಿ ಭಜನೆ ಕಾರ್ಯಕ್ರಮ ನಡೆಯಿತು. ಸಂತರು ರಚಿಸಿದ ಗ್ರಂಥಗಳಿಗೆ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿದ ನಂತರ ಪಾರಾಯಣ ಆರಂಭಗೊಂಡಿತು. ಮಧ್ಯಾಹ್ನ ಸಂತರ ಭಕ್ತಿಯ ಭಜನೆಯೊಂದಿಗೆ ಅನ್ನ ಪ್ರಸಾದದೊಂದಿಗೆ ಸಂಪನ್ನಗೊಂಡಿತು.

ಜಾಗೃತಿ ಮೂಡಿಸಲು ಸಮಿತಿ ರಚನೆ

• **ಬಸವನಬಾಗೇವಾಡಿ:** ಸಮಾಜದಲ್ಲಿ ಮಾದಕ ದ್ರವ್ಯ ತಡೆಗಟ್ಟುವ ಸದುದ್ದೇಶದಿಂದ ಪೊಲೀಸ್ ಇಲಾಖೆಯು ಕಾಲೇಜ್ ಮಟ್ಟದಲ್ಲಿ ತಂಡ ರಚನೆ ಮಾಡಿ ಮಾದಕ ದ್ರವ್ಯ ತಡೆಗಟ್ಟುವ ಸಲುವಾಗಿ ಹಾಗೂ ಮಾದಕ ದ್ರವ್ಯದಿಂದ ಆಗುವ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ಪೊಲೀಸ್ ಇನ್ಸ್‌ಪೆಕ್ಟರ್ ಗುರುಶಾಂತ ದಾಶ್ಯಾಳ ಮನವರಿಕೆ ಮಾಡಿದರು. ಸ್ಥಳೀಯ ಬಿ.ಎಲ್.ಡಿ.ಇ.ಸಂಸ್ಥೆಯ ಔಷಧ ಮಹಾವಿದ್ಯಾಲಯದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಮಂಗಳವಾರ ಹಮ್ಮಿಕೊಂಡಿದ್ದ ಮಾದಕ ದ್ರವ್ಯ ವಿರೋಧಿ ಸಮಿತಿ ರಚನೆ ಸಭೆಯಲ್ಲಿ ಮಾದಕ ದ್ರವ್ಯ ವಿರೋಧಿ ಸಮಿತಿ ತಂಡ ರಚನೆ ಮಾಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಸಮಿತಿಯಲ್ಲಿ ಪೊಲೀಸ್ ಠಾಣೆಯ ಪಿಐ, ಕಾಲೇಜಿನ ಪ್ರಾಂಶುಪಾಲರು, ಬೋಧಕ ಸಿಬ್ಬಂದಿಗಳು ಹಾಗೂ 12ಜನ ವಿದ್ಯಾರ್ಥಿಗಳನ್ನು ಒಳಗೊಂಡು ತಂಡದ ರಚನೆ ಮಾಡಲಾಗುತ್ತದೆ ವಿದ್ಯಾರ್ಥಿಗಳು ಕೆಲವು ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಡ್ರಗ್ಸ್ ಬಗ್ಗೆ ತಮ್ಮ ಗಮನಕ್ಕೆ ಬಂದರೆ ನಮಗೆ ಯಾವುದೇ ಭಯ-ಭೀತಿವಿಲ್ಲದೆ ನಮ್ಮ ಗಮನಕ್ಕೆ ತಂದರೆ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಔಷಧಿ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಸಿ.ಸಿ.ಶಿಂಪಿ, ಚೇತನ ತೇಲಿ, ಮಹಾಂತೇಶ ಕೌಟೇಕರ, ರೇಣುಕಾ ಕಬಾಡೆ, ಲಕ್ಷ್ಮಣ ಬಿರಾದಾರ, ಸುರೇಶ ಗುಣಕಿ, ಮುತ್ತು ಡಂಬಳ, ಬಸವರಾಜ ಸಂಕ.ಅನಿಲ ಮೇತ್ರಿ, ಡಾ.ಶರಣಬಸಪ್ಪ ಮಾರಾಪುರ, ಸಿಬ್ಬಂದಿಗಳಾದ ಜಗದೀಶ ತಕ್ಕೋಡ ಐ.ಜಿ.ಹೊಸಗೌಡರ, ಎಂ.ಡಿ.ಬೂಶೆಟ್ಟಿ ಸೇರಿ ಇತರರು ಇದ್ದರು.



ಮುದ್ದೇಬಿಹಾಳ: ಕಳೆದ ಮೂರು ಬಾರಿ ಎನ್‌ಡಿಎ ವತಿಯಿಂದ ದೇಶ ಮುನ್ನಡೆಸುತ್ತಿರುವ ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರ ದೀರ್ಘಾವಧಿಯಲ್ಲಿ ಪ್ರಧಾನ ಮಂತ್ರಿ ಎಂದು ದಾಖಲೆ ನಿರ್ಮಿಸಿದ ಪ್ರಯುಕ್ತ ಬುಧವಾರ ಭಾಜಪ ಮಂಡಲ ಕಾರ್ಯಕರ್ತರು ವಿಶೇಷ ಪೂಜೆ ಹಾಗೂ ಅಭಿನಂದನೆ ಕಾರ್ಯಕ್ರಮದ ಮೂಲಕ ಸಂಭ್ರಮಾಚರಣೆ ಮಾಡಿದರು.

ಸರ್ಕಾರಿ ಮೆಡಿಕಲ್ ಕಾಲೇಜ್ ವಿಶೇಷ ಅಧಿಕಾರಿ ದ್ಯಾಬೇರಿ ಜಿಲ್ಲಾ ಆಸ್ಪತ್ರೆಗೆ ಭೇಟಿ

ಕಾಮಗಾರಿ, ಮೂಲಸೌಕರ್ಯ ಪರಿಶೀಲನೆ

• **ವಿಜಯಪುರ:** ಜಿಲ್ಲೆಯಲ್ಲಿ ನೂತನ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಸಂಬಂಧಿಸಿದಂತೆ ಅಗತ್ಯ ಪ್ರಕ್ರಿಯೆಗಳಿಗಾಗಿ ನೇಮಕಗೊಂಡಿರುವ ವಿಶೇಷ ಅಧಿಕಾರಿಗಳಾದ ಡಾ.ರಾಜಶೇಖರ ದ್ಯಾಬೇರಿ ಅವರು ಶುಕ್ರವಾರ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯಾಧಿಕಾರಿಗಳೊಂದಿಗೆ ಸಮಾಲೋಚಿಸಿ ಪರಿಶೀಲನೆ ನಡೆಸಿದರು.

ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಾವಳಿಗಳನ್ವಯ ಕಾಲೇಜು ಸ್ಥಾಪನೆಗೆ ಅಗತ್ಯ ಭೂಮಿ, ಕಟ್ಟಡ, ಬೋಧನಾ ಆಸ್ಪತ್ರೆ ಹಾಗೂ ಇತರೆ ಶಾಸನಬದ್ಧ ಅವಶ್ಯಕತೆಗಳು ಸೇರಿದಂತೆ ಮಹತ್ವದ ಮಾಹಿತಿ ಪಡೆದುಕೊಂಡರು.

ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವ ವಿವಿಧ ಹಳೆಯ ಕಟ್ಟಡಗಳು ಹಾಗೂ ಪ್ರಗತಿಯಲ್ಲಿರುವ ಹೊಸ ಕಟ್ಟಡ ಕಾಮಗಾರಿಗಳನ್ನು ವಿಶೇಷ ಅಧಿಕಾರಿಗಳು ಖುದ್ದಾಗಿ ವೀಕ್ಷಿಸಿ, ಲಭ್ಯವಿರುವ ಮೂಲಸೌಕರ್ಯಗಳ ಪರಿಶೀಲಿಸಿದರು.

ಬಳಿಕ ಜಿಲ್ಲಾ ಶಸ್ತ್ರಚಿಕಿತ್ಸಕರ ಕೊಠಡಿಯಲ್ಲಿ ನಡೆದ ಸಭೆಯಲ್ಲಿ, ವೈದ್ಯಕೀಯ ಕಾಲೇಜಿಗೆ ಅತ್ಯಗತ್ಯವಾಗಿ ಬೇಕಾಗುವ ಮಾನವ ಸಂಪನ್ಮೂಲಗಳ ವಿವರಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ ಮತ್ತು ಡಿಎನ್‌ಬಿ (ಡಿಎನ್‌ಬಿ) ಕೋರ್ಸ್‌ಗಳಿಗೆ ಸಂಬಂಧಿಸಿದ ಮಾಹಿತಿ ಪಡೆದುಕೊಂಡರು.

ಜಿಲ್ಲಾ ಆಸ್ಪತ್ರೆಯಡಿ ಕಾರ್ಯನಿರ್ವಹಿಸುತ್ತಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂಸಿಎಚ್), ಸೂಪರ್ ಸ್ಪೆಶಾಲಿಟಿ ವಿಭಾಗ ಹಾಗೂ ಟ್ರಾಮಾ ಕೇರ್ ಕೇಂದ್ರಗಳ ವೈದ್ಯಕೀಯ ವ್ಯವಸ್ಥೆ ಮತ್ತು ಅಲ್ಲಿ ಮಂಜೂರಾಗಿರುವ ಸಿಬ್ಬಂದಿ ಕುರಿತು ಚರ್ಚೆ ನಡೆಸಿದರು. ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಶಿವಾನಂದ ಮಾಸ್ತಿಹೊಳಿ, ಹಿರಿಯ ಅರವಳಿಕೆ ಶಾಸ್ತ್ರಜ್ಞ ಡಾ.ಸಂದೀಪ ಎಸ್.ಸಜ್ಜನ, ಹಿರಿಯ ತಜ್ಞ ವೈದ್ಯ ಡಾ.ಹರೀಶ ಪೂಜಾರಿ, ಡಾ.ರಾಜಕುಮಾರ ಹಿರೇಮಠ, ಡಾ.ಸಿದ್ದಗೊಂಡಪ್ಪ ಹಾವಿನಾಳ, ಸಹಾಯಕ ಅಭಿಯಂತರ ಮಹೇಶ ಆರ್.ಜಾಧವ, ಆಡಳಿತ ವೈದ್ಯಾಧಿಕಾರಿ ಎ.ಎ.ಸಿಂದಗಿಕರ ಇದ್ದರು.



ಇ-ಕೆವೈಸಿ ಮಾಡಿಸಲು ವಿಶೇಷ ಅವಕಾಶ

• **ವಿಜಯಪುರ:** ನಗರ ಪ್ರದೇಶದಲ್ಲಿ ತಾಂತ್ರಿಕ ಕಾರಣಗಳಿಂದ ಇ-ಕೆವೈಸಿ ಮಾಡಿಸಲು ಬಾಕಿ ಇರುವ ಪಡಿತರ ಚೀಟಿದಾರರಿಗೆ ಐರಿಸ್ ಸಾಧನದ ಮೂಲಕ ಇ-ಕೆವೈಸಿ ಮಾಡಿಸಿಕೊಳ್ಳಲು ಆಹಾರ ಇಲಾಖೆಯು ಜೂ.25ರ ವರೆಗೆ ವಿಶೇಷ ಅವಕಾಶ ಕಲ್ಪಿಸಲಾಗಿದೆ. ವಿಜಯಪುರ ನಗರ ಪ್ರದೇಶದಲ್ಲಿ ಇನ್ನೂ ಸುಮಾರು 697 ಪಡಿತರ ಚೀಟಿದಾರರ ಇ-ಕೆವೈಸಿ ಬಾಕಿ ಇರುವುದು ಕಂಡುಬಂದಿದೆ. ಬಯೋಮೆಟ್ರಿಕ್ (ಬೆರಳು ಗುರುತು) ಸರಿಯಾಗಿ ಮೂಡದ ಕಾರಣ ಇ-ಕೆವೈಸಿ ಪ್ರಕ್ರಿಯೆ ನೂರಕ್ಕೆ ನೂರರಷ್ಟು ಪೂರ್ಣಗೊಂಡಿಲ್ಲದೇ ಇರುವುದರಿಂದ ಇಲಾಖೆಯ ವತಿಯಿಂದಲೇ ವಿಶೇಷ ಇ-ಕೆವೈಸಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ. ತಾಂತ್ರಿಕ ಕಾರಣಗಳಿಂದ ಇ-ಕೆವೈಸಿ ಆಗದೇ ಬಾಕಿ ಉಳಿದಿರುವ ಪಡಿತರ ಚೀಟಿ ಫಲಾನುಭವಿಗಳು ವಿಜಯಪುರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಪಡಿತರ ವಿಭಾಗದ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ಇ-ಕೆವೈಸಿ ಮಾಡಿಸಿಕೊಳ್ಳಬಹುದು. ಜೂ25ರ ವರೆಗೆ ಕಚೇರಿ ವೇಳೆಯಲ್ಲಿ ಈ ಸೌಲಭ್ಯ ಲಭ್ಯವಿರಲಿದ್ದು, ನ್ಯಾಯ ಬೆಲೆ ಅಂಗಡಿಕಾರರು ಇ-ಕೆವೈಸಿ ಬಾಕಿ ಇರುವ ಫಲಾನುಭವಿಗಳನ್ನು ಕಚೇರಿಗೆ ಕಳುಹಿಸಿಕೊಟ್ಟು ಸಹಕರಿಸಬೇಕೆಂದು ಎಂದು ಆಹಾರ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ವೈಜ್ಞಾನಿಕ ಕೃಷಿ ಪದ್ಧತಿ ಅನುಸರಿಸಿ

• **ಸಿಂದಗಿ:** ಹವಾಮಾನ ಬದಲಾವಣೆ, ನೀರಿನ ಕೊರತೆ ಹಾಗೂ ಹೆಚ್ಚುತ್ತಿರುವ ಕೃಷಿ ವೆಚ್ಚಗಳ ನಡುವೆಯೂ ವೈಜ್ಞಾನಿಕ ಕೃಷಿ ಪದ್ಧತಿ ಅನುಸರಿಸುವುದು ಅಗತ್ಯವಾಗಿದೆ. ಹತ್ತಿ ಬೆಳೆಯಲ್ಲಿ ಗುಣಮಟ್ಟದ ಬೀಜಗಳ ಆಯ್ಕೆ, ಸಮತೋಲನ ಗೊಬ್ಬರ ಬಳಕೆ, ಸಮಗ್ರ ಕೀಟ ನಿರ್ವಹಣೆ ಹಾಗೂ ನೀರಿನ ಸಮರ್ಪಕ ಬಳಕೆಯ ಕುರಿತು ರೈತರಿಗೆ ತರಬೇತಿ ನೀಡುವುದು ಕಾರ್ಯಾಗಾರದ ಉದ್ದೇಶ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ತಾಲೂಕಿನ ರಾಂಪುರ ಪಿ.ಎ.ಗ್ರಾಮದ ಆರೂಢ ಮಠದಲ್ಲಿ ವಿಜಯಪುರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ವಿಜಯಪುರ ಮತ್ತು ಸಿಂದಗಿಯ ಕೃಷಿ ಇಲಾಖೆ ಹಾಗೂ ಕೃಷಿಕ ಸಮಾಜದ ಸಹಯೋಗದಲ್ಲಿ ಹತ್ತಿಯಲ್ಲಿ ಉತ್ಪಾದಕತೆ ಅಭಿಯಾನದಡಿಯಲ್ಲಿ ಹತ್ತಿ ಬೆಳೆಯಲ್ಲಿ ನೂತನ ಉತ್ಪಾದನಾ ತಾಂತ್ರಿಕತೆಗಳ ಕುರಿತು ರೈತರಿಗಾಗಿ ಹಮ್ಮಿಕೊಂಡ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿಜಯಪುರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಪಾಟೀಲ, ಇಂಡಿ ಕೃಷಿ ಉಪನಿರ್ದೇಶಕ ಚಂದ್ರಕಾಂತ ಪವಾರ ಹಾಗೂ ಅಧ್ಯಕ್ಷತೆ ವಹಿಸಿದ್ದ ಕೃಷಿಕ ಸಮಾಜದ ತಾಲೂಕಾಧ್ಯಕ್ಷ ಶಿವಪ್ಪಗೌಡ ಬಿರಾದಾರ ಮಾತನಾಡಿದರು.

ಕೃಷಿ ತಜ್ಞರಾದ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಡಾ.ಎಸ್.ಎಂ.ನಿಡಗುಂದಿ ವಿಜಯಪುರ ಕೃಷಿ ವಿದ್ಯಾಲಯದ ಡಾ.ಎ.ಪಿ. ಬಿರಾದಾರ, ಇಂಡಿಯ ಕೆವಿಕೆ ಯ ಡಾ.ಪ್ರಕಾಶ ಅವರು ಹತ್ತಿಯ ನೂತನ ತಳಿ, ಸಮಗ್ರ ಕೀಟ ನಿರ್ವಹಣೆ, ರೋಗ ನಿಯಂತ್ರಣ, ನೀರಿನ ಸಮರ್ಪಕ ಬಳಕೆ ಹಾಗೂ ಆಧುನಿಕ ಉತ್ಪಾದನಾ ಕೃಷಿ ತಂತ್ರಜ್ಞಾನಗಳ ಕುರಿತು ರೈತರಿಗೆ ಮಾಹಿತಿ ನೀಡಿದರು.

ಆಸಂಗಿಹಾಳ ಶ್ರೀಮಠದ ಶಂಕರಾನಂದ ಮಹಾರಾಜರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಹಾಯಕ ಕೃಷಿ ನಿರ್ದೇಶಕ ಪ್ರಶಾಂತ ಸಾಣೆ, ಕೃಷಿ ಅಧಿಕಾರಿ ಶಿವಾನಂದ ಹೂನ್ನಳ್ಳಿ, ಆಲಮೇಲ ಹಾಗೂ ದೇವರ ಹಿಪ್ಪರಗಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ನಿಂಗನಗೌಡ ಪಾಟೀಲ, ಸಿದ್ದು ಆನಂದಿ, ಲಿಂಬೆ ಅಭಿವೃದ್ಧಿ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಅಶೋಕ ಅಲ್ಲಾಪುರ, ಪ್ರಗತಿಪರ ರೈತ ಬಾಗಪ್ಪಗೌಡ ಪಾಟೀಲ, ರೈತ ಮುಖಂಡ ಬಸವರಾಜ ರಂಜಣಗಿ, ಬಸಯ್ಯ ಹಿರೇಮಠ ಸೇರಿದಂತೆ ಅಧಿಕಾರಿಗಳು, ರೈತರು ಇದ್ದರು.



ವೈದ್ಯಕೀಯ ಸಂಶೋಧನಾ ಕೃತಿ ಲೋಕಾರ್ಪಣೆ

• **ವಿಜಯಪುರ:** ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಜೆರಿಯಾಟ್ರಿಕ್ಸ್ ವಿಭಾಗ ಮತ್ತು ಸಂಗನಬಸವ ಸ್ವಾಮೀಜಿ ಕಾಲೇಜ್ ಆಫ್ ಫಾರ್ಮಸಿ ಅಂಡ್ ರಿಸರ್ಚ್ ಸೆಂಟರ್‌ನ ಫಾರ್ಮ್-ಡಿ ವಿಭಾಗದ ಪ್ರಕಟಿಸಿದ ಅಡ್ವಾನ್ಸ್ ಕೇರ್ ಪ್ಲಾನಿಂಗ್ ಫಾರ್ ಅಲಝೈಮರ್ಸ್ ಡಿಸೀಸ್ ಆ್ಯಂಡ್ ಡೆಮೆನ್ಶಿಯಾ ಕೃತಿಯನ್ನು ಬಿಎಲ್‌ಡಿಇ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ್ ಗುರುವಾರ ಬಿಡುಗಡೆಗೊಳಿಸಿದರು.

ಈ ಸಂದರ್ಭ ಡಾ.ಜಯರಾಜ್ ಮಾತನಾಡಿ, ಅಲಝೈಮರ್ಸ್ ಕಾಯಿಲೆ ಮತ್ತು ಡಿಮೆನ್ಶಿಯಾ ಪೀಡಿತರ ಆರೈಕೆಯಲ್ಲಿ ತೊಡಗಿರುವ ವೈದ್ಯಕೀಯ, ನರ್ಸಿಂಗ್, ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಹಾಗೂ ರೋಗಿಗಳ ಆರೈಕೆದಾರರಿಗೆ ಈ ಪುಸ್ತಕ ಅತ್ಯಂತ ಉಪಯುಕ್ತವಾಗಲಿದೆ. ಡಿಮೆನ್ಶಿಯಾ ಆರೈಕೆಯಲ್ಲಿ ಬಳಸಲಾಗುವ ಮೂಲಭೂತ ಮಾಹಿತಿಯಿಂದ ಆಧುನಿಕ ತಂತ್ರಜ್ಞಾನ ಮತ್ತು ಸಾಧನಗಳವರೆಗೆ ಸಮಗ್ರ ಮಾಹಿತಿ ಒಳಗೊಂಡಿದೆ ಎಂದರು.

ಬಿಎಲ್‌ಡಿಇ ಡೀಮ್ಡ್ ವಿವಿ ಕುಲಪತಿ ಡಾ.ಅರುಣಚಂ.ಇನಾಮದಾರ ಮಾತನಾಡಿ, ಈ ಪುಸ್ತಕ ವಿಜಯಪುರ ಜಿಲ್ಲೆ ಮಾತ್ರವಲ್ಲ ದೇಶ-ವಿದೇಶಗಳಲ್ಲಿರುವ ಅಗತ್ಯವಿರುವ ಜನರಿಗೂ ತಲುಪಬೇಕು. ಮಾನವ ಆಯುಷ್ಯ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಡಿಮೆನ್ಶಿಯಾ ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳ ಪ್ರಮಾಣವೂ ಹೆಚ್ಚಾಗುವ ಸಾಧ್ಯತೆ ಇದೆ. ಇಂಥ ಸಂದರ್ಭದಲ್ಲಿ ಜೆರಿಯಾಟ್ರಿಕ್ಸ್ ಮತ್ತು ಫಾರ್ಮ್-ಡಿ ವಿಭಾಗಗಳು ಅಗತ್ಯವಿರುವ ಕುಟುಂಬಗಳಿಗೆ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಮೂಲಕ ಸೂಕ್ತ ಪರಿಹಾರ ಹಾಗೂ ಮಾರ್ಗದರ್ಶನ ಒದಗಿಸಲಿವೆ ಎಂದರು.

ಕೃತಿಯ ಲೇಖಕ ಮತ್ತು ಜೆರಿಯಾಟ್ರಿಕ್ಸ್ ವಿಭಾಗದ ಮುಖ್ಯಸ್ಥ ಡಾ.ಆನಂದ ಪಿ.ಅಂಬಲಿ, ಫಾರ್ಮ್-ಡಿ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಸಿದ್ದಾರೂಢ ಎಂ.ಬಿರಾದಾರ ಹಾಗೂ ಕ್ಲಿನಿಕಲ್ ರಿಸರ್ಚ್ ಫೆಲೋ ಡಾ. ಬಸವರಾಜ ವಿ.ಅವರ ಕಾರ್ಯವನ್ನು ಶ್ಲಾಘಿಸಲಾಯಿತು. ಬಿಎಲ್‌ಡಿಇ ಡೀಮ್ಡ್ ವಿವಿ ಕುಲಸಚಿವ ಡಾ.ಆರ್.ವಿ.ಕುಲಕರ್ಣಿ, ವೈದ್ಯಕೀಯ ವಿಭಾಗದ ಡೀನ್ ಮತ್ತು ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ, ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಶೆಟ್ಟಿ, ನಿರ್ದೇಶಕ ಡಾ.ಆರ್.ಬಿ.ಕೊಟ್ನಾಳ, ಉಪಪ್ರಾಚಾರ್ಯ ಮತ್ತು ವೈದ್ಯಕೀಯ ನಿರ್ದೇಶಕ ಡಾ.ವಿಜಯಕುಮಾರ ಕಲ್ಯಾಣಪಗೋಳ, ವೈದ್ಯಕೀಯ ಅಧೀಕ್ಷಕ ಡಾ.ಎಸ್.ಎನ್. ಬೆಂಟೂರ, ಐಕ್ಯೂಎಸಿ ನಿರ್ದೇಶಕಿ ಡಾ.ಸುಮಂಗಲಾ ಪಾಟೀಲ, ಸಹಾಯಕ ವೈದ್ಯಕೀಯ ಅಧೀಕ್ಷಕ ಡಾ.ರವಿ ಬಿರಾದಾರ, ಉಪಕುಲಸಚಿವ ಸತೀಶ ಪಾಟೀಲ ಉಪಸ್ಥಿತರಿದ್ದರು.



ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣ: ಬ್ಯಾಂಕ್ ಒಳಗೆ ಪ್ರತಿಭಟನೆ

• **ಚಡಚಣ:** ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶಾಖೆಯಲ್ಲಿ 2025, ಸೆ.16ರಂದು ನಡೆದ ಭೀಕರ ದರೋಡೆ ಪ್ರಕರಣದಲ್ಲಿ ತಮ್ಮ ಚಿನ್ನಾಭರಣ ಕಳೆದುಕೊಂಡ ಗ್ರಾಹಕರು ಬುಧವಾರ ಸಂಜೆ 4 ಗಂಟೆಯಿಂದ ತಡರಾತ್ರಿ 11 ಗಂಟೆಯವರೆಗೆ ಬ್ಯಾಂಕ್‌ಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ದರೋಡೆ ಪ್ರಕರಣ ನಡೆದು ಸುಮಾರು ಒಂಬತ್ತು ತಿಂಗಳು ಕಳೆದರೂ ಅಡವಿಟ್ಟಿದ್ದ ಚಿನ್ನಾಭರಣಗಳು ಅಥವಾ ಅದರ ಸಮರ್ಪಕ ಪರಿಹಾರ ದೊರೆಯದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಗ್ರಾಹಕರು ಬ್ಯಾಂಕ್‌ಗೆ ಆಗಮಿಸಿ, ತಮಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿದರು. ಬ್ಯಾಂಕ್ ಅಧಿಕಾರಿಗಳಿಗೆ ಈ ಹಿಂದೆ ಹಲವು ಬಾರಿ ಗಡುವು ನೀಡಿದ್ದರೂ ಭರವಸೆ ಈಡೇರಿಸದ ಕಾರಣ ಗ್ರಾಹಕರು ಬ್ಯಾಂಕ್ ಮುಖ್ಯ ದ್ವಾರಕ್ಕೆ ಬೀಗ ಜಡಿದು ಒಳಗಡೆ ಧರಣಿ ನಡೆಸಿದರು.



ಘಟನೆ ಬಳಿಕ ಬ್ಯಾಂಕ್ ಅಧಿಕಾರಿಗಳು ಗ್ರಾಹಕರೊಂದಿಗೆ ಹಲವು ಸುತ್ತಿನ ಸಭೆ ನಡೆಸಿ, ಜೂ.6ರೊಳಗೆ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದರು. ಅಡವಿಟ್ಟಿದ್ದ ಚಿನ್ನದ ನಿವ್ವಳ ತೂಕಕ್ಕೆ ಪ್ರಸ್ತುತ ಮಾರುಕಟ್ಟೆ ದರದೊಂದಿಗೆ ಹೆಚ್ಚುವರಿ ಶೇಕಡಾ 20ರಷ್ಟು ಮೊತ್ತ ನೀಡುವುದಾಗಿ ಹೇಳಿದ್ದರು. ಆದರೆ ಗ್ರಾಹಕರು ಹಣದ ಬದಲು ತಮ್ಮ ಅಸಲು ತೂಕದ ಚಿನ್ನವನ್ನೇ ಅಥವಾ ಅದರ ಸಮಾನ ಮೌಲ್ಯದ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಜೂ.10 ಕಳೆದರೂ ಬ್ಯಾಂಕ್ ಅಧಿಕಾರಿಗಳು ಯಾವುದೇ ಸ್ಪಷ್ಟ ಕ್ರಮ ತೆಗೆದುಕೊಳ್ಳದ ಹಿನ್ನೆಲೆ ಗ್ರಾಹಕರು ಪ್ರತಿಭಟನೆಗೆ ಮುಂದಾದರು. ತಡರಾತ್ರಿವರೆಗೆ ನಡೆದ ಪ್ರತಿಭಟನೆಯ ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಪರಶುರಾಮ ಮನಗೂಳಿ ಹಾಗೂ ಪಿಎಸ್‌ಐ ಸೋಮೇಶ ಗೆಜ್ಜಿ ಅವರು ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು. ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಜೂ.15ರಂದು ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿರುವುದಾಗಿ ಮನವಿ ಮಾಡಿದರು.

ಪೊಲೀಸರ ಮನವೊಲಿಕೆ ಬಳಿಕ ಪ್ರತಿಭಟನೆ ಹಿಂಪಡೆದರು. ವಿಭಾಗೀಯ ವ್ಯವಸ್ಥಾಪಕ ವಿಕಾಸ್ ಭಗೋತ್ರಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ ವಾಲಿ, ಶಿವಕುಮಾರ, ವೆಂಕಟೇಶ ರಾಜಪೂತ ಉಪಸ್ಥಿತರಿದ್ದರು.

ದಲಿತ, ಬಂಡಾಯ ಸಾಹಿತ್ಯಕ್ಕೆ ಸಿದ್ಧಲಿಂಗಯ್ಯ ಕೊಡುಗೆ ಅಪಾರ: ನಾಡಗೇರಿ

• **ವಿಜಯಪುರ:** ದಲಿತ, ಬಂಡಾಯ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ದಿ.ಸಿದ್ಧಲಿಂಗಯ್ಯ ಅವರು ಬಡವನ ನೋವನ್ನು ತಮ್ಮ ಸಾಹಿತ್ಯದಲ್ಲಿ ಪ್ರಧಾನ ವಿಷಯ ವಸ್ತುವಾಗಿಸಿಕೊಂಡಿದ್ದಾರೆ ಎಂದು ಕರ್ನಾಟಕ ರಾಜ್ಯ ಎಸ್‌ಸಿ-ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಎಚ್.ನಾಡಗೇರಿ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ-ಎಸ್‌ಟಿ ನೌಕರರ ಸಮನ್ವಯ ಸಮಿತಿ ವಿಜಯಪುರ ಜಿಲ್ಲಾ ಘಟಕದ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ದಲಿತ ಕವಿ ಡಾ.ಸಿದ್ಧಲಿಂಗಯ್ಯ ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಾಡೋಜ ಪ್ರಶಸ್ತಿಗೆ ಭಾಜನರಾದ ಸಿದ್ಧಲಿಂಗಯ್ಯ ಬಡವರ ನಗುವಿನ ಶಕ್ತಿಯನ್ನು ಸಾಹಿತ್ಯದ ಮೂಲಕ ನಿರೂಪಿಸಿದ್ದಾರೆ, ಕನ್ನಡ ಸಾಹಿತ್ಯ ಲೋಕದಲ್ಲಿ ಕವಿ ಸಿದ್ಧಲಿಂಗಯ್ಯನವರು ಆಳವಾದ ವಿಮರ್ಶಾತ್ಮಕ ವಿಚಾರಗಳನ್ನು ಹಾಗೂ ಅವರ ಸಂಘಟನಾ ಶಕ್ತಿಯನ್ನು ಸ್ಮರಣೆ ಮಾಡಿದರು. ದಲಿತರ ಕುರಿತು ಅಪಾರವಾದ ವಿಚಾರಗಳನ್ನು ಅವರ ಕವನಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದರು. ಅವರ ನೋವುಗಳನ್ನು ಬರವಣಿಗೆ ಮೂಲಕ ಸಾಹಿತ್ಯವನ್ನು ರಚಿಸಿದರು ಎಂದರು.



ಸಮಿತಿ ಗೌರವಾಧ್ಯಕ್ಷ ಬಸವಂತ ಗುಣದಾಳ ಮಾತನಾಡಿ, ಡಾ.ಸಿದ್ಧಲಿಂಗಯ್ಯನವರು ಸಮಾಜದ ಬಗ್ಗೆ ಅತೀವ ಕಾಳಜಿ ಹೊಂದಿದ್ದರು, ಅವರ ಸಾಹಿತ್ಯ ಓದುವುದರಿಂದ ಹೊಸ ಸ್ಫೂರ್ತಿ ದೊರಕುತ್ತದೆ, ಸಿದ್ಧಲಿಂಗಯ್ಯ ಅವರ ಚಿಂತನೆ, ಆದರ್ಶ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದರು.

ಪ್ರಧಾನಕಾರ್ಯದರ್ಶಿ ಡಾ.ಸೂರ್ಯಕಾಂತ ಹೊಸಮನಿ ಮಾತನಾಡಿದರು. ರಾಜ್ಯ ಸಲಹಾ ಸಮಿತಿಯ ಸದಸ್ಯ ಮುದ್ದಣ್ಣ ಭೀಮನಗರ, ರವಿ ಯಲಡಗಿ, ಎಸ್.ಎಂ.ಡೋಣಿ, ವಿಜಯಕುಮಾರ ಮುದ್ದೇಬಿಹಾಳ, ನಿಜು ಮೇಲಿನಕೇರಿ, ಮಹೇಶ್ ಹೊನ್ನಾಕಟ್ಟಿ, ಜಿ.ಎಂ.ಚಲವಾದಿ ಪಾಲ್ಗೊಂಡಿದ್ದರು.

ಪರಿಸರದ ಉಳಿವಿನಿಂದ ನಮ್ಮ ಉಳಿವು: ಪಾಟೀಲ

• **ವಿಜಯಪುರ:** ಪರಿಸರದ ಉಳಿವಿನಲ್ಲಿ ನಮ್ಮ ಉಳಿವು ಅಡಗಿದೆ, ಪರಿಸರ ರಕ್ಷಣೆ ಒಂದು ಕರ್ತವ್ಯ ಅಷ್ಟೇ ಅಲ್ಲ ಅದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು ಎಂದು ಡೊಮನಾಳದಲ್ಲಿ ಹಸಿರು ಕ್ರಾಂತಿಯನ್ನೇ ಮಾಡಿ ಆ ಪ್ರದೇಶವನ್ನು ಹಸಿರು ಸಿರಿಯನ್ನಾಗಿ ಮಾಡಿದ ಎನ್.ಡಿ.ಪಾಟೀಲ ಹೇಳಿದರು.

ನಗರದ ಮಾತೋಶ್ರೀ ರಮಾಬಾಯಿ ಅಂಬೇಡ್ಕರ್ ಪದವಿ ಮಹಾವಿದ್ಯಾಲಯದ ಆವರಣದಲ್ಲಿ ಪರಿಸರ ಪ್ರೇಮಿ ದಿ.ಉದಯ ನಾವಲಗಿ ಅವರ ಸ್ಮರಣೆ ನಿಮಿತ್ತ ನನ್ನ ಗಿಡ-ನನ್ನ ಭೂಮಿ ಸಂಸ್ಥೆಯ ವತಿಯಿಂದ ಹಮ್ಮಿಕೊಂಡ ಪರಿಸರ ದಿನಾಚರಣೆ ಅಭಿಯಾನದ ನಿಮಿತ್ತ 333 ಸಸಿಗಳನ್ನು ಏಕಕಾಲಕ್ಕೆ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನನ್ನ ಗಿಡ ನನ್ನ ಭೂಮಿ ಸಂಘಟನೆ ಸಂಚಾಲಕ ಬಸವರಾಜ ಬೈಚಬಾಳ ಮಾತನಾಡಿ, ನಮ್ಮ ಸಂಘಟನೆಯ ಹೆಸರಿನಂತೆಯೇ ಭೂಮಿ ಹಾಗೂ ಪರಿಸರ ರಕ್ಷಣೆ ಕಾರ್ಯವನ್ನು ನಿತ್ಯ ಕೈಗೊಳ್ಳಲಾಗುತ್ತಿದೆ, ಪರಿಸರ ರಕ್ಷಣೆಗೆ ಇನ್ನೊಂದು ಹೆಸರಾಗಿದ್ದ ದಿ.ಉದಯ ನಾವಲಗಿ ಅವರ ಸ್ಮರಣಾರ್ಥ ನೂರಾರು ಸಸಿಗಳನ್ನು ನೆಡುವ ಸಂಕಲ್ಪ ಮಾಡಲಾಗಿದೆ ಎಂದರು.

ಯುವ ಮುಖಂಡ ಉಮೇಶ ಕಾರಜೋಳ, ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ತುಕಾರಾಮ ಚಂಚಲಕರ, ವಲಯ ತಹಶೀಲ್ದಾರ್ ಚನಗೊಂಡ, ಭಾಗ್ಯವಂತ, ಆರ್ ಎಫ್‌ಒ ಸಂತೋಷ ಆಜೂರ, ಮಾಜಿ ಅಧ್ಯಕ್ಷ ಮಿಲಿಂದ ಚಂಚಲಕರ, ಜಿಲ್ಲಾ ಯುವ ಪರಿಷತ್ ಅಧ್ಯಕ್ಷ ಶರಣು ಸಬರದ, ಪ್ರಮುಖರಾದ ರಾಜು ಬಿರಾದಾರ, ಗುರುರಾಜ ಕರಂಭಟನಾಳ, ಎಸ್.ಎಲ್. ಇಂಗಳೇಶ್ವರ, ಜಯರಾಮ, ಆರತಿ ಪಾಟೀಲ, ಸುಜಾತಾ ಹಿರೇಮಠ, ಚಿದಾನಂದ ಔರಂಗಾಬಾದ್, ವಿಜಯ ಭೋಸಲೆ, ಶಶಿಧರ ರೂಢಗಿ, ವಿನಾಯಕ ಕಾಳೆ, ಅಶ್ವಥ್ ರೆಬಿನಾಳ, ಯಲ್ಲಪ್ಪ ಮಾಳಿ, ಸಂಜು ಗುನ್ನಾಪೂರ, ಶಿವಪುತ್ರ ಬಣಜಿಗೇರ, ಶಿವಯೋಗಿ ವಾಲಿಕಾರ, ಶ್ರೀಶೈಲ ವಾಘಮೋರೆ, ಸಂಗಮೇಶ ಔದಿ, ಬಾಬು ಶಿರಶ್ಯಾಡ ಇದ್ದರು.



ಬಸವೇಶ್ವರ ನೂತನ ವೃತ್ತಕ್ಕೆ ಚಾಲನೆ

• **ಆಲಮೇಲ:** ಪಟ್ಟಣದ ಸಿಂದಗಿ ರಸ್ತೆಯ ಮಾರ್ಗದ ಯುಕೆಪಿ ಕ್ಯಾಂಪ್‌ನ ಆವರಣದಲ್ಲಿ ನೂತನ ಕಟ್ಟಡ ನಡೆಯುವ ಪ್ರಜಾ ಸೌಧದ ಮುಂಭಾಗದ ಹತ್ತಿರ ಜೂ.12ರಂದು ಶುಕ್ರವಾರ ಬೆಳಗ್ಗೆ 12ಗಂಟೆಗೆ ಇಲ್ಲಿನ ಮಲ್ಲಿಬೋಮ್ಮ ಸ್ವಾಮಿಜಿ ಮತ್ತು ಶ್ರೀಶೈಲ ಮಠ ಶ್ರೀಗಳು ತಾರಪು ಶ್ರೀಗಳು ಜಗಜ್ಯೋತಿ ಬಸವೇಶ್ವರ ಭಾವಚಿತ್ರ ಇಟ್ಟು ನಂದಿ ಕಂಬ ನಡೆಸಿ ನೂತನ ವೃತ್ತ ಸ್ಥಾಪಿಸಿದರು.

ಹಿರಿಯ ರಾಜಕಿಯ ಮುಖಂಡ ಗೋಲ್ಲಾಳಪ್ಪಗೌಡ ಮಾಗಣಗೇರಿವರು ನೂತನ ಬಸವೇಶ್ವರ ವೃತ್ತಕ್ಕೆ ಚಾಲನೆ ನೀಡಿ ಮಾತನಾಡಿದರು. ಮಲ್ಲಿಬೋಮ್ಮ ಶ್ರೀಗಳು ಬಸವಣ್ಣನ ವಚನಗಳ ಮೂಲಕ ಆರ್ಶಿವಚನ ನೀಡಿದರು.

ರಾಜಕಿಯ ಮುಖಂಡ ಗೋಲ್ಲಾಳಪ್ಪಗೌಡ ಮಾಗಣಗೇರಿ, ಪಪಂ ಸದಸ್ಯರಾದ ಅಶೋಕ ಕೋಳಾರಿ, ಸಂತೋಷ ಲಾವಟೆ, ಮಲ್ಲು ಅಚಲೇರಿ, ಡಾ.ಸಂಜು ಎಂಟಮನ್, ಶಿವಾನಂದ ಜಗತಿ, ಶಶಿ ಗಣೆಹಾರ, ಪ್ರಶಾಂತ ನಾಶಿ, ಗೋಲ್ಲಾಳ ಉಪ್ಪಿನ, ಪ್ರಕಾಶ ಉಪ್ಪಿನ, ರಾಜು ಕೋಣಶಿಸಗಿ, ದಾದ ಎಲಗಾರ, ಯಲ್ಲಪ್ಪ ಬುರಡ, ಸೈಪನ್ ಮುಲ್ಲಾ, ವಿಶ್ವನಾಥ ಅಮರಗೊಂಡ, ಪುಂಡಲಿಕ ಜೋಶಿ, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭು ವಾಲಕಿರ, ಬಸು ತೆಲ್ಲೂರ, ದಾವೂದ ಬೆಣ್ಣೆಶಿರೋರ, ರಾಜು ಮೇತ್ರಿ, ಹಿರಿಯರಾದ ಗುಂಡು ಮೇಲಿನಮನಿ, ಬಸವ ಸಮಿತಿ ಕಾರ್ಯಕರ್ತರು ಇದ್ದರು.



ದೇಶದಲ್ಲಿ ಕಾಂಗ್ರೆಸ್‌ನಿಂದ ಅಭಿವೃದ್ಧಿ ಶೂನ್ಯ: ಜಿಗಜಿಣಗಿ

• **ಝಳಕಿ:** 60 ವರ್ಷ ಕಾಂಗ್ರೆಸ್ ಪಕ್ಷ ಆಡಳಿತ ಮಾಡಿದರು ಕೂಡಾ ಅಭಿವೃದ್ಧಿ ಮಾತ್ರ ಸೂನ್ಯ ಎಂದು ಸಂಸದ ರಮೇಶ ಜಿಗಜಿಣಗಿ ಎಂದು ಹೇಳಿದರು.

ಸಮೀಪದ ಜೇವೂರ ಗ್ರಾಮದಲ್ಲಿ ನಡೆದ ಭಾರತೀಯ ಜನತಾ ಪಾರ್ಟಿ ಭತಗುಣಕಿ ಶಕ್ತಿ ಕೇಂದ್ರತಿಯಿಂದ ಹಮ್ಮಿಕೊಂಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿರವರ 12ನೇ ವರ್ಷಗಳ ಸಾಧನಾ ಸಮಾವೇಶ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮಾತ್ರ ಕಾಂಗ್ರೆಸ್ ಧೂಳಿಪಟ ಆಗುತ್ತದೆ. ಇನ್ನೂ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲ್ಲ. ಪಕ್ಷದ ಕಾರ್ಯಕರ್ತರೆ ನನಗೆ ಉಸಿರು. ನನ್ನ ಪಕ್ಷ ಕಾರ್ಯಕರ್ತರ ಋಣ ಬಹಳಷ್ಟು ದೊಡ್ಡದ್ದು ಎಂದರು.

ಯುವ ಮೋಚಾ ಅಧ್ಯಕ್ಷ ರಾಘವೇಂದ್ರ ಕಾಪಸೆ ಮಾತನಾಡಿ, ನರೇಂದ್ರ ಮೋದಿ ಯವರ ನೇತೃತ್ವದಲ್ಲಿ ಭಾರತ ದೇಶ ಕಳೆದ 12 ವರ್ಷಗಳಲ್ಲಿ ಕೇವಲ ದೇಶದ ಚಿತ್ರಣ ಮಾತ್ರವಲ್ಲದೆ ಅದೃಷ್ಟವನ್ನು ಸಹ ಬದಲಾಯಿಸಿದೆ.

ಜನತೆಯ ಅಚಲ ವಿಶ್ವಾಸ ಮತ್ತು ಸರ್ಕಾರದ ಸೇವಾ ಮನೋಭಾವನೆಯೆ ಈ 12 ವರ್ಷಗಳ ಅತ್ಯಂತ ದೊಡ್ಡ ಶಕ್ತಿ ಎಂಬುದನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದರು.

ಇಂಡಿ ಮಂಡಲ ಅದ್ಯಕ್ಷ ಹಣಮಂತ್ರಾಯಗೌಡ ಪಾಟೀಲ ಮಾತನಾಡಿದರು.

ವೇದ ಮೂರ್ತಿ ಶಿವಯ್ಯ ಹಿರೇಮಠ, ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಮಳುಗೌಡ ಪಾಟೀಲ, ಶೀಲವಂತ ಉಮರಾಣಿ, ರಾಜು ಸಗಾಯಿ, ಕಾಂತುಗೌಡ ಪಾಟೀಲ, ಈರಣ್ಣ ರಾವೂರ, ದೇವಿಂದ್ರ ಕುಂಬಾರ, ಬಸವರಾಜ ಪಾಟೀಲ, ರವಿ ತೇಲಿ, ರವಿ ವಗ್ಗಿ, ವಿಠ್ಠಲಕಾಗರ, ರಾಹುಲ್ ಹಿರೇಮಠ, ಸಿದ್ದು ಚಟ್ಟರಕಿ, ಮಹಾದೇವ ಹೂಗಾರ, ಇಂಡಿ ಮಡಲ ಹಾಗೂ ಭತಗುಣಕಿ ಶಕ್ತಿ ಕೇಂದ್ರದ ಕಾರ್ಯಕರ್ತರು ಉಪಸ್ಥಿತರಿದ್ದರು.



ಕಿರುಸುದ್ದಿ

ಸರ್ಕಾರಿ ಕಾಲೇಜಿನಲ್ಲಿ ಪರಿಸರ ದಿನಾಚರಣೆ

• ಸಿಂಧನೂರು: ತಾಲೂಕಿನ ಜಾಲಿಹಾಳ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಕಾಲೇಜಿನ ಮೈದಾನದಲ್ಲಿ ಸಸಿಗಳನ್ನು ನೆಡಲಾಯಿತು. ಮರಗಳು ಪ್ರಾಣಿಪಕ್ಷಿಗಳ ಮತ್ತು ಮಾನವ ಸಂಕುಲಗಳಿಗೆ ಉಸಿರನ್ನು ನೀಡುತ್ತವೆ,ಉಸಿರು ನಿರಂತರವಾಗಿ ಇರಬೇಕೆಂದರೆ ಹಸಿರು ಬಹಳ ಮುಖ್ಯವಾಗುತ್ತದೆ.ಆ ನಿಟ್ಟಿನಲ್ಲಿ ವಿದ್ಯಾರ್ಥಿ ಯುವಜನರೆಲ್ಲರೂ ಮನೆಗೊಂದು ಮರಗಳನ್ನು ಬೆಳೆಸುವ ಮೂಲಕ ಸಸ್ಯ ಸಂಪತ್ತನ್ನು ಉಳಿಸುವುದರಿಂದ ಜೀವ ಸಂಕುಲಗಳಿಗೆ ಬದುಕುವ ನೆಲೆಯನ್ನು ಕಂಡು ಕೊಂಡಂತಾಗುತ್ತದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಮುರಡಯ್ಯ ಸ್ವಾಮಿ ಅವರು ಹೇಳಿದ್ದಾರೆ. ಈ ವೇಳೆ ಹಿರಿಯ ಉಪನ್ಯಾಸಕರಾದ ವಿಜಯಕುಮಾರ,ಡಾ.ಹುಸೇನಪ್ಪ ಅಮರಾಪುರ, ವೆಂಕಟೇಶ ಬುಕ್ಕನಹಟ್ಟಿ ಗೊರೇಬಾಳ ಸರಕಾರಿ ಪ್ರೌಢಶಾಲೆಯ ಶಾಲಾ ಸುಧಾರಣಾ ಅಧ್ಯಕ್ಷರಾದ ಶಿವಕುಮಾರ,ಸುನೀತಾ ಕುರಿ,ಬಸವರಾಜ ಜಾಲಿಹಾಳ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು.

ಇಂದು ಪ್ರತಿಭಾ ಪುರಸ್ಕಾರ



• ಯಲಬುರ್ಗಾ: ಈ ಕ್ಷೇತ್ರದ ಶಾಸಕರು ಮತ್ತು ನಮ್ಮ ತಂದೆಯವರಾದ ಬಸವರಾಜ ರಾಯರೆಡ್ಡಿ ಅವರು ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಮಂಜೂರು ಮಾಡಿಸುವ ಮೂಲಕ ಈ ಭಾಗದ ಬಡಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ ಎಂದು ಬೆಂಗಳೂರಿನ ಆರಾಮ ಫೌಂಡೇಶನ್ ಸಂಚಾಲಕ ಮಮತಾ ರಾಯರೆಡ್ಡಿ ಹೇಳಿದರು. ಪಟ್ಟಣದ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಜಿಲ್ಲೆಯಲ್ಲೇ ಎಸ್ ಎಸ್ಎಲ್‌ಸಿ ಮತ್ತು ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದುಕೊಂಡ ವಿಧಾನಸಭಾ ಕ್ಷೇತ್ರ ಇದಾಗಿದೆ ಎಂದರು. ಕುಕನೂರು-ಯಲಬುರ್ಗಾ ತಾಲೂಕಿನಲ್ಲಿ 2025–26ನೇ ಶೈಕ್ಷಣಿಕ ವರ್ಷದಲ್ಲಿ ಎಸ್ ಎಸ್ಎಲ್‌ಸಿ ಮತ್ತು ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದುಕೊಂಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜೂ.13ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಬುದ್ಧ, ಬಸವ, ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದು ಉಭಯ ತಾಲೂಕಿನ ವಿದ್ಯಾರ್ಥಿಗಳು ಇದರ ಸದುಯೋಗವನ್ನು ಪಡೆದುಕೊಳ್ಳಬೇಕು ಎಂದರು. ಡಾ.ನಂದಿತಾ ದಾನರಡ್ಡಿ, ಸಾವಿತ್ರಿ ಗೊಲ್ಲರ್, ಜಯಶ್ರೀ ಕಂದಕೂರ, ಗಿರಿಜಾ ಸಂಗಟಿ, ಮಲ್ಲಮ್ಮ ಗೊಂದಿ, ಶರಣಮ್ಮ ಪೂಜಾರ, ಪ್ರವೀಣ ಅಂಗಡಿ ಇದ್ದರು.

ಸಸಿ ನೆಟ್ಟು ನಾರಾಯಣಗೌಡರ ಜನ್ಮದಿನಾಚರಣೆ



• ಕುಷ್ಟಗಿ: ತಾಲೂಕಿನ ದೋಟಿಹಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕ ಕುಷ್ಟಗಿ ಹಾಗೂ ಹೋಬಳಿ ಘಟಕ ಹಾಗೂ ಗ್ರಾಮ ಘಟಕದ ಸಂಯುಕ್ತಾಶ್ರಯದಲ್ಲಿ ಸಸಿ ಹಚ್ಚುವ ಮೂಲಕ ಕರವೇ ರಾಜ್ಯ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರ ಜನ್ಮದಿನ ಆಚರಿಸಲಾಯಿತು. ಕರವೇ ತಾಲೂಕು ಅಧ್ಯಕ್ಷ ಶರಣಪ್ಪ ಮನ್ನೇರಾಳ ಮಾತನಾಡಿ, ನಾಡು, ನುಡಿ, ನೆಲ, ಜಲದ ಪರವಾಗಿ ಸದಾ ಹೋರಾಟದ ಮುಂಚೂಣಿಯಲ್ಲಿ ನಿಂತು, ಕನ್ನಡಿಗರ ಹಕ್ಕುಗಳಿಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಅವರ ಜನ್ಮದಿನ ಆಚರಿಸಲಾಗುತ್ತಿದೆ ಎಂದರು. ಉಪಾಧ್ಯಕ್ಷ ಚೆನ್ನಪ್ಪ ನಾಲಗಾರ ಮಾತನಾಡಿ, ಕರವೇ ಸಂಘಟನೆಯೂ ನಾಡು, ನುಡಿ ಸೇವೆಯ ಜತೆಗೆ ಪರಿಸರ ಸಂರಕ್ಷಣೆ ಮಾಡುತ್ತದೆ. ಪರಿಸರ ಉಳಿಸಬೇಕಾಗಿದೆ ಎಂದರು. ಕರವೇ ಘಟಕದ ಪದಾಧಿಕಾರಿಗಳಾದ ಪರಸಪ್ಪ ಅಳ್ಳಳ್ಳಿ, ಶರಣಬಸವ ಕಂದಕೂರ, ಬಂದೇನವಾಜ್ ಬೀಜಕತ್ತಿ, ಮುಖ್ಯ ಶಿಕ್ಷಕ ಮಲ್ಲಪ್ಪ ಕಿರಗಿ, ಮರಿಯಪ್ಪ ಮುಳ್ಳೂರು, ಗಿಡ್ಡಪ್ಪ ವಡ್ಡರ, ಮಂಜುನಾಥ, ನೆರೆಗಲ್ಲಪ್ಪ ಮಜ್ಜಿಗಿ, ಶರಣಬಸವ ಕಾಟಾಪುರ, ಜಾವೀದ್ ಕಾಟೆವಾಡಿ, ಮಹೆಬೂಬ್ ನಡುಲಮನಿ, ಮಂಜೂರ್ ಅಲಿ ಬನ್ನು, ಶಾಮಿದಸಾಬ ವಾಲಿಕಾರ, ಅಮೀರ್ ವಾಲಿಕಾರ ಇತರರಿದ್ದರು.



ಸಿಂಧನೂರು: ತಾಲೂಕಿನ ಜಾಲಿಹಾಳ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಕಾಲೇಜಿನ ಮೈದಾನದಲ್ಲಿ ಸಸಿಗಳನ್ನು ನೆಡಲಾಯಿತು. ಈ ವೇಳೆ ಹಿರಿಯ ಉಪನ್ಯಾಸಕರಾದ ವಿಜಯಕುಮಾರ,ಡಾ. ಹುಸೇನಪ್ಪ ಅಮರಾಪುರ, ವೆಂಕಟೇಶ ಬುಕ್ಕನಹಟ್ಟಿ ಗೊರೇಬಾಳ ಸರಕಾರಿ ಪ್ರೌಢಶಾಲೆಯ ಶಾಲಾ ಸುಧಾರಣಾ ಅಧ್ಯಕ್ಷರಾದ ಶಿವಕುಮಾರ,ಸುನೀತಾ ಕುರಿ,ಬಸವರಾಜ ಜಾಲಿಹಾಳ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು.

ಗೃಹಲಕ್ಷ್ಮಿಯರೊಂದಿಗೆ ಶ್ರೀನಿವಾಸ್ ಸಂವಾದ

• ಶ್ರೀರಾಮನಗರ: ಗ್ರಾಮದ ಗೃಹಲಕ್ಷ್ಮಿ ಫಲಾನುಭವಿಗಳೊಂದಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್ ಅವರು ಶುಕ್ರವಾರ ಸಂವಾದ ಹಾಗೂ ಚರ್ಚೆ ನಡೆಸಿದರು.

ಕುಂದುಕೊರತೆಗಳನ್ನು ಆಲಿಸಿ ನಂತರ ಮಾತನಾಡಿದ ರೆಡ್ಡಿ ಶ್ರೀನಿವಾಸ್ ಅವರು, ಪಂಚ ಗ್ಯಾರಂಟಿಗಳನ್ನ ಎಲ್ಲ ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳಿ. ಪ್ರತಿ ತಿಂಗಳು 50 ಲಕ್ಷದ ವರೆಗೆ ಗ್ರಾಮದ ಗೃಹಲಕ್ಷ್ಮಿಯರ ಖಾತೆಗೆ ಜಮೆಯಾಗುತ್ತಿದೆ. ಹೊಸ ಫಲಾನುಭವಿಗಳು ಇದ್ದಲ್ಲಿ ಅರ್ಜಿಯನ್ನ ಸಲ್ಲಿಸಿ. ಯಾರಾದರೂ ಫಲಾನುಭವಿ ಮೃತಪಟ್ಟಲ್ಲಿ ಸಂಬಂಧಪಟ್ಟವರ ಗಮನಕ್ಕೆ ತನ್ನಿ ಎಂದು ಮಾಹಿತಿ ತಿಳಿಸಿದರು.

ಈ ವೇಳೆ ಗೃಹಲಕ್ಷ್ಮಿ ಹಣವನ್ನು ಸಮರ್ಪಕವಾಗಿ ಬಳಸಿಕೊಂಡ ಫಲಾನುಭವಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಯೋಜನೆಗಳು ಫಲಾನುಭವಿಗಳಿಗೆ ತಲುಪುವಲ್ಲಿ ನಿರಂತರ ಶ್ರಮಿಸುತ್ತಿರುವ ಸಮಿತಿಯ ಸದಸ್ಯರ, ಕಾರ್ಯಕರ್ತರ, ಅಧಿಕಾರಿಗಳ, ಸಿಬ್ಬಂದಿ ಕಾರ್ಯದ ಬಗ್ಗೆ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಇಓ ರಾಮರೆಡ್ಡಿ ಪಾಟೀಲ್, ಪಿಡಿಓ ನಾಗೇಶ್ ಕುರಿಡಿ, ಗ್ರಾಪಂ ಮಾಜಿ ಸದಸ್ಯರಾದ ಮೆಹಬೂಬ್, ಕರುಟೂರಿ ನಾಗೇಶ್ವರರಾವ್, ಪಿ.ರಾಮಕೃಷ್ಣ, ಬುಲ್ಲಿ ಕಾಪ್, ಸುಂಕಣ್ಣ, ಗ್ರಾಪಂ ಸಿಬ್ಬಂದಿ ಸೇರಿದಂತೆ ಗ್ರಾಮಸ್ಥರಿದ್ದರು.



ಶ್ರೀರಾಮನಗರ: ಗ್ರಾಮದ ಗೃಹಲಕ್ಷ್ಮಿ ಫಲಾನುಭವಿಗಳೊಂದಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್ ಅವರು ಶುಕ್ರವಾರ ಸಂವಾದ ಹಾಗೂ ಚರ್ಚೆ ನಡೆಸಿದರು.

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ

ಸಾಮಾಜಿಕ ಪಿಡುಗುಗಳಿಗೆ ಶಿಕ್ಷಣವೇ ಅಸ್ತ್ರ

• ರಾಯಚೂರು: ಸಮಾಜದಲ್ಲಿ ಬೇರು ಬಿಟ್ಟಿರುವ ಹಲವು ಸಾಮಾಜಿಕ ಪಿಡುಗುಗಳಿಗೆ ಶಿಕ್ಷಣವೇ ಅಸ್ತ್ರ, ಅದರಂತೆ ಬಾಲಕಾರ್ಮಿಕ ಪದ್ಧತಿ ನಿವಾರಣೆಯಾಗಬೇಕಾದರೆ ಎಲ್ಲರಿಗೂ ಶಿಕ್ಷಣ ಸಿಗುವಂತಾಗಬೇಕು. ಅರಿವಿನ ಕೊರತೆಯಿಂದಾಗಿಯೇ ಇಂತಹ ಪದ್ಧತಿಗಳು ಇಂದಿಗೂ ಜೀವಂತವಾಗಿವೆ ಎಂದು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿದ್ದರಾಮಪ್ಪ ಕಲ್ಯಾಣರಾವ್ ಹೇಳಿದರು.

ಶುಕ್ರವಾರ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ–2026ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಎಲ್ಲ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯ ನಿರ್ವಹಣೆ ಮಾಡಬೇಕು. ವಿವಿಧ ಕಾರಣಗಳಿಗೆ ಬಾಲ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಗುರುತಿಸಿ ಶಿಕ್ಷಣ ನೀಡಿದಾಗ ಮಾತ್ರ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯಾಗುತ್ತದೆ ಎಂದರು.



> ಬಾಲಕಾರ್ಮಿಕ ಪದ್ಧತಿಯನ್ನ ಬೇರು ಸಮೇತ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಸರ್ಕಾರದ ಈ ಪ್ರಯತ್ನಕ್ಕೆ ಸಂಘ-ಸಂಸ್ಥೆ, ಸಂಘಟನೆಗಳು ಹಾಗೂ ಸಮುದಾಯಗಳು ಸಹ ಕೈಜೋಡಿಸಿದರೆ ಈ ಪದ್ಧತಿಗೆ ಸಂಪೂರ್ಣ ಕಡಿವಾಣ ಬೀಳಲಿದೆ.
> ■ ಶರಣಮ್ಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ

ಹದಿನಾಲ್ಕು ವರ್ಷದೊಳಗಿನ ಮಕ್ಕಳನ್ನು ಅವರ ಶಿಕ್ಷಣ ಹಕ್ಕಿನಿಂದ ವಂಚಿಸಿ, ದುಡಿಮೆಗೆ ಬಳಸುವುದು ಕಾನೂನು ಪ್ರಕಾರ ಅಪರಾಧ. ಇದಕ್ಕಾಗಿ, ಮಕ್ಕಳಿಂದ ದುಡಿಸಿಕೊಳ್ಳುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಾನೂನಿನಡಿ ಶಿಕ್ಷೆ ವಿಧಿಸಲು ಅವಕಾಶವಿದೆ. ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ನಿಗಾ ಇಡಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಆರತಿ ಮಾತನಾಡಿ, ಬಾಲ ಕಾರ್ಮಿಕರನ್ನು ಪತ್ತೆಗೆ ಸಾರ್ವಜನಿಕರು ಸಹ ನೆರವಾಗಬೇಕು. ತಮ್ಮ ಸುತ್ತಮುತ್ತಲಿನ ಅಂಗಡಿ, ಹೋಟೆಲ್, ಕಾರ್ಖಾನೆ, ತೋಟ ಸೇರಿದಂತೆ ಎಲ್ಲಿಯಾದರೂ ಬಾಲ ಕಾರ್ಮಿಕರು ಕಂಡುಬಂದಲ್ಲಿ ಕಾರ್ಮಿಕ ಇಲಾಖೆಯ 1098 ಸಹಾಯವಾಣಿಗೆಮಾಹಿತಿ ನೀಡಬೇಕು. ಆಗ ಅಧಿಕಾರಿಗಳು ಬಂದು ಮಕ್ಕಳನ್ನು ರಕ್ಷಿಸುತ್ತಾರೆ ಎಂದರು.

ದುಡಿಯುವ ಮಕ್ಕಳು ಎಲ್ಲಿಯಾದರೂ ಕಂಡು ಬಂದಲ್ಲಿ ಸಾರ್ವಜನಿಕರು ಮಕ್ಕಳ ಸಹಾಯವಾಣಿ ಸಂಖ್ಯೆ 1098/112 ಗೆ ಉಚಿತವಾಗಿ ಕರೆ ಮಾಡಿ ಮಾಹಿತಿ ನೀಡುವುದರ ಮೂಲಕ ಸಮಾಜದಲ್ಲಿರುವ ಬಾಲಕಾರ್ಮಿಕ ಪದ್ಧತಿ ಎಂಬ ಪಿಡುಗನ್ನು ಹೋಗಲಾಡಿಸಲು ಎಲ್ಲಾರು ಸಹಕಾರ ನೀಡಬೇಕೆಂದರು.

ನಗರದ ತಹಶೀಲ್ದಾರ್ ಕಾರ್ಯಾಲಯದಿಂದ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದವರೆಗೆ ಜಾಗೃತಿ ಜಾಥಾ ಮಾಡಲಾಯಿತು. ಜಾಥಾದಲ್ಲಿ ಪ್ರತಿಯೊಬ್ಬ ಮಗುವಿನ ಹಕ್ಕು ಶಿಕ್ಷಣ, ದುಡಿಮೆಯಲ್ಲ, ಕೈಯಲ್ಲಿ ಕೆಲಸದ ಆಯುಧ ಬೇಡ, ಜ್ಞಾನದ ಪುಸ್ತಕವಿರಲಿ. ಬಾಲಕಾರ್ಮಿಕ ಪದ್ಧತಿ ದೇಶಕ್ಕೆ ಕಳಂಕ.! ಬಾಲ್ಯದಲ್ಲಿ ದುಡಿಮೆ ಮಕ್ಕಳ ಹಕ್ಕುಗಳ ಕಸಿತ, ಶಿಕ್ಷಣವೇ ಅವರ ನಿಜವಾದ ಭವಿಷ್ಯ ಎಂಬ ಘೋಷಣೆಗಳ ಸಾರ್ವಜನಿಕರ ಗಮನ ಸೆಳೆಯಿತು.

ಜಾಥಾದಲ್ಲಿ ಎಸ್ಪಿ ಅರುಣಾಂಗ್ಶು ಗಿರಿ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ, ಶರಣಪ್ಪ, ಸುದರ್ಶನ, ಡಾ.ಸುರೇಂದ್ರ ಬಾಬು, ಪ್ರಿಯಾಂಕಾ ಸೇರಿದಂತೆ ಇತರರಿದ್ದರು.

ಸರ್ಕಾರಿ ಶಾಲೆಗೆ ಹೋಗದಂತೆ ಮಕ್ಕಳಿಗೆ ದಿಗ್ಬಂಧನ

• ಮಸ್ಕಿ: ತಾಲೂಕಿನ ಹಾಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಂ.ರಾಮಲದಿನ್ನಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಶಾಲೆಗೆ ಹೋಗದಂತೆ ದಿಗ್ಬಂದನ ಹೇರಿದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಕ್ಕಳ ಭವಿಷ್ಯ ಮೇಲೆ ಪರಿಣಾಮ ಬೀರುವ ಸನ್ನಿವೇಶ ಉಂಟಾಗಿದೆ.

ಶೈಕ್ಷಣಿಕ ವರ್ಷ ಆರಂಭವಾಗಿ 12 ದಿನಗಳು ಕಳೆದರೂ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ. ಈ ಶಾಲೆಯಲ್ಲಿ ಸುಮಾರು 25 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಸದ್ಯ ಕಡಿಮೆ ವಿದ್ಯಾರ್ಥಿಗಳಿಂದ ಶಾಲೆಯು ನಡೆಯುತ್ತಿದ್ದು, ಬಿಸಿಯೂಟದ ಸಮಸ್ಯೆ ಕಾಣಿಸಿಕೊಂಡಿದೆ.

ಶಾಲೆಯಲ್ಲಿ ಬಿಸಿಯೂಟ ತಯಾರಿಸುವ ಅಡುಗೆಸಹಾಯಕಿ ಮತ್ತು ಪಾಲಕರ ನಡುವೆ ವೈಯಕ್ತಿಕ ಜಗಳ ಹಾಗೂ ಭಿನ್ನಾಭಿಪ್ರಾಯ ಉಂಟಾಗಿದೆ. ಈ ಸಮಸ್ಯೆ ಪೊಲೀಸ್ ಠಾಣೆ ಮೆಟ್ಟಿಲು ಏರಿ ಸಲ್ಪ ಮಟ್ಟಿನ ಸುಧಾರಣೆ ಕಂಡಿತ್ತು.

ಆದರೆ ಮತ್ತೆ ಸಮಸ್ಯೆ ಸೃಷ್ಟಿಯಾಗಿದ್ದು, ಇದನ್ನು ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳು ಜನಪ್ರತಿನಿಧಿಗಳು ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ಈ ವಿಷಯ ತಿಳಿದು ಇದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಆದೇಶದ ಹಿನ್ನೆಲೆಯಲ್ಲಿ ಪ್ರೌಢಶಾಲಾ ಮುಖ್ಯಗುರುಗಳಾದ ಸುಭಾಷ್ ಸಿಂಗ್ ಅವರು ಗ್ರಾಮಕ್ಕೆ ಭೇಟಿ ನೀಡಿ ಪಾಲಕರ ಸಭೆ ನಡೆಸಿದ್ದರೂ, ಪಾಲಕರು ತಮ್ಮ ನಿರ್ಧಾರದಿಂದ ಹಿಂದೆ ಸರಿದಿಲ್ಲ. ಇದರಿಂದಾಗಿ ಹಸುಗೂಸುಗಳ ಭವಿಷ್ಯ ಮತ್ತು ಶಿಕ್ಷಣ ಕುಂಠಿತಗೊಳ್ಳುತ್ತಿದೆ.



ಶಾಲೆಯ ಮಕ್ಕಳ ಶಿಕ್ಷಣಕ್ಕೆ ಧಕ್ಕೆಯಾಗುತ್ತಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ.

ಒಂದು ಊರಿನಲ್ಲಿ ನಾವು ಅಣ್ಣ ತಮ್ಮ ಇದ್ದಂತೆ ಬದುಕಬೇಕು, ಮಿಂಚಿ ಹೋದ ಸಣ್ಣ ಪುಟ್ಟ ತಪ್ಪುಗಳಿಗೆ ತಿಲಾಂಜಲಿ ಇಟ್ಟು, ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಮಾರುತಿ ಜಿನ್ನಾಪುರ, ಭೀಮೇಶ್ ಜಿನ್ನಾಪುರ ಹಾಗೂ ಬಾಲಸ್ವಾಮಿ ಜಿನ್ನಾಪುರ ಸೇರಿದಂತೆ ಅನೇಕ ಬುದ್ದಿ ಜೀವಿಗಳ ಮನವಿಯಾಗಿದೆ.

ಶಿಕ್ಷಣ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಈಗಾಗಲೇ ಪಾಲಕರಲ್ಲಿರುವ ಆತಂಕವನ್ನು ದೂರ ಮಾಡಿ, ಶಾಲೆಯಲ್ಲಿ ಸೂಕ್ತ ವಾತಾವರಣ ನಿರ್ಮಿಸಿ, ಮಕ್ಕಳು ತಕ್ಷಣವೇ ಶಾಲೆಗೆ ಮರಳುವಂತೆ ಸೂಚನೆ ನೀಡಿದ್ದು, ಊರಿನ ಪ್ರಮುಖರು ಮಕ್ಕಳ ಹಿತ ದೃಷ್ಟಿಯಿಂದ ಬೇದ ಭಾವ ಮರೆತು ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸಿ, ಊರಿನ ಹಿತದೃಷ್ಟಿಯಿಂದ ಹಾಗೂ ಮಕ್ಕಳ ಉತ್ತಮ ಭವಿಷ್ಯಕ್ಕೆ ಸಾಕ್ಷಿಯಾಗಬೇಕಾಗಿದೆ.

ಆಶಾ ಕಾರ್ಯಕರ್ತೆಯರಿಂದ ಪ್ರತಿಭಟನೆ

• ಯಲಬುರ್ಗಾ: ಆಶಾ ಕಾರ್ಯಕರ್ತೆಯರಿಗೆ ಜನವರಿ 2025ರಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಹಾಗೂ ರಾಜ್ಯ ಸರ್ಕಾರದ ಗೌರವಧನ ಒಟ್ಟಿಗೆ ಸೇರಿಸಿ ಕನಿಷ್ಟ ಮಾಸಿಕ ರೂ.10,000 ಗೌರವಧನ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಶುಕ್ರವಾರ ಕ.ರಾ.ಸಂ.ಆಶಾ ಕಾರ್ಯಕರ್ತೆಯರ ಸಂಘ ಹಾಗೂ ಎಐಯುಟಿಯುಸಿ ನೇತೃತ್ವದಲ್ಲಿ ಪಟ್ಟಣದ ಕಿತ್ತೂರ ರಾಣಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಬಳಿಕ ಆಶಾ ಕಾರ್ಯಕರ್ತೆಯರ ತಾಲೂಕಾಧ್ಯಕ್ಷೆ ಶಂಕ್ರವ್ವ ಹಳ್ಳಿಕೇರಿ ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿ ಬಾಕಿ ಇರುವ 3-4 ತಿಂಗಳವರೆಗಿನ ಕೇಂದ್ರದ ಪ್ರೋತ್ಸಾಹಧನ, 1-2 ತಿಂಗಳ ಗೌರವಧನವನ್ನು ನೀಡಬೇಕು ಹಾಗೂ ಉಪ ನಿರ್ದೇಶಕರು, ಇಎಂಎಸ್ ಮತ್ತು ಆಶಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, 2026 ಏ.21ರಂತೆ 9 ವಿವಿಧ ಆಶಾ ಸೇವೆಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರಿಯೆಗೊಳಿಸಿರುವುದಾಗಿ ಇದೆ. ಇದರಿಂದ ಪ್ರತೀ ಕಾರ್ಯಕರ್ತೆಗೆ ರೂ. 500-1000 ವರೆಗೆ ಪ್ರೋತ್ಸಾಹಧನ ಕಡಿತವಾಗಲಿದೆ. ಈ ಸೇವೆಗಳನ್ನು ಮುಂದುವರೆಸಿ. ಪ್ರೋತ್ಸಾಹ ಧನ ನೀಡಲು ಕ್ರಮಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ಅನ್ನಪೂರ್ಣ ಹೆಚ್ ಮಾತನಾಡಿ ಹಲವಾರು ಆಶಾ ಕಾರ್ಯಕರ್ತೆಯರ ಗೌರವ ಧನ, ಪ್ರೋತ್ಸಾಹ ಧನ ಹಲವಾರು ತಿಂಗಳು ಕಡಿತ ಮಾಡಲಾಗಿದೆ. ಬಾಕಿ ಇರುವ ಕಾರ್ಯಕರ್ತೆಯರಿಗೆ ಹಣ ಬಿಡುಗಡೆ ಮಾಡಿ. ಸಮಸ್ತ ಆ್ಯಪ್ ಮೂಲಕ ದಾಖಲಾತಿ ಮಾಡಿಸುವುದನ್ನು ಕೈಬಿಡಬೇಕು. ಮೌಲ್ಯಮಾಪನ ಹೆಸರಲ್ಲಿ ಆಶಾಗಳಿಗೆ ಆಗುತ್ತಿರುವ ಶೋಷಣೆ ನಿಲ್ಲಿಸಬೇಕು. ನಿವೃತ್ತಿ ಆಗಿರುವ ಆಶಾಗಳಿಗೆ ಇರುವ ಇಡಿಗಂಟು ನೀಡಬೇಕು ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸಬೇಕು ಎಂದು ಒತ್ತಾಯಿಸಿದರು. ಬಳಿಕ ತಾಲೂಕು ಟಿಎಚ್ಒಗೆ ಮನವಿ ಸಲ್ಲಿಸಿದರು.

ಮಂಜುಳಾ ಕರಮುಡಿ, ಅನ್ನಪೂರ್ಣ ಬಡಿಗೇರ, ಶಕುಂತಲಾ ಮಂಡಲಗೇರಿ,ತಿಪ್ಪಮ್ಮ, ಶರಣಮ್ಮ, ವಿಜಯಲಕ್ಷ್ಮೀ ಘೋರ್ಪಡೆ, ನೂರಜಾನಬೇಗಂ, ಲಕ್ಷ್ಮವ್ವ ಜಯಶ್ರೀ ಹಲಗೇರಿ, ವಿಜಯಲಕ್ಷ್ಮೀ ತಳವಾರ ಸುನಂದಾ ಚೀವ್ರೋಜಿ, ಶೋಭಾ ಹೂಗಾರ ಸೇರಿದಂತೆ ನೂರಾರು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.



ಪವರ್ ಗ್ರಿಡ್ ಕಂಪನಿಯಿಂದ ರೈತರಿಗೆ ಅನ್ಯಾಯ: ಆರೋಪ

• ಕುಕನೂರು: ತಾಲೂಕಿನ ಸಿಪಿಐ ಮತ್ತು ಪೊಲೀಸ್ ಕಚೇರಿ ವಿದ್ಯುತ್ ಪವರ್ ಗ್ರಿಡ್‌ನ ಕೈಗೊಂಬೆಯಾಗಿದ್ದಾರೆ ಎಂದು ಯುವ ಮುಖಂಡ ಶರಣಪ್ಪ ಗುಂಗಾಡಿ ಹೇಳಿದರು.

ತಾಲೂಕಿನ ಮಸಾಬಹಂಚಿನಾಳ ಮತ್ತು ಇಟಗಿ ರಸ್ತೆಯ ಮಧ್ಯದಲ್ಲಿ ಹಮ್ಮಿಕೊಂಡಿದ್ದ ವಿದ್ಯುತ್ ಪವರ್ ಗ್ರಿಡ್ ಮತ್ತು ಟ್ರಾನ್ಸ್ ಮಿಷನ್ ಲಿಮಿಟೆಡ್ ಕಂಪನಿಯಿಂದ ರೈತರ ಮೇಲೆ ನಡೆಯುತ್ತಿರುವ ಅನ್ಯಾಯವನ್ನು ವಿರೋಧಿಸಿ ನಡೆದ ನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದವರು ಯಲಬುರ್ಗಾ ತಾಲೂಕಿನಲ್ಲಿ ವಿದ್ಯುತ್ ಪರಿವರ್ತಕ ಸಂಬಂಧಪಟ್ಟ ಕಾಮಗಾರಿಗಳಿಂದ ಇಲ್ಲಿಯವರೆಗೂ ರೈತರಿಗೆ ಸಾಕಷ್ಟು ಅನ್ಯಾಯವಾಗುತ್ತಿದೆ. ಸರ್ಕಾರ ರೈತರ ಪರವಾಗಿ ನಿಲ್ಲುವುದಕ್ಕಿಂತಾ ವಿದ್ಯುತ್ ಪರಿವರ್ತಕ ಕಂಪನಿಯವರ ಪರವಾಗಿಯೇ ವಾದಿಸುವುದು ಸರಿಯಾದ ನ್ಯಾಯವಲ್ಲ. ಯಲಬುರ್ಗಾ ತಾಲೂಕಿನ ಸಿಪಿಐ ಕೂಡ ರೈತಪರವಾಗಿ ಕೆಲಸ ಮಾಡುವುದನ್ನು ಬಿಟ್ಟು ಟ್ರಾನ್ಸ್ ಮಿಷನ್ ಲಿಮಿಟೆಡ್ ಕಂಪನಿಯವರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರು ನೀಡುವ ಹಣವನ್ನು ಪಡೆದು ರೈತರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ ಎಂದು ದೂರಿದರು.

ಪವರ ಗ್ರಿಡ್ ವಿದ್ಯುತ್ ಸರಬರಾಜಿನ ಕೆಳಗಡೆ ರೈತರು ಜಮೀನಿನಲ್ಲಿ ಕೆಲಸ ಮಾಡುವಾಗ ಅಪಾಯವಾಗುವ ಸಂಭವವಿದ್ದು ಕಾರಿಡಾರ್ ಲೈನ್ ಕೆಳಗೆ ಬರುವ ರೈತರಿಗೆ ಕಡ್ಡಾಯವಾಗಿ 2 ಕೋಟಿ ರೂ. ವಿಮೆ ಸೌಲಭ್ಯ ನೀಡಲೇಬೇಕು ಎಂದು ಎಚ್ಚರಿಕೆ ನೀಡಿದರು.



ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಹುರಳಿ, ಮಲ್ಲಿಕಾರ್ಜುನ ಅಖಂಡಿ, ಪ್ರಭಾಕರ್ ಆಚಾರ್, ಶೇಖರ ಗೌಡ ಅಖಂಡಿ, ಮಹೇಶ್ ದೊಡ್ಡನಿ, ಪ್ರಭುರಾಜ್ ಪಾಟೀಲ, ಸಂಜೀವಪ್ಪ ಸಂಗಟಿ, ಹನುಮಂತಪ್ಪ ದೇವರಮನಿ, ಮೈಬು ಸಾಬ್ ಮಾಳೆಕೊಪ್ಪ ಹಾಗೂ ಇತರರಿದ್ದರು.

ಅಧಿಕಮಾಸ: ದೇವಸ್ಥಾನದಲ್ಲಿ ಪೂಜೆ

• ಹನುಮಸಾಗರ: ಪಟ್ಟಣದ ಶ್ರೀಬನಶಂಕರಿ ದೇವಸ್ಥಾನದಲ್ಲಿ ದೇವಾಂಗ ಸಮಾಜದ ವತಿಯಿಂದ ಶುಕ್ರವಾರ ಅಧಿಕಮಾಸದ ಅಂಗವಾಗಿ ಮುನಿಸ್ವಾಮಿ ದೇವಾಂಗಮಠ ಅವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಭಕ್ತಿ-ಶ್ರದ್ಧೆಯಿಂದ ಆಯೋಜಿಸಲಾಯಿತು.

ಅಧಿಕಮಾಸದ ಪ್ರಯುಕ್ತ ದೇವಸ್ಥಾನದಲ್ಲಿ ವಿಶೇಷ ಪೂಜೆ, ಹೋಮ, ಲಲಿತಾ ಸಹಸ್ರನಾಮ ಪಾರಾಯಣ, ಚಾಮುಂಡಿ ಅಷ್ಟಕ ಪಠಣ, ಭಕ್ತಿ ಭಜನೆ ಹಾಗೂ ಧ್ಯಾನ ಕಾರ್ಯಕ್ರಮಗಳು ನೆರವೇರಿದವು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು.

ಆಶೀರ್ವಚನ ನೀಡಿದ ಮುನಿಸ್ವಾಮಿ ದೇವಾಂಗಮಠ ಅವರು, ಅಧಿಕಮಾಸವು ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರವಾದ ಮಾಸವಾಗಿದ್ದು, ಈ ಅವಧಿಯಲ್ಲಿ ದೇವರ ಆರಾಧನೆ, ಜಪ, ತಪ, ಹೋಮ ಹಾಗೂ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುವುದರಿಂದ ವಿಶೇಷ ಪುಣ್ಯಫಲ ದೊರೆಯುತ್ತದೆ ಎಂದು ಹೇಳಿದರು.



ಜೀವನದಲ್ಲಿ ಆಧ್ಯಾತ್ಮಿಕ ಚಿಂತನೆ ಮತ್ತು ಸತ್ಕಾರ್ಯಗಳ ಮಹತ್ವವನ್ನು ಅರಿತು ಪ್ರತಿಯೊಬ್ಬರೂ ಧಾರ್ಮಿಕ ಆಚರಣೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಪ್ರವಚನಕಾರ ಶಿವಶಂಕರ ಮೆದಿಕೇರಿ ಮಾತನಾಡಿದರು.

ದೇವಾಂಗ ಸಮಾಜದ ಅಧ್ಯಕ್ಷ ಶಂಕ್ರಪ್ಪ ಸಿನ್ನೂರ, ಉಪಾಧ್ಯಕ್ಷ ಸುರೇಶ್ ಸಿನ್ನೂರ, ಶಂಕ್ರಪ್ಪ ಸಪ್ಪಂಡಿ ಸೇರಿದಂತೆ ಸಮಾಜದ ಮುಖಂಡರು, ಮಹಿಳಾ ಮಂಡಳದ ಸದಸ್ಯರು, ಯುವಕ ಸಂಘದ ಪದಾಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಸಮಗ್ರ ನಿರ್ವಹಣೆಯಿಂದ ಮಂಗನ ಬಾಳ ಕಳೆ ನಿಯಂತ್ರಣ ಸಾಧ್ಯ

• ಕಲಬುರಗಿ: ಜಿಲ್ಲೆಯ ಹಲವು ಭಾಗಗಳಲ್ಲಿ ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು ಬೆಳೆಗಳಿಗೆ ಮಂಗನ ಬಾಳ (ಕಸ್ಕುಟ/ಅಂತರವಳ್ಳಿ) ಕಳೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಪರಾವಲಂಬಿ ಸ್ವಭಾವದ ಈ ಕಳೆ ತೊಗರಿ, ಹೆಸರು, ಉದ್ದು, ಕಡಲೆ, ಅಗಸೆ, ಹುಚ್ಚೆಳ್ಳು ಸೇರಿದಂತೆ ಹಲವು ಬೆಳೆಗಳಿಗೆ ಅಂಟಿಕೊಂಡು ಬೆಳೆಯುವುದರಿಂದ ಇಳುವರಿ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಕೃಷಿ ಇಲಾಖೆಯ ಮಾಹಿತಿ ಪ್ರಕಾರ, ಮಂಗನ ಬಾಳ ಕಳೆಗೆ ಸ್ವಂತ ಬೇರುಗಳಿಲ್ಲ,ಇದು ಬೀಜಗಳ ಮೂಲಕ ಹರಡಿ ಸಮೀಪದಲ್ಲಿರುವ ಬೆಳೆಗಳ ಕಾಂಡಗಳಿಗೆ ಸುತ್ತಿಕೊಂಡು ಅವುಗಳಿಂದಲೇ ಪೋಷಕಾಂಶಗಳನ್ನು ಹೀರಿಕೊಳ್ಳುತ್ತದೆ. ಪರಿಣಾಮವಾಗಿ ಬೆಳೆ ದುರ್ಬಲಗೊಂಡು ಇಳುವರಿ ಕುಸಿಯುತ್ತದೆ.

ತಜ್ಞರ ಪ್ರಕಾರ, ಈ ಕಳೆ ಹೊಲಕ್ಕೆ ಪ್ರವೇಶಿಸದಂತೆ ತಡೆಯುವುದು ಅತ್ಯುತ್ತಮ ಕ್ರಮವಾಗಿದೆ. ಶುದ್ಧ ಬಿತ್ತನೆ ಬೀಜಗಳ ಬಳಕೆ, ಬೆಳೆ ಪರಿವರ್ತನೆ ಹಾಗೂ ಆರಂಭಿಕ ಹಂತದಲ್ಲೇ ಕಳೆ ನಿರ್ಮೂಲನೆ ಮಾಡುವುದರಿಂದ ಸಮಸ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

ಬಾಧಿತ ಜಮೀನಿನಲ್ಲಿ ದ್ವಿದಳ ಬೆಳೆಗಳ ಬದಲಿಗೆ ಏಕದಳ ಧಾನ್ಯ ಬೆಳೆಗಳನ್ನು ಬೆಳೆಯುವುದರಿಂದ ಕಳೆಯ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಜೊತೆಗೆ, ಕಳೆ ಕಂಡುಬಂದ ತಕ್ಷಣವೇ ಅದನ್ನು ಕತ್ತರಿಸಿ ಸುಟ್ಟು ನಾಶಪಡಿಸುವುದು ಅಗತ್ಯವಾಗಿದೆ.ಕೃಷಿ ಇಲಾಖೆ ರೈತರಿಗೆ ಕಳೆನಾಶಕಗಳ ಬಳಕೆಯ ಕುರಿತು ಸಹ ಸಲಹೆ ನೀಡಿದೆ. ಬೆಳೆ ಇಲ್ಲದ ಹೊಲಗಳಲ್ಲಿ ಪ್ಯಾರಾಕ್ವಾಟ್ ಹಾಗೂ ಬಿತ್ತನೆಯ ನಂತರ ಪೆಂಡಿಮೆಥಲಿನ್ ಮತ್ತು ಇಮಾಜೆಥಾಪೈರ್ ಬಳಕೆಯಿಂದ ಕಳೆ ನಿಯಂತ್ರಣ ಸಾಧ್ಯವೆಂದು ಕೃಷಿ ಇಲಾಖೆ ತಿಳಿಸಿದೆ.



> ಮಂಗನ ಬಾಳ ಕಳೆ ಆರಂಭಿಕ ಹಂತದಲ್ಲೇ ನಿಯಂತ್ರಿಸಿದರೆ ಬೆಳೆ ನಷ್ಟವನ್ನು ತಪ್ಪಿಸಬಹುದು. ರೈತರು ಶುದ್ಧ ಬೀಜ ಬಳಕೆ, ಬೆಳೆ ಪರಿವರ್ತನೆ ಮತ್ತು ಶಿಫಾರಸು ಮಾಡಿದ ಕಳೆನಾಶಕಗಳ ಬಳಕೆಗೆ ಆದ್ಯತೆ ನೀಡಬೇಕು. ಕಳೆ ಕಾಣಿಸಿಕೊಂಡ ಕೂಡಲೇ ಕ್ರಮ ಕೈಗೊಳ್ಳುವುದು ಅತ್ಯಂತ ಮುಖ್ಯವಾಗಿದೆ.
> ■ ಸಮದ್ ಪಟೇಲ, ಜಂಟಿ ಕೃಷಿ ನಿರ್ದೇಶಕ

ಮಂಗನ ಬಾಳ ಕಳೆ ನಿಯಂತ್ರಣಕ್ಕೆ 5 ಸೂತ್ರಗಳು

- ಶುದ್ಧ ಹಾಗೂ ಕಳೆಬೀಜ ರಹಿತ ಬಿತ್ತನೆ ಬೀಜ ಬಳಕೆ
- ಬಾಧಿತ ಜಮೀನಿನಲ್ಲಿ ಏಕದಳ ಬೆಳೆಗಳಿಗೆ ಆದ್ಯತೆ
- ಕಳೆ ಕಂಡ ತಕ್ಷಣ ಕತ್ತರಿಸಿ ಸುಟ್ಟು ನಾಶಪಡಿಸುವುದು
- ಬಿತ್ತನೆಗೂ ಮುನ್ನ ನೀರುಣಿಸಿ ಮೊಳಕೆಯಾದ ಕಳೆಯನ್ನು ನಾಶಪಡಿಸುವುದು
- ಕೃಷಿ ಇಲಾಖೆಯ ಶಿಫಾರಸಿನಂತೆ ಕಳೆ ನಾಶಕಗಳ ಬಳಕೆ

ಮಾರ್ಚ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಿ

- ಡೋಣಿ-ಕುಷ್ಟಗಿ ಮಾರ್ಗದ ಅಡೆತಡೆ ನಿವಾರಣೆಗೆ 3 ತಿಂಗಳ ಗಡುವು
- ತ್ವರಿತ ಕ್ರಮಕ್ಕಾಗಿ ಜಿಲ್ಲಾಧಿಕಾರಿ, ಎಸ್ಪಿ ಅವರೊಂದಿಗೆ ಉನ್ನತ ಮಟ್ಟದ ಸಮನ್ವಯ ಸಭೆ
- ಕೆಪಿಟಿಸಿಎಲ್ ಎಂಡಿ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಸೂಚನೆ

• ಕೊಪ್ಪಳ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ದ ವ್ಯವಸ್ಥಾಪಕ ನಿರ್ದೇಶಕರಾದ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅವರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ನಿರ್ಮಾಣವಾಗುತ್ತಿರುವ ಬೃಹತ್ 400ಕೆವಿ (ಇಎಚ್‌ವಿ) ವಿದ್ಯುತ್ ಉಪಕೇಂದ್ರದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದರು.

ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ಉತ್ಪಾದನೆಯಾಗುವ ನವೀಕರಿಸಬಹುದಾದ ಹಸಿರು ವಿದ್ಯುತ್ ಅನ್ನು ರಾಜ್ಯ ಹಾಗೂ ದೇಶದ ಇತರೆ ಭಾಗಗಳಿಗೆ ಸಮರ್ಪಕವಾಗಿ ತಲುಪಿಸುವ ನಿಟ್ಟಿನಲ್ಲಿ ಅತ್ಯಂತ ನಿರ್ಣಾಯಕವಾಗಿರುವ, ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ನಿರ್ಮಾಣವಾಗುತ್ತಿರುವ ಬೃಹತ್ 400ಕೆವಿ ವಿದ್ಯುತ್ ಉಪಕೇಂದ್ರದ ಕಾಮಗಾರಿಯನ್ನು ಮಾರ್ಚ್ 2027ರೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಜೆ ವೇಳೆ ಜಿಲ್ಲಾಡಳಿತ ಭವನಕ್ಕೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್ ಅರಸಿದ್ದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದ ಡಾ. ರಾಮ್ ಪ್ರಸಾತ್ ಮನೋಹರ್ ಅವರು, ಈ ಬೃಹತ್ ಉಪಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು (ಸ್ಟೇಷನ್ ಚಾರ್ಜ್ ಮಾಡಲು) ಡೋಣಿ-ಕುಷ್ಟಗಿ ಫೀಡರ್ ಮಾರ್ಗವು ಅತ್ಯಂತ ಪ್ರಮುಖವಾಗಿದೆ. ಈ ಮಾರ್ಗವು ಹಸಿರು ಇಂಧನ ಸಾಗಣೆಯ (ಗ್ರೀನ್ ಎನರ್ಜಿ ಟ್ರಾನ್ಸಪೋರ್ಟೇಶನ್) ಜೀವನಾಡಿಯಾಗಿದ್ದು, ಇದು ಪೂರ್ಣಗೊಂಡರಷ್ಟೇ ಉಪಕೇಂದ್ರದ ಕಾರ್ಯಾರಂಭ ಸಾಧ್ಯವಾಗಲಿದೆ. ಆದರೆ, ಈ ಪ್ರಮುಖ ವಿದ್ಯುತ್ ಮಾರ್ಗದ ಕಾಮಗಾರಿಗೆ ಕೆಲವೆಡೆ ಮಾರ್ಗಾಧಿಕಾರ ಅಥವಾ ರೈಟ್ ಆಫ್ ವೇ (ಆರ್‌ಒಡಬ್ಲ್ಯು) ಸಮಸ್ಯೆಗಳು ಅಡ್ಡಿಯಾಗಿವೆ. ಈ ಪ್ರಸರಣ ಮಾರ್ಗಕ್ಕೆ ಎದುರಾಗಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಲು ಎಂಜಿನಿಯರಿಂಗ್ ತಂಡಗಳಿಗೆ ಇದೆ ವೇಳೆ 3 ತಿಂಗಳ ಗಡುವು ವಿಧಿಸಿದರು. ಭೂಮಿ ಮತ್ತು ಆರ್‌ಒಡಬ್ಲ್ಯು ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲು ಅಗತ್ಯವಿರುವ ಎಲ್ಲಾ ಆಡಳಿತಾತ್ಮಕ ಮತ್ತು ಪೊಲೀಸ್ ಭದ್ರತಾ ಸಹಕಾರವನ್ನು ಒದಗಿಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದರು.



ಜಿಲ್ಲಾಡಳಿತದೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸುವ ಮೂಲಕ ಮಾರ್ಚ್ 2027ರೊಳಗೆ ಸಂಪೂರ್ಣ ವ್ಯವಸ್ಥೆಯನ್ನು ಸಜ್ಜುಗೊಳಿಸಲಾಗುವುದು ಎಂದು ಹೇಳಿದರು.

ಕಿರುಸುದ್ದಿ

ಶಾಸಕ ಹರ್ಷದ್‌ಗೆ ಸಚಿವ ಸ್ಥಾನ ನೀಡಿ; ಒತ್ತಾಯ

ಬಳ್ಳಾರಿ: ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಹರ್ಷದ್ ಅವರಿಗೆ ಸಿಎಂ ಡಿ.ಕೆ.ಶಿವಕುಮಾರ ಅವರ ನೇತೃತ್ವದ ನೂತನ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ, ಕಾಂಗ್ರೆಸ್ ಯುವ ಮುಖಂಡ ಫರಾನ್ ನೇತೃತ್ವದಲ್ಲಿ ನಗರದ ಅಧಿದೇವತೆ ಶ್ರೀಕನಕ ದುರ್ಗಮ್ಮ ದೇವಾಲಯದಲ್ಲಿ ಶುಕ್ರವಾರ 101 ತೆಂಗಿನಕಾಯಿ ಒಡೆದು, ವಿಶೇಷ ಪೂಜೆ ಸಲ್ಲಿಸಿ, ಅಭಿಮಾನಿಗಳು ಪ್ರಾರ್ಥಿಸಿದರು.

ನಂತರ ದೇವಾಲಯದ ಎದುರು ಜಮಾಯಿಸಿದ ಕಾಂಗ್ರೆಸ್‌ನ ನೂರಾರು ಕಾರ್ಯಕರ್ತರು, ಅಭಿಮಾನಿಗಳು ಶಾಸಕ ಹರ್ಷದ್ ರಿಜ್ವಾನ್ ಅವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ, ಸಚಿವ ಸ್ಥಾನ ದೊರೆಯಲಿ ಎಂದು ಪ್ರಾರ್ಥಿಸಿದರು. ಈ ವೇಳೆ ಕಾಂಗ್ರೆಸ್ ಯುವ ಮುಖಂಡ ಫರಾನ್ ಅಹ್ಮದ್ ಮಾತನಾಡಿ, ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಹರ್ಷದ್‌ಗೆ ಸಚಿವ ಸ್ಥಾನ ನೀಡಬೇಕು. ಈ ಬೇಡಿಕೆ ನಮ್ಮದಷ್ಟೇ ಅಲ್ಲ, ನಾಡಿನ ಜನರ ಬೇಡಿಕೆಯಾಗಿದೆ. ಎರಡನೇ ಪಟ್ಟಿಯಲ್ಲಿ ಆದರೂ ವರಿಷ್ಠರು ರಿಜ್ವಾನ್ ಹರ್ಷದ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಕಾಂಗ್ರೆಸ್ ಯುವ ನಾಯಕ ಬಿ.ಎಂ.ಪಾಟೀಲ ಸೇರಿದಂತೆ ವಿವಿಧ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ಮಕ್ಕಳಿಗೆ ಉತ್ತಮ ಭವಿಷ್ಯಕ್ಕೆ ಶಿಕ್ಷಣ ನೀಡಿ: ನ್ಯಾ. ಆನಂದ



ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ತಾಪಂ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ಶಿಶು ಅಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಅಂಗವಾಗಿ ನಡೆದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ಜಾಗೃತ ಜಾಥಕ್ಕೆ ಕಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ ಎಚ್. ಕೊಣ್ಣೂರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ಪ್ರತಿಜ್ಞಾ ವಿಧಿಯನ್ನು ಬೋಧಿಸಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ನಂತರ ಮಾತನಾಡಿ, ಪ್ರತಿಯೊಬ್ಬ ಮಕ್ಕಳಿಗೂ ಶಿಕ್ಷಣ ಪಡೆಯುವ ಹಕ್ಕನ್ನು ನೀಡಲಾಗಿದ್ದು, 14 ವರ್ಷದೊಳಗಿನ ಮಕ್ಕಳನ್ನು ಪಾಲಕರು ಮಕ್ಕಳಿಗೆ ದುಡಿಮೆಗೆ ಕಳುಹಿಸದೆ ಅವರಿಗೆ ಉತ್ತಮವಾದ ಶಿಕ್ಷಣವನ್ನು ನೀಡಿ ಉತ್ತಮ ಭವಿಷ್ಯವನ್ನು ರೂಪಿಸಬೇಕು. ಅದ್ದರಿಂದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಎಂದರು. ಪಟ್ಟಣದ ತಹಶೀಲ್ದಾರ್ ಕಚೇರಿಯ ಆವರಣದಿಂದ ಬಸವ ವೃತ್ತದವರೆಗೆ ಜಾಥಾ ಮೂಲಕ ಬಂದು ಮಳಿಗೆಗಳಿಗೆ ಹೋಗಿ ಅಲ್ಲಿನ ಶಾಲಾ ಮಕ್ಕಳಿಂದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ಜಾಗೃತ ಜಾಥಾ ನಡೆಯಿತು. ವಕೀಲರ ಸಂಘದ ಅಧ್ಯಕ್ಷ ರವಿಕುಮಾರ ಪಾಟೀಲ, ಉಪಾಧ್ಯಕ್ಷ ವಿಶ್ವನಾಥ ರಾಯಪ್ಪ, ಪಿ.ಬಿ.ಸೋಮಶೇಖರ, ಎಸ್.ಕೆಂಚರೆಡ್ಡಿ, ಕಾರ್ಮಿಕ ಇಲಾಖೆ ತಾಲೂಕು ನಿರೀಕ್ಷಕ ಮಲ್ಲಪ್ಪದೊರೆ, ಶಿಕ್ಷಣ ಇಲಾಖೆ ಮಹೇಶ್, ಆರೋಗ್ಯ ಇಲಾಖೆ ಡಾ.ಶರಣಪ್ಪ, ದೈಹಿಕ ಶಿಕ್ಷಕ ಶ್ಯಾಮ ನಾಯ್ಕ ಸೇರಿದಂತೆ ಇನ್ನಿತರು ಇದ್ದರು.

ರೇವೂರ ಬೆಂಬಲಿಗರ ಪ್ರತಿಭಟನೆ ರಾಜಕೀಯ ಪ್ರೇರಿತ

ಕಲಬುರಗಿ: ಕಳೆದ 20 ವರ್ಷಗಳ ರೇವೂರು ಕುಟುಂಬದ ಆಡಳಿತವನ್ನು ತಿರಸ್ಕರಿಸಿ, ಅಭಿವೃದ್ಧಿಯತ್ತ ಸಾಗುತ್ತಿರುವ ಕಲಬುರಗಿ ದಕ್ಷಿಣ ಮತಕ್ಷೇತ್ರದಲ್ಲಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಬೆಂಬಲಿಗರು ನಡೆಸಿದ ಪ್ರತಿಭಟನೆ ಸಂಪೂರ್ಣ ರಾಜಕೀಯ ಪ್ರೇರಿತ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರಾದ ಹುಲಿಗೆಪ್ಪ ಕನಕಗಿರಿ, ಲಾಲ ಅಹ್ಮದ್ ಶೇಖ್ ಅವರು, ತಮ್ಮ ನಾಯಕರ ರಾಜಕೀಯ ಅಸ್ತಿತ್ವ ಉಳಿವಿಗಾಗಿ, ಜನಹಿತವನ್ನು ಬದಿಗೊತ್ತಿ ಈ ಪ್ರತಿಭಟನೆ ನಡೆಸಲಾಗಿದೆ ಎಂದರು.

ಕಳೆದ ಎರಡು ದಶಕಗಳ ಕಾಲ ಭಾವನಾತ್ಮಕ ಹಾಗೂ ಮತೀಯ ವಿಚಾರಗಳನ್ನು ಮುಂದಿಟ್ಟುಕೊಂಡು ಗೆಲುವು ಸಾಧಿಸುತ್ತಿದ್ದವರಿಗೆ, 2023ರ ನಂತರ ಕ್ಷೇತ್ರದಲ್ಲಿ ಆರಂಭವಾಗಿರುವ 'ನಿಜವಾದ ಅಭಿವೃದ್ಧಿ'ಯನ್ನು ಕಂಡು ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ರೇವೂರ ಕುಟುಂಬ ಮೂವರು ಶಾಸಕರಾಗಿದ್ದರೂ, ದಶಕಗಳ ಕಾಲ ಜನರ ಸಂಪರ್ಕಕ್ಕಾಗಿ ಒಂದು ಕಚೇರಿಯನ್ನು ತೆರೆಯದಿರುವುದು ಅವರ ಜನವಿರೋಧಿ ಧೋರಣೆಗೆ ಸಾಕ್ಷಿ ಎಂದು ಟೀಕಿಸಿದರು. ಮಹಾನಗರ ಪಾಲಿಕೆ ಮೇಯರ್ ವರ್ಷಾ ಜಾನೆ, ಮುಖಂಡರಾದ ದಶರಥ ಬಾಬು ಒಂಟಿ, ವಾಣಿಶ್ರೀ, ಸಂತೋಷ ಬೆಣ್ಣೂರ, ಪ್ರಶಾಂತ ಕೊರಳ್ಳಿ ಇತರರಿದ್ದರು.



ಬಳ್ಳಾರಿ: ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಹರ್ಷದ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ, ಕಾಂಗ್ರೆಸ್ ಯುವ ಮುಖಂಡ ಫರಾನ್ ನೇತೃತ್ವದಲ್ಲಿ ನಗರದ ಅಧಿದೇವತೆ ಶ್ರೀಕನಕ ದುರ್ಗಮ್ಮ ದೇವಾಲಯದಲ್ಲಿ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಿ, ಅಭಿಮಾನಿಗಳು ಪ್ರಾರ್ಥಿಸಿದರು.

ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಶ್ರಮಿಸಿ

ಹೂವಿನಹಡಗಲಿ: ಪ್ರತಿದಿನ ಪ್ರತಿ ಕ್ಷಣವೂ ಗಿಡಮರಗಳ ಸಂರಕ್ಷಣೆಗೆ ಶ್ರಮಿಸಬೇಕು. ನಾಡಿನ ಪ್ರತಿಯೊಬ್ಬರ ಪರಿಸರ ರಕ್ಷಣೆಗಾಗಿ ಗಿಡಮರಗಳನ್ನು ಬೆಳೆಸುವ ನಿಟ್ಟಿನಲ್ಲಿ ಮುಂದಾಗಬೇಕು. ಮನೆಗೊಂದು ಮರ ಊರಿಗೊಂದು ವನ ಎಂಬುವಂತೆ ನೋಡಿಕೊಳ್ಳಬೇಕು. ಪರಿಸರ ಕಲುಷಿತಗೊಂಡರೆ ಮುಂದಿನ ದಿನಗಳಲ್ಲಿ ಮನುಕುಲಕ್ಕೆ ಉಳಿಗಾಲವಿಲ್ಲ ಎಂದು ಜೆಸಿಐ ನಿಸರ್ಗ ಬಳಗದ ಅಧ್ಯಕ್ಷ ಮಹಾಬಲೇಶ್ವರ ದಿವಾಕರ ಹೇಳಿದರು.

ಜೆಸಿಐ ನಿಸರ್ಗ ಬಳಗ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಈ ಶಿಕ್ಷಣ ಸಂಸ್ಥೆಯಲ್ಲಿ ನಾವು 2017ರಲ್ಲಿ ಪರಿಸರ ದಿನಾಚರಣೆ ಮಾಡಿದ್ದೇವೆ. ನಾವು ಹಾಕಿದ ಗಿಡ ಬಹಳ ಎತ್ತರಕ್ಕೆ ಬೆಳೆದಿವೆ. ಈ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಅನೇಕ ಪ್ರಶಸ್ತಿಗಳನ್ನು ಗಳಿಸಿದೆ ಎಂದರು.

ಪ್ರಾಂಶುಪಾಲ ಎಸ್.ಗುರುಸ್ವಾಮಿ ಮಾತನಾಡಿ, ಗಿಡ ಮರಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದರು. ಜೆಸಿಐ ವಲಯ ಅಧ್ಯಕ್ಷ ಹಿತೇಶ ಜೈನ್, ಜೆಸಿಐ ವಲಯ ಉಪಾಧ್ಯಕ್ಷ ನಿಯಾಜ್ ವಾರದ, ಪ್ರಾಂಶುಪಾಲ ಹೆಚ್.ಪಿ.ರಮೇಶ, ಜೆಸಿಐ ವಲಯ ತರಬೇತುದಾರರು ದ್ವಾರಕೇಶ ರೆಡ್ಡಿ, ಕಾರ್ಯಕ್ರಮದ ನಿರ್ದೇಶಕರು ಜೆಸಿ.ನಂದೀಶ, ಕೋಡಿಹಳ್ಳಿ ವಿನಾಯಕ ಇತರರಿದ್ದರು.



ಹೂವಿನಹಡಗಲಿ: ಜೆಸಿಐ ನಿಸರ್ಗ ಬಳಗ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಜರುಗಿತು. ಜೆಸಿಐ ವಲಯ ಅಧ್ಯಕ್ಷ ಹಿತೇಶ ಜೈನ್, ಜೆಸಿಐ ವಲಯ ಉಪಾಧ್ಯಕ್ಷ ನಿಯಾಜ್ ವಾರದ, ಪ್ರಾಂಶುಪಾಲ ಹೆಚ್.ಪಿ.ರಮೇಶ, ಜೆಸಿಐ ವಲಯ ತರಬೇತುದಾರರು ದ್ವಾರಕೇಶ ರೆಡ್ಡಿ, ಕಾರ್ಯಕ್ರಮದ ನಿರ್ದೇಶಕರು ಜೆಸಿ.ನಂದೀಶ, ಕೋಡಿಹಳ್ಳಿ ವಿನಾಯಕ ಇತರರಿದ್ದರು.

6.10 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ನಾಯ್ಕ್ ಭೂಮಿಪೂಜೆ

ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಕ್ರಮ

ಹಗರಿಬೊಮ್ಮನಹಳ್ಳಿ: ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕ ಹಾಗೆ ಪ್ರಮುಖ ರಸ್ತೆ ಗ್ರಾಮೀಣ ಭಾಗದ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಗೊಳಿಸಲಾಗುವುದು ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಶುಕ್ರವಾರ ಹೊಸಪೇಟೆ ಶಿವಮೊಗ್ಗ ರಾಜ್ಯ ಹೆದ್ದಾರಿ-25ರಸ್ತೆ, 28.00ರಿಂದ 31.00 ರವರೆಗೆ 31.00 ರಿಂದ 45.00 ರವರೆಗೆ ಆಯ್ದ ಭಾಗಗಳು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ನೇಮಿ ರಾಜ್ ನಾಯ್ಕ ಚಾಲನೆ ನೀಡಿ ಮಾತನಾಡಿ, ರಸ್ತೆ ಹಾಳಾಗಿ ಅಪಘಾತ ಸಂಭವಿಸಿ ಅನಾಹುತ ನಡೆದಿವೆ ಜನರ ಸುರಕ್ಷತೆ ದೃಷ್ಟಿಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಕೆ.ಕೆ.ಆರ್. ಡಿ ಬಿ ಅನುದಾನದಲ್ಲಿ 6.10 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ

ಈ ಹಿಂದೆ 4 ಕೀ.ಮಿ ರಸ್ತೆ ಅಭಿವೃದ್ಧಿಕಾಮಗಾರಿ ಮಾಡಲಾಗಿದ್ದು ಇಂದು 5 ಕೀ. ಮೀ ವ್ಯಾಪ್ತಿ ರಸ್ತೆಗೆ ಎರಡು ಬದಿ ಜಂಗಲ್ ಕಟಿಂಗ್ ಡಬ್ಬಲ್ ಕೋಟ್ ಟಾರ್ ಮಾಡಲಾಗುತ್ತದೆ. ತಾಲೂಕಿನ ತಂಬ್ರಹಳ್ಳಿ ರಸ್ತೆಗೆ 10 ಕೋಟಿ, ಚಿಂತ್ರಪಳ್ಳಿ ಹಾಗೂ ವರಲಹಳ್ಳಿ 5 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಜೊತೆಗೆ ವರಲಹಳ್ಳಿ ಬಳಿ 5 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗುವುದು. 6 ಕೋಟಿ ವೆಚ್ಚದಲ್ಲಿ ನಾಣ್ಯಾಪುರ ಹೋಸ್ಕೆರಿ ರಸ್ತೆ, ಮತ್ತು ಕಡಲಬಾಳು, ಬ್ಯಾಲಾಳು, ಕೆಚ್ಚಿನ ಬಂಡಿ, ದಶಮಾಪುರ ಆನೇಕಲ್ಲು ರಸ್ತೆ, ವರಲಹಳ್ಳಿ ಉಪ್ಪಾರಗಟ್ಟೆ ರಸ್ತೆ ಹಾಗೂ ಇಟಗಿ ರಸ್ತೆ ಅಭಿವೃದ್ಧಿಗೊಳಿಸಲಾಗುವುದು.

ಕೊಲ್ಲಿ ಯುದ್ಧದ ಪರಿಣಾಮವಾಗಿ ರೈತರ ಅಗತ್ಯತೆಗೆ ತಕ್ಕಂತೆ ಯೂರಿಯಾ ರಸಗೊಬ್ಬರ ಸಿಗುವುದು ಕಷ್ಟ.ಯೂರಿಯಾ ಬದಲಾಗಿ ನ್ಯಾನೋ ಯೂರಿಯಾ ಉಪಯೋಗಿಸಿ ಗೊಬ್ಬರ ಅಂಗಡಿಯವರು ರಸಗೊಬ್ಬರ ಧರ ಹೆಚ್ಚಿನ ಬೆಲೆಗೆ ಮಾರಾಟ ಮಾಡುವಂತಿಲ್ಲ ಈ ಬಗ್ಗೆ ಕ್ರಮ ವಹಿಸಲು ಜೆ ಡಿ ಹಾಗೂ ಎ ಡಿ ಅವರಿಗೆ ತಿಳಿಸಲಾಗಿದೆ. ರೈತರು ಆಹಾರ ಧಾನ್ಯ ಬೆಳೆಯಲು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸೋಮವಾರದಿಂದ ಪ್ರತಿಯೊಬ್ಬ ರೈತರಿಗೆ ಎರಡು ಕೆ.ಜಿ.ತೊಗರಿ ಬೀಜವನ್ನು ಉಚಿತವಾಗಿ ವಿತರಣೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ನಾಣ್ಯಾಪುರದ ಕೃಷ್ಣಮೂರ್ತಿ ಶೆಟ್ರು, ತಾಲೂಕ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಕಾರ್ಯದರ್ಶಿ ಪಾಂಡುರಂಗ ನಾಯ್ಕ್, ಮುಖಂಡರಾದ ಮಂಜುನಾಥ ಗೌಡ ಸಿದ್ದರಾಜು, ಕನಕಪ್ಪ, ಕೊಟ್ರಗೌಡ, ಚೆನ್ನಪ್ಪ, ಮರಿಲಿಂಗನಗೌಡ, ಮಲ್ಲಿಕಾರ್ಜುನ ಗೌಡ, ಪಂಪಣ್ಣ ಶಿವನಂದಪ್ಪ, ಜೇ ಶ್ರೀನಿವಾಸ, ದಿವಾಕರ ವೀರನಗೌಡ, ಲೋಕೋಪಯೋಗಿ ಇಲಾಖೆಯ ಎಇಇ ಸತೀಶ್ ನಾಯ್ಕ್, ಎಇ ಲಕ್ಷ್ಮಣ ನಾಯ್ಕ್,ಜೇಇಗಳಾದ ಅರ್ಚನಾ, ಸುನಿಲ್, ಪಿಡಿಒ ಕೊಟ್ರೇಶ್ ಜಗಳೂರು, ಶಾಸಕರ ಆಪ್ತ ಸಹಾಯಕ ಬ್ಯಾಟಿ ನಾಗರಾಜ್ ಸೇರಿದಂತೆ ಹೊಸ ಆನಂದ ದೇವನಹಳ್ಳಿ ಗ್ರಾಮದ ಇತರ ಮುಖಂಡರು ನಾಗರಿಕರು ಇದ್ದರು.



> ಹಗರಿಬೊಮ್ಮನಹಳ್ಳಿ ತಾಲೂಕ ವ್ಯಾಪ್ತಿಯ ರಾಜ್ಯ ಹೆದ್ದಾರಿ ರಸ್ತೆ ತಾಲೂಕಿನ ಗ್ರಾಮೀಣ ಭಾಗದ ಪ್ರಮುಖ ರಸ್ತೆ ಸೇರಿದಂತೆ ಎಲ್ಲ ರಸ್ತೆಗಳನ್ನು 90 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲು ಟೆಂಡರ್ ಆಗಿದೆ . ಎರಡು ವರ್ಷಗಳ ಅವಧಿಯಲ್ಲಿ ಶೇ.80% ರಷ್ಟು ರಸ್ತೆ ಅಭಿವೃದ್ಧಿಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.
>
> ■ ಕೆ.ನೇಮಿ ರಾಜ್ ನಾಯ್ಕ್, ಶಾಸಕರು

ಸರ್ಕಾರಿ ಆಸ್ಪತ್ರೆಗೆ ಜಿಪಂ ಸಿಇಒ ಮಹಮ್ಮದ್‌ಭೇಟಿ

ಔಷಧ ವಿತರಕ ಅಧಿಕಾರಿಗೆ ತರಾಟೆ

ಸಿರುಗುಪ್ಪ: ನಗರದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಸ್ಪತ್ರೆಯ ಆವರಣ, ವಾರ್ಡ್‌ಗಳು, ಶೌಚಾಲಯ ಮತ್ತು ಹೆರಿಗೆ, ಶಸ್ತ್ರಚಿಕಿತ್ಸೆ ಕೊಠಡಿಗಳ ಸ್ವಚ್ಛತೆಯ ಮೇಲ್ವಿಚಾರಣೆ ಖಚಿತ ಪಡಿಸಿಕೊಂಡರು. ಒಳರೋಗಿಗಳ ವಾರ್ಡ್‌ಗಳಿಗೆ ಖುದ್ದಾಗಿ ಭೇಟಿ ನೀಡಿ ರೋಗಿಗಳು ಮತ್ತು ಅವರ ಸಂಬಂಧಿಕರ ಜೊತೆಗೆ ಮಾತನಾಡಿ ಇಲ್ಲಿ ಅವರಿಗೆ ಸಿಗುತ್ತಿರುವ ಚಿಕಿತ್ಸೆ, ಉಚಿತ ಆಹಾರದ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದರು.

ಹೆರಿಗೆ ವಾರ್ಡ್‌ನಲ್ಲಿ ಮಗುವನ್ನು ನೆಲ ಹಾಸಿಗೆ ಮೇಲೆ ಮಲಗಿಸಿದ ಪೋಷಕರನ್ನು ಕಂಡು ಅವರಿಗೆ ಮಗುವಿನ ಸ್ವಚ್ಛತೆಯ ಆರೈಕೆ ಕುರಿತು ಜಾಗೃತಿ ಹೇಳಿದರು.

ಸಿರಪ್ ಬದಲಾಗಿ ಮಾತ್ರೆ ನೀಡಿದ್ದು, ಸಾರ್ವಜನಿಕರ ಆರೋಪವಾಗಿ ಆಸ್ಪತ್ರೆಯ ಔಷಧಾಲಯದಲ್ಲಿ ಮಾತ್ರೆ ಮತ್ತು ಔಷಧ ವಿತರಿಸುವ ಅಧಿಕಾರಿಯನ್ನು ಐದು ವರ್ಷದೊಳಗಿನ ಮಕ್ಕಳಿಗೆ ಸಿರಪ್ ಬದಲಾಗಿ ಮಾತ್ರೆ ನೀಡಿರುವುದು ಎಷ್ಟು ಸರಿ, ವೈದ್ಯರು ನೀಡದ ಸಲಹೆ ಯಾಕೆ? ಎಂದು ತರಾಟೆಗೆ ತೆಗೆದುಕೊಂಡರು.

ಒಂದು ದಿನಕ್ಕೆ ವಿತರಿಸಿದ ಔಷಧೀಯಗಳ ಕುರಿತು ದಾಖಲೆ ಇಲ್ಲ, ನಿತ್ಯವೂ ನಮೂದಿಸುವಂತೆ ಎಚ್ಚರಿಕೆ ವಹಿಸಬೇಕು. ರೋಗಿಗಳು ಮತ್ತು ಸಾರ್ವಜನಿಕರು ನೀಡಿದ ದೂರುಗಳಿಗೆ ಸ್ಪಂದಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ನೂತನ ಆಂಬ್ಯುಲೇನ್ಸ್ ವಿವರಿಸುವಂತೆ ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗೆ ಫೋನ್ ವಾಟ್ಸಪ್ ಮೂಲಕ ತಿಳಿಸಿದರು.

ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸುವುದು, ಸೇವೆಯನ್ನು ಹೆಚ್ಚು ಜನರಿಗೆ ತಲುಪುವಂತೆ ಸುಧಾರಣೆ ಮಾಡಲಾಗುವುದು ಎಂದರು.

ತಾಲೂಕು ಆರೋಗ್ಯ ಅಧಿಕಾರಿ ದಮ್ಮೂರು ಬಸವರಾಜ, ಸಾರ್ವಜನಿಕ ಆಸ್ಪತ್ರೆಯ ಆಡಳಿತ ಅಧಿಕಾರಿ ವಿವೇಕಾನಂದ ಉಪಸ್ಥಿತರಿದ್ದರು.



ರಸಗೊಬ್ಬರ ಅಂಗಡಿಗಳಿಗೆ ಅಧಿಕಾರಿಗಳ ದಿಢೀರ್ ಭೇಟಿ

ಕುರುಗೋಡು: ಜಿಲ್ಲೆಯ ಉಪ ಕೃಷಿ ನಿರ್ದೇಶಕ ಮಂಜುನಾಥ ತಾಲೂಕಿನ ಗೆಣಿಕಿಹಾಳು ಗ್ರಾಮದ ರಸಗೊಬ್ಬರ ಮಾರಾಟ ಮಳಿಗೆಗಳಿಗೆ ದಿಢೀರ್ ಭೇಟಿ ನೀಡಿ ಕಟ್ಟುನಿಟ್ಟಿನ ಪರಿಶೀಲನೆ ನಡೆಸಿದರು.

ಈ ವೇಳೆ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ ಗರ್ಜಪ್ಪ ಹಾಗೂ ಕುರುಗೋಡು ರೈತಸಂಪರ್ಕ ಕೇಂದ್ರ ಹಿರಿಯ ಕೃಷಿ ಅಧಿಕಾರ ಡಿ.ದೇವರಾಜ ಮುಂಗಾರು ಹಂಗಾಮಿ ಆರಂಭವಾಗುತ್ತಿರುವುದರಿಂದ ರೈತರಿಗೆ ಯಾವುದೇ ರೀತಿಯ ತೊಂದರೆ ಯಾಗದಂತೆ ನೋಡಿಕೊಳ್ಳಲು ಮತ್ತು ರಸಗೊಬ್ಬರ ಕಪ್ಪು ಮಾರುಕಟ್ಟೆ ದಂದೆ ತಡೆಯಲು ಈ ತಪಾಸಣೆ ಹಮ್ಮಿಕೊಳ್ಳಲಾಗಿತ್ತು. ಪರಿಶೀಲನೆ ನಂತರ ರಸಗೊಬ್ಬರ ವಿತರಕರು ಹಾಗೂ ಡೀಲರ್ ಗಳಿಗೆ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ರಸಗೊಬ್ಬರ ಅಂಗಡಿ ಮುಂಭಾಗದಲ್ಲಿ ರೈತರಿಗೆ ಕಾಣಿಸುವಂತೆ ಸದ್ಯ ಲಭ್ಯವಿರುವ ಎಲ್ಲ ರಸಗೊಬ್ಬರಗಳ ಅಧಿಕೃತ ದರ ಪಟ್ಟಿ ಕಡ್ಡಾಯವಾಗಿ ಬೋರ್ಡ್ ಮೇಲೆ ಪ್ರದರ್ಶಿಸಬೇಕು. ಅಂಗಡಿಯಲ್ಲಿ ಪ್ರಸ್ತುತ ಎಷ್ಟು ಪ್ರಮಾಣದ ರಸಗೊಬ್ಬರ ದಾಸ್ತಾನು ಇದೆ?. ಎಷ್ಟು ಚೀಲಗಳು ಲಭ್ಯವಿವೆ ಎಂಬ ನಿಖರವಾದ ಮಾಹಿತಿ ಪ್ರತಿದಿನ ಪ್ರದರ್ಶಿಸಬೇಕು. ರೈತರು ಕೇವಲ ಯೂರಿಯಾ, ಡಿಎಪಿ ಕೇಳಿದಾಗ, ಅದಕ್ಕೆ ಪೂರಕವಾಗಿ ಬೇರೆ ಅನಗತ್ಯ ಕಂಪನಿಗಳ ಉತ್ಪನ್ನಗಳನ್ನು ಮಾರಾಟ ಮಾಡುವಂತಿಲ್ಲ, ರೈತರಿಗೆ ಅಗತ್ಯವಿರುವ ಗೊಬ್ಬರ ಮಾತ್ರ ನೀಡಬೇಕು. ಎಂಆರ್‌ಪಿ ದರಕ್ಕಿಂತ ಒಂದು ರೂ. ಹೆಚ್ಚು ಪಡೆದರೂ ಅದನ್ನು ಗಂಭೀರ ಅಪರಾಧ ಎಂದು ಪರಿಗಣಿಸಲಾಗುವುದೆಂದು ತಿಳಿಸಿದರು.

ಹೆಚ್ಚು ಬೇಡಿಕೆ ಇರುವ ಯೂರಿಯಾ ಮತ್ತು ಡಿಎಪಿ ರಸಗೊಬ್ಬರ ವಿತರಿಸುವಾಗ ಕಡ್ಡಾಯವಾಗಿ ಕೆ-ಕಿಸಾನ್ ಪ್ರೋರ್ಟಲ್, ಪಿಒಎಸ್ ಯಂತ್ರದ ಮೂಲಕ ಹೆಬ್ಬೆಟ್ಟಿನ ಗುರುತು ಪಡೆದುಕೊಂಡೇ ವಿತರಿಸಬೇಕು. ಕೃಷಿ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ರವರು ಡೀಲರ್‌ಗಳಿಗೆ ಎಚ್ಚರಿಕೆ ನೀಡಿದರು.

ಒಂದು ವೇಳೆ ನಿಯಮ ಉಲ್ಲಂಘಿಸಿದಲ್ಲಿ ಅಥವಾ ರೈತರಿಂದ ದೂರುಗಳು ಬಂದಲ್ಲಿ, ಅಂತಹ ರಸಗೊಬ್ಬರ ಮಾರಾಟಗಾರರ ಪರವಾನಗಿಯನ್ನು ತಕ್ಷಣವೇ ರದ್ದುಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.



> ರಸಗೊಬ್ಬರ ಖರೀದಿಸುವ ಪ್ರತಿಯೊಬ್ಬ ರೈತರಿಗೂ ಕಡ್ಡಾಯವಾಗಿ ಅಧಿಕೃತ ಜಿಎಸ್‌ಟಿ ಒಳಗೊಂಡ ಕಂಪ್ಯೂಟರ್ ರೈಸ್ಡ್ ಬಿಲ್ ಅಥವಾ ನಗದು ರಶೀದಿ ನೀಡಬೇಕು. ಬಿಲ್ ನೀಡದೆ ಕೇವಲ ಕೈಬರಹದ ಚೀಟಿ ಕೊಡುವುದು ಕಾನೂನು ಬಾಹಿರ.
>
> ■ ಉಪ ಕೃಷಿ ನಿರ್ದೇಶಕ ಮಂಜುನಾಥ

ಶಾಸಕ ಬಿ.ನಾಗೇಂದ್ರಗೆ ಸಚಿವ ಸ್ಥಾನ ನೀಡಲು ಪ್ರತಿಭಟನೆ

ವಿಜಯನಗರ: ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿ ಹೊಸಪೇಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಶಾಸಕ ನಾಗೇಂದ್ರ ಅವರ ಅಭಿಮಾನಿಗಳು ಹಾಗೂ ಪರಿಶಿಷ್ಟ ಪಂಗಡದ ವಾಲ್ಮೀಕಿ ಸಮುದಾಯದ ಸದಸ್ಯರು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಡಾ.ಪುನೀತ್ ರಾಜ್‌ಕುಮಾರ್ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಬಿ.ನಾಗೇಂದ್ರ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಕಲ್ಪಿಸುವ ಮೂಲಕ ವಾಲ್ಮೀಕಿ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಮುಖಂಡರು, ನಾಗೇಂದ್ರ ಅವರು ಈಗಾಗಲೇ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವ ನಾಯಕತ್ವ ಗುಣ ಹೊಂದಿದ್ದಾರೆ. ಈ ಭಾಗದ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಅವರ ಕೊಡುಗೆ ಅಗತ್ಯವಾಗಿದೆ. ಕಾಂಗ್ರೆಸ್‌ನಿಂದ ಗೆದ್ದಿರುವ ಎಲ್ಲ ಶಾಸಕರೂ ಸಚಿವ ಸ್ಥಾನಕ್ಕೆ ಅರ್ಹರಾಗಿದ್ದರೂ, ಪ್ರಾದೇಶಿಕ ಸಮತೋಲನ ಹಾಗೂ ಸಮುದಾಯದ ಹಿತದೃಷ್ಟಿಯಿಂದ ನಾಗೇಂದ್ರಗೆ ಸಚಿವ ಸ್ಥಾನ ನೀಡುವುದು ಸೂಕ್ತ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪರಿಶಿಷ್ಟ ಪಂಡಗ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಲಿಂಗಣ್ಣ ನಾಯಕ ಗುಜ್ಜಲ್, ಹೊಸಪೇಟೆ ತಾಲೂಕು ಅಧ್ಯಕ್ಷ ತಿಪ್ಪೇಸ್ವಾಮಿ ಮುದ್ದೆ, ರಾಜ್ಯ ಕಾರ್ಯದರ್ಶಿ ಭಾಸ್ಕರ್.ಜಿ., ಅಸಂಘಟಿತ ಕಾರ್ಮಿಕರ ಜಿಲ್ಲಾಧ್ಯಕ್ಷ ವೆಂಕಟೇಶಲು, ಸೈಯ್ಯದ್ ಶುಕೂರ್, ಮಂಜುನಾಥ, ಹನುಮೇಶ್ ಯಾದವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ ರ್ರಿಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಜಂಗಲಪ್ಪ ಸಣ್ಣಕ್ಕಿ, ತಾಲೂಕು ಉಪಾಧ್ಯಕ್ಷ ಕಿಚಿಡಿ ಭರತ್ ಹಾಗೂ ಸಮುದಾಯದವರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.



ಸಾವಯವ ಕೃಷಿಗೆ ಆದ್ಯತೆ ನೀಡಿ

ಕುರುಗೋಡು: ರೈತರು ಅತೀ ಹೆಚ್ಚು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ತಗ್ಗಿಸಬೇಕು. ಸಾವಯವ ಕೃಷಿ ಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಸೋಮಸುಂದರ ಹೇಳಿದರು.

ತಾಲೂಕಿನ ದಮ್ಮೂರು ಗ್ರಾಮದ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ಆವರಣದಲ್ಲಿ ಕೃಷಿ ಇಲಾಖೆ, ಬಳ್ಳಾರಿ ಹಾಗೂ ಕೃಷಿ ವಿಜ್ಞಾನ ಕೇಂದ್ರ ಹಗರಿ ಇವರ ಸಹಯೋಗದೊಂದಿಗೆ ಹಮಿಮಕೊಂಡ ಖೇತ್ ಬಚಾವೋ, ಧರ್ತಿ ಮಾತಾ ಬಚಾವೋ ಅಭಿಯಾನದಲ್ಲಿ ಮಾತನಾಡಿದರು.

ಕೆವಿಕೆ ಹಗರಿಯ ವಿಜ್ಞಾನಿ ಡಾ.ರವಿ ಮಾತನಾಡಿ, ಸಸ್ಯಗಳ ಬೆಳವಣಿಗೆಗೆ 16 ಪೋಷಕಾಂಶ ಅಗತ್ಯ, ಕೆಲವು ಮಣ್ಣಿನಲ್ಲಿದ್ದರೆ, ಕೆಲವು ವಾತಾವರಣದಲ್ಲಿ ದೊರೆಯುತ್ತವೆ. ರೈತರು ಮಣ್ಣು ಪರೀಕ್ಷೆ ತಪ್ಪದೇ ಮಾಡಿಸಿ, ಫಲಿತಾಂಶದ ಅನುಗುಣವಾಗಿ ರಸಗೊಬ್ಬರ ಬಳಸಬೇಕು ಎಂದರು.

ಡಾ.ನವೀನ ಮಾತನಾಡಿ, ಸಾವಯವ ಕೃಷಿ ಪರಿಕರಗಳಾದ ಪಂಚಗವ್ಯ, ಜೀವಾಮೃತ, ಬಿಜಾಮೃತವನ್ನು ಬಳಸುವುದರಿಂದ ರಾಸಾಯನಿಕಗಳ ಮೇಲಿನ ಖರ್ಚು ತಗ್ಗಿಸುವುದಲ್ಲದೆ, ವಿಷಮುಕ್ತ ಆಹಾರವನ್ನು ಪಡೆಬಹುದು ಎಂದರು.

ಕೃಷಿ ಅಧಿಕಾರಿ ಬಸವರಾಜ, ರೈತ ಸಂಪರ್ಕ ಕೇಂದ್ರದ ಅಧಿಕಾರಿ ಡಾ.ಅರುಣಾ ಮಾತನಾಡಿದರು.

ಈ ವೇಳೆ ಸಹಾಯಕ ಕೃಷಿ ನಿರ್ದೇಶಕ ಗರ್ಜಪ್ಪ, ದಯಾನಂದ, ಉಮೇಶ, ಕೃಷಿ ಅಧಿಕಾರಿ ಯೇಸುಬಾಬು, ಆತ್ಮ ಸಿಬ್ಬಂದಿ ಕವಿತಾ, ರೇಣುಕಾರಾಧ್ಯ, ಆದಿನಾರಾಯಣ ರೆಡ್ಡಿ, ಶಂಕರ ಗೌಡ, ಜೆ. ನಾರಾಯಣ ರೆಡ್ಡಿ, ರೇವಣಸಿದ್ದಯ್ಯ ಸ್ವಾಮಿ, ಮಾಣಿಕ್ಯ ರೆಡ್ಡಿ, ಕೃಷಿ ಸಖಿಯರು, ದಮ್ಮೂರು, ಕೋಳೂರು ವ್ಯಾಪ್ತಿಯ ಗ್ರಾಮದ ರೈತರು ಭಾಗವಹಿಸಿದ್ದರು.



ಮತದಾರರು ಅಗತ್ಯ ಸಹಕಾರ ನೀಡಲಿ: ಡಿಸಿ



ಯಾದಗಿರಿ: ಚುನಾವಣಾ ಆಯೋಗವು ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿ ಪ್ರಕಟಿಸಿದ್ದು, ಜೂ.20ರಿಂದ ಅಕ್ಟೋಬರ್ 7ರವರೆಗೆ ಪ್ರಕ್ರಿಯೆ ನಡೆಯಲಿದೆ. ಪಾರದರ್ಶಕ ಮತದಾರರ ಪಟ್ಟಿ ತಯಾರಿಕೆಗೆ ಸಾರ್ವಜನಿಕರು ಸಹಕರಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಪಾಂಡ್ವೆ ರಾಹುಲ ತುಕಾರಾಂ ತಿಳಿಸಿದ್ದಾರೆ.

ಸಮಗ್ರ, ವಿಶೇಷ ಪರಿಷ್ಕರಣೆ ವೇಳಾಪಟ್ಟಿ ಹಾಗೂ ಇತರ ಕ್ರಮಗಳ ಕುರಿತು ವಿವರ ನೀಡಲು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಈ ವೇಳಾಪಟ್ಟಿಯಂತೆ

ನಮೂನೆ ಮುದ್ರಣ ಹಾಗೂ ತರಬೇತಿಯು ಇದೇ ಜೂ.20ರಿಂದ ಜೂ.29ರವರೆಗೆ ನಡೆಯಲಿದೆ ಎಂದರು.

ಮನೆ ಮನೆ ಸಮೀಕ್ಷೆಯು ಜೂ.30ರಿಂದ ಜುಲೈ 29ರವರೆಗೆ ನಡೆಯಲಿದೆ. ಕರಡು ಮತದಾರರ ಪಟ್ಟಿ ಬರುವ ಆ.5ರಂದು ಪ್ರಕಟಿಸಲಾಗುತ್ತದೆ. ಹಕ್ಕು ಮತ್ತು ಆಕ್ಷೇಪಣೆ ಅವಧಿಯನ್ನು ಆ.5ರಿಂದ ಸೆಪ್ಟೆಂಬರ್ 4ರವರೆಗೆ ನಿಗದಿಪಡಿಸಲಾಗಿದ್ದು, ಆಗಸ್ಟ್ 5 ರಿಂದ ಅಕ್ಟೋಬರ್ 3 ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಗಳನ್ನು ವಿಲೇವಾರಿ ಮಾಡಲಾಗುತ್ತದೆ ಎಂದು ವಿವರಿಸಿದರು.

ಜಿಲ್ಲೆಯ ಶೋರಾಪುರ ತಾಲೂಕಿನಲ್ಲಿ 2,09,491 ಮತದಾರರ ಪೈಕಿ 1,97,852 ರಷ್ಟು ಮತದಾರರ,ಶೇ .94.44 ರಷ್ಟು ಮ್ಯಾಪಿಂಗ್ ಆಗಿದೆ. ಜಿಲ್ಲೆಯಲ್ಲಿ 2025ರನ್ವಯ ಒಟ್ಟು 10,53,496 ಮತದಾರರಿದ್ದು,ಈ ಪೈಕಿ ,10,14,221 ಮತದಾರರ ಮ್ಯಾಪಿಂಗ್ ಆಗಿದ್ದು,ಬಾಕಿ ಉಳಿದ ಮತದಾರರ ಮ್ಯಾಪಿಂಗ್ ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಎಸ್‌ಐಆರ್ ಜಿಲ್ಲಾ ನೋಡಲ್ ಅಧಿಕಾರಿಯಾಗಿ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಶರಣಬಸವ, ಹೋಬಳಿ ವಾರು 16 ಎಸ್‌ಐಆರ್ ನೋಡಲ್ ಅಧಿಕಾರಿಗಳಾಗಿ ಹಾಗೂ ಜಿಲ್ಲಾ ನೋಡಲ್ ಅಧಿಕಾರಿಯಾಗಿ 1950 ಸಹಾಯವಾಣಿಗೆ ಜಿಪಂ ಕಾರ್ಯದರ್ಶಿ ಜಹೀರ್ ಹಸನ್ ಇವರನ್ನು ನೇಮಕ ಮಾಡಲಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ರಮೇಶ ಕೋಳಾರ, ಸಹಾಯಕ ಆಯುಕ್ತ ಶ್ರೀಧರ ಗೋಟೂರ್ ಇದ್ದರು.

ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ಅಗತ್ಯ: ಶಾಸಕ

ಹುಣಸಗಿ: ಸಾರ್ವಜನಿಕರ ಕುಂದುಕೊರತೆಗಳಿಗೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಿ, ಪಟ್ಟಣದ ಅಭಿವೃದ್ಧಿ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಸುರಪುರ ಕ್ಷೇತ್ರದ ಶಾಸಕ ರಾಜಾ ವೇಣುಗೋಪಾಲ್ ನಾಯಕ ಹೇಳಿದರು.

ಹುಣಸಗಿ ಪಪಂಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ಪಟ್ಟಣದ ಪ್ರತಿಯೊಂದು ವಾರ್ಡ್‌ನಲ್ಲಿರುವ ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಪರಿಹರಿಸಬೇಕು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವುದು ಅಧಿಕಾರಿಗಳ ಕರ್ತವ್ಯವಾಗಿದ್ದು, ಅಭಿವೃದ್ಧಿ ಕಾಮಗಾರಿಗಳಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು ಎಂದು ಸೂಚಿಸಿದರು.

ಸಭೆಯಲ್ಲಿ ಪಪಂ ಮುಖ್ಯಾಧಿಕಾರಿ ಅರುಣಕುಮಾರ ಚವ್ಹಾಣ, ವೈದ್ಯಾಧಿಕಾರಿ ಡಾ.ಎಸ್.ಬಿ.ಪಾಟೀಲ, ಕೆಬಿಜೆಎನ್‌ಎಲ್ ಅಧಿಕಾರಿ ಅನಿಲಕುಮಾರ ರೆಡ್ಡಿ, ಪಪಂ ಸದಸ್ಯರಾದ ಸಿದ್ರಾಮಪ್ಪ ಮುದಗಲ್, ಶರಣು ದಂಡಿನ, ಮಲ್ಲು ಹೆಬ್ಬಾಳ, ರಾಜಶೇಖರ ದೇಸಾಯಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪಪಂ ಸದಸ್ಯರ, ಸಿಬ್ಬಂದಿ ಇದ್ದರು.

ನಂತರ ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಿಭಾಗ ಯಾದಗಿರಿ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಲಯ ಸುರಪುರ ವತಿಯಿಂದ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದರು.



ವಿವಿಧ ಕಾರ್ಯಕ್ರಮಗಳಿಗೆ ಚಾಲನೆ

ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮವನ್ನು ರಾಜಾ ವೇಣುಗೋಪಾಲ್ ಉದ್ಘಾಟಿಸಿ, ರೈತರಿಗೆ ಬಿತ್ತನೆ ಬೀಜ ವಿತರಣೆ ಮಾಡಿದರು.
ಜಿಪಂ ಮಾಜಿ ಸದಸ್ಯ ನಾಗಣ್ಣ ಸಾಹು ದಂಡಿನ, ಕೃಷಿ ಇಲಾಖೆ ಅಧಿಕಾರಿ ಸಿದ್ಧಾರ್ಥ ಪಾಟೀಲ, ದೀಪಾ ದೊರೆ, ಜಿಪಂ ಮಾಜಿ ಅಧ್ಯಕ್ಷ ರಾಜಶೇಖರಗೌಡ ಪಾಟೀಲ, ರೈತ ಸಂಘಟನೆ ಜಿಲ್ಲಾಧ್ಯಕ್ಷ ಮಲ್ಲನಗೌಡ ಹಗರಟಗಿ, ಮಹಾದೇವಿ ಬೇನಾಳಮಠ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಿಸಿಯೂಟ ತಯಾರಕರ ಬೇಡಿಕೆ ಈಡೇರಿಕೆಗೆ ಆಗ್ರಹ

ಕೊಟ್ಟೂರು: ಬಿಸಿಯೂಟ ತಯಾರಕರಿಗೆ ಕನಿಷ್ಠ ವೇತನ ಜಾರಿಗೊಳಿಸುವುದು ಹಾಗೂ ಕಾರ್ಮಿಕರೆಂದು ಪರಿಗಣಿಸಲು ಸರ್ಕಾರ ಮುಂದಾಗಬೇಕೆಂದು ಬಿಸಿಯೂಟ ತಯಾರಕರ ಫೆಡರೇಷನ್ ಮುಖ್ಯಸ್ಥೆ ಟಿ.ಎಂ.ರೂಪ ಆಗ್ರಹಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಅಕ್ಷರ ದಾಸೋಹದ ಬಿಸಿಯೂಟ ತಯಾರಕರ ಫೆಡರೇಷನ್ ವತಿಯಿಂದ ತಹಶೀಲ್ದಾರ್ ಜಿ.ಕೆ.ಅಮರೀಶ ಇವರಿಗೆ ಶುಕ್ರವಾರ ಮನವಿ ಸಲ್ಲಿಸಿ ಮಾತನಾಡಿ, ಕೆಲಸ ಖಾಯಂಗೊಳಿಸುವುದು ಹಾಗೂ ನಿವೃತ್ತರಾದ ತಯಾರಕರಿಗೆ ಇಡುಗಂಟು ಹಣವಾದ 40 ಸಾವಿರದಿಂದ 2 ಲಕ್ಷಕ್ಕೆ ಹೆಚ್ಚಿಸಬೇಕೆಂದರು.

ವೇತನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಹಾಗೂ ಮೊಟ್ಟೆ ಸುಲಿಯುವ ಭತ್ಯವನ್ನು 30 ಪೈಸೆಯಿಂದ ಒಂದು ರೂಗೆ ಹೆಚ್ಚಿಸಬೇಕು. ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾದರೆ ಏಕಾಏಕಿ ಬಿಸಿಯೂಟ ಕಾರ್ಯಕರ್ತರನ್ನು ಬಿಡುಗಡೆಗೊಳಿಸದೇ ಹತ್ತಿರದ ಶಾಲೆಗಳಿಗೆ ವರ್ಗಾಯಿಸಬೇಕೆಂದು ಒತ್ತಾಯಿಸಿದರು.

ಸಿಪಿಐ ತಾಲೂಕು ಘಟಕದ ಕಾರ್ಯದರ್ಶಿ ಕೆ.ರೇಣುಕಮ್ಮ ಮಾತನಾಡಿ, ಕೂಡಲೇ ಸರ್ಕಾರ ಬಿಸಿಯೂಟ ತಯಾರಕರ ಬಗ್ಗೆ ಗಮನ ಹರಿಸಿ ನ್ಯಾಯ ದೊರಕಿಸಿಕೊಡಬೇಕೆಂದರು. ಈ ವೇಳೆ ಎಚ್.ಶಕೀಲಬಾನು, ರತ್ನಮ್ಮ, ಪದ್ಮ, ಶೃತಿ, ರಾಜಮ್ಮ, ಮಂಗಳ, ಸುನೀತಾ, ರೇಖಾ ಮುಂತಾದವರು ಪಾಲ್ಗೊಂಡಿದ್ದರು.

